ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ

# ಶ್ರೀಮತಿ ಕೆ.ಎಸ್. ನಾಗರತ್ನಮ್ಮ



ಪ್ರಕಟಣೆ :

ಕರ್ನಾಟಕ ವಿಧಾನ ಸಭೆ ಸಚಿವಾಲಯ

ವಿಧಾನಸೌಧ, ಬೆಂಗಳೂರು - 560 001

ಪ್ರತಿಭಾವಂತ ಸಂಸದೀಯ ಪಟುಗಳ ಬದುಕು
ಬರಹ ಮಾಲಿಕೆ

# ಶ್ರೀಮತಿ: ಕೆ. ಎಸ್. ನಾಗರತ್ನಮ್ಮ


ಲೇಖಕರು

ಪ್ರೊ. ಎನ್. ಬಿ. ಪಾಂಗಣ್ಣಾಯ

ಪ್ರೊ. ಹೆಚ್.ಆರ್. ಅಚ್ಯುತರಾವ್

ಡಾ|| ಡಿ.ಎಸ್. ಜಯಪ್ಪಗೌಡ



ಪ್ರಕಟಣೆ

ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001.

# ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ

Eminent Parliamentarian Series

Smt. K.S.NAGARATNAMMA

ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

ಮೊದಲ ಮುದ್ರಣ

1999--1500 ಪ್ರತಿಗಳು

ಪ್ರಕಟಣೆ

ಕರ್ನಾಟಕ ವಿಧಾನ ಸಭೆ ಸಚಿವಾಲಯ

ವಿಧಾನ ಸೌಧ, ಬೆಂಗಳೂರು-560 001.

# ಮುನ್ನುಡಿ

ರಾಜ್ಯದ ಹಿರಿಯ ಸಂಸದೀಯ ಪಟುಗಳ ಕುರಿತು ಕಿರುಹೊತ್ತಿಗೆಗಳ ಮಾಲಿಕೆಯಡಿಯಲ್ಲಿ ಈ ಹಿಂದೆ ಶ್ರೀ. ಕೆ.ಹನುಮಂತಯ್ಯ, ಶ್ರೀ ಎಸ್. ನಿಜಲಿಂಗಪ್ಪ, ಮತ್ತು ಶ್ರೀ ಎಸ್. ಗೋಪಾಲಗೌಡ ಮೊದಲಾದ ಮಹನೀಯರ ಬಗ್ಗೆ ಕೃತಿಗಳನ್ನು ಪ್ರಕಟಿಸಲಾಗಿದೆ. ಈಗ ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಅವರ ಬಗ್ಗೆ ರಚಿತವಾಗಿರುವ ಈ ಕಿರುಹೊತ್ತಿಗೆಯಲ್ಲಿ ಶ್ರೀಯುತರು ವಿಧಾನ ಸಭೆಯ ಚರ್ಚೆಯಲ್ಲಿ ಭಾಗವಹಿಸಿ ಪ್ರತಿಪಾದಿಸಿರುವ ವಿಚಾರಗಳನ್ನು ಮತ್ತು ಸಭಾಧ್ಯಕ್ಷರಾಗಿ ನೀಡಿದ ಕೆಲವು ತೀರ್ಪುಗಳನ್ನು ಇದರಲ್ಲಿ ಸೇರಿಸಲಾಗಿದೆ. ಜೊತೆಗೆ ಅವರ ಜೀವನ ಪರಿಚಯ ಭಾಗ ಕೂಡ ಇದೆ.

ರಾಜ್ಯದ ಶಾಸಕಾಂಗದಲ್ಲಿ ದೀರ್ಘಕಾಲ ಸದಸ್ಯರಾಗಿ ಸೇವೆಸಲ್ಲಿಸಿರುವ ಶ್ರೀಮತಿ ಕೆ. ಎಸ್.ನಾಗರತ್ನಮ್ಮನವರನ್ನು ಕುರಿತು ಈ ಕಿರುಹೊತ್ತಿಗೆಯನ್ನು ರಚಿಸಿಕೊಟ್ಟಿರುವ ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕರುಗಳಾದ ಪ್ರೊ. ಎನ್.ಬಿ. ಪಾಂಗಣ್ಣಾಯ, ಪ್ರೊ.ಹೆಚ್.ಆರ್. ಅಚ್ಯುತರಾವ್ ಮತ್ತು ಡಾ|| ಡಿ. ಎಸ್.ಜಯಪ್ಪಗೌಡ ಅವರುಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಈ ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಕೆಂಗಲ್ ಹನುಮಂತಯ್ಯ, ಶಾಂತವೇರಿ ಗೋಪಾಲಗೌಡ, ಎಸ್. ನಿಜಲಿಂಗಪ್ಪ, ಜಿ.ವಿ. ಹಳ್ಳೀಕೇರಿಯವರ ಕಿರುಹೊತ್ತಿಗೆಗಳನ್ನು ಹೊರತಂದಿರುತ್ತೇವೆ.

ಈ ಕಿರುಹೊತ್ತಿಗೆಯನ್ನು ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಗ್ರಂಥಾಲಯ ಉಪಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಪ್ರತಿಭಾವಂತ ಸಂಸದೀಯ ಪಟುಗಳು ಬಗೆಗಿನ ಈ ಕಿರುಹೊತ್ತಿಗೆಗಳು ಮಾನ್ಯ ಸದಸ್ಯರುಗಳಿಗೆ ಮತ್ತು ಸಂಶೋಧಕರುಗಳಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಅಪಾರ ಜ್ಞಾನ ನೀಡುತ್ತವೆಂದು ಭಾವಿಸುತ್ತೇವೆ.

ಡಿ.ಬಿ.ಕಲ್ಮಣ್ಕರ್
ಸಭಾಪತಿ
ವಿದಾನ ಪರಿಷತ್ತು

ರಮೇಶ್‌ಕುಮಾರ್
ಸಭಾದ್ಯಕ್ಷ
ವಿಧಾನ ಸಭೆ

ಬೆಂಗಳೂರು
ಆಗಸ್ಟ್ , 1999

# ಅರಿಕೆ

ಕರ್ನಾಟಕ ರಾಜ್ಯದ ವಿಧಾನ ಮಂಡಲ ಸಚಿವಾಲಯವು ರಾಜ್ಯದ ಹಿರಿಯ ಪ್ರತಿಭಾವಂತ ಸಂಸದೀಯಪಟುಗಳನ್ನು ಕುರಿತು ಕಿರುಹೊತ್ತಿಗೆಗಳನ್ನು ಹೊರತರಲು ಉದ್ದೇಶಿಸಿರುವ ನಿರ್ಧಾರವು ನಿಜಕ್ಕೂ ಶ್ಲಾಘನೀಯವಾದ ಕಾರ್ಯ, ಇದರಿಂದ ಶಾಸಕಾಂಗಗಳಲ್ಲಿ ಈ ಸಂಸದೀಯಪಟುಗಳು ಮಂಡಿಸಿದ ವಿಚಾರಗಳು ಮತ್ತು ಭಾಗವಹಿಸಿದ ನಡವಳಿಕೆ ಮತ್ತು ನೀಡಿದ ಮಾರ್ಗದರ್ಶನಗಳು ಅವರ ಉತ್ತರಾಧಿಕಾರಿಗಳಿಗೆ ದಾರಿದೀಪವಾಗುವುದರಲ್ಲಿ ಸಂದೇಹವಿಲ್ಲ. ಈ ಯೋಜನೆಯಂತೆ ಶ್ರೀ ಕೆ. ಹನುಮಂತಯ್ಯ, ಶ್ರೀ ಎಸ್. ಗೋಪಾಲಗೌಡ ಮತ್ತು ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಅವರುಗಳ ಕುರಿತು ಕಿರುಹೊತ್ತಿಗೆಗಳನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ವಿಧಾನಮಂಡಲದ ಗ್ರಂಥಾಲಯ ಉಪಸಮಿತಿಯು ನಮಗೆ ವಹಿಸಿರುವುದು ಸಂತೋಷದ ಸಂಗತಿಯಾಗಿರುತ್ತದೆ.

ಈಗಾಗಲೇ ಮೇಲ್ಕಂಡ ಮೊದಲ ಇಬ್ಬರು ಮಹನೀಯರನ್ನು ಕುರಿತು ನಾವು ರಚಿಸಿದ ಕೃತಿಗಳು ಪ್ರಕಟವಾಗಿದ್ದು ಇದು ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಕುರಿತು ಕಿರುಹೊತ್ತಿಗೆಯಾಗಿರುತ್ತದೆ. ಶ್ರೀಮತಿ ನಾಗರತ್ನಮ್ಮನವರು ಶಾಸಕಿಯಾಗಿ, ವಿಧಾನಸಭೆಯ ಅಧ್ಯಕ್ಷರಾಗಿ ಮತ್ತು ಸಚಿವರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ವಿವಿಧ ಜವಾಬ್ದಾರಿ ಸ್ಥಾನಗಳನ್ನು ನಿರ್ವಹಿಸಿರುತ್ತಾರೆ. ಉತ್ತಮ ವಾಗ್ಮಿಗಳೂ ಆಗಿದ್ದ ವಿರಳ ಮಹಿಳಾ ಸಂಸದೀಯಪಟು ಕೆ. ಎಸ್. ನಾಗರತ್ನಮ್ಮನವರ ವಿಚಾರಗಳು ಮಾನ್ಯ ಶಾಸಕರಿಗೆ ಮತ್ತು ಸಾಮಾನ್ಯ ಓದುಗರಿಗೆ ಉಪಯುಕ್ತವಾದರೆ ನಮ್ಮ ಶ್ರಮ ಸಾರ್ಥಕವಾಯಿತೆಂದು ಭಾವಿಸುತ್ತೇವೆ.

ಈ ಹೊತ್ತಿಗೆಯನ್ನು ರಚಿಸಲು ಅವಕಾಶ ನೀಡಿದ ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಉಪಸಮಿತಿಗೆ ನಾವು ಕೃತಜ್ಞರಾಗಿದ್ದೇವೆ. ಈ ಕಾರ್ಯದಲ್ಲಿ ನಮಗೆ ಪ್ರೋತ್ಸಾಹ ನೀಡಿದ ಮೈಸೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಎಸ್.ಎನ್. ಹೆಗ್ಗಡೆ ಅವರಿಗೂ ನಾವು ಚಿರಋಣಿಗಳಾಗಿದ್ದೇವೆ.

ದಿನಾಂಕ: 31-8-1999.
ಸ್ಥಳ: ಮೈಸೂರು

ಎನ್.ಬಿ.ಪಾಂಗಣ್ಣಾಯ
ಹೆಚ್.ಆರ್.ಅಚ್ಯುತರಾವ್
ಡಿ.ಎಸ್.ಜಯಪ್ಪಗೌಡ.

# ಪರಿವಿಡಿ

ಪುಟಗಳು

## ಭಾಗ-1

1. ಜೀವನ ಪರಿಚಯ 1

## ಭಾಗ-2

## ವಿಧಾನ ಸಭೆಯ ಕಲಾಪಗಳಲ್ಲಿ

2. ರಾಜ್ಯ ಆಯವ್ಯಯ ಪತ್ರದ ಬಗ್ಗೆ ಚರ್ಚೆ- 1960-61 18
3. ರಾಜ್ಯ ಆಯವ್ಯಯ ಪತ್ರ ಕುರಿತು- 1963 27
4. ಆರೋಗ್ಯ, ಶಿಕ್ಷಣ ಮತ್ತು ಆರೋಗ್ಯ ಇಲಾಖೆ ಕುರಿತು-1964 33
5. ಕೈಗಾರಿಕೆಗಳ ಸ್ಥಾಪನೆ ಬಗ್ಗೆ-1964 39
6. ಗ್ರಾಮೀಣ ಸಮಸ್ಯೆಗಳನ್ನು ಕುರಿತು-1964 43
7. ರಾಜ್ಯ ಆಯವ್ಯಯ ಪತ್ರ ಕುರಿತು ಚರ್ಚೆ-1967 47
8. ವ್ಯವಸಾಯ, ಕೈಗಾರಿಕೆ ಮತ್ತು ಸಾಮಾನ್ಯ ಆಡಳಿತ ಕುರಿತು 1967 50
9. ರಾಜ್ಯ ಆಯವ್ಯಯ ಪತ್ರ ಕುರಿತು 1968 56
10. ಅಧ್ಯಕ್ಷ ಪೀಠದಲ್ಲಿ 59
11. ಹಕ್ಕುಚ್ಯುತಿ ನಿಲುವಳಿ ಸೂಚನೆ ಬಗ್ಗೆ ತೀರ್ಪು- 1974 62
12. ಸದನದಲ್ಲಿ ಚರ್ಚೆಯ ಕಾಲಾವಕಾಶದ ಬಗ್ಗೆ-1988 69
13. ವಿಧಾನ ಸಭೆಯ ವಿರೋಧ ಪಕ್ಷದ ನಾಯಕಿಯಾಗಿ
ಚರ್ಚೆಯಲ್ಲಿ ಭಾಗಿ-1988. 74
14. ರಾಜ್ಯ ಆಯವ್ಯಯ ಪತ್ರದ ಬಗ್ಗೆ ಚರ್ಚೆ- 1989. 78

ಸಂ.2

# 1. ಜೀವನ ಪರಿಚಯ

ಶ್ರೀಮತಿ .ಕೆ.ಎಸ್. ನಾಗರತ್ನಮ್ಮನವರು ಕರ್ನಾಟಕ ಕಂಡ ಪ್ರಮುಖ ಮಹಿಳಾ ಸಂಸದೀಯ ಪಟುಗಳಲ್ಲೊಬ್ಬರು. ಅವರು ಸ್ವಾತಂತ್ರ್ಯೋತ್ತರ ಕಾಲದ ಮೊದಲ ತಲೆಮಾರಿನ ಮಹಿಳಾ ರಾಜಕಾರಣಿಗಳ ಸಾಲಿಗೆ ಸೇರಿದವರು. ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲ ಸಂಸದೀಯ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ನಾಗರತ್ನಮ್ಮನವರು ಅನೇಕ ಮಹತ್ವದ ಸ್ಥಾನಗಳನ್ನು ವಹಿಸಿಕೊಂಡು ಕಾರ್ಯನಿರ್ವಹಿಸಿದ್ದಾರೆ. ವ್ಯಕ್ತಿ ವೈಶಿಷ್ಟವೇ ಶ್ರೀಮತಿ ನಾಗರತ್ನಮ್ಮನವರ ಸಾರ್ವಜನಿಕ ಜೀವನದ ಸ್ವರೂಪವಾಗಿದ್ದಿತು. ಅವರು ಒಬ್ಬ ವಿಶಿಷ್ಟ ರಾಜಕಾರಣಿಯಾಗಿ ಸಂಸದೀಯ ಕಾರ್ಯಕಲಾಪಗಳಿಗೆ ಅನನ್ಯ ಕೊಡುಗೆ ನೀಡಿದ್ದಾರೆ.

## ಬಾಲ್ಯ ಮತ್ತು ವಿದ್ಯಾಭ್ಯಾಸ

ಶ್ರೀಮತಿ ನಾಗರತ್ನಮ್ಮನವರು ಜನಿಸಿದ್ದು 1923ರ ನವೆಂಬರ್ 23 ರಂದು. ಸಿ.ಆರ್. ಗೌಡರು ಅವರ ತಂದೆ, ಅವರು ಮೈಸೂರು ಸಂಸ್ಥಾನದಲ್ಲಿ ಎಂಜಿನಿಯರ್ ಆಗಿ ಸೇವೆಸಲ್ಲಿಸುತ್ತಿದ್ದರು. ಅವರು ಮೂಲತಃ ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಚೌಲಗೆರೆ ಗ್ರಾಮಕ್ಕೆ ಸೇರಿದವರು. ತಾಯಿ ಚನ್ನಮ್ಮನವರ ತವರು ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ಮೂಗೂರು ಗ್ರಾಮ. ನಾಗರತ್ನಮ್ಮನವರು ಈ ತಂದೆತಾಯಿಗಳ ಜೇಷ್ಠ ಪುತ್ರಿ. ಅವರ ಬೆನ್ನಲ್ಲೇ ಈ ದಂಪತಿಗಳಿಗೆ ಆರು ಹೆಣ್ಣು ಮತ್ತು ಎರಡು ಗಂಡು ಮಕ್ಕಳಾದರು. ಇಂತಹ ತುಂಬಿದ ಮತ್ತು ವಿದ್ಯಾವಂತ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದವರು ಇವರು. ಈ ಹೆಣ್ಣುಮಗಳಿಗೆ ಬೆಂಗಳೂರಿನ ಒಳ್ಳೆಯ ಶಾಲೆಯಲ್ಲೇ ಪ್ರಾಥಮಿಕ ವಿದ್ಯಾಭ್ಯಾಸವೂ ನಡೆಯಿತು.

ಆದರೆ ಶ್ರೀಮತಿ ನಾಗರತ್ನಮ್ಮನವರ ಜೀವನ ಹಳೆಯ ಸಂಪ್ರದಾಯಸ್ಥ ಸಮಾಜದ ದಾರಿಹಿಡಿಯಿತು. ಅವರು ತಮ್ಮ ಹನ್ನೊಂದನೆಯ ವರ್ಷದ ಎಳೆಯ ವಯಸ್ಸಿನಲ್ಲೇ ಹಸೆಮಣೆ ಏರುವ ಸಂದರ್ಭ ಒದಗಿ ಬಂತು. ಈ ಬಾಲಕಿ ಆಗ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಪ್ರಸಿದ್ಧ ಕಬ್ಬಳ್ಳಿ ಮನೆತನದ ಸೊಸೆಯಾಗಿ ಬಂದರು. ಕಬ್ಬಳ್ಳಿ ಸಾಹುಕಾರ್ ಚನ್ನಬಸಪ್ಪನವರ ಮಗ ಕೆ.ಸಿ.ಸುಬ್ಬಣ್ಣನವರ ಎರಡನೆಯ ಪತ್ನಿಯಾದರು. ಸುಬ್ಬಣ್ಣನವರ ಮೊದಲ ಪತ್ನಿ ತೀರಿಕೊಂಡಿದ್ದರು. ಈ ಎಳೆ ಬಾಲೆಯ ಬದುಕು ಮುಂದೆ ಹೊಣೆಗಾರಿಕೆಯ ಮತ್ತು ಸವಾಲುಗಳ ಸರಮಾಲೆಯೇ ಆಗುತ್ತದೆಂದು ಆಗ ಯಾರೂ ಊಹಿಸಿರಲಿಲ್ಲ. ಕಬ್ಬಳ್ಳಿ ಮನೆತನದ ಹಿನ್ನೆಲೆ ಅರಿಯದೆ ನಮ್ಮ ಮುಂದೆ ಸಂಸದೀಯ ಪಟುವಾಗಿ ಬೆಳೆದಿರುವ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಜೀವನ ಸಾಧನೆಗಳನ್ನು ಗ್ರಹಿಸುವುದು ಅಪೂರ್ಣವೇ ಸರಿ. ಆದ್ದರಿಂದ ಈ ಮನೆತನದ ಸಾರ್ವಜನಿಕ ಸ್ಥಾನಮಾನವನ್ನು ಅರಿಯುವುದು ಅತ್ಯಗತ್ಯವಾಗಿದೆ.

## ರಾಜಕೀಯ ಪರಿಸರ

ಶ್ರೀಮತಿ ನಾಗರತ್ನಮ್ಮನವರ ಮಾವ ಕಬ್ಬಳ್ಳಿ ಚನ್ನಬಸಪ್ಪನವರು. ಈ ಚನ್ನಬಸಪ್ಪನವರು ತಮ್ಮ ಹಿರಿಯರಿಂದ ಬಂದ ಭೂಮಿಕಾಣಿಯನ್ನು ಸಂರಕ್ಷಿಸಿದ್ದಲ್ಲದೇ ತಾವು ಅದನ್ನು ವಿಸ್ತರಿಸಿದರು. ಅವರ ಶ್ರೀಮಂತಿಕೆ ಅಂದು ಆ ಪ್ರಾಂತದ ಜನರ ಮನೆಮಾತಾಗಿತ್ತು. ಚನ್ನಬಸಪ್ಪನವರು

ಅಕ್ಷರಜ್ಞಾನವನ್ನಷ್ಟೇ ಪಡೆದರೂ ಕಥೆ, ಕಾವ್ಯ ಮತ್ತು ಪುರಾಣಗಳನ್ನು ಬಲ್ಲವರಿಂದ ತಿಳಿದರು. ಸಾಧುಸಂತರನ್ನು ಗೌರವದಿಂದ ಕಾಣುತ್ತಿದ್ದು ಅವರ ಸೇವೆ ಮಾಡಿದರು. ಇದರಿಂದ ಪಕ್ವವಾದ ಅವರ ಮನಸ್ಸು ಶಾಶ್ವತ ಪುಣ್ಯ ತರುವ ದಾನಧರ್ಮಗಳತ್ತ ಹರಿಯಿತು. ಕೈ ಒಡ್ಡಿದವರಿಗೆ ಹಿಡಿಹೊನ್ನು ಎಂಬಂತೆ ಸಾಧುಸಜ್ಜನರಿಗೆ ದಾನ ಮಾಡತೊಡಗಿದರು. ಅವರ ಧರ್ಮಪತ್ನಿ ನೆರೆಯ ಮೂಡಗೂರಿನ ಇನ್ನೊಂದು ಶ್ರೀಮಂತ ಮನೆತನದ ಮಲ್ಲವ್ವ. ಈ ದಂಪತಿಗಳಿಗೆ ಸುಬ್ಬಣ್ಣ ಮತ್ತು ಸುಬ್ಬಮ್ಮ ಎಂಬ ಒಂದು ಗಂಡು ಮತ್ತು ಒಂದು ಹೆಣ್ಣು ಮಕ್ಕಳಾದರು. ಈ ಸುಖಸಂಸಾರದಲ್ಲಿ ಓಲಾಡುತ್ತಿದ್ದ ಚನ್ನಬಸಪ್ಪನವರು ಕನಸುಗಾರರಾಗಿದ್ದರು. ಅವರಿಗೆ ಗ್ರಾಮೀಣ ಜನರು ಅನುಭವಿಸುತ್ತಿದ್ದ ಬಡತನ, ಅನಾರೋಗ್ಯ, ಅನಕ್ಷರತೆ ಇವೆಲ್ಲವುಗಳ ಪೂರ್ಣ ಅರಿವಿದ್ದಿತು.

ಅದು ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲ, ಆಗ ಪ್ರಾಥಮಿಕ ಶಿಕ್ಷಣವನ್ನು ಹಳ್ಳಿ ಹಳ್ಳಿಗೂ ತಲುಪಿಸಬೇಕೆಂಬ ಆಂದೋಲನ ಪ್ರಾರಂಭವಾಯಿತು. ಆರ್ಥಿಕ ಸಮ್ಮೇಳನಗಳ ಮೂಲಕ ಸಾರ್ವಜನಿಕರನ್ನು ಸಂಘಟಿಸುವ ಮತ್ತು ದಾನಿಗಳನ್ನು ಪ್ರೋತ್ಸಾಹಿಸುವ ಕಾರ್ಯ ಸರ್ಕಾರದಿಂದಲೇ ಆರಂಭವಾಗಿತ್ತು. ಇಂತಹ ಒಂದು ಚಳವಳಿಯಿಂದ ಪ್ರೇರಿತರಾಗಿಯೋ ಅಥವಾ ಸ್ವಯಂಪ್ರೇರಣೆಯಿಂದಲೋ ಚನ್ನಬಸಪ್ಪನವರು ಜನರಿಗೆ ಶಿಕ್ಷಣ ಮತ್ತು ಆರೋಗ್ಯ ಒದಗಿಸಲು ಶಕ್ತಿಮೀರಿ ದಾನಧರ್ಮ ಮಾಡಲು ಮುಂದಾದರು. ಅವರು 1914ರಲ್ಲಿ ತಮ್ಮ ಊರು ಕಬ್ಬಳ್ಳಿಯಲ್ಲಿ ಹದಿನಾರು ಸಾವಿರ ರೂಪಾಯಿಗಳ ದಾನ ನೀಡಿ ಮಾಧ್ಯಮಿಕ ಶಾಲೆ ಕಟ್ಟಡವನ್ನು ಕಟ್ಟಿಸಿದರು. ಸರ್ಕಾರದ ಮಂಜೂರಾತಿ ಪಡೆದು ಶಾಲೆ ತೆರೆದರು ಅದಕ್ಕೆ ತಮ್ಮ ತಂದೆ ಲಿಂಗೈಕ್ಯ ಸಿದ್ದಲಿಂಗಪ್ಪನವರ ಹೆಸರನ್ನಿಟ್ಟರು. ಶಿಕ್ಷಕರ ಸಂಬಳ, ವಸತಿ ಇವಕ್ಕೂ ವ್ಯವಸ್ಥೆ ಮಾಡಿದರು. ತಮ್ಮ ಮಕ್ಕಳಿಗೂ ಇತರ ಹಳ್ಳಿಯ ಬಾಲಕ ಬಾಲಕಿಯರಿಗೂ ಇಲ್ಲಿ ವಿದ್ಯಾಭ್ಯಾಸ ದೊರೆಯಿತು. ಅಂದಿನ ಕಾಲದಲ್ಲಿ ಸರಿಯಾದ ಚಿಕಿತ್ಸೆ ಇಲ್ಲದೆ ಜನರು ವಿವಿಧ ಮಾರಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದರು. ಇದನ್ನು ಕಂಡು ಕರಗಿದ ಚನ್ನಬಸಪ್ಪನವರು ತಮ್ಮ ಊರಲ್ಲಿ ಒಂದು ಆಸ್ಪತ್ರೆಯನ್ನೂ ಕಟ್ಟಿಸಿದರು. ಕಬ್ಬಳ್ಳಿ "ಮಾದರಿ ಗ್ರಾಮ" ವೆಂಬ ಅಭಿದಾನಕ್ಕೆ ಪಾತ್ರವಾಯಿತು.

ತಮ್ಮ ದಾನಶೀಲತೆಯಿಂದ ಕಬ್ಬಳ್ಳಿ ಚನ್ನಬಸಪ್ಪನವರು ಗುರು ಮನೆ ಮತ್ತು ಅರಮನೆಗಳ ಅನುಗ್ರಹಕ್ಕೆ ಪಾತ್ರರಾದರು. ಅವರ ಪ್ರಭಾವ ವೃದ್ಧಿಸಿತು. ಮೈಸೂರು ನಗರದಲ್ಲಿ ಸ್ಥಾಪನೆಯಾಗಿದ್ದ ವಿಶ್ವವಿದ್ಯಾನಿಲಯದ ಶಿಕ್ಷಣ ಸೌಲಭ್ಯ ಹಳ್ಳಿಯ ಮಕ್ಕಳಿಗೆ ದೊರೆಯಬೇಕಾದರೆ ಅಲ್ಲಿ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಒದಗಿಸುವ ಆಸೆ ಅವರದಾಯಿತು. ಮೈಸೂರಿನ ಈಗಿನ ಝಾನ್ಸಿ ಲಕ್ಷ್ಮೀಬಾಯಿ ರಸ್ತೆಯಲ್ಲಿ ಒಂದು ವಿಸ್ತಾರವಾದ ನಿವೇಶನದಲ್ಲಿದ್ದ ಮನೆಯನ್ನು ಖರೀದಿಸಿದರು. 1920ರಲ್ಲಿ ತೆಗೆದುಕೊಂಡ ಇದರ ಬೆಲೆ ನಲವತ್ತೈದು ಸಾವಿರ ರೂಪಾಯಿಗಳು. ಆ ಕಾಲದಲ್ಲಿ ಅದೊಂದು ದೊಡ್ಡ ಮೊತ್ತವೇ ಸರಿ. ಐದು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಅಲ್ಲಿ ಪುಸ್ತಕ ಭಂಡಾರವನ್ನು ನಿರ್ಮಿಸಿದರು. ಹೀಗೆ "ವೀರಶೈವ ವಿದ್ಯಾರ್ಥಿನಿಲಯ" ಪ್ರಾರಂಭವಾಯಿತು. ಚನ್ನಬಸಪ್ಪನವರು ಮೈಸೂರು ಜಿಲ್ಲೆಯ ಗೌರವಾನ್ವಿತ ವ್ಯಕ್ತಿಗಳಲ್ಲೊಬ್ಬರಾದರು. ಅವರು ಸ್ಥಳೀಯ ಸಂಸ್ಥೆಗಳ ಸದಸ್ಯರಾದದ್ದಲ್ಲದೆ ಎಂ. ಆರ್. ಎ. ಕೂಡ ಆದರು. ತಮ್ಮ ಪ್ರಭಾವದಿಂದ ತಮ್ಮ ತಾಲ್ಲೂಕಿಗೆ ರಸ್ತೆಗಳನ್ನು ನಿರ್ಮಿಸಲು ಶ್ರಮಿಸಿದರು

ಬಸ್ ಓಡಿಸುವ ವ್ಯವಸ್ಥೆ ಮಾಡಿದರು. ಹೀಗೆ ಜಿಲ್ಲೆಯ ವೀರಶೈವ ಜನಾಂಗದ ಕಣ್ಮಣಿಯಾಗಿ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಜನರಿಗೆ ಪೂಜನೀಯರಾದರು, ಕಬ್ಬಳ್ಳಿ ಸಾಹುಕಾರರು.

ಈ ಸುದಿನಗಳು ಅಲ್ಲಿನ ಜನತೆಯ ಪಾಲಿಗೆ ಹೆಚ್ಚು ಕಾಲ ಉಳಿಯಲಿಲ್ಲ. ದುರದೃಷ್ಟವಶಾತ್ 1926ರಲ್ಲಿ ಚನ್ನಬಸಪ್ಪನವರು ಬಸ್ ದುರಂತದಲ್ಲಿ ಕಾಲವಶರಾದರು. ಆಗ ಅವರಿಗೆ ಕೇವಲ ನಲವತ್ತೈದು ವರ್ಷಗಳ ಪ್ರಾಯ (ಜನನ 1871) .ಅವರ ಏಕಮಾತ್ರ ಪುತ್ರರಾಗಿದ್ದ ಕೆ.ಸಿ.ಸುಬ್ಬಣ್ಣನವರಿಗೆ ಆಗ ಇನ್ನೂ ಕೇವಲ ಹದಿನೈದು ವರ್ಷಗಳು (ಜನನ 1911). ಕೆ.ಸಿ. ಸುಬ್ಬಣ್ಣನವರು ಮೈಸೂರಿನಲ್ಲಿ ತಮ್ಮ ತಂದೆ ಸ್ಥಾಪಿಸಿದ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡು ಎಸ್.ಎಸ್.ಎಲ್.ಸಿ. ವರೆಗೂ ವಿದ್ಯಾಭ್ಯಾಸ ಮಾಡಿದರು. ಚನ್ನಬಸಪ್ಪನವರ ಪತ್ನಿ ಶರಣೆ ಮಲ್ಲವ್ವೆಯವರದು ಉದಾತ್ತವ್ಯಕ್ತಿತ್ವ ಅವರು ತಮ್ಮ ಬದುಕಿಗೆ ಬಂದೊದಗಿದ ಈ ದುರಂತದಿಂದ ಸಾವರಿಕೊಂಡು ಅಪ್ರಾಪ್ತ ವಯಸ್ಸಿನ ಮಗ ಸುಬ್ಬಣ್ಣನಿಗೆ ಮಾರ್ಗದರ್ಶನ ಮಾಡುತ್ತ ಸಮಸ್ತ ಜವಾಬ್ದಾರಿಗಳನ್ನು ಹೊತ್ತರು. ತಮ್ಮ ಪತಿ ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ಮುನ್ನೆಡೆದರು. ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಗೆ ಗಮನ ನೀಡಿದರು. ತಮ್ಮ ಸ್ವಂತ ಊರಿನಲ್ಲೂ ಮೈಸೂರಿನಲ್ಲೂ ತಮ್ಮ ಪತಿ ಸ್ಥಾಪಿಸಿದ್ದ ವಿದ್ಯಾರ್ಥಿ ನಿಲಯಗಳು ಬಡ ವಿದ್ಯಾರ್ಥಿಗಳಿಗೆ ಆಶ್ರಯ ತಾಣಗಳಾಗುವಂತೆ ನೋಡಿಕೊಂಡರು.

ಕೆ.ಸಿ. ಸುಬ್ಬಣ್ಣನವರಿಗೆ ಹದಿನೆಂಟು ವರ್ಷಗಳು ತುಂಬುತ್ತಲೇ ಅವರ ತಾಯಿ ಅವರಿಗೆ 1929ರಲ್ಲಿ ವಿವಾಹ ಮಾಡಿದರು. ಮಲ್ಲವ್ವೆ 1933ರಲ್ಲಿ ಲಿಂಗೈಕ್ಯರಾದರು. ಈ ಅವಗಡದ ಬೆನ್ನಹಿಂದೆ ಮತ್ತೊಂದು ದುರಂತ ಈ ಮನೆಯನ್ನು ಅಪ್ಪಳಿಸಿತು. 1934ರಲ್ಲಿ ಮನೆತನದ ಕುಲವಧು ಅಂದರೆ ಕೆ.ಸಿ.ಸುಬ್ಬಣ್ಣನವರ ಪತ್ನಿ ಸುಬ್ಬಮ್ಮನವರು ಕಣ್ಮರೆಯಾದರು.

ಈ ದುರಂತಗಳ ಸರಮಾಲೆಯಿಂದ ಕಬ್ಬಳ್ಳಿ ಮನೆತನ ತತ್ತರಿಸಿತು. ಈ ಸನ್ನಿವೇಶದಲ್ಲಿ 1934ರಲ್ಲಿ ಸಿ.ಆರ್. ಗೌಡರ ಹನ್ನೊಂದು ವರ್ಷದ ಹೆಣ್ಣುಮಗಳು ನಾಗರತ್ನಮ್ಮನವರು ಕೆ.ಸಿ. ಸುಬ್ಬಣ್ಣನವರ ಎರಡನೆ ಪತ್ನಿಯಾಗಿ ಕಬ್ಬಳ್ಳಿ ಮನೆಯ ಹೊಸಿಲು ತುಳಿದರು. ಇನ್ನೂ ಆಟಪಾಟಗಳಲ್ಲಿ ತೊಡಗಿರಬೇಕಾದ ಈ ಬಾಲಕಿಯನ್ನು ಮದುವೆ ಮಾಡಿಕೊಟ್ಟದ್ದು ಒಂದು ಸೋಜಿಗವೇ. 1935ರಿಂದ ಕೆ.ಸಿ. ಸುಬ್ಬಣ್ಣನವರು ಮೈಸೂರಿನಲ್ಲಿಯೇ ವಾಸಿಸತೊಡಗಿದ್ದರಿಂದ ನಾಗರತ್ನಮ್ಮನವರಿಗೆ ಪಟ್ಟಣದ ವಾಸ ಮುಂದುವರಿಯಿತು.

ಸುಬ್ಬಣ್ಣನವರು ತಮ್ಮ ತಂದೆಯಂತೆಯೇ ಧರ್ಮನಿಷ್ಠರೂ ಉದಾರ ದಾನಿಗಳೂ ಆಗಿದ್ದರು. ರಾಜಕೀಯದಲ್ಲಿ ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋಗುವ ನಾಯಕತ್ವ ಗುಣ ಹೊಂದಿದ್ದರು. ಶಿಕ್ಷಣ ಸಂಸ್ಥೆಗಳನ್ನು ಮತ್ತು ವಿದ್ಯಾರ್ಥಿನಿಲಯಗಳನ್ನು ಪೋಷಿಸಿದರು. ಅವರ ಮನೆ ರಾಜಕೀಯ ಚಟುವಟಿಕೆಗಳ ಕೇಂದ್ರವಾಯಿತು. ಕೆ.ಸಿ. ಸುಬ್ಬಣ್ಣನವರು ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಪ್ರಜಾಪ್ರತಿನಿಧಿಸಭೆಯ ಸದಸ್ಯರಾದರು. ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಮೇಲೆ ಸ್ಪರ್ಧಿಸಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾದರು. 1938ರಿಂದ ಒಂಬತ್ತು ವರ್ಷಗಳ ಕಾಲ ಸತತವಾಗಿ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿದ್ದರು. ರೈಲ್ವೆ ಸಲಹಾ ಸಮಿತಿ ಸಭೆಯ ಸದಸ್ಯರಾದರು. ಹೀಗೆ ಸುಬ್ಬಣ್ಣನವರು ಕಬ್ಬಳ್ಳಿ ಮನೆತನದ ಕೀರ್ತಿಯನ್ನು ಎಲ್ಲೆಡೆ ಹರಡುವಂತೆ ಮಾಡಿದರು.ಸರ್ಕಾರದಲ್ಲೂ ಸಮಾಜದಲ್ಲೂ ಅವರ ಪ್ರಭಾವ ದೃಢವಾಗಿ ಬೇರೂರಿತ್ತು.

ಕಬ್ಬಳ್ಳಿ ಮನೆತನ ಜನಮನದಲ್ಲಿ ನೆಲೆಸಿದ್ದು ಕೇವಲ ಅವರ ಅಧಿಕಾರ ಮತ್ತು ಸ್ಥಾನಮಾನಗಳಿಂದಲ್ಲ, ಅವರ ಅಪ್ರತಿಮ ತ್ಯಾಗದಿಂದ. ಮೈಸೂರಿನ ವಿದ್ಯಾರ್ಥಿನಿಲಯಕ್ಕೆ ಅವರು 60 ಎಕರೆ ನೀರಾವರಿ ಜಮೀನನ್ನು ದಾನವಾಗಿ ನೀಡಿದರು.ಇದರಿಂದಾಗಿ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಗೆ ಒಂದು ಸ್ಥಿರ ಏರ್ಪಾಡಾಯಿತು. ಆ ವಿದ್ಯಾರ್ಥಿ ನಿಲಯಕ್ಕೆ "ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪ ವೀರಶೈವ ವಿದ್ಯಾರ್ಥಿ ನಿಲಯ" ಎಂದು ತಮ್ಮ ತಂದೆಯ ಹೆಸರನ್ನಿಟ್ಟರು.ತಮ್ಮ ಊರಿನಲ್ಲೂ ಇಂತಹದೇ ವ್ಯವಸ್ಥೆ ಮಾಡಿದರು.ವೀರಶೈವ ಬಡ ವಿದ್ಯಾರ್ಥಿಗಳಿಗೆ ಮತ್ತು ಅವರ ತಂದೆ ತಾಯಿಗಳಿಗೆ ಈ ತಂದೆ ಮಕ್ಕಳು ಪ್ರಾತಃ ಸ್ಮರಣೀಯರಾದರು. 1941ರಲ್ಲಿ "ವೀರಶೈವ ಸಮ್ಮೇಳನ " ನಡೆಸಿದರು, ಹೀಗೆ ಕೆ.ಸಿ. ಸುಬ್ಬಣ್ಣನವರ ಕೀರ್ತಿ ವೃದ್ಧಿಸುತ್ತಲೇ ಇತ್ತು.

1947ರ ಆಗಸ್ಟ್ ತಿಂಗಳಲ್ಲಿ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವ ಸ್ವಾತಂತ್ರ್ಯ ದೇಶಕ್ಕೆ ಬಂದಿತ್ತು. ಆದರೆ ಕಬ್ಬಳ್ಳಿ ಮನೆತನಕ್ಕೆ ಅದು ಕಾರ್ಮೋಡ ಕವಿದ ಸಮಯ. ಅದೇ ತಿಂಗಳು ಕೆ.ಸಿ. ಸುಬ್ಬಣ್ಣನವರು ವಾಸಿಯಾಗದ ಕಾಯಿಲೆಯಿಂದ ಬಳಲಿ ಕಣ್ಮರೆಯಾದರು. ಆಗ ಅವರಿಗೆ ಕೇವಲ ಮೂವತ್ತಾರು ವರ್ಷಗಳು. ಈ ಬಹುದೊಡ್ಡ ಮನೆತನದ ಸಮಸ್ತ ಜವಾಬ್ದಾರಿಗಳು ಆಗಿನ್ನೂ ಇಪ್ಪತ್ತನಾಲ್ಕರ ಹರೆಯದಲ್ಲಿದ್ದ ಶ್ರೀಮತಿ ನಾಗರತ್ನಮ್ಮನವರ ಹೆಗಲಿಗೆ ಬಿದ್ದವು. ಈ ದಂಪತಿಗಳಿಗೆ ಸಂತಾನ ಪ್ರಾಪ್ತಿ ಇರಲಿಲ್ಲ.

ಶ್ರೀಮತಿ ನಾಗರತ್ನಮ್ಮನವರ ಹೆಸರಿನ ಮುಂದೆ 'ಕೆ.ಎಸ್.' ಎಂಬ ಆದ್ಯಕ್ಷರಗಳಿವೆ. ಇವು ಕಬ್ಬಳ್ಳಿ ಸುಬ್ಬಣ್ಣ ನಾಗರತ್ನಮ್ಮ ಎಂಬುದನ್ನು ಸೂಚಿಸುತ್ತವೆಂದು ತಿಳಿದುಬರುತ್ತದೆ. ನಾಗರತ್ನಮ್ಮನವರು ತಮ್ಮ ಹೊಣೆಗಾರಿಕೆಗಳಿಗೆ ಬೆನ್ನು ತೋರಲಿಲ್ಲ. ಅವನ್ನೆಲ್ಲ ಗಂಡಸಿನಂತೆ ನಿರ್ವಹಿಸುವ ದೃಢನಿಶ್ಚಯ ಮಾಡಿದರು. ಅವರು ಮುಂದಿನ ದಿನಗಳಲ್ಲಿ ತೋರಿದ ಧೈರ್ಯ ಸಾಹಸಗಳನ್ನು ನೋಡಿದರೆ ಅವರ ವ್ಯಕ್ತಿತ್ವವೇ ಎಂತಹ ಗಟ್ಟಿ ಸ್ವರೂಪದ್ದೆಂದು ಕಂಡುಬರುತ್ತದೆ. ಆ ಕಾಲದಲ್ಲಿ ಹೆಣ್ಣುಮಗಳು ಅದರಲ್ಲೂ ಪ್ರಾಯದ ವಿಧವೆ ಸಾರ್ವಜನಿಕ ಕ್ಷೇತ್ರದಲ್ಲಿ ನಿರತವಾಗಿರುವುದು ಹರಸಾಹಸದ ವಿಷಯವೇ ಆಗಿತ್ತು.

ನಾಗರತ್ನಮ್ಮನವರು ಇಂತಹ ಸವಾಲನ್ನು ಸ್ವೀಕರಿಸಿದರು. ಕಬ್ಬಳ್ಳಿ ಮನೆತನ ನಡೆಸಿಕೊಂಡು ಬರುತ್ತಿದ್ದ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿನಿಲಯಗಳನ್ನು ಮುನ್ನಡೆಸಿದ್ದಲ್ಲದೆ ಆ ಕುಟುಂಬ ಹೊಂದಿದ್ದ ವಿಸ್ತಾರವಾದ ಜಮೀನುಗಳನ್ನು ನೋಡಿಕೊಂಡರು. ಮೈಸೂರು ನಗರವೇ ಅವರಿಗೆ ನೆಲೆಯಾಯಿತು. ಮನೆಯ ಹೊಸ್ತಿಲು ದಾಟಿ ಹೊರ ಪ್ರಪಂಚ ನೋಡಿದರು. ನಗರದಲ್ಲಿ ನಡೆಯುತ್ತಿದ್ದ ಮಹಿಳಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ನೋಡುತ್ತಾ ನೋಡುತ್ತಾ ಒಂದು ದಶಕ ಕಳೆದುಹೋಯಿತು.

## ರಾಜಕೀಯ ಪ್ರವೇಶ

ಇನ್ನೇನು ಕಬ್ಬಳ್ಳಿ ಮನೆತನದ ರಾಜಕೀಯ ಪರಂಪರೆ ಸುಬ್ಬಣ್ಣನವರ ಕಾಲಕ್ಕೆ ಕೊನೆಗೊಂಡಿತೆಂದು ಜನರಾಡಿಕೊಳ್ಳತೊಡಗಿದರು. ಈ ತಂದೆ ಮಕ್ಕಳ ಜನಸೇವೆ ಜನಮನದಲ್ಲಿ ಹಸಿರಾಗಿಯೇ ಉಳಿದಿತ್ತು. ಆದರೆ ಅದಕ್ಕೆ ಮಾತ್ರ ರೂಪಕೊಡಲು ಆ ಮನೆಗೆ ಸಂತಾನ

ಭಾಗ್ಯವಿರಲಿಲ್ಲ. ಈ ದಿಕ್ಕಿನಲ್ಲಿ ಆಶಾಕಿರಣವಾಗಿದ್ದವರು ಕೆ.ಎಸ್. ನಾಗರತ್ನಮ್ಮನವರು. ಚಿಕ್ಕ ವಯಸ್ಸಿನಲ್ಲೇ ಜೀವನದಲ್ಲಿ ಕಹಿಉಂಡು ಕಷ್ಟಸುಖಗಳಿಗೆ ತಮ್ಮನ್ನು ಒಡ್ಡಿಕೊಂಡಿದ್ದ ನಾಗರತ್ನಮ್ಮನವರು ದೃಢ ವ್ಯಕ್ತಿತ್ವದ ಮಹಿಳೆ ಎಂಬುದನ್ನು ತಾವೇ ಸಾಬೀತು ಪಡಿಸಿದ್ದರು. ಗುಂಡ್ಲುಪೇಟೆ ತಾಲ್ಲೂಕಿನ ಬಹುಜನರು ನಾಗರತ್ನಮ್ಮನವರು ರಾಜಕೀಯಕ್ಕೆ ಬರಬೇಕೆಂಬ ಒತ್ತಾಯ ತರತೊಡಗಿದರು. ಅದಕ್ಕೆ ಗುರುಮಠದ ಆಶೀರ್ವಾದವೂ ಕಬ್ಬಳ್ಳಿ ಮನೆತನದ ಹಿತೈಷಿಗಳಿಗೂ ಬಂಧುಗಳೂ ಆಗಿದ್ದ ಮೂಡುಗೂರು ಗೌಡರ ಸುಬ್ಬಣ್ಣನವರ ಪ್ರೋತ್ಸಾಹವು ಪ್ರೇರಣೆಯೂ ನಾಗರತ್ನಮ್ಮನವರಿಗೆ ನೈತಿಕ ಬೆಂಬಲ ತಂದು ಕೊಟ್ಟಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ತ್ಯಾಗ ಬಲಿದಾನದಲ್ಲಿ ತಾವು ಕಡಿಮೆಯಲ್ಲ ಎಂದು ತೋರಿಸಿಕೊಟ್ಟಿದ್ದ ಹಲವು ಮಹಾ ಮಹಿಳೆಯರ ಆದರ್ಶವು ಅವರ ಕಣ್ಮುಂದೆ ಇದ್ದಿತು. ಇಲ್ಲದರಿಂದ ಧೈರ್ಯ ತಂದುಕೊಂಡು ಗುಂಡ್ಲುಪೇಟೆ ತಾಲ್ಲೂಕಿನ ಜನರು ತಮ್ಮ ಮನೆತನದ ಬಗ್ಗೆ ತೋರಿಸುತ್ತಿದ್ದ ಪ್ರೀತಿ ಅಭಿಮಾನಗಳಿಗೆ ಓಗೊಡಲು ನಿರ್ಧರಿಸಿದರು. 1957ರ ಸಾರ್ವತ್ರಿಕ ಚುನಾವಣೆ ಬಂದೇ ಬಿಟ್ಟಿತು. ಆಗ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರಿಗೆ ಮೂವತ್ತನಾಲ್ಕರ ನಡುವಯಸ್ಸು; ಮುಖಂಡತ್ವ ವಹಿಸಲು ಮಾನಸಿಕವಾಗಿಯೂ ಸಿದ್ಧವಾಗಿದ್ದ ಕಾಲ ಅದು. ಕ್ಷೇತ್ರದ ಜನತೆಯಿಂದ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಬಂದ ಒತ್ತಡಕ್ಕೆ ಮೌನವಾಗಿಯೇ ಸಮ್ಮತಿಸಿದರು. ವಿಧಾನ ಸಭಾ ಸ್ಥಾನಕ್ಕೆ ಅಭ್ಯರ್ಥಿಯಾದರೂ ಸ್ವತಂತ್ರ್ಯ ಅಭ್ಯರ್ಥಿಯಾಗಿ ಸ್ಪರ್ಧೆಗಿಳಿದರು. ಕಬ್ಬಳ್ಳಿ ಮನೆತನ ಮತ್ತೆ ರಾಜಕೀಯದ ಮುಂಚೂಣಿಗೆ ಬಂದಿತು.

ಈ ಚುನಾವಣೆ ಸ್ವಾತಂತ್ರ್ಯ ಬಂದ ನಂತರ ನಡೆದ ಎರಡನೆಯ ಮಹಾ ಚುನಾವಣೆ. ಆಗ ಕಾಂಗ್ರೆಸ್‌ಗೆ ಚುನಾವಣೆಯಲ್ಲಿ ಗೆಲ್ಲುವುದು ಅನಾಯಾಸವಾದ ಕೆಲಸವಾಗಿತ್ತು. ಅಂತಹದರಲ್ಲಿ ಕಾಂಗ್ರೆಸ್‌ನ ವಿರುದ್ಧ ಸ್ವತಂತ್ರ್ಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಚುನಾವಣೆಯನ್ನು ಗೆಲ್ಲಬೇಕೆಂದರೆ ಎಂಟೆದೆಯ ಧೈರ್ಯ ಬೇಕಾಗಿತ್ತು. ಅದರಲ್ಲೂ ಮಹಿಳೆಯೊಬ್ಬರು ಆ ಕಾಲದಲ್ಲಿ ಈ ಸಾಹಸಕ್ಕಿಳಿಯುವುದೆಂದರೆ ಅದೊಂದು ಅಸಾಧ್ಯವಾದ ಸಾಹಸವೆಂದೇ ಸಾಮಾನ್ಯ ನಂಬಿಕೆ. ಇಂತಹ ನಂಬಿಕೆಯನ್ನು ಸುಳ್ಳಾಗಿಸುವ ಪಣತೊಟ್ಟವರು ಗುಂಡ್ಲುಪೇಟೆ ಕ್ಷೇತ್ರದ ಜನತೆ. ಅದಕ್ಕೆ ಅವರಿಗಿದ್ದ ಮುಖ್ಯ ಪ್ರೇರಣೆ, ಕಬ್ಬಳ್ಳಿ ಮನೆತನದ ಜನಪರ ಕಾರ್ಯಗಳ ಸ್ಮರಣೆ. ಆಗ"ಕಬ್ಬಳ್ಳಿ ಸಾಹುಕಾರ್ ಚನ್ನಬಸಪ್ಪನವರ ಸೊಸೆ ಕೆ.ಸಿ. ಸುಬ್ಬಣ್ಣನವರ ಧರ್ಮಪತ್ನಿ ನಾಗರತ್ನಮ್ಮನವರಿಗೆ ಓಟು ಕೊಡಿ" ಎಂದು ಕಾರ್ಯಕರ್ತರು ಪ್ರಚಾರಕ್ಕಿಳಿದರು. ಆಗ ಅವರ ಚುನಾವಣಾ ಚಿಹ್ನೆ ಸೈಕಲ್. ಜನರಲ್ಲಿ ನಾಗರತ್ನಮ್ಮನವರು ಚುನಾವಣೆಗೆ ನಿಂತಿದ್ದು ಮಿಂಚಿನೋಪಾದಿಯಲ್ಲಿ ಸಂವೇದನೆಯ ಅಲೆಗಳನ್ನೆಬ್ಬಿಸಿತು. ಈ ಕಬ್ಬಳ್ಳಿ ಮನೆತನದ ಋಣತೀರಿಸುವ ಕಾಲ ಒದಗಿ ಬಂದಿತೆಂದು ಜನ ಭಾವಿಸಿದರು. ಸ್ವಪ್ರೇರಿತರಾಗಿ ಪ್ರಚಾರದಲ್ಲಿ ಭಾಗವಹಿಸಿದರು. ಮತ ಚಲಾಯಿಸಿದರು. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಆಗಿನ ಕಾಂಗ್ರೆಸ್ ಅಭ್ಯರ್ಥಿಯನ್ನು ಹನ್ನೆರಡು ಸಾವಿರ ಮತಗಳಿಂದ ಸೋಲಿಸಿದರು. ಕರ್ನಾಟಕದ ವಿಧಾನ ಸಭಾ ಸದಸ್ಯರಾದರು. ಪ್ರಥಮ ಪ್ರಯತ್ನದಲ್ಲಿ ಸಫಲರಾಗಿದ್ದರು.

**ಶಾಸಕಿಯಾಗಿ :**

1957ರಲ್ಲಿ ಶಾಸಕಿಯಾಗಿ ಆಯ್ಕೆಯಾದ ಕೆ. ಎಸ್. ನಾಗರತ್ನಮ್ಮನವರು ಹಿಂದಿರುಗಿ ನೋಡಲಿಲ್ಲ. ಮುಂದಿನ ಮೂರು ದಶಕಕ್ಕೂ ಹೆಚ್ಚು ಅವಧಿಯಲ್ಲಿ ಅವಿರತವಾಗಿ ವಿಧಾನ ಸಭೆಗೆ ಚುನಾಯಿತರಾಗುತ್ತ ಬಂದರು. ತುರ್ತುಸ್ಥಿತಿಯ ಅನಂತರ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಯಶಸ್ವಿಯಾಗದಿದ್ದದ್ದು ಮಾತ್ರ ಒಂದು ಅಪವಾದ. ಅವರ ಈ ಅಪರೂಪದ ಯಶಸ್ಸಿಗೆ ಯಾವ ಯಾವ ಅಂಶಗಳು ಕಾರಣವಾದವು ಎಂದು ಕುತೂಹಲದಿಂದ ನೋಡಿದಾಗ ಒಂದು ವಿಶಿಷ್ಟ ಚಿತ್ರ ದೊರೆಯುತ್ತದೆ. ಮೊದಲನೆಯದಾಗಿ, ಈಗಾಗಲೇ ನೋಡಿದಂತೆ ನಾಗರತ್ನಮ್ಮನವರಿಗೆ ತಾವು ಸೇರಿದ ಕಬ್ಬಳ್ಳಿ ಕುಟುಂಬದ ಜನಪ್ರಿಯತೆ ಮತ್ತು ಆಸರೆಗಳು ಬಹುಮಟ್ಟಿಗೆ ರಾಜಕೀಯ ಅಸ್ತಿತ್ವ ತಂದುಕೊಟ್ಟವು ಆದರೆ ಇದಿಷ್ಟೇ ಆಗಿದ್ದರೆ ಆ ಪ್ರಭಾವ ಕಾಲಕ್ರಮೇಣ ನಶಿಸಿಹೋಗಿ ಅವರು ಜನಾಧಾರಣೆ ಕಳೆದುಕೊಳ್ಳುವ ಸಂದರ್ಭ ಇರುತ್ತಿದ್ದಿತು.ಇದರ ಜೊತೆಗೆ ಶ್ರೀಮತಿ ನಾಗರತ್ನಮ್ಮನವರ ವ್ಯಕ್ತಿ ವರ್ಚಸ್ಸು, ಧೀರತೆ, ಹೋರಾಟದ ಸ್ವಭಾವ, ಮನಬಿಚ್ಚಿ ಮಾತನಾಡುವ ಗುಣ, ಜನರ ಕಷ್ಟ ಸುಖಗಳಿಗೆ ಸ್ಪಂಧಿಸುವ ಸಹೃದಯತೆ ಇವೆಲ್ಲಾ ಅವರ ರಾಜಕೀಯ ಜೀವನದ ಯಶಸ್ಸಿನ ಹಿಂದೆ ಅಡಕವಾಗಿದ್ದವು. ಅವರ ಈ ಧೀರ್ಘಕಾಲದ ರಾಜಕೀಯ ಜೀವನದಲ್ಲಿ ಅವರು ಸಂಸದೀಯ ಪಟುವಾಗಿ ಹೇಗೆ ಸಾಧನೆ ಮಾಡಿದರೆಂಬುದನ್ನು ನೋಡಬಹುದು.

ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರು ಸ್ವಾತಂತ್ರ್ಯೋತ್ತರ ಕಾಲದ ಮೊದಲ ತಲೆಮಾರಿನ ಮಹಿಳಾ ಶಾಸಕಿಯರ ಸಾಲಿಗೆ ಸೇರಿದ್ದಾರೆ. ಆದರೆ ಆಗ ಶಾಸಕಿಯರಾದ ಮಹಿಳೆಯರ ಸಂಖ್ಯೆ ಕಡಿಮೆ ಇದ್ದರೂ ಅವರಲ್ಲಿ ಬಹಳಷ್ಟು ಜನರಿಗೆ ಸ್ವಾತಂತ್ರ್ಯ ಹೋರಾಟದ ಇಲ್ಲವೆ ಸಾಮಾಜಿಕ ಸೇವೆಯ ಹಿನ್ನೆಲೆ ಇದ್ದಿತು. ಆದರೆ ನಾಗರತ್ನಮ್ಮನವರು ತಮ್ಮ ಸಾರ್ವಜನಿಕ ವ್ಯಕ್ತಿತ್ವವನ್ನು ತಮ್ಮ ಗುಣ ಸಾಮರ್ಥ್ಯದ ಮೇಲೆಯೇ ರೂಪಿಸಿಕೊಳ್ಳಬೇಕಾಗಿದ್ದಿತು.ಇಂತಹ ಸನ್ನಿವೇಶದಲ್ಲಿ ವಿಧಾನಸಭೆಯ ಒಳಗೆ ಮತ್ತು ಹೊರಗೆ ಅವರು ತೋರುತ್ತಿದ್ದ ಕಾರ್ಯಕ್ಷಮತೆಯೇ ಅದಕ್ಕೆ ಮಾನದಂಡವಾಗಿದ್ದಿತು. ಅವರು ಸ್ವತಂತ್ರ ಅಭ್ಯರ್ಥಿಯಾಗಿ ಚುನಾಯಿತರಾದುದರಿಂದ ಅವರಿಗೆ ಯಾವ ರಾಜಕೀಯ ಪಕ್ಷದ ಅಂಕೆಯೂ ಇರಲಿಲ್ಲ, ಸರ್ಕಾರದ ದೋಷಗಳನ್ನು ಸ್ಪಷ್ಟ ಮಾತುಗಳಲ್ಲಿ ಖಡಾಖಂಡಿತವಾಗಿ ಟೀಕಿಸುತ್ತಿದ್ದರು. ಮಂತ್ರಿಗಳ ಮತ್ತು ಅಧಿಕಾರಿಗಳ ತಪ್ಪುಗಳನ್ನು ಬೊಟ್ಟು ಮಾಡಿ ತೋರಿಸುತ್ತಿದ್ದರು. ಇದಕ್ಕೆಲ್ಲ ಅವರಿಗೆ ದಿನನಿತ್ಯದ ತಮ್ಮ ಅನುಭವಗಳೇ ಆಧಾರವಾಗಿದ್ದವು.

1960-61ರ ರಾಜ್ಯ ಆಯುವ್ಯಯ ಪತ್ರದ ಬಗ್ಗೆ ಚರ್ಚೆ ನಡೆಸುತ್ತಿದ್ದಾಗ ನೀರಾವರಿ ಶುಲ್ಕ ವಸೂಲಾಗುತ್ತಿಲ್ಲ ಎಂಬ ಅಂಶವನ್ನು ಸಂಬಂಧಪಟ್ಟ ಸಚಿವರು ಸಭೆಯ ಗಮನಕ್ಕೆ ತಂದರು.ಆಗ ಕೆ.ಎಸ್.ನಾಗರತನ್ನಮ್ಮನವರು ತಮ್ಮ ಕ್ಷೇತ್ರದ ನೀರಾವರಿ ಯೋಜನೆಗಳನ್ನೇ ಉದಾಹರಣೆಯಾಗಿ ಎತ್ತಿಕೊಂಡು ಸರ್ಕಾರದ ಕಾರ್ಯನೀತಿಯನ್ನು ತರಾಟೆಗೆ ತೆಗೆದುಕೊಂಡ ರೀತಿ ಕುತೂಹಲಕರವಾಗಿದೆ. ಅದಕ್ಕಾಗಿ ಆ ಚರ್ಚೆಯ ಒಂದು ಭಾಗವನ್ನು ನೋಡಬಹುದು.

"ನಿಮಗೆ ಹೇಗೆ ನೀರಾವರಿಯಿಂದ ದುಡ್ಡು ಬರುತ್ತದೆ? ನೀರಾವರಿ ತೆರಿಗೆ ಹೇಗೆ ಬರುತ್ತದೆ? ಬರಲು ಸಾಧ್ಯ ಎಂದು ಕೇಳಲು ನನಗೆ ಕುತೂಹಲ. ಪ್ರಾಜೆಕ್ಟ್‌ಗಳನ್ನು ಟೆಕ್ನಿಕಲ್ ಅಡ್‌ವೈಸಿನ ಪ್ರಕಾರ ಅಡ್‌ವೈಸ್‌ರುಗಳ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು ಅದರಂತೆ ಏರ್ಪಾಡು ಮಾಡಿದರೆ, ನಿಜವಾಗಿ ನಿಮಗೆ ವರಮಾನ ಬರುತ್ತದೆ, ಜನಗಳಿಗೂ ಒಳ್ಳೆಯದಾಗುತ್ತದೆ. ಆದರೆ ಇಲ್ಲಿ

ನಡೆಯುತ್ತಿರುವುದೆಲ್ಲಾ ತಲೆಕೆಳಗಿನ ವ್ಯಾಪಾರ.

ಶ್ರೀ ಟಿ.ಮರಿಯಪ್ಪ- ನಿಮ್ಮಲ್ಲಿ ಇಪ್ಪತ್ತು ಸಾವಿರ ಎಕರೆಗಳಿಂದ ವಾಟರ್ ರೇಟ್ ಬಂದಿಲ್ಲ ಹಾಗಾದರೂ ಬಂದಿಲ್ಲ ಎಂದು ಹೇಳಿದ್ದು ತಪ್ಪೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ-ಏಕೆ ಬರುವುದಿಲ್ಲ? ನಾನು ಹೇಳುವವರೆಗೆ ಕೇಳಿ ಏಕೆ ಅವಸರ ? ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಅದೇನೆಂದರೆ ನನ್ನ ತಾಲ್ಲೋಕು ಎಲ್ಲರಿಗೂ ಗೊತ್ತು. ತಮಗಂತೂ ಚೆನ್ನಾಗಿ ಗೊತ್ತು. ಒಣ ತಾಲ್ಲೂಕು, ಬರಡು ತಾಲ್ಲೂಕು, ಅಂಥ ತಾಲ್ಲೂಕಿನಲ್ಲಿ ಮೊನ್ನೆತಾನೆ ಆಲಹಳ್ಳಿ ಅಣೆಕಟ್ಟು ಎಂದು ಒಂದು ಅಣೆಕಟ್ಟಿಗೆ ಶಂಕುಸ್ಥಾಪನೆಯಾಯಿತು. ಈ ಸದನದ ಸದಸ್ಯರಾದ ಮತ್ತು ಈ ಸುಂದರ ದೇಶದ ಪ್ರಜೆಗಳೂ ಆದ ಮಾನ್ಯ ರಾಚಯ್ಯನವರೂ ರಾಜಶೇಖರಮೂರ್ತಿಗಳು, ಮುಂತಾದವರೆಲ್ಲರೂ ಅಲ್ಲಿಗೆ ಬಂದಿದ್ದರಂತೆ. ಬಹಳ ಶ್ಲಾಘನೀಯವಾದ ಭಾಷಣಗಳನ್ನು ಮಾಡಿದರಂತೆ, ಅದು ಇರಲಿ.

ಶ್ರೀ.ಟಿ.ಮರಿಯಪ್ಪ- ನಿಮ್ಮ ಊರಿನ ಹತ್ತಿರವೇ ಇದೆ ಆಲಹಳ್ಳಿ. ಗುಂಡ್ಲುಪೇಟೆಯಲ್ಲಿರದೆ, ಮೈಸೂರು ಸಿಟಿಯಲ್ಲಿ ಇದ್ದುಬಿಟ್ಟಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ- ನಿಧಾನವಾಗಿ ಕೇಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಪ್ರಾಜೆಕ್ಟಿನ ವಿಚಾರ ತೆಗೆದುಕೊಂಡರೆ, 9.5. ಲಕ್ಷ ರೂಪಾಯಿ ಖರ್ಚು. ಇದು ಬೇಗೂರವರಿಗೂ ಮತ್ತು ಆಲಹಳ್ಳಿಯವರಿಗೂ ಅನುಕೂಲವಾಗುತ್ತದೆಂದು ಸುದ್ದಿ. ಈ ಎರಡು ಊರುಗಳಿಂದ ಇರುವುದು 4000 ಸಂಸಾರ, ಅದರಲ್ಲಿ 40 ಕುಳಕ್ಕೆ ಉಪಯೋಗವಾಗುತ್ತದೆ. ಬಾಕಿ ಎಲ್ಲಾ ನಂಜನಗೂಡು ತಾಲ್ಲೂಕಿನವರಿಗೆ ಮತ್ತು ಅವರು ಇವರಿಗೆ ಉಪಕಾರವಾಗುತ್ತದೆಂದು ಸಮಾಚಾರ. ಆದರೆ ಇದರಲ್ಲಿ ಏನಾಗಿದೆಯೆಂದರೆ, ಈ ಪ್ರಾಜೆಕ್ಟ್ ಯಾವಾಗ ಸ್ಯಾಂಕ್ಷನ್ ಆಗುತ್ತದೆಂದು ಸ್ವಲ್ಪ ಗಾಳಿ ಸುದ್ದಿ ಹರಡುವುದಕ್ಕೆ ಶುರುವಾಯಿತೋ ಆವಾಗ ಎರಡು ಊರಿನವರೂ ನನ್ನ ಹತ್ತಿರ ಓಡಿ ಬಂದರು. "ಹೀಗೇ ಆಗಿದೆಯಂತೆ, 40 ಜನಕ್ಕೆ ಬಿಟ್ಟರೆ ಈ ಪ್ರಾಜೆಕ್ಟಿನಿಂದ ನಮಗೆ ಸ್ವಲ್ಪವೂ ಉಪಕಾರವಾಗುವುದಿಲ್ಲ; ಇದರಲ್ಲಿ ಒಟ್ಟು ಮುಳುಗಡೆ 400 ಎಕರೆಯಾಗುತ್ತದೆ, ನಮಗೆ ಗೋಮಾಳ ಇಲ್ಲದೇನೇ ಹೋಗುತ್ತದೆ. ಅಕ್ಕಪಕ್ಕದಲ್ಲಿ ಜಮೀನೂ ಇಲ್ಲ; ಇದನ್ನು ಹೇಗಾದರೂ ತಪ್ಪಿಸಿಕೊಡಿ; ಇಲ್ಲದಿದ್ದರೆ ಬೇರೆ ಕಡೆ ಹಾಕಿಕೊಡಿ" ಎಂದು ಇಷ್ಟು ಜನರೂ ಅಪ್ಲಿಕೇಷನ್ ತೆಗೆದುಕೊಂಡು ಬಂದು ನನ್ನನ್ನು ಕೇಳಿಕೊಂಡರು. ನಾನು ಕೂಡಲೆ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಫೋನ್ ಮಾಡಿ ಹೇಳಿದೆ. ಅವರು ಇದು ಫೀಜಿಬಲ್ ಪ್ರಾಜೆಕ್ಟ್ ಅಲ್ಲ; ಇದನ್ನು ಮಾಡುವುದಿಲ್ಲವೆಂದು ಹೇಳಿದರು. ಅದನ್ನು ನಾನು ಅವರಿಗೆ ತಿಳಿಸಿ ಸರ್ಕಾರ ಅಷ್ಟು ಅನ್ಯಾಯ, ದುಷ್ಕೃತ್ಯ ಮಾಡುವುದಿಲ್ಲವೆಂದು ಹೇಳಿ ಸಮಾಧಾನ ಮಾಡಿ ಕಳುಹಿಸಿದೆ.

ನಾನು ಕೇಳಿದ ಹಾಗೆ 15-20 ದಿವಸಗಳಲ್ಲಿ ಮಿನಿಸ್ಟರ್ ಸಂಬಂಧಿಕರು ಇದನ್ನು, ಆರ್ಡರ್ ಮಾಡಿಸಿಕೊಂಡು ಬಂದಿದ್ದಾರೆಂದೂ, ಮಿನಿಸ್ಟರು ಶಂಕುಸ್ಥಾಪನೆಗೆ ಬರುತ್ತಾರೆಂದೂ, ಫಂಕ್ಷನ್ ಬಹಳ ಗ್ರಾಂಡ್ ಆಗಿ ಆಗಬೇಕು ಎಂದೂ, ಅವರಿಗೆ ಒಂದು ಕ್ಯಾಸೆಟ್ ಅರ್ಪಿಸಬೇಕೆಂತಲೂ, ಇದರ ಖರ್ಚಿಗಾಗಿ ಎಂಟತ್ತು ಸಾವಿರ ರೂಪಾಯಿ ಶೇಖರಿಸಬೇಕೆಂದು, ಚಂದಾ ವಸೂಲುಮಾಡುವುದಕ್ಕೆ ಶುರುಮಾಡಿದ್ದಾರೆಂದೂ ನಮ್ಮ ಗತಿ ಏನು ಎಂದು ನನ್ನ ಹತ್ತಿರ ಜನಗಳು

ತಿರುಗ ಓಡಿ ಬಂದರು.ಇದೆಲ್ಲಾ ಸತ್ಯವಾದ ಸಂಗತಿ.

ಆವಾಗ ಕೂಡಲೇ ನಾನು ಕನ್‌ಸರ್ನ್ಡ್ ಮಿನಿಸ್ಟರಿಗೂ, ರೆವಿನ್ಯೂ ಮಿನಿಸ್ಟರಿಗೂ, ಅಗ್ರಿಕಲ್ಚರ್ ಮಿನಿಸ್ಟರಿಗೂ ಕಾಗದಬರೆದು ಸಂಗತಿಯನ್ನೆಲ್ಲಾ ತಿಳಿಸಿದೆ. ಕನ್‌ಸರ್ನ್ಡ್ ಮಿನಿಸ್ಟರು ನಿಮ್ಮ ಕಾಗದ ಬಂದಿತ್ತು. ಚೀಫ್ ಮಿನಿಸ್ಟರಿಗೆ ತಿಳಿಸಲಾಗುತ್ತದೆ, ಎಂದು ಜವಾಬು ಕಳುಹಿಸಿದರು. ಅವರು ಏನು ತಿಳಿಸಿದರೋ ಭಗವಂತನಿಗೆ ಗೊತ್ತು.

ಆ ಊರಿನಲ್ಲಿ ಇದನ್ನು ಯಾರಾದರೂ ಸರ್ವೆ ಮಾಡಿರುವುದನ್ನು ನೋಡಿರಬೇಕು; ಒಬ್ಬರಿಗೂ ಕಂಡಿಲ್ಲ. ಇಷ್ಟು ದೊಡ್ಡ ಪ್ರಾಜೆಕ್ಟ್ : ಗುಂಡ್ಲುಪೇಟೆ ಅಸಿಸ್ಟೆಂಟ್ ಇಂಜಿನಿಯರಿಗೆ ಗೊತ್ತಿಲ್ಲ. ಒಬ್ಬ ಮನುಷ್ಯನೂ ಸರ್ವೆ ಮಾಡಿರುವುದು ಸರಿಯಾಗಿ ನೋಡಿಲ್ಲ. ಏಕದಂ ಸರ್ವೆ ರಿಪೋರ್ಟ್ ಸಿದ್ಧವಾಗಿ ಹೋಯಿತು. ನಿಜವಾಗಿ ಡಿಪಾರ್ಟ್‌ಮೆಂಟಿನವರು ಸ್ಪಾಟಿಗೆ ಹೋದರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೂ ಸರ್ವೆ ರಿಪೋರ್ಟ್ ಆಗಿದೆಯಂತೆ.ಮಿನಿಸ್ಟರು ಅಲ್ಲಿಗೆ ಹೋದರು. ಭರ್ಜರಿ ಭಾಷಣಗಳಾದವು, ಕ್ಯಾಸೆಟ್ ಒಪ್ಪಿಸಿಕೊಂಡರು, ಶಂಕುಸ್ಥಾಪನೆ ಆಗಿಹೋಯಿತು.

ಶಂಕುಸ್ಥಾಪನೆ ಆಗುವುದಕ್ಕೆ ಕೊಂಚ ಮುಂದೆ ತಿರುಗಿ ಜನ ಬಂದರು. ಮತ್ತೊಂದು ಕಾಗದ ಬರೆದಿದ್ದೇನೆ" ಬೇಕಾದಷ್ಟು ಕಡೆ ಹೋಗಿ ನೋಡಿ ನಿಮ್ಮ ಹೆಸರಿನಲ್ಲಿ ಅನ್ಯಾಯ, ಅಕೃತ್ಯ ನಡೆಯುತ್ತಿದೆ." ಎಂದು . ಇವರ ಇನ್ವಿಟೇಶನ್ ನನಗೆ ತಲುಪುವ ಸ್ಥಿತಿ ನೋಡಿ; ಟೂರ್ ಪ್ರೋಗ್ರಾಂ ಒಂದು ಕಳುಹಿಸಿದರು. ಅದನ್ನು ಶಂಕುಸ್ಥಾಪನೆ ಮಾಡುವುದಕ್ಕೆ ಬರುವ ದಿವಸ ನನಗೆ ಕಳುಹಿಸ್ದಿದಾರೆ. ಆವತ್ತಿನ ದಿವಸ ಆ ಪ್ರಾಜೆಕ್ಟ್ ಓಪನಿಂಗ್ ಸೆರಮನಿಗೆ ನೀವು ಏಕೆ ಹೋಗಲಿಲ್ಲವೆಂದರೆ, ಇದೇ ಕಾರಣ, ಓಪನ್ ಆದ ಐದು ದಿವಸಗಳ ಮೇಲೆ ಇನ್‌ವಿಟೇಷನ್ ಬರುತ್ತದೆ.

ಸರ್ಕಾರದವರು ಇನ್‌ವಿಟೇಷನ್ ಪ್ರಿಂಟ್ ಮಾಡಿದ್ದಾರೆ. ಅದು ಫಂಕ್ಷನ್ ಆದ ಮಾರನೆಯ ದಿವಸ ಬಂದಿತ್ತು. ಒಂದು ಲಕ್ಷ ಜನಕ್ಕೆ ಒಬ್ಬ ಪ್ರತಿನಿಧಿ ಹೆಂಗಸರಾಗಲಿ, ಗಂಡಸರಾಗಲಿ, ಹುಚ್ಚರಾಗಲಿ ಕೊಡತಕ್ಕ ಮರ್ಯಾದೆಯನ್ನು ಈ ದಿವಸ ಕೊಡದೆ ಇಂಥ ಅಕ್ರಮದ ಕೆಲಸವನ್ನು ಮಾಡಿದರೆ, ಅದಕ್ಕೆ ಏನು ಹೇಳಬೇಕೆನ್ನುವುದೇ ಗೊತ್ತಾಗುತ್ತಾ ಇಲ್ಲ .ಇಷ್ಟು ಎಲ್ಲಾ ಆಯಿತು, ಇದಕ್ಕೆ ಶಂಕುಸ್ಥಾಪನೆ ಆಯಿತು; ಅದೂ ಭರ್ಜರಿಯಾಗಿ ಬೇಕಾದಷ್ಟು ಆಯಿತು. ಊಟ ಆಯಿತು, ತಿಂಡಿ ಆಯಿತು.ವ್ಯವಹಾರ ಆಯಿತು, ವಾಪಸ್ಸು ಬಂದರು. ಈ ದಿವಸದ ಪರಿಸ್ಥಿತಿ ಏನಾಗಿದೆಯೆಂದರೆ ಅದು ರೀ ಇನ್‌ವೆಸ್ಟಿಗೇಷನ್ ಆಗುತ್ತಾ ಇದೆ. ಆ ಶುಭ ದಿವಸ ನಿರ್ಣಯಿಸಿದರೆ ಆ ಸ್ಥಳ ಸರಿ ಇಲ್ಲವಂತೆ. ಅವರು ಹೇಳಿದಷ್ಟು ನೀರಾವರಿ ಆಗುವುದಿಲ್ಲವಂತೆ.ವೇಸ್ಟವೇರ್ ಅಲ್ಲಿ ಕಟ್ಟಿದರೆ ಪ್ರಯೋಜನವಿಲ್ಲವಂತೆ. ತಿರುಗಿ ಟೆಕ್ನಿಕಲ್ ಒಪಿನಿಯನ್‌ಬೇಕಂತೆ. ಇದೇ ವಿಚಾರದಲ್ಲಿ ಟೆಕ್ನಿಕಲ್ ಹೆಡ್ ಆವತ್ತಿನ ದಿವಸ ಮಾಡಿದ ಭಾಷಣದಲ್ಲಿ ಅಡ್ರೆಸ್ಸಿನಲ್ಲಿ ಹೇಳಿದ್ದು ಏನು? ಅವರಾದರೂ ಆಫೀಸರುಗಳು ಏನು ಮಾಡುತ್ತಾರೆ. ಐ ಹಾವ್ ಆಲ್ ಸಿಂಪತಿಸ್ ಫಾರ್ ದೆಮ್. ನಾನು ಸಿಂಪತೈಸ್ ಮಾಡುತ್ತೇನೆ. ನಿಜವಾಗಿ ಆಫೀಸರುಗಳು ಮಾಡುವುದು ಏನು? ಅವರು ನಿಜ ಸ್ಥಿತಿ ಹೇಳಿದರೆ, ಅವರಿಗೆ ಏನಾದರೂತೊಂದರೆ ಮಾಡುತ್ತಾರೆ. ತಪ್ಪು ಮಡದೇ ಇರುತ್ತಾರೆಯೇ? ಆ ತಪ್ಪನ್ನು ಹಿಡಿದಿಕೊಂಡು

ಚಚ್ಚಿ ಬಲವಂತ ಮಾಡಿ ಸ್ನಾನ ಮಾಡಿಸುತ್ತಾರೆ. ಕತ್ತು ಹಿಡಿದುಕೊಂಡು ಅಮುಕಿ ಬಿಡುತ್ತಾರೆ. ಆವಾಗ ಅವರು ಹೇಳಿದ ಹಾಗೆ ಮಾಡಲೇಬೇಕು.

ಅಣೆಕಟ್ಟಿಗೆ ನೀರು ಸಾಕಾಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ, ಎಷ್ಟೋ ವರ್ಷಗಳ ಹಿಂದೆ ಸ್ಯಾಂಕ್ಷನ್ ಆಗಿದ್ದ ಪಿಕ್‌ಅಫ್ ಎಲ್ಲಾ ಕ್ಯಾನ್‌ಸಲ್ ಮಾಡಿದ್ದಾರೆ. ಮೇಲುಗಡೆ ಪಿಕ್ ಅಫ್‌ಗಳೆಲ್ಲಾ ಮಾಡಿ ಆಗಿಹೋಯಿತು ಎಂದರೆ, 30-40 ಎಕರೆ ಸಾಗುವಳಿ ಆಗುತ್ತಿದ್ದುದು ನಿಂತುಹೋಗುತ್ತದೆ. ಅದಿದ್ದರೆ ಗುಂಡ್ಲುಪೇಟೆಯ ಎಷ್ಟೋ ರೈತರು ಹೊಟ್ಟೆ ತುಂಬಾ ಊಟಮಾಡುತ್ತಿದ್ದರು. ಈಗ ಅವರ ಹೊಟ್ಟೆಗೆ ಬೆಂಕಿ ಇಟ್ಟು ಬಿಟ್ಟು, ಇವರು, ಇವರುಗಳ ಸಂಬಂಧೀಕರು ಕಂಠಪೂರ್ತಿ ಊಟ ಮಾಡಿದರೆ ಸಾಕು ಎಂದು ಹೇಳುತ್ತಾರೆ."

ಇದು ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಶ್ರೀಮತಿ ನಾಗರತ್ನಮ್ಮನವರ ಕಳಕಳಿಯನ್ನು ತೋರುತ್ತದೆ.

ತಾವು ಮಹಿಳೆಯಾಗಿ ಮಹಿಳೆಯರ ಬಗ್ಗೆಯೂ ಅಪಾರ ಕಾಳಜಿ ಹೊಂದಿದ್ದವರು ನಾಗರತ್ನಮ್ಮನವರು. ಅವರು ಅದೇ ಸಭೆಯಲ್ಲೇ ತಾಯಂದಿರು ಬಸ್‌ನಲ್ಲಿ ಪ್ರಯಾಣ ಮಾಡುವಾಗ ಅನುಭವಿಸುತ್ತಿದ್ದ ತೊಂದರೆಗಳನ್ನು ವಿವರಿಸಿದ್ದು ಹೀಗೆ:

"ನಾನು ಆಗಾಗ ಬಸ್‌ನಲ್ಲಿ ಹೋಗುವುದುಂಟು; ಅಲ್ಲಿ ನಡೆಯುವ ವಿಚಾರ ಹೇಳತೀರದು. ಹೆಣ್ಣುಮಕ್ಕಳಿಗೆಂದೇ ಸೀಟುಗಳಿವೆ. ಅಲ್ಲಿ ಅವರಿಗೆ ಜಾಗವಿಲ್ಲ, ಒಂದು ಸಾರಿ ಒಬ್ಬ ಹೆಣ್ಣುಮಗಳು ಒಂದು ಎಳೆಯ ಮಗುವನ್ನೆತ್ತಿಕೊಂಡು ಬಂದಿದ್ದಾಳೆ. ಮಗುವಿಗೆ ಹಾಲು ಕೊಡಬೇಕು . ಅವರಿಗೆ ಹೆಂಗಸರ ಸೀಟಿನಲ್ಲಿ ಜಾಗವಿಲ್ಲ. ಅವರ ಪಕ್ಕದಲ್ಲಿ ಕುಳಿತಿದ್ದ ಗಂಡಸಿಗೆ ಬದಲಾಗಿ ಇನ್ನೊಬ್ಬ ಹೆಣ್ಣುಮಗಳನ್ನು ಅಲ್ಲಿ ಕೂಡಿಸಿ ಎಂದು ಅಂಗಲಾಚಿ ಬೇಡುತ್ತಿದ್ದಾಳೆ. ಎಲ್ಲರಿಗೂ ತಮಾಷೆಯಾಗಿ ಹೋಯಿತು. ಕಂಡಕ್ಟರೂ ಅವನನ್ನು ಎಬ್ಬಿಸಲಿಲ್ಲ. ಆ ಮನುಷ್ಯನೂ ಏಳೊಲ್ಲ .ಕೊನೆಗೆ ನಾನು ಬಾಯಿ ಹಾಕಿ ಸರಿಮಾಡಬೇಕಾಯಿತು.

ಈ ರೀತಿ ಜೀವನದ ವಾಸ್ತವ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಡಿಸಿ ವಿವರಿಸುತ್ತಿದ್ದುದು ಇವರ ವೈಶಿಷ್ಟ್ಯ ಕೂಡ. ಇದರಿಂದಾಗಿ ಸಚಿವರು ಮತ್ತು ಅಧಿಕಾರಿ ವಲಯದಲ್ಲಿ ನಾಗರತ್ನಮ್ಮನವರ ಬಗ್ಗೆ ತಂಬ ಆದರಾಭಿಮಾನಗಳಿದ್ದವು.

1960ರ ದಶಕದಲ್ಲಿ ಶ್ರೀ ಎಸ್.ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರು ಕಾಂಗ್ರೆಸ್ ಪಕ್ಷ ಸೇರಿದರು. ಆಗ ಅವರಿಗೆ ದೊಡ್ಡ ಪಕ್ಷವೊಂದರ ಚೌಕಟ್ಟಿನಲ್ಲಿ ಕೆಲಸ ಮಾಡುವ ಅನಿವಾರ್ಯತೆ ಒದಗಿತು. ಇಂತಹ ಸಂದರ್ಭದಲ್ಲೂ ಸಹ ನಾಗರತ್ನಮ್ಮನವರು ಜನರ ಕಷ್ಟಗಳನ್ನು ವಿಧಾನ ಸಭೆಯ ಕಲಾಪಗಳಲ್ಲಿ ಪ್ರಸ್ತಾಪಿಸುತ್ತ ಸರ್ಕಾರವನ್ನು ನಿಷ್ಠುರವಾಗಿಯೇ ಟೀಕಿಸುತ್ತಿದ್ದರು. ತಮ್ಮ ಕ್ಷೇತ್ರದ ಜನರ ಹಿತರಕ್ಷಣೆಗಾಗಿ ಹೋರಾಡುತ್ತಿದ್ದರು. 1967ರ ಆಯುವ್ಯಯ ಚರ್ಚೆಯಲ್ಲಿ ಭಾಗವಹಿಸಿ ಅವರು ಮಂಡಿಸಿರುವ ವಿಚಾರಗಳನ್ನು ಗಮನಿಸಬಹುದು.

"ಇನ್ನು ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ನನಗೆ ಗೊತ್ತಿರುವ ವಿಚಾರ ಹೇಳುತ್ತೇನೆ. ನಿನ್ನೆ ನನಗೆ ಒಂದು ಪುಸ್ತಕ ಸಿಕ್ಕಿದೆ. ಅದರಲ್ಲಿ ಮೈಸೂರು ಜಿಲ್ಲೆಯ ಕೆಲವು ವಿಚಾರ ತಿಳಿಸಿದ್ದಾರೆ. ಅದರಲ್ಲಿ ಒಂದು ದೊಡ್ಡ ಪಟ್ಟಿಯಿದೆ, ಯಾವ ಕೆಲಸ ತೆಗೆದುಕೊಳ್ಳಬಹುದು, ತೆಗೆದುಕೊಳ್ಳಬೇಕಾದ್ದೆಷ್ಟಿದೆ ಎಂಬ ವಿವರವಿದೆ. ಆದರೆ ಕೆಲವು ಎರಡು ಮೂರು ಸಲ

ಪ್ರಿಂಟಾಗಿರುವುದರಿಂದ ದೊಡ್ಡ ಪಟ್ಟಿ ಕಂಡಿತೇ ಹೊರತು ಇರುವ ಕೆಲಸಗಳ ಪಟ್ಟಿ ನಿಜವಾಗಿ ನೋಡಿದರೆ ಚಿಕ್ಕದು. ದಯವಿಟ್ಟು ಹಾಗೆ ಮಾಡಬಾರದು, ಎಷ್ಟು ಕೆಲಸಗಳಿವೆಯೋ ಅಷ್ಟೇ ತೋರಿಸಬೇಕು. ಹಾಗೆ ಮಾಡಿ ಮನಸ್ಸು ಶಾಂತವಾಗುವ ಹಾಗೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಈ ಪುಸ್ತಕದಲ್ಲಿ ಬಾಡಿಗೆ ಮನೆ ಯೋಜನೆ ಇದೆ, ನಮ್ಮ ತಾಲ್ಲೂಕಿನ ಯಾವ ಯೋಜನೆಯೂ ಇಲ್ಲ, ನಮ್ಮ ತಾಲ್ಲೂಕಿಗೆ ಯಾವ ಮಂತ್ರಿಗಳೂ ಬರುವುದಿಲ್ಲ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳೂ ಬರುವುದಿಲ್ಲ. ಚೀಫ್ ಇಂಜಿನಿಯರ್ ಜನರಲ್‌ರವರು ಒಂದು ಸಲ ಬರುತ್ತಿದ್ದಾಗ ಆಕ್ಸಿಡೆಂಟಾಗಿ ಅವರು ಬರುವುದಕ್ಕಾಗಲಿಲ್ಲ; ಮಂತ್ರಿಗಳಂತೂ ಬರುವುದೇ ಇಲ್ಲ.ಯಾರು ಮಂತ್ರಿಸಿ ನೀರು ಹಾಕಿದ್ದಾರೋ ಏನೋ ನಮ್ಮ ತಾಲ್ಲೂಕಿನಲ್ಲಿ ಯಾವ ಯೋಜನೆಯನ್ನೂ ತೆಗೆದುಕೊಳ್ಳುವುದಿಲ್ಲ. ಬಾಡಿಗೆ ಮನೆ ಯೋಜನೆ ನೋಡಿದರೆ ಚಾಮರಾಜ ನಗರಕ್ಕೆ 4 ಲಕ್ಷ ಕೊಟ್ಟಿದ್ದಾರೆ. ಗುಂಡ್ಲುಪೇಟೆಗೆ ಯಾವುದೇ ಬೇಡವೇ? ರಾಚಯ್ಯನವರು ನಮಗೆ 10-12 ಮೈಲಿ ದೂರದಲ್ಲಿದ್ದರೂ ಅಭಾವ ಪ್ರದೇಶವಾದ ನಮ್ಮ ತಾಲ್ಲೂಕಿಗೆ ಅಲ್ಲಿಂದ ನೀರನ್ನೊದಗಿಸುವುದಾಗಲೀ ಅಥವಾ ಬೇರೆ ಯಾವ ಸಹಾಯಕ್ಕಾಗಲೀ ಬರುವುದಿಲ್ಲ. ಅವರು ತಮಗೆ ಬೇಕಾದ ಅನುಕೂಲ ಮಾಡಿಕೊಳ್ಳುತ್ತಿದ್ದಾರೆ. ನೀರಾವರಿಯಿಲ್ಲದಿರುವ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಯಾವುದಾದರೂ ಕೆರೆಯಾದರೂ ಆಗಲಿ ಅಂದರೆ ಅದಕ್ಕೂ ಬ್ರೇಕ್ ಹಾಕುತ್ತಾರೆ. ಹಾಗೆ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನುಗು ರಿಸರ್ವಾಯಿರ್ 20 ಸಾವಿರ ಎಕರೆಗಳಿಗೆ ನೀರನ್ನೊದಗಿಸುವುದು. ಅದರಲ್ಲೂ 2-3 ವರ್ಷದಿಂದ ನೀರಿಲ್ಲದೆ ತೊಂದರೆಯಾಗಿದೆ. ಕಪಿನಿಯಿಂದ ಕೈಬಿಡುವ ಪರಿಸ್ಥಿತಿ ಕಾಣುತ್ತಿದೆ. ಅದನ್ನು ಕೈಬಿಡಬಾರದು, ಕಪಿನಿ ಯೋಜನೆಯಿಂದ ಫೀಡರ್‌ಚಾನಲನ್ನು ನುಗುಜಲಾಶಯಕ್ಕೆ ಒದಗಿಸಲು ಅನುಕೂಲಮಾಡಬೇಕು. 48ನೆಯ ಪುಟದಲ್ಲಿ ಮಂಗಳ ಪ್ರಾಜೆಕ್ಟ್ ನಮೂದಿಸಲಾಗಿದೆ. ಇದರಿಂದ ಯಾರಿಗೆ ಅನುಕೂಲ? ರಾಜಯ್ಯನವರಿಗೇ ಅನುಕೂಲವಾಗಬಹುದು. ಅವರ ಗೇಮ್ ಸ್ಯಾಂಕ್ಚುಯರಿಗೆ ಆನೆ, ಕುರಿ, ಕರಡಿ ಮುಂತಾದವುಗಳಿಗೆ ಅನುಕೂಲವಾಗುವ ಹಾಗೆ ಇದನ್ನು ತೆಗೆದುಕೊಳ್ಳಲು ಸೇರಿಸಿದ್ದಾರೆಯೇ ಹೊರತು ಜನರಿಗೆ ಅನುಕೂಲವಾಗಲೆಂದು ಸೇರಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ಆದರೆ ಇಬ್ಬರು ಅಥವಾ ಮೂರು ಜನರಿಗೆ ಅನುಕೂಲವಾಗಬಹುದು, ಅಷ್ಟೆ. ಆದುದರಿಂದ ದಯಮಾಡಿ ಇದನ್ನೇ ದೊಡ್ಡದುಮಾಡಿ ಬಾಕಿ ಕೆಲಸ ಕೈಬಿಡದೆ ಜನರಿಗೆ ಬೇಕಾದ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹೆಬ್ಬಳ್ಳ ಪ್ರಾಜೆಕ್ಟ್ ಗುಂಡಲಿಗೆ ಸೇರಿಸುವುದಿದೆ. ಚೀಫ್, ಇಂಜಿನಿಯರು ಅದನ್ನು ನೋಡಿದ್ದಾರೆ. ನಿಜವಾಗಿಯೂ ಇದರಿಂದ ಜನತೆಗೆ ಅನುಕೂಲವಾಗುತ್ತಿದೆ. ಅದನ್ನು ಮಾಡಿದರೆ ಗುಂಡಲು ಪೇಟೆ ಜನರಿಗೆ ನೀರು ದೊರೆಯುತ್ತಿದೆ, ಗುಂಟಲು ನೀರು ದೊರೆತು ನೀರಾವರಿಗೆ ಅವಕಾಶವಾಗುವುದು. ಆದುದರಿಂದ ಹೆಬ್ಬಳ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕು. ಕಮರಹಳ್ಳಿ ಪ್ರಾಜೆಕ್ಟ್ ಮಾಡಿದ್ದಾರೆ, ಆದರೆ ಅದನ್ನು ಪೂರೈಸಿದರೆ ನೀರು ಯಾರಿಗೋ ಇತರರಿಗೆ ದೊರೆತು ಗುಂಡಲಪೇಟೆ ತಾಲ್ಲೂಕಿನವರ ಜಮೀನು ಮುಳಗಡೆಯಾಗುವುದು ಕಂಡುಬಂದಿದೆ. ಮುಳುಗಡೆಯಾಗಿರುವ ಪ್ರದೇಶದ ಮಾಲೀಕರಿಗೆ ಪರಿಹಾರ ಸಹ ಕೊಟ್ಟಿಲ್ಲ. ದಯೆಯಿಟ್ಟು ಬೇಗ ಅದನ್ನು ಪಾವತಿಮಾಡಬೇಕು."

ನಾಗರತ್ನಮ್ಮನವರು ಕೇವಲ ತಮ್ಮ ಕ್ಷೇತ್ರದ ಕುಂದುಕೊರತೆಗಳಿಗಷ್ಟೇ ತಮ್ಮ ವಿಚಾರಗಳನ್ನು ಸೀಮಿತಗೊಳಿಸಿಕೊಂಡವರಲ್ಲ. ಕರ್ನಾಟಕದಲ್ಲಿ ಹಾಗೂ ಜಾಗತಿಕವಾಗಿ ಆಗುತ್ತಿದ್ದ ಬೆಳವಣಿಗೆಗಳನ್ನು ಸಹ ಅವರು ಗಮನಿಸುತ್ತಿದ್ದರು. ದೇಶೀಯ ಕಾರು ತಯಾರಿಕೆಯ ಬಗ್ಗೆ ಸ್ವಾತಂತ್ರ್ಯ ಪೂರ್ವದಿಂದಲೂ ಸರ್ ಎಂ. ವಿಶ್ವೇಶ್ವರಯ್ಯನವರಾದಿಯಾಗಿ ಅನೇಕ ತಜ್ಞರು, ಆಡಳಿತಗಾರರು ಪ್ರತಿಪಾದಿಸಿದರು. ಅದರಲ್ಲೂ ಬೆಂಗಳೂರಿನಲ್ಲೇ ಅಂತಹದೊಂದು ಕೈಗಾರಿಕೆ ಸ್ಥಾಪನೆಗೆ ಸರ್ ಎಂ. ವಿಶ್ವೇಶ್ವರಯ್ಯನವರು ತಾಂತ್ರಿಕ ಸಲಹೆ, ಸಹಕಾರ ನೀಡಿದರು. ಸರ್ಕಾರ ಮನಸ್ಸು ಮಾಡಿರಲಿಲ್ಲ .ಅಂತಹ ಮಹತ್ವದ ವಿಷಯವನ್ನು ಎತ್ತಿಕೊಂಡು ಕೆ. ಎಸ್. ನಾಗರತ್ನಮ್ಮನವರು ವಿಚಾರಗಳನ್ನು ಮುಂದಿಟ್ಟ ರೀತಿ ಅವರ ದೂರದೃಷ್ಟಿಗೆ ಹಿಡಿದ ಕನ್ನಡಿಯಾಗಿದೆ.

"ಇನ್ನು ಸ್ಮಾಲ್ ಕಾರ್ ಪ್ರಾಜೆಕ್ಟ್ ಯೋಜನೆಯ ವಿಚಾರ, ನಮ್ಮಲ್ಲಿ ಒಂದು ಅಭ್ಯಾಸವಾಗಿಬಿಟ್ಟಿದೆ. ಅದೇನೆಂದರೆ ಯಾರಾದರೂ ಏನಾದರೂ ಹೇಳಿದರೆ ನಗುತ್ತಾರೆ. ಪ್ಲಾನಿಂಗ್ ಕಮೀಷನ್‌ನವರು, ಕೇಂದ್ರ ಸರ್ಕಾರದವರು ಈ ಸಣ್ಣಕಾರಿನ ಯೋಜನೆಯ ವಿಷಯದಲ್ಲಿ ಏನೇ ಹೇಳಿದರೂ ಕೂಡ ನಮ್ಮ ಮುಖ್ಯಮಂತ್ರಿಗಳು ಧೈರ್ಯವಾಗಿ ಮುಂದಿನ ಪೀಳಿಗೆಯ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡಬೇಕೆಂದು ಹೋರಾಡುತ್ತಿದ್ದಾರೆ. ಈಗ ಅಮೇರಿಕಾದಲ್ಲಿ 40 ಪರ್ಸೆಂಟ್ ಆದಾಯವನ್ನು ಸ್ಟೀಲಿನಿಂದ ತೆಗೆದುಕೊಳ್ಳುತ್ತಾರೆ. 50-60 ಪರ್ಸೆಂಟ್ ಆದಾಯವನ್ನು ರಬ್ಬರ್ ನಿಂದ ತೆಗೆದುಕೊಳ್ಳುತ್ತಾರೆ. ಇದೇ ರೀತಿಯಾಗಿ ಗ್ಲಾಸ್ ಕೈಗಾರಿಕೆ, ಮತ್ತು ಚರ್ಮದ ಕೈಗಾರಿಕೆಯಿಂದ ಆದಾಯವನ್ನು ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ದೇಶದಲ್ಲಿ ಕೈಗಾರಿಕೆಗಳ ಯೋಜನೆಗಳೇ ಕಾರ್ಯಗತವಾಗುವುದಿಲ್ಲ. ಹೀಗಿರುವಾಗ ಮುಖ್ಯಮಂತ್ರಿಗಳು ಧೈರ್ಯವಾಗಿ ಸಣ್ಣಕಾರು ಯೋಜನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ ಸಣ್ಣ ಕಾರು ಪ್ರಾಜೆಕ್ಟಿಗೆ ಮಹಾ ಎಷ್ಟು 40 ಕೋಟಿ ರೂಪಾಯಿಗಳು ಮಾತ್ರ. ಈ ಶರಾವತಿ ಪ್ರಾಜೆಕ್ಟಿಗೆ 120 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಮ್ಮಲ್ಲಿ ಸಣ್ಣಕಾರು ಕಾರ್ಖಾನೆಯನ್ನು ಸ್ಥಾಪನೆ ಮಾಡಬಹುದು. ಇದಕ್ಕೆ ಬೇಕಾದ ಅನುಕೂಲತೆಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಇವೆ. ಭದ್ರಾವತಿಯಲ್ಲಿ ಸ್ಪೆಷಲ್ ಸ್ಟೀಲ್ ಅಲಾಯ್ ಸಿಕ್ಕುತ್ತದೆ. ಬೆಳಗಾಮಿನಲ್ಲಿ ಅಲ್ಯೂಮಿನಿಯಂ ಸಿಕ್ಕುತ್ತದೆ. ಈಗ ಎಚ್.ಎಂ.ಟಿ.ಯಲ್ಲಿ ಸ್ಪೆಷಲ್ ಮಿಷಿನರಿ ಮಾಡುವುದಕ್ಕೆ ಅವರು ಹೊರಟಿದ್ದಾರೆ. ಸ್ಪೆಷಲ್ ಟೂಲ್ಸ್ ಮಾಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ನಮ್ಮದೇಶದಲ್ಲಿ ಈಗ ಸರ್ಕಾರದವರು ಸಣ್ಣ ಕಾರಿನ ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ವಂದಿಸುತ್ತಾರೆ. ಆದ್ದರಿಂದ ಆದಷ್ಟು ಬೇಗ ಈ ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕು. ಎಷ್ಟು ಬೇಗ ಆಗಬೇಕೆಂಬ ಹುರುಪು ನಮ್ಮಲ್ಲಿ ಇದೆಯೋ ಅಷ್ಟೇ ಹುರುಪು ನಮ್ಮ ಅಧಿಕಾರಿಗಳಲ್ಲಿ ಇದ್ದರೆ ಇದು ನಿಜವಾಗಿಯೂ ಜಾಗ್ರತೆಯಾಗಿ ಆಗುತ್ತದೆ. ಈ ಕೈಗಾರಿಕೆಯ ಇಲಾಖೆಯಲ್ಲಿರತಕ್ಕ ಆಫೀಸರುಗಳನ್ನು ಬದಲಾವಣೆ ಮಾಡಿದರೆ ಈ ಕೆಲಸ ಜಾಗ್ರತೆಯಾಗಿ ಆಗುತ್ತದೆ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ."

ಹೀಗೆ ನಾಗರತ್ನಮ್ಮನವರು ಬಿಡಿಬಿಡಿಯಾಗಿ ಸಮಸ್ಯೆಗಳನ್ನು ವಿಶ್ಲೇಷಿಸಿ ಮುಂದಿಡುತ್ತಿದ್ದರು. ಅವರ ಮಾತುಗಳನ್ನು ಸರ್ಕಾರ ಪರಿಗಣಿಸದೆ ವಿಧಿ ಇರಲಿಲ್ಲ. ದಿಟ್ಟ ಮುಖಭಾವದ, ಕಂಚಿನ ಕಂಠದ, ನೀಳ ಮೂಗಿನ ದೊಡ್ಡ ಆಕಾರದ ನಾಗರತ್ನಮ್ಮನವರು ಗಮನ ಸೆಳೆಯುವ ದೈಹಿಕ ವರ್ಚಸ್ಸು ಸಹ ಹೊಂದಿದ್ದರು: ಅವರು ತಮ್ಮ ಕ್ಷೇತ್ರದ ಜನರಿಗೆ ಅಮ್ಮನಾಗಿ, ಅಪ್ಪನಾಗಿ

ಕಾಣಿಸಿತೊಡಗಿದರು. ಇವರಲ್ಲಿ ಯಾವ ಗಂಡಸಿಗೂ ಕಡಿಮೆ ಇಲ್ಲದ ನಾಯಕತ್ವವನ್ನು ಜನರು ಕಂಡುಕೊಂಡರು. ಕಾಲ ಕಳೆದಂತೆ ಕಬ್ಬಳ್ಳಿ ಮನೆತನದ ನೆನಪು ಜನಮನದಲ್ಲಿ ಸಹಜವಾಗಿಯೇ ತೆಳುವಾಗುತ್ತ ಬಂದಿತು. ಆದರೆ ಅಮ್ಮನ ನಾಯಕತ್ವ ಅದನ್ನು ತುಂಬಿಕೊಟ್ಟಿತು. ಕಬ್ಬಳ್ಳಿ ಅಮ್ಮ ಕಬ್ಬಳ್ಳಿ ಮನೆತನದ ಪ್ರಭಾವಳಿಯಲ್ಲಿ ಬೆಳಗುವ ಉತ್ಸವ ಮೂರ್ತಿಯಾದರು. ಚುನಾವಣೆಗಳಲ್ಲಿ ಸೋಲರಿಯದ ಸರದಾರಿಣಿಯಾದರು. ಅವರು ಕಾಂಗ್ರೆಸ್ ಪಕ್ಷವು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಇಬ್ಭಾಗವಾದಗ ತಾವು ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್‌ಗೆ ನಿಷ್ಠೆ ತೋರಿದರು. ಮುಂದೆ ಕೊನೆಯವರೆಗೂ ಅದರಲ್ಲೇ ಉಳಿದರು. ಗುಂಡ್ಲುಪೇಟೆಯನ್ನು ಯಾವತ್ತೂ ಪ್ರತಿನಿಧಿಸಿಕೊಂಡು ಬಂದ ಈ ಮಹಾಮಹಿಳೆ ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿ ಪದವಿಯೊಂದನ್ನುಳಿದು ಇನ್ನೆಲ್ಲ ಸ್ಥಾನ ಗೌರವಗಳಿಗೂ ಅರ್ಹರಾಗಿ ಉನ್ನತ ಸ್ಥಾನಗಳನ್ನು ನಿರಾಯಾಸವಾಗಿ ನಿರ್ವಹಿಸಿದರು.

## ವಿವಿಧ ಜವಾಬ್ದಾರಿ ಸ್ಥಾನಗಳಲ್ಲಿ

### ಸಭಾಧ್ಯಕ್ಷರಾಗಿ

1972ರ ಚುನಾವಣೆಯಲ್ಲಿ ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ ಪಕ್ಷ ಅತ್ಯಧಿಕ ಬಹುಮತದಿಂದ ಅಧಿಕಾರಕ್ಕೆ ಬಂತು. ಆಗ ಶ್ರೀ.ಡಿ. ದೇವರಾಜ ಅರಸ್‌ರವರು ಮುಖ್ಯಮಂತ್ರಿಯಾದರು.ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ವಿಧಾನ ಸಭಾಧ್ಯಕ್ಷರಾಗಿ ಆಯ್ಕೆಗೊಂಡರು. ಮುಂದೆ ಐದು ವರ್ಷಗಳ ಕಾಲ ( 24-3-72 ರಿಂದ 17-3-78) ಆ ಹುದ್ದೆಯನ್ನು ನಿರ್ವಹಿಸಿದರು. ಯಾರದೇ ಸಂಸದೀಯ ಜೀವನದಲ್ಲಿ ಸಭಾಧ್ಯಕ್ಷರಾಗಿ ಕಾರ್ಯನಿರ್ವಹಿಸುವುದು ಒಂದು ವಿಶೇಷ ಗೌರವವೆಂದೇ ಭಾವಿಸಲಾಗುತ್ತದೆ. ಅದರಲ್ಲಿ ಯಶಸ್ಸನ್ನು ಕಾಣಲು ಸಭಾಧ್ಯಕ್ಷರ ವ್ಯಕ್ತಿತ್ವವೇ ಮುಖ್ಯವಾಗುತ್ತದೆ. ಅವರ ವಿವೇಚನೆ, ತಾಳ್ಮೆ,ಸರಿಯಾದ ನಿರ್ಧಾರಗಳು ಬಹುಮುಖ್ಯವಾಗುತ್ತವೆ. ಸದಾ ಹಿರಿಯ ಅನುಭವಿ ಸದಸ್ಯರ ಸಮಕ್ಷಮದಲ್ಲೇ ಕಾರ್ಯನಿರ್ವಹಿಸಬೇಕಾಗುವುದರಿಂದ ಇದೊಂದು ಸವಾಲಿನ ಹುದ್ದೆಯೇ ಸರಿ. ಇಂತಹ ಸ್ಥಾನದಲ್ಲಿ ಐದು ವರ್ಷಗಳ ಕಾಲ ಕಾರ್ಯನಿರ್ವಹಿಸಲು ಶ್ರೀಮತಿ ನಾಗರತ್ನಮ್ಮನವರು ಸಫಲರಾದರೆಂದರೆ ಅದು ವೈಯಕ್ತಿಕವಾಗಿ ಅವರಿಗೂ ಮತ್ತು ಒಟ್ಟಾರೆ ಮಹಿಳಾ ಸಮುದಾಯಕ್ಕೂ ದೊರೆತ ಹಿರಿಮೆ ಎಂದೇ ಹೇಳಬಹುದು.

ಯಾರದೇ ದಾಕ್ಷಿಣ್ಯಕ್ಕೊಳಗಾಗದೇ ಅವರು ಸ್ಪೀಕರ್ ಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಿಕೊಂಡುಬಂದರು. ಸದಸ್ಯರನ್ನು ಸಂದರ್ಭ ನೋಡಿ ನಿಯಂತ್ರಿಸುತ್ತಿದ್ದರು. ಪ್ರೇಕ್ಷಕರು ಗ್ಯಾಲರಿಯಲ್ಲಿ ಕುಳಿತು ಚಪ್ಪಾಳೆ ತಟ್ಟುವುದು, ಘೋಷಣೆ ಕೂಗುವುದು ಮೊದಲಾದ ಅನಪೇಕ್ಷಿತ ವರ್ತನೆಯಲ್ಲಿ ತೊಡಗಿದರೆ ಅಂತಹದನ್ನು ತಡೆಗಟ್ಟುತ್ತಿದ್ದರು. ಮುಖ್ಯಮಂತ್ರಿ ಡಿ. ದೇವರಾಜ ಅರಸರ ಅಳಿಯ ಎಂ.ಡಿ.ನಟರಾಜರವರ ಬಗ್ಗೆ ಸದನದಲ್ಲಿ ಹಕ್ಕುಚ್ಯುತಿ ಮಂಡನೆಯಾದಾಗ ಸಭಾಧ್ಯಕ್ಷರು ನೀಡಿದ ತೀರ್ಪು ಐತಿಹಾಸಿಕವಾದುದಾಗಿದೆ. ಆ ಚರ್ಚೆಯ ಕೆಲವು ವಿವರಗಳು ಈ ಮುಂದಿನಂತಿವೆ. ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ. ಹೆಚ್.ಡಿ. ದೇವೇಗೌಡರು ಈ ಚರ್ಚೆಯನ್ನು ಪ್ರಾರಂಭಿಸಿದರು.

"Sri. H.D.DEVEGOWDA-Who is encouraging these fellows? whether mr. Devegowda or Mr. Konandur Lingappa or Mr. Ananda Rao? Even if it is referred to the privilege committee, I know the conclusions of the previlege committee. Wherether I am responsible for the nasty things going on in the University campus or Indira Brigade Commandant Mr. M.D. Nataraj who is the son-in-law of the Chief Minister?, We have got a Police Department in which there are C.I.Ds. what does their police report say? That matter has to be settled. I am very sorry for this type of nasty statement issued by the son-in-law of Sri Deveraj Urs.

Sri M.H.JAYAPRAKASHNARAYAN-Iwant to know whether the use of the word nasty is parliamentary or Un-parliamentary?

(At that stage several Members from opposition side stood and shouted)

ಶ್ರೀ ಕಾಗೋಡು ತಿಮ್ಮಪ್ಪ-ಅವರು ಮುಖ್ಯಮಂತ್ರಿಗಳ ಅಳಿಯ.

ಶ್ರೀ ಕೋಣಂದೂರು ಲಿಂಗಪ್ಪ- ಎಲ್ಲಿದೆ ಗೌರವ ?

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್-ಸದಸ್ಯರಿಗೆ ಇರತಕ್ಕ ಹಕ್ಕನ್ನು ರಕ್ಷಣೆ ಮಾಡಬೇಕು. ಅದನ್ನು ತಮಗೆ ಬಿಟ್ಟಿದೆ. Nasty ಎನ್ನುವುದು. is it a parliamentary word?

ಅಧ್ಯಕ್ಷರು-ತಾವೂ ಕೂಡುತ್ತಾ ಇದ್ದರೆ, ಅವರಿಗೆ ಹೇಳುವುದಕ್ಕೆ ತಮಗೆ ಯಾವ ತರಹ ಇದೆ? ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್- ಇನ್ನೂ ಹೆಚ್ಚು ಕೂಗಬೇಕು ಏನು? ಅಧ್ಯಕ್ಷರು- ಸದಸ್ಯರು ಮಾಡುತ್ತಾ ಇರುವ ಕೆಲಸ ನೋಡಿದರೆ ಯಾರು ಕೂಗುತ್ತಾ ಇದ್ದಾರೆ, ಯಾರು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ತಮಗೆ ಅಷ್ಟೊಂದು ಕೋಪ ಉದ್ರೇಕ ಏಕೆ? The word used by the hon, Leader of the opposition is not Un-parliamentary.

ಶ್ರೀ ಹೆಚ್.ಡಿ. ದೇವೇಗೌಡ- ನಾನು ಯಾವ ಒಂದು ಕಾರಣಕ್ಕೋಸ್ಕರ ಈ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆ, ಪಾರ್ಲಿಮೆಂಟರಿ ಸಚಿವರು ತಿಳಿದುಕೊಳ್ಳಬೇಕಾಗುತ್ತದೆ. ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ನಡೆದಿರತಕ್ಕ ಮತ್ತು ನಡೆಯುತ್ತಾ ಇರತಕ್ಕ ದುಷ್ಕೃತ್ಯಗಳಿಗೆ ದೇವೇಗೌಡರು ಮತ್ತು ಅವರ ಅನುಯಾಯಿಗಳು ಕಾರಣರೋ ಅಥವಾ ರಾಜ್ಯದ ಮುಖ್ಯಮಂತ್ರಿಗಳು ಕಾರಣರೋ ಅದನ್ನು ಸ್ಪಷ್ಟೀಕರಿಸಬೇಕಾಗುತ್ತದೆ.

Sri. S.M.KRISHNA-How is the Chief Minister responsible when a statemet is made by somebody out side the House? If the Chief Minister has said anything, he is responsible, If Tom Dick and Harry made

statements, the Chief minister is not responsble for it.

ಶ್ರೀ ಹೆಚ್.ಡಿ.ದೇವೇಗೌಡ- ಮುಖ್ಯ ಮಂತ್ರಿಗಳು ಏತಕ್ಕೆ ಕಾರಣರು ಎಂದು ಸ್ಪಷ್ಟೀಕರಣ ಮಾಡಬೇಕು ಎಂಬುದನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

Sri. S.BANGARAPPA.-Mr. M.D. Nataraj is not Tom, not Harry. He is the son-in- law of our Chief Minister.

ಹೀಗೆ ಚರ್ಚೆ ಮುಂದುವರಿಯುತ್ತದೆ. ಕೊನೆಗೆ ಸಭಾಧ್ಯಕ್ಷರು ಈ ಕೆಳಕಂಡಂತೆ ಆದೇಶ ಕೊಡುತ್ತಾರೆ.

MADAM SPEAKER-I feel the matter is in order. The Hon.Leader of the Opposition may please move the Motion.

Sri. H.D. DEVEGOWDA-I beg to move:

"That the statement of Dr. M.D.Nataraj, published in Lok Vani, dated 2nd September 1974 is a breach of privilege of the Member of the House and it involves the contempt of the House also and may be referred to the Committee of Privileges for Enquiry.

ಹೀಗೆ ಮುಂದುವರಿದ ಚರ್ಚೆಯನ್ನು ಆವರಿಸಿದ ಸಭಾಧ್ಯಕ್ಷಿಣಿಯವರು ನಿರ್ಣಯದ ಮಂಡನೆಗೆ ಅವಕಾಶ ಕೊಟ್ಟರು. ಅದು ಅಂಗೀಕೃತವಾಯಿತು.

MADAM SPEAKER- The question is:

"That the statement of Dr. M.D. Nataraj, published in Lok Vani, dated 2 nd September 1974, is a Breach of privilege of the Members of the House and it involves the contempt of the House also and may be referred to the Committee of privileges for Enquiry".

ಹಕ್ಕುಚ್ಯುತಿ ನಿಲುವಳಿ ಸೂಚನೆಯನ್ನು ಅಂಗೀಕರಿಸಿ ಅದನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಲಾಯಿತು. ಇಂತಹ ಸೂಕ್ಷ್ಮವಾದ ತೀರ್ಪುನೀಡಿದ ಸಭಾಧ್ಯಕ್ಷಿಣಿಯವರ ಕಾರ್ಯಕ್ಷಮತೆ ಶ್ಲಾಘನೆಗೊಳಗಾಯಿತು.

### ವಿರೋಧ ಪಕ್ಷದ ನಾಯಕಿಯಾಗಿ

ದೇವರಾಜ ಅರಸು ಅವರ ಅನಂತರವೂ ಶ್ರೀಮತಿ ನಾಗರತ್ನಮ್ಮನವರಿಗೆ ಕಾಂಗ್ರೆಸ್‌ನಲ್ಲಿ ಪ್ರಾಮುಖ್ಯತೆ ಮುಂದುವರಿಯಿತು. ದೇವರಾಜ ಅರಸರು ಇಂದಿರಾ ಕಾಂಗ್ರೆಸ್‌ನಿಂದ ದೂರಾವಾದರೂ ಇವರು ಪಕ್ಷದಲ್ಲೇ ನಿಂತರು. ಅವರು ಜನತಾ ಸರ್ಕಾರ ಆಡಳಿತ ನಡೆಸುತ್ತಿದ್ದಾಗ ವಿರೋಧ ಪಕ್ಷದ ನಾಯಕರ ಸ್ಥಾನದ ಜವಾಬ್ದಾರಿ ನಿರ್ವಹಿಸಿದರು. ದಿನಾಂಕ:29-1-1987 ರಿಂದ 21-4-89ರವರೆಗೂ ಅವರು ಆ ಸ್ಥಾನದಲ್ಲಿದ್ದರು. ಅವರು ತಮ್ಮ ಹಿಂದಿನ ಘರ್ಜನೆ

ಮತ್ತು ಹರಿತವಾದ ಮಾತುಗಳ ದಾಟಿಯನ್ನು ಮುಂದುವರಿಸಿಕೊಂಡು ಬಂದರು. ಅವರ ನಿರ್ಭೀತ ನಡೆ ನುಡಿ ಸದನಕ್ಕೆ ವಿಶೇಷ ಮೆರಗು ನೀಡುತ್ತಿತ್ತು. ಒಮ್ಮೆ ಆಗಿನ ಸಭಾಧ್ಯಕ್ಷರಾಗಿದ್ದ ಶ್ರೀ ಬಿ.ಜಿ. ಬಣಕಾರರು ನಿಮ್ಮ ಮಾತು ಯೋಗ್ಯ ಇದ್ದರೆ ಕೇಳಬೇಕು, ಯೋಗ್ಯ ಇಲ್ಲದಿದ್ದರೆ ಏಕೆ ಕೇಳಬೇಕು ಎಂದು ಶ್ರೀಮತಿ ನಾಗರತ್ನಮ್ಮನವರನ್ನು ಕುರಿತು ಹೇಳಿದರು. ಆಗ ಆ ಮಾತಿನ ಹಿಂದಿದ್ದ ಅರ್ಥದ ಛಾಯೆ ಇವರಿಬ್ಬರಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣಿಸಿತು. ಇದರಿಂದ ಉದ್ಭವವಾದ ಚರ್ಚೆ ಕೂಡ ಸ್ವಾರಸ್ಯಕರವಾಗಿದೆ. ಇದು ನಾಗರತ್ನಮ್ಮನವರು ತಮಗೆ ಸರಿ ಕಾಣದ ಮಾತಿನ ಬಗ್ಗೆ ಎಷ್ಟೊಂದು ಹಠ ಸ್ವಭಾವದಿಂದ ಪ್ರತಿಭಟಿಸುತ್ತಿದ್ದರೆಂಬುದಕ್ಕೆ ಸಾಕ್ಷಿಯಾಗಿದೆ.

ನಾಗರತನ್ನಮ್ಮನವರು ವಿನೋದಪ್ರಿಯರು ಸಹ ಆಗಿದ್ದರು. ತಾವು ಮಂಡಿತಸಕ್ಕ ವಿಚಾರಗಳಿಗೆ ಪೂರಕವಾಗಿ ಅವರು ವಿನೋದ ಮಾಡುತ್ತಿದ್ದರು. ಅದರಲ್ಲಿ ಸ್ವಾನುಭವದ ವಿಷಾದದ ಛಾಯೆಯೂ ಇದ್ದಿರುತ್ತಿದ್ದಿತು. 1989ರಲ್ಲಿ ಆಯುವ್ಯಯ ಚರ್ಚೆಯಲ್ಲಿ ಹೇಳಿದ ಅವರ ಮಾತಿನ ಒಂದು ಭಾಗ ಹೀಗಿದೆ.

"ಇನ್ನು ವೆಲ್‌ಫೇರ್ ಮೆಷರ್ಸ್‌ನಲ್ಲಿ ಸಬ್ಸಿಡೈಸ್ಡ್ ರೈಸೆಗೆ 37.73 ಕೋಟಿ ರೂಪಾಯಿಗಳನ್ನು 89-90ನೇ ಸಾಲಿಗೆ ಕೊಟ್ಟಿದ್ದೇವೆ. ವಿಡೋ ಪೆನ್‌ಷನ್‌ಗೆ 27 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಓಲ್ಡ್ ಏಜ್ ಪೆನ್‌ಷನ್‌ಗೆ 37 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಇದೇ ರೀತಿ ಅಂಗವಿಕಲರಿಗೆ 14 ಕೋಟಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದೆಲ್ಲಾ ಕೊಡಬೇಕಾದದ್ದು, ಆದ್ದರಿಂದ ಕೊಟ್ಟಿದ್ದೀರಿ. ಆದರೆ ನೀವು ಮೊದಲು ಮಾಡಿರತಕ್ಕ ಯೋಜನೆ ಬಗ್ಗೆ ಈ ಮನೆಯಲ್ಲಿ ಬಹಳಷ್ಟು ಸಾರಿ ಹೇಳಿದ್ದೀರಿ. ಗರ್ಭಿಣಿಯರಿಗೆ ಹಣ ಕೊಡತಕ್ಕ ವಿಚಾರದಲ್ಲಿ ಮಾನ್ಯ ಲೀಲಾದೇವಿ ಆರ್. ಪ್ರಸಾದರ್‌ರವರೇ ತಮ್ಮ ಸ್ಕೀಂ ಎಲ್ಲಿ ಹೋಯಿತು. ಅನುಭವದ ಬಗ್ಗೆ ಬಹಳ ವಾದ ಮಾಡಿದರು. ಹಾಗಾದರೆ ಗರ್ಭಿಣಿಯರಿಗೆ ಹಣ ಕೊಡುವ ನಿಮ್ಮ ಸ್ಕೀಂ ಎಲ್ಲಿಹೋಯಿತು. ಕೆಲವರಿಗೆ ಅನುಭವ ಇಲ್ಲ. ಇನ್ನೂ ಕೆಲವರಿಗೆ ಅನುಭವ ಇರಬಹುದು. ಮಾನ್ಯ ಸಿಂಧ್ಯರವರಿಗೆ ಗರ್ಭಿಣಿಯರ ಬಗ್ಗೆ ಅನುಭವ ಇದೆಯೇ ಎಂದರೆ ಹೇಗೆ ಇರುವುದಕ್ಕೆ ಸಾಧ್ಯ? ಸಾಮಾಜಿಕವಾಗಿ ಇದು ಗೊತ್ತಾಗಬೇಕು. ಆದರೆ ಇದರಲ್ಲಿ ಅನುಭವ ಇರಲಿಲ್ಲ. ಆದ್ದರಿಂದ ಮಾಡಲಿಲ್ಲ ಎಂದು ಹೇಳುವುದು ಸರಿಯಲ್ಲ."

ಅವರ ಈ ಮಾತಿನಲ್ಲಿ ಅವರು ಸಂತಾನ ಭಾಗ್ಯ ಪಡೆಯದಿದ್ದುದರ ನೋವಿನ ಎಳೆ ಸಹ ಅದೆ.

### ಸಾರ್ವಜನಿಕ ಸೇವೆ

ಕೆ.ಎಸ್. ನಾಗರತ್ನಮ್ಮನವರು ಮೂರು ದಶಕಗಳಿಗೂ ಹೆಚ್ಚು ಕಾಲ ಒಳ್ಳೆಯ ಸಂಸದೀಯ ಪಟುವಾಗಿ ಕಾರ್ಯನಿರ್ವಹಿಸಿದರು. ವಿಶೇಷವಾಗಿ ಆ ಕಾಲದ ಮಹಿಳಾ ಸಂಸದೀಯರಲ್ಲಿ ಇವರಿಗೆ ಪ್ರಮುಖ ಸ್ಥಾನವೇ ಇದೆ ಎಂದರೆ ತಪ್ಪಾಗಲಾರದು. ಇದರ ಜೊತೆಗೆ ಅವರು ಕ್ಷೇತ್ರದ ಬಗ್ಗೆ ಕಳಕಳಿ ಹೊಂದಿದ್ದು ಅದರ ಎಲ್ಲ ಸಮಸ್ಯೆಗಳನ್ನು ಬಲ್ಲವರಾಗಿದ್ದರು. ಗುಂಡ್ಲುಪೇಟೆ ತಾಲ್ಲೂಕಿನ ಬಹುತೇಕ ಅಭಿವೃದ್ಧಿ ಯೋಜನೆಗಳಲ್ಲಿ ಇವರ ಪಾತ್ರ ಇರುವುದನ್ನು ಅಲ್ಲಗಳೆಯಲಾಗದು.

ಅವುಗಳಲ್ಲಿ ಕೆಲವೊಂದು ಮುಖ್ಯಕಾರ್ಯಗಳನ್ನು ಹೆಸರಿಸಬಹುದು. 1975ರಲ್ಲಿ ಕಬ್ಬಳ್ಳಿಯಲ್ಲಿ ಒಂದು ಸಾರ್ವಜನಿಕ ಆರೋಗ್ಯ ಕೇಂದ್ರ ಪ್ರಾರಂಭವಾಯಿತು. ಅದನ್ನು ಆಗಿನ ಭಾರತದ ಉಪರಾಷ್ಟ್ರಪತಿ ಬಿ.ಡಿ. ಜತ್ತಿಯವರು ಉದ್ಘಾಟಿಸಿದರು. 1985ರಲ್ಲಿ ಈ ಆಸ್ಪತ್ರೆಗೆ ಶ್ರೀಮತಿಯವರ ಪತಿ ದಿವಂಗತ ಕೆ.ಸಿ. ಸುಬ್ಬಣ್ಣನವರ ಹೆಸರಿಡಲಾಯಿತು.

ಇವರ ಪ್ರಯತ್ನದಿಂದ ಸಾಕಾರಗೊಂಡ"ನಲ್ಲೂರು ಅಮಾನಿಕೆರೆ" ಮತ್ತು ಕಲ್ಲುಕಟ್ಟೆಹಳ್ಳ ನೀರಾವರಿ ಯೋಜನೆಗಳು ಸಾವಿರಾರು ಎಕರೆ ಜಮೀನಿಗೆ ನೀರುಣಿಸುತ್ತಿವೆ. ಗುಂಡ್ಲುಪೇಟೆಯಲ್ಲಿ ಹೆಣ್ಣು ಮಕ್ಕಳಿಗಾಗಿ ನಡೆಸುವ ಪ್ರೌಢ ಶಾಲೆಗೆ ಶ್ರೀಮತಿ ನಾಗರತ್ನಮ್ಮನವರ ಹೆಸರಿಡಲಾಗಿದೆ. ತೆರಕಣಾಂಬಿಯಲ್ಲಿ ಪ್ರೌಢ ಶಾಲೆ ಪ್ರಾರಂಭವಾಗಲು ಶ್ರಮಿಸಿದರು. ಗುಂಡ್ಲುಪೇಟೆಯಲ್ಲಿ ಆಸ್ಪತ್ರೆ ಮತ್ತು ಪಶುವೈದ್ಯಶಾಲೆಗಳು ಇವರ ಕಾಲದಲ್ಲಿ ಅಭಿವೃದ್ಧಿಗೊಂಡವು.

ಮೈಸೂರು ನಗರದಲ್ಲಿ ನೆಲೆಸಿದ್ದ ನಾಗರತ್ನಮ್ಮನವರು ಅದರ ಋಣವನ್ನೂ ತೀರೀಸಿದ್ದಾರೆ. ವಾಣಿವಿಲಾಸ ಮೊಹಲ್ಲಾದ ಮಾತೃಮಂಡಳಿ ವಿದ್ಯಾಸಂಸ್ಥೆಯನ್ನು ಶ್ರೀಮತಿ ಸುಂದರಮ್ಮ ವೆಂಕಟೇಶ್ ಮೊದಲಾದ ಪ್ರಮುಖ ಮಹಿಳೆಯರೊಂದಿಗೆ ಸೇರಿ ಸ್ಥಾಪಿಸಿದರು. ಇಂದು ಅದು ಬಾಲಕಿಯರ ಪ್ರಮುಖ ವಿದ್ಯಾ ಸಂಸ್ಥೆಯಾಗಿದೆ. ಮರಿಮಲ್ಲಪ್ಪ ಕಾಲೇಜಿನ ಆಡಳಿತ ಮಂಡಲಿ ಸದಸ್ಯೆಯಾಗಿ ಮತ್ತು ಇವರ ಮಾವ ಚನ್ನಬಸಪ್ಪನವರು ಸ್ಥಾಪಿಸಿದ್ದ ಕಬ್ಬಳ್ಳಿ ವಿದ್ಯಾರ್ಥಿ ನಿಲಯದ ಪೋಷಕರಾಗಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ.

ಶ್ರೀಮತಿ ನಾಗರತ್ನಮ್ಮನವರು ವೈಯಕ್ತಿಕವಾಗಿಯೂ ಉನ್ನತ ಸಾಧನೆ ಮಾಡಿದವರೇ, ಅವರು 1970ರ ದಶಕದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷಿಣಿಯಾಗಿ ಕಾರ್ಯನಿರ್ವಹಿಸಿದರು. ಬೆಂಗಳೂರಿನಲ್ಲಿ ಲಲಿತ ಕಲಾ ವಿದ್ಯಾಲಯ ಸ್ಥಾಪನೆಗೆ ಸಹಕರಿಸಿದರು. ಅಂತರರಾಷ್ಟ್ರೀಯ ಚಿತ್ರ ಕಲಾ ಪ್ರದರ್ಶನ ಬೆಂಗಳೂರಿನಲ್ಲಿ ನಡೆಯಲು ಪ್ರೋತ್ಸಾಹ ನೀಡಿದರು. ಅಖಿಲ ಭಾರತ ಮಹಿಳಾ ಪರಿಷತ್ತಿನ ಮೈಸೂರು ವಿಭಾಗದ ಅಧ್ಯಕ್ಷೆಯಾಗಿದ್ದರು. ಭಾರತದ ಸ್ಕೌಟ್ ಮತ್ತು ಗೈಡ್ ವಿಭಾಗದ ಉಪಾಧ್ಯಕ್ಷೆ ಸಹ ಆಗಿದ್ದರು. ಇಂತಹ ಸಾರ್ವಜನಿಕ ಜವಾಬ್ದಾರಿಗಳನ್ನು ಹೊತ್ತು ಅವರು ಮಹಿಳೆಯರಿಗೆ ದೊರೆಯಬೇಕಾಗಿದ್ದ ಹೊಸ ಅವಕಾಶಗಳನ್ನು ಕಲ್ಪಿಸುವಲ್ಲಿ ಉತ್ತಮ ಕೆಲಸ ಮಾಡಿದರು.

## ವಿದೇಶ ಪ್ರವಾಸ

ಶ್ರೀಮತಿಯುವರು ವಿದೇಶಗಳಲ್ಲಿ ಸಂಚರಿಸಿ ಹಲವಾರು ವಿಷಯುಗಳನ್ನು ತಿಳಿದುಕೊಂಡಿದ್ದರು. ಸೋವಿಯತ್ ರಷ್ಯಾ ಮತ್ತು ಪೂರ್ವ ಜರ್ಮನಿ ಸರ್ಕಾರಗಳ ಆಮಂತ್ರಣದ ಮೇರೆಗೆ ಆ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಅಭಿವೃದ್ಧಿ ಯೋಜನೆಗಳ ಬಗ್ಗೆ ಅರಿತರು ಹಾಗೆಯೇ ಸ್ವೀಡನ್, ಸ್ವಿಡ್ಜರ್‌ಲ್ಯಾಂಡ್,ನಾರ್ವೆ, ಡೆನ್ಮಾರ್ಕ್, ಹಾಲೆಂಡ್, ಇಂಗ್ಲೆಂಡ್, ಬೆಲ್ಜಿಯಂ, ಫ್ರಾನ್ಸ್, ಇಟಲಿ ಮತ್ತು ಈಜಿಪ್ಟ್‌ಗಳಲ್ಲಿ ಪ್ರವಾಸ ಮಾಡಿದ ಅನುಭವ ಅವರದು. ಅಮೆರಿಕದ ರೈತರ ಆಹ್ವಾನದ ಮೇರೆಗೆ ಅಲ್ಲಿಗೆ ಹೋಗಿ ಅಲ್ಲಿನ ಕೃಷಿ ವಿಧಾನಗಳನ್ನು ಕಣ್ಣಾರೆಕಂಡು ಬಂದರು. ಸಂಸದೀಯ ಪ್ರತಿನಿಧಿಯಾಗಿ ಮಾರಿಷಸ್‌ನಲ್ಲಿ ನಡೆದ ಕಾಮನ್ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಭಾಗವಹಿಸಿದರು. ಮೆಕ್ಸಿಕೋದಲ್ಲಿ ನಡೆದ ಅಂತರ್ ರಾಷ್ಟ್ರೀಯ ಮಹಿಳಾ ಸಂಸದೀಯ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಪಾಲ್ಗೊಂಡರು.

ರಾಜಕೀಯ ಕ್ಷೇತ್ರದಲ್ಲಿ ಕೆ. ಎಸ್. ನಾಗರತ್ನಮ್ಮನವರು ಅತ್ಯುನ್ನತ ಸಾಧನೆ ಮಾಡಿದವರು. ಭಾರತದಲ್ಲಿ ವಿಧಾನ ಸಭಾ ಅಧ್ಯಕ್ಷಿಣಿಯಾಗಿ ಕಾರ್ಯನಿರ್ವಹಿಸಿದ ಮೊದಲಿಗರು ಇವರು ಎಂದು ಹೇಳಲಾಗಿದೆ. ಸಂಸದೀಯ ಇತಿಹಾಸದಲ್ಲಿ ಮಹಿಳೆಯರಿಗೆ ದೊರೆಯಬಹುದಾದ ವಿರೋಧ ಪಕ್ಷದ ಸ್ಥಾನ ಅಪರೂಪದ್ದೆಂದೇ ಹೇಳಬಹುದು. ಅದರಲ್ಲಿ ಇವರು ಯಶಪಡೆದರು. ಮುಂದೆ ಶ್ರೀ ಎಸ್. ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಸಚಿವೆಯಾಗಿ ಸೇವೆ ಸಲ್ಲಿಸಿದರು. ಹೀಗೆ ಸಂಸದೀಯ ಜೀವನದಲ್ಲಿ ಮುಖ್ಯಮಂತ್ರಿ ಹುದ್ದೆಯೊಂದನ್ನು ಬಿಟ್ಟು ಇನ್ನೆಲ್ಲ ಸ್ಥಾನಗಳಲ್ಲೂ ಇವರು ಕಾರ್ಯನಿರ್ವಹಿಸಿದ್ದಾರೆ. 1970ರ ದಶಕದ ಕೊನೆಯಲ್ಲಿ ಅವರು ಬೆಂಗಳೂರಿನ ಸಮೀಪದ ಕೆಂಚನಹಳ್ಳಿ ಬಳಿಯ ತೋಟದ ಮನೆಯಲ್ಲಿ ನೆಲಸಿದರು. ಮುಂದೆ ಅವರು ಅಲ್ಲಿಯೇ ಖಾಯಂ ವಾಸಿಯಾಗಿದ್ದರು. 1993ರಲ್ಲಿ ಕೆ. ಎಸ್. ನಾಗರತ್ನಮ್ಮನವರು ಇಹಲೋಕ ತ್ಯಜಿಸಿದರು.

ಶ್ರೀಮತಿ ನಾಗರತ್ನಮ್ಮನವರು ಕರ್ನಾಟಕ ಕಂಡ ವಿರಳ ಮಹಿಳಾ ರಾಜಕಾರಣಿಗಳಲ್ಲೊಬ್ಬರು. ಅವರ ನೈಜ ವ್ಯಕ್ತಿತ್ವದ ಬಗ್ಗೆ ಬೆಳಕು ಬೀರುವ ಗ್ರಂಥ ಇನ್ನೂ ಬರಬೇಕಾಗಿದೆ. ಅವರು ಮೈಸೂರಿನಲ್ಲಿರಲಿ, ಬೆಂಗಳೂರು ನಗರದಲ್ಲಿರಲಿ ತಮ್ಮ ಕ್ಷೇತ್ರವಾದ ಗುಂಡ್ಲುಪೇಟೆ ತಾಲ್ಲೂಕಿನ ಜನರ ಕಣ್ಮಣಿಯಾಗಿಯೇ ಉಳಿದಿದ್ದರು. ಇದಕ್ಕೆ ಅವರು ಸೇರಿದ ಕಬ್ಬಳ್ಳಿ ಮನೆತನ ಎಷ್ಟು ಕಾರಣವೋ ನಾಗರತ್ನಮ್ಮನವರ ವ್ಯಕ್ತಿತ್ವವೂ ಅಷ್ಟೇ ಕಾರಣವಾಗಿತ್ತೆಂಬುದು ನಿಸ್ಸಂದೇಹ. ಅವರು ಶಾಸಕಾಂಗದಲ್ಲಿ ಮಾಡಿದ ಭಾಷಣಗಳೇ ಅವರು ತಮ್ಮ ಕ್ಷೇತ್ರದ ಬಗ್ಗೆ ಹೊಂದಿದ್ದ ಕಳಕಳಿಗೆ ಸಾಕ್ಷಿ .ಅವರು ತಮ್ಮ ದೀರ್ಘ ಕಾಲಾವಧಿಯ ರಾಜಕೀಯ ಜೀವನದಲ್ಲಿ ಅನೇಕ ಪ್ರತಿಭಾವಂತ ವ್ಯಕ್ತಿಗಳನ್ನು ಬೆಳೆಸಿದರು. ಅವರಲ್ಲಿ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಮಂತ್ರಿಮಂಡಲದಲ್ಲಿ ಗ್ರಾಮಾಭಿವೃದ್ಧಿ ಸಚಿವರಾಗಿದ್ದ ದಿವಂಗತ ನಜೀರ್ ಸಾಹೇಬರದು ಪ್ರಮುಖ ಹೆಸರು. ನಾಗರತ್ನಮ್ಮನವರು ತಮ್ಮ ವೈಯಕ್ತಿಕ ಬದುಕಿನಲ್ಲಿ ಎದುರಿಸಬೇಕಾಗಿ ಬಂದ ಅನೇಕ ಕಾನೂನಿನ ತೊಡಕುಗಳಿಂದಾಗಿ ತಮ್ಮ ಹಿರಿಯರು ಕಟ್ಟಿ ಬೆಳೆಸಿದ ಸಂಸ್ಥೆಗಳನ್ನು ಪುರೋಭಿವೃದ್ಧಿಗೆ ತರುವಲ್ಲಿ ಅಷ್ಟು ಸಫಲರಾಗಿಲ್ಲದಿರಬಹುದು; ಅದೇ ಅನೇಕ ಸ್ವಜನರಲ್ಲಿ ಇವರನ್ನು ಸರಿಯಾಗಿ ಅರಿಯುವಲ್ಲಿ ಅಡಚಣೆ ಆಗಿರಬಹುದು. ಆದರೆ ಈ ಪರಿಮಿತಿಗಳನ್ನು ಮೀರಿ ಅವರೊಬ್ಬ ದೊಡ್ಡ ಸಂಸದೀಯಪಟುವೆಂಬುದು ಸ್ಪಷ್ಟವಾಗಿದೆ.

---

### ಆಧಾರಗಳು

1. ರಾಜೇಂದ್ರ ಶಿಶು:ದಿವ್ಯಚೇತನಗಳು, ಪ್ರಕಾಶಕರು

ಹೆಚ್.ಸಿ. ಚನ್ನಬಸಪ್ಪನವರು, ಮೈಸೂರು.

2. ಮಾಹಿತಿಗಳನ್ನು ನೀಡಿದವರು: ಮೈಸೂರು ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷರಾದ ಶ್ರೀ ವೃಷಭೇಂದ್ರಪ್ಪ, ನಿವೃತ್ತ ಪೊಲೀಸ್ ಸೂಪರಿನ್‌ಟೆಂಡೆಂಟ್‌ರಾದ ಶ್ರೀ. ಬಸವರಾಜು, ಶ್ರೀಮತಿ ಇಂದಿರಾ ಪ್ರೊ. ಪುಟ್ಟಮಾದಯ್ಯ, ಸಂಶೋಧಕರಾದ ಶ್ರೀ ಜಿ.ಜಿ. ಮಂಜುನಾಥನ್.

# 2.ರಾಜ್ಯ ಆಯವ್ಯಯ ಪತ್ರದ ಬಗ್ಗೆ ಚರ್ಚೆ

## 1960-61

ಮಾನ್ಯ ಅಧ್ಯಕ್ಷರೆ, ನಮ್ಮ ಹಣಕಾಸಿನ ಸಚಿವರು ಈ ವರ್ಷದ ಬಡ್ಜೆಟ್ ಮಂಡಿಸಿದಾಗ ಅವರು ಮಾಡಿದ ಭಾಷಣದ ಬಗ್ಗೆ ಆಗುತ್ತಿರುವ ಸಾಮಾನ್ಯ ಚರ್ಚೆಯಲ್ಲಿ ನಾನೂ ನಾಲ್ಕು ಮಾತನಾಡಬೇಕೆಂದು ನಿಂತಿದ್ದೇನೆ. ಅವರ ಭಾಷಣದ ಕೊನೆಯಲ್ಲಿ 25 ನೆಯ ಪುಟದಲ್ಲಿ "ನಾವು ನಮ್ಮ ರಾಜ್ಯದ ಸಾಧನ ಸಂಪತ್ತುಗಳನ್ನು ಯಾವ ರೀತಿಯಲ್ಲಿ ಒದಗಿಸಿಕೊಂಡು ನಮ್ಮ ಆರ್ಥಿಕ ವ್ಯವಸ್ಥೆಯು ಸುಭದ್ರವಾಗಿರುವಂತೆ ಏರ್ಪಾಟು ಮಾಡಿರುತ್ತೇವೆಂಬುದನ್ನು ನಾನು ತಿಳಿಸಿರುತ್ತೇನೆ. ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಊರ್ಜಿತಗೊಳಿಸುವುದಕ್ಕಾಗಿ ನಮ್ಮ ಸಾಧನೆ ಸಂಪತ್ತುಗಳನ್ನು ಹೇಗೆ ಜಾಗರೂಕತೆಯಿಂದ ಮೀಸಲಿಟ್ಟಿದ್ದೇವೆಂಬುದನ್ನು ಸಹ ಸೂಚಿಸಿದ್ದೇನೆ. ನಮ್ಮ ರಾಜ್ಯವು ರೂಪುಗೊಳ್ಳುತ್ತಿರುವ ಈ ಕಾಲದಲ್ಲಿ ಅದು ಸರ್ವತೋಮುಖವಾಗಿ ಅಭಿವೃದ್ಧಿಗೊಂಡಿದೆಯೆಂಬ ವಿಚಾರದಲ್ಲಿ ವಿವಾದವೇ ಇಲ್ಲ. ಹಣಕಾಸಿನ ಸಂಬಂಧವಾದ ಸಾಧನ ಸಂಪತ್ತುಗಳನ್ನು ಹೆಚ್ಚಿಸಿಕೊಳ್ಳುವುದು ಆರ್ಥಿಕ ವ್ಯವಸ್ಥೆಯು ಸುಭದ್ರವಾಗಿರುವಂತೆ ಮಾಡಲು ಒಂದು ಸಾಧನ ಮಾತ್ರವಾಗಿದೆ.

ನೂತನ ರಾಜ್ಯದ ಆರ್ಥಿಕ ವ್ಯವಸ್ಥೆಯು ಇನ್ನೂ ಉತ್ತಮಗೊಳ್ಳಬೇಕಾದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಹಣವನ್ನು ಲಾಭದಾಯಕವಾಗಿ ವಿನಿಯೋಗಿಸಬೇಕು. ಇವೆಲ್ಲಕ್ಕೂ ಹಣವೊಂದಿದ್ದರೆ ಮಾತ್ರವೇ ಸಾಲದು; ಜನರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪೂರ್ಣವಾಗಿ ವಿನಿಯೋಗಿಸಿ ಕೆಲಸ ಮಾಡಬೇಕು. ಅಲ್ಲದೆ, ನಾವು ಶ್ರೇಯ:ಪಥದಲ್ಲಿ ಭರದಿಂದ ಸಾಗಬೇಕಾದರೆ ಇನ್ನೂ ಹೆಚ್ಚು ತ್ಯಾಗ ಮಾಡಬೇಕು ಮತ್ತು ಇನ್ನೂ ಹೆಚ್ಚಿನ ಶಿಸ್ತಿನಿಂದ ವರ್ತಿಸಬೇಕು.ಈ ಅಭಿಪ್ರಾಯವನ್ನು ಈ ಸದನದ ಮಾನ್ಯ ಸದಸ್ಯರು ಮತ್ತು ಈ ಸುಂದರ ರಾಜ್ಯದ ಪ್ರಜೆಗಳು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂಬ ಭರವಸೆಯು ನನಗಿದೆ, ಎಂದು ಬಹಳ ಧಾರಾಳವಾಗಿ ಹೇಳಿದ್ದಾರೆ. ಬಹಳ ಸಂತೋಷ. ಆದರೆ ಈ ಸದನದ ಸದಸ್ಯರ ಸಲಹೆಯೇ ಆಗಲೀ ಅಥವಾ ಈ ಸುಂದರ ರಾಜ್ಯದ ಪ್ರಜೆಗಳ ಮಾತಾಗಲೀ ಕೇಳುವವರು ಒಬ್ಬರು ಬೇಕಲ್ಲ. ಜನರಿಗೆ ಬುದ್ಧಿ ಇದೆಯೇ ಇಲ್ಲವೆ, ಅವರು ಹೇಳುವುದು ಸರಿಯೇ ಇಲ್ಲವೆ ಎನ್ನುವುದನ್ನು ನೋಡಿ, ಕೇಳಿ ತಿಳಿದುಕೊಳ್ಳುವುದಕ್ಕೆ ಯಾರಿಗಾದರೂ ಬೇಕಾಗಿದ್ದರೆ ತಾನೇ. ಸರ್ಕಾರ ಜನರ ಮತ್ತು ಇಲ್ಲಿಯ ಸದಸ್ಯರ ಬುದ್ಧಿಮಟ್ಟ, ಅವರ ಯೋಗ್ಯತೆ ಅಳೆಯಲು ಅವರವರಿಗೆ ಬೇಕಾದ ರೀತಿಯಲ್ಲಿ ಒಂದೊಂದು ಥರ್ಮಾಮೀಟರ್ ಮಾಡಿಸಿಟ್ಟುಕೊಂಡಿದ್ದಾರೆ. ಒಬ್ಬರಿಗೆ ತಮ್ಮ ಜನಗಳಷ್ಟೇ ಬುದ್ಧಿವಂತರಾದರು. ಮತ್ತೊಬ್ಬರಿಗೆ ತಮ್ಮ ಊರಿನವರಷ್ಟೇ ಬುದ್ಧಿವಂತರು, ಒಬ್ಬರಿಗೆ ತಮ್ಮ ಸಂಬಂಧಿಕರಷ್ಟೇ ಬುದ್ಧಿವಂತರಾದರೆ ಮತ್ತೊಬ್ಬರಿಗೆ ಖಾದಿ ವಸ್ತ್ರ ಉಟ್ಟವರಷ್ಟೇ ಬುದ್ಧಿವಂತರು. ಇನ್ನೊಬ್ಬರಿಗೆ ಪ್ರಕೃತಿ ಗಂಡಸರಿಗೆ ಮಾತ್ರ ಬುದ್ಧಿ ಎರೆದಿದೆ; ಹೆಂಗಸರೆಲ್ಲರೂ ಮೂರ್ಖರು ಎನ್ನುವ ಭಾವನೆ, ಹೀಗಿರುವಾಗ ರಾಜ್ಯದ ಪ್ರಜೆಗಳ ಎಲ್ಲರ ಕರ್ತವ್ಯವನ್ನು ಜ್ಞಾಪಿಸಿ, ಎಲ್ಲರ ಅಭಿಪ್ರಾಯ, ಸಲಹೆಗಳನ್ನು ಸ್ವಾಗತಿಸಿರುವ ನಮ್ಮ ವಿಪರೀತ ಜಾಣರಾದ ಹಣಕಾಸಿನ ಸಚಿವರಿಗೆ ಧನ್ಯವಾದ ಅರ್ಪಿಸುತ್ತೇನೆ.

ಈ ಭಾಷಣದಲ್ಲಿ ಮೊದಲನೆಯ ಪುಟದಲ್ಲಿ "ರಾಜ್ಯಪಾಲರವರು ವಿಧಾನಮಂಡಲದ

ಸಂಯುಕ್ತಾಧಿವೇಶನದಲ್ಲಿ ಮಾಡಿದ ಭಾಷಣದಲ್ಲಿ, ಚಾಲ್ತಿ ಸಾಲಿನ ಹಾಗೂ ಮುಂದಿನ ಸಾಲಿನ ಕಾರ್ಯಕಲಾಪಗಳ ಸಹಿತ, ನಾವು ಸಾಧಿಸಿರುವ ಕೆಲಸಕಾರ್ಯಗಳ ಪ್ರಗತಿಯನ್ನು ಕುರಿತು ವಿಶದವಾಗಿ ಪ್ರಸ್ತಾಪಿಸಿರುತ್ತಾರೆ. ನಾನು ಅದೇ ವಿಷಯಗಳನ್ನು ಕುರಿತು ಪುನಃ ಪ್ರಸ್ತಾಪಿಸುವ ಅಗತ್ಯವಿರುವುದಿಲ್ಲ ಎಂದು ಮಂತ್ರಿಗಳು ಹೇಳಿದ್ದಾರೆ.ನಾನು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಿದಾಗ ಅದರಲ್ಲಿರುವುದು ಕೇವಲ ಶೇಕಡ 20 ನಿಜ, ಬಾಕಿ ಎಲ್ಲಾ ಅಪ್ರಯೋಜಕ ಎಂದು ಹೇಳಿದ್ದೇನೆ. ನಮ್ಮ ಲೋಕೋಪಯೋಗಿ ಖಾತೆ ಮಂತ್ರಿಗಳು ಜವಾಬು ಹೇಳುವಾಗ ನನ್ನ ಮುಖ್ಯವಾದ ಶೇಕಡ 20 ಎನ್ನುವುದನ್ನು ಬಿಟ್ಟು ಬಿಟ್ಟು ಯಾವುದು ನಾನು ನಿಜವೆಂದು ಆ ಪಟ್ಟಿಯಲ್ಲಿ ಸೇರಿಸಿದೆನೋ ಅದನ್ನೇ ತಾವು ಹೇಳಿ ಈ ಭಾಷಣದಲ್ಲಿ ಏನೂ ಇಲ್ಲ ಎಂದು ಬಿಟ್ಟರು. ನಾಗರತ್ನಮ್ಮನವರು ಇವರಿಗೆ ಏನು ಹೇಳಬೇಕು: ಇಂಥ ತಿಳಿವಳಿಕೆ ಇಲ್ಲದವರೂ ಇದ್ದಾರೆಯೇ ಎನ್ನುವ ಹಾಗೆ ಮೇಲೆ ಕೆಳಗೆ ನೋಡಿಬಿಟ್ಟರು; ಹೋಗಲಿ ಪಾಪ ಅವರ ಸ್ವಭಾವವೇ ಹಾಗೆ; ಇದು ಎಲ್ಲರಿಗೂ ತಿಳಿದಂಥ ವಿಚಾರ; ನಾನಾದರೂ ಹಣಕಾಸಿನ ಸಚಿವರಿಗೆ ಹೇಳುವುದು ಇಷ್ಟೆ; ನನ್ನ ಅಭಿಪ್ರಾಯ ಮೊದಲಿನ ಹಾಗೇ ಇದೆ. ಆದರೆ ಅವರು ತಮ್ಮ ಎಣಿಕೆಯ ರೀತ್ಯಾ ಕೆಲಸಗಳು ಕಾರ್ಯಗತವಾಗಬೇಕಾದರೆ ತಾವೇ ಒಪ್ಪಿರುವಂತೆ, ನಮ್ಮ ಸಹೋದರ, ಸಹೋದರಿಯರ ಸೂಕ್ತ ಸಲಹೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಬರೀ ಇವರು ನಮಗೆ ಬೇಕಾದವರು, ಇವರು ನಮ್ಮೂರಿನವರು, ನಮ್ಮ ಜನ, ನಮ್ಮ ಬಳಗ ಎನ್ನುವುದನ್ನು ಬಿಟ್ಟು ಸರ್ಕಾರ ಕೆಲಸಮಾಡಿದರೆ ಖಂಡಿತ ಎಲ್ಲ ಕೆಲಸಕಾರ್ಯಗಳೂ ಸುಗಮವಾಗಿ, ಜಾಗ್ರತೆಯಾಗಿ ಸಾಗುತ್ತಿವೆ ಎಂದು ಧಾರಾಳವಾಗಿ ಹೇಳಬಹುದು.

ಇವರ ಭಾಷಣದ ಮೂರನೆಯ ಪುಟದಲ್ಲಿ ಫೈನಾನ್ಸ್‌ಕಮೀಷನ್‌ನವರು ಆದಷ್ಟು ಮಟ್ಟಿಗೂ ಮಿತವ್ಯಯಿಗಳಾಗಿರಬೇಕೆಂದು ಎಚ್ಚರಿಸಿರುತ್ತಾರೆ ಎಂದು ತಿಳಿಸಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರದವರು ಏನು ಕಾರ್ಯಕ್ರಮ ಅಂದರೆ ನಿಜವಾಗಿ ಗುರುತಿಸಿ ತೋರಿಸಬಹುದಾದ ಕಾರ್ಯ ಕ್ರಮ ತೆಗೆದುಕೊಂಡಿದ್ದಾರೆ ನನಗೆ ಕೇಳುವುದಕ್ಕೆ ಆಶೆಯಾಗುತ್ತಾ ಇದೆ. ಇದರ ಲಿಸ್ಟ್ ಆದರೂ ಇಟ್ಟಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ.

ಲಿಸ್ಟ್ ಏನೋ ನಮ್ಮ ಮುಂದೆ ಕೊಟ್ಟಿದ್ದರೆ ನನಗೆ ಕೇಳುವುದಕ್ಕೆ ಆಶೆ ಯಾಗುತ್ತಿತ್ತು. ಜವಾಬಿನಲ್ಲಿ ಇಂಥಿಂಥ ಮಿತವ್ಯಯ ಕೆಲಸದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆಂದು ನೀವು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ಬದಲಾಗಿ ಬರಿಯ ವೃಥಾ ಖರ್ಚಿನ ದಾರಿಯನ್ನೇ ಅನುಸರಿಸುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಮಲ್ಲಾರಾಧ್ಯರು ತಿಳಿಸಿರುವ ಹಾಗೆ ಪೋಸ್ಟ್ ಆಫೀಸ್ ಕೆಲಸ ಮಾಡತಕ್ಕಂಥ ಎಲ್ಲಾ ಹುದ್ದೆಗಳನ್ನೂ ತೆಗೆದುಹಾಕಬಹುದು. ಡೆಮೋಕ್ರಟಿಕ್ ಡಿಸೆಂಟ್ರಲೈಸೇಷನ್ ಆದಮೇಲೆ ಈ ಸಬ್ ಡಿವಿಜನ್ ಆಫೀಸರು, ಡಿವಿಜನಲ್ ಕಮೀಷನರು, ಸೂಪರಿಂಟೆಂಡೆಂಟ್ ಇಂಜಿನಿಯರು, ಕೆಲವು ಡಿ.ಡಿ.ಪಿ.ಐ.ಆಫೀಸುಗಳು ಇವನ್ನೆಲ್ಲಾ ನಿಜವಾಗಿ ವಜಮಾಡಬಹುದು ಎಂದು ಕಾಣುತ್ತದೆ. ನನಗಿಂತ ಮಲ್ಲಾರಾಧ್ಯರು ಬಹಳ ಬುದ್ಧಿವಂತರು; ಅವರು ಬಹಳ ವಿವರವಾಗಿ ಹೇಳಿದ್ದಾರೆ. ಬರಿಯ ಕಾಲವ್ಯಯವಾಗಿ ಇವರುಗಳಿಂದ ಕೆಲಸಕ್ಕೆ ತೊಂದರೆಯೇ ವಿನಾ ಪ್ರೋತ್ಸಾಹ ಇಲ್ಲವೇ ಇಲ್ಲ ಎಂದು ಹೇಳಬೇಕಾಗಿದೆ.

ಇನ್ನು ಆರ್ಥಿಕ ಮಂತ್ರಿಗಳ ಭಾಷಣದಲ್ಲಿ 7ನೆಯ ಪೇಜಿನಲ್ಲಿ ನೀರಾವರಿ ಕಾಮಗಾರಿಗಳ ವಿಚಾರವಾಗಿ ತಿಳಿಸುತ್ತಾ:

"ನೀರಾವರಿ ಕಾಮಗಾರಿಗಳ ಸಂಬಂಧದಲ್ಲಿ ಬಹಳ ಹಣವನ್ನು ವಿನಿಯೋಗಿಸಿದ್ದಾಗ್ಯೂ ಕೂಡ ನಾವು ನಿರೀಕ್ಷಿಸಿದಷ್ಟು ಮಟ್ಟಿಗೆ ನೀರು ತೆರಿಗೆ ಮತ್ತು ಅಭಿವೃದ್ಧಿ ಸಂಬಂಧವಾದ ಅಂಶದಾನವನ್ನು ವಸೂಲ್ಮಾಡಲು ಶಕ್ತರಾಗಿಲ್ಲವೆಂಬುದನ್ನು ಆಯುವ್ಯಯದ ಅಂದಾಜಿನಿಂದ ಕಾಣಬಹುದು. 1957ನೆಯ ಇಸವಿಯ ನೀರಾವರಿಯ ಮೇಲ್ವಾಟಿನ ಅಂದಾಜಿನಿಂದ ಕಾಣಬಹುದು. 1957ನೆಯ ಇಸವಿಯ ನೀರಾವರಿಯ ಅಂಶದಾನದ ಅಧಿನಿಯಮವನ್ನು ತಿದ್ದುಪಾಟುಮಾಡುವ ವಿಧೇಯಕವನ್ನು ಈಗಾಗಲೇ ಸಭೆಯಲ್ಲಿ ಮಂಡಿಸಲಾಗಿದೆ." ಎಂದು ತಿಳಿಸಿದ್ದಾರೆ.

ನಿಮಗೆ ಹೇಗೆ ನೀರಾವರಿಯಿಂದ ದುಡ್ಡು ಬರುತ್ತದೆ? ನೀರಾವರಿ ತೆರಿಗೆ ಹೇಗೆ ಬರುತ್ತದೆ? ಬರಲು ಸಾಧ್ಯ ಎಂದು ಕೇಳಲು ನನಗೆ ಕುತೂಹಲ. ಪ್ರಾಜೆಕ್ಟ್‌ಗಳನ್ನು ಟೆಕ್ನಿಕಲ್ ಅಡ್‌ವೈಸಿನ ಪ್ರಕಾರ ಅಡ್‌ವೈಸರುಗಳ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು ಆದರಂತೆ ಏರ್ಪಾಡು ಮಾಡಿದರೆ, ನಿಜವಾಗಿ ನಿಮಗೆ ವರಮಾನ ಬರುತ್ತದೆ, ಜನಗಳಿಗೂ ಒಳ್ಳೆಯದಾಗುತ್ತದೆ ಆದರೆ ಇಲ್ಲಿ ನಡೆಯುತ್ತಿರುವುದೆಲ್ಲಾ ತಲೆಕೆಳಗಿನ ವ್ಯಾಪಾರ.

ಶ್ರೀ.ಟಿ. ಮರಿಯಪ್ಪ.- ನಿಮ್ಮಲ್ಲಿ ಇಪ್ಪತ್ತು ಸಾವಿರ ಎಕರೆಗಳಿಂದ ವಾಟರ್ ರೇಟ್ ಬಂದಿಲ್ಲ, ಹಾಗಾದರೂ ಬಂದಿಲ್ಲ ಎಂದು ಹೇಳಿದ್ದು ತಪ್ಪೇ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.- ಏಕೆ ಬರುವುದಿಲ್ಲ? ನಾನು ಹೇಳುವವರೆಗೆ ಕೇಳಿ. ಏಕೆ ಅವಸರ. ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಅದೇನೆಂದರೆ ನನ್ನ ತಾಲ್ಲೋಕು ಎಲ್ಲರಿಗೂ ಗೊತ್ತು ತಮಗಂತೂ ಚೆನ್ನಾಗಿ ಗೊತ್ತು. ಒಣ ತಾಲೂಕು, ಬರಡು ತಾಲ್ಲೂಕು ಅಂಥ ತಾಲ್ಲೂಕಿನಲ್ಲಿ ಮೊನ್ನೆತಾನೆ ಆಲಹಳ್ಳಿ ಅಣೆಕಟ್ಟು ಎಂದು ಒಂದು ಅಣೆಕಟ್ಟಿಗೆ ಶಂಕುಸ್ಥಾಪನೆಯಾಯಿತು. ಈ ಸದನದ ಸದಸ್ಯರಾದ ಮತ್ತು ಈ ಸುಂದರ ದೇಶದ ಪ್ರಜೆಗಳೂ ಆದ ಮಾನ್ಯ ರಾಚಯ್ಯನವರೂ, ರಾಜಶೇಖರಮೂರ್ತಿಗಳು, ಮುಂತಾದವರೆಲ್ಲರೂ ಅಲ್ಲಿಗೆ ಬಂದಿದ್ದರಂತೆ. ಬಹಳ ಶ್ಲಾಘನೀಯವಾದ ಭಾಷಣಗಳನ್ನು ಮಾಡಿದರಂತೆ, ಅದು ಇರಲಿ.

ಶ್ರೀ ಟಿ. ಮರಿಯಪ್ಪ.- ನಿಮ್ಮ ಊರಿನ ಹತ್ತಿರವೇ ಇದೆ ಆಲಹಳ್ಳಿ. ಗುಂಡ್ಲುಪೇಟೆಯಲ್ಲಿರದೆ, ಮೈಸೂರು ಸಿಟಿಯಲ್ಲಿ ಇದ್ದುಬಿಟ್ಟಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.- ನಿಧಾನವಾಗಿ ಕೇಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಪ್ರಾಜೆಕ್ಟಿನ ವಿಚಾರ ತೆಗೆದುಕೊಂಡರೆ, 9.5 ಲಕ್ಷ ರೂಪಾಯಿ ಖರ್ಚು. ಇದು ಬೇಗೂರುರವರಿಗೂ ಮತ್ತು ಆಲಹಳ್ಳಿಯವರಿಗೂ ಅನುಕೂಲವಾಗುತ್ತದೆಂದು ಸುದ್ದಿ. ಈ ಎರಡು ಊರುಗಳಿಂದ ಇರುವುದು 4000 ಸಂಸಾರ, ಆದರಲ್ಲಿ 40 ಕುಳಕ್ಕೆ ಉಪಯೋಗವಾಗುತ್ತದೆ. ಬಾಕಿ ಎಲ್ಲಾ ನಂಜನಗೂಡು ತಾಲ್ಲೂಕಿನವರಿಗೆ ಮತ್ತು ಅವರು ಇವರಿಗೆ ಉಪಕಾರವಾಗುತ್ತದೆಂದು ಸಮಾಚಾರ ಇತ್ತು. ಆದರೆ ಇದರಲ್ಲಿ ಏನಾಗಿದೆಯೆಂದರೆ, ಈ ಪ್ರಾಜೆಕ್ಟ್ ಯಾವಾಗ ಸ್ಯಾಂಕ್ಷನ್ ಆಗುತ್ತದೆಂದು ಸ್ವಲ್ಪ ಗಾಳಿ ಸುದ್ದಿ ಹರಡುವುದಕ್ಕೆ ಶುರುವಾಯಿತೋ ಆವಾಗ ಎರಡು ಊರಿನವರೂ ನನ್ನ ಹತ್ತಿರ ಓಡಿ ಬಂದರು. "ಹೀಗೆ ಆಗಿದೆಯಂತೆ, 40 ಜನಕ್ಕೆ ಬಿಟ್ಟರೆ ಈ ಪ್ರಾಜೆಕ್ಟಿನಿಂದ

ನಮಗೆ ಸ್ವಲ್ಪವೂ ಉಪಕಾರವಾಗುವುದಿಲ್ಲ; ಇದರಲ್ಲಿ ಒಟ್ಟು ಮುಳುಗಡೆ 400 ಎಕರೆಯಾಗುತ್ತದೆ, ನಮಗೆ ಗೋಮಾಳ ಇಲ್ಲದೇನೇ ಹೋಗುತ್ತದೆ.ಅಕ್ಕಪಕ್ಕದಲ್ಲಿ ಜಮೀನೂ ಇಲ್ಲ ; ಇದನ್ನು ಹೇಗಾದರೂ ತಪ್ಪಿಸಿಕೊಡಿ; ಇಲ್ಲದಿದ್ದರೆ ಬೇರೆ ಕಡೆ ಹಾಕಿಕೊಡಿ" ಎಂದು ಇಷ್ಟು ಜನರೂ ಅಪ್ಲಿಕೇಷನ್ ತೆಗೆದುಕೊಂಡುಬಂದು ನನ್ನನ್ನು ಕೇಳಿಕೊಂಡರು. ನಾನು ಕೂಡಲೇ ಸೂಪರಿಟೆಂಡಿಂಗ್ ಇಂಜಿನಿಯರಿಗೆ ಫೋನ್ ಮಾಡಿ ಹೇಳಿದೆ. ಅವರು ಇದು ಫೀಜಬಲ್ ಪ್ರಾಜೆಕ್ಟ್ ಅಲ್ಲ, ಇದನ್ನು ಮಾಡುವುದಿಲ್ಲವೆಂದು ಹೇಳಿದರು. ಅದನ್ನು ನಾನು ಅವರಿಗೆ ತಿಳಿಸಿ ಸರ್ಕಾರ ಅಷ್ಟು ಅನ್ಯಾಯ ದುಷ್ಕೃತ್ಯ ಮಾಡುವುದಿಲ್ಲವೆಂದು ಹೇಳಿ ಸಮಾಧಾನ ಮಾಡಿ ಕಳುಹಿಸಿದೆ.

ನಾನು ಹೇಳಿದ ಹಾಗೆ 15-20 ದಿವಸಗಳಲ್ಲಿ ಮಿನಿಸ್ಟರ ಸಂಬಂಧಿಕರು ಇದನ್ನು ಆರ್ಡರ್ ಮಾಡಿಸಿಕೊಂಡು ಬಂದಿದ್ದಾರೆಂದೂ, ಮಿನಿಸ್ಟರು ಶಂಕುಸ್ಥಾಪನೆಗೆ ಬರುತ್ತಾರೆಂದೂ, ಫಂಕ್ಷನ್ ಬಹಳ ಗ್ರಾಂಡ್ ಆಗಿ ಆಗಬೇಕು ಎಂದೂ, ಅವರಿಗೆ ಒಂದು ಕ್ಯಾಸ್ಕೆಟ್ ಅರ್ಪಿಸಬೇಕೆಂತಲೂ, ಇದರ ಖರ್ಚಿಗಾಗಿ ಎಂಬತ್ತು ಸಾವಿರ ರೂಪಾಯಿ ಶೇಖರಿಸಬೇಕೆಂದು,.ಚಂದಾ ವಸೂಲುಮಾಡುವುದಕ್ಕೆ ಷುರುಮಾಡಿದ್ದಾರೆಂದೂ ನಮ್ಮ ಗತಿ ಏನು ಎಂದು ನನ್ನ ಹತ್ತಿರ ಜನಗಳು ತಿರುಗ ಓಡಿ ಬಂದರು. ಇದೆಲ್ಲಾ ಸತ್ಯವಾದ ಸಂಗತಿ.

ಆವಾಗ ಕೂಡಲೇ ನಾನು ಕನ್‌ಸರ್ನ್‌ಡ್ ಮಿನಿಸ್ಟರಿಗೂ, ರೆವಿನ್ಯೂ ಮಿನಿಸ್ಟರಿಗೂ, ಅಗ್ರಿಕಲ್ಚರ್ ಮಿನಿಸ್ಟರಿಗೂ ಕಾಗದಬರೆದು ಸಂಗತಿಯನ್ನೆಲ್ಲಾ ತಿಳಿಸಿದೆ. ಕನ್‌ಸರ್ನ್‌ಡ್ ಮಿನಿಸ್ಟರು ನಿಮ್ಮ ಕಾಗದ ಬಂದಿತ್ತು, ಚೀಫ್ ಮಿನಿಸ್ಟರಿಗೆ ತಿಳಿಸಲಾಗುತ್ತದೆ, ಎಂದು ಜವಾಬು ಕಳುಹಿಸಿದರು. ಅವರು ಏನು ತಿಳಿಸಿದರೋ ಭಗವಂತನಿಗೆ ಗೊತ್ತು.

ಆ ಊರಿನಲ್ಲಿ ಇದನ್ನು ಯಾರಾದರೂ ಸರ್ವೆ ಮಾಡಿರುವುದನ್ನು ನೋಡಿರಬೇಕು;ಒಬ್ಬರಿಗೂ ಕಂಡಿಲ್ಲ. ಇಷ್ಟು ದೊಡ್ಡ ಪ್ರಾಜೆಕ್ಟ್ : ಗುಂಡ್ಲುಪೇಟೆ ಅಸಿಸ್ಟೆಂಟ್ ಇಂಜಿನಿಯರಿಗೆ ಗೊತ್ತಿಲ್ಲ. ಒಬ್ಬ ಮನುಷ್ಯ ಸರ್ವೆ ಮಾಡಿರುವುದು ಸರಿಯಾಗಿ ನೋಡಿಲ್ಲ.

ಏಕ್‌ದಂ ಸರ್ವೆ ರಿಪೋರ್ಟ್ ಸಿದ್ಧವಾಗಿ ಹೋಯಿತು.ನಿಜವಾಗಿ ಡಿಪಾರ್ಟ್‌ಮೆಂಟಿನವರು ಸ್ಪಾಟಿಗೆ ಹೋದರೋ ಇಲ್ಲವೋ ನನಗೆ ಗೊತ್ತಿಲ್ಲ. ಅಂತೂ ಸರ್ವೆ ರಿಪೋರ್ಟ್ ಆಗಿದೆಯಂತೆ. ಮಿನಿಸ್ಟರು ಅಲ್ಲಿಗೆ ಹೋದರು, ಭರ್ಜರಿ ಭಾಷಣಗಳಾದವು, ಕ್ಯಾಸ್ಕೆಟ್ ಒಪ್ಪಿಸಿಕೊಂಡರು, ಶಂಕುಸ್ಥಾಪನೆ ಆಗಿಹೋಯಿತು.

ಶಂಕುಸ್ಥಾಪನೆ ಆಗುವುದಕ್ಕೆ ಕೊಂಚ ಮುಂಚೆ ತಿರುಗಿ ಜನ ಬಂದರು. ಮತ್ತೊಂದು ಕಾಗದ ಬರೆದಿದ್ದೇನೆ."ಬೇಕಾದಷ್ಟು ಕಡೆ ಹೋಗಿ ನೋಡಿ ನಿಮ್ಮ ಹೆಸರಿನಲ್ಲಿ ಅನ್ಯಾಯ, ಅಕೃತ್ಯ ನಡೆಯುತ್ತಿದೆ" ಎಂದು ಇವರ ಇನ್‌ವಿಟೇಶನ್ ನನಗೆ ತಲುಪುವ ಸ್ಥಿತಿ ನೋಡಿ; ಟೂರ್ ಪ್ರೋಗ್ರಾಂ ಒಂದು ಕಳುಹಿಸಿದರು. ಅದನ್ನು ಶಂಕುಸ್ಥಾಪನೆ ಮಾಡುವುದಕ್ಕೆ ಬರುವ ದಿವಸ ನನಗೆ ಕಳುಹಿಸಿದ್ದಾರೆ. ಆವತ್ತಿನ ದಿವಸ ಆ ಪ್ರಾಜೆಕ್ಟ್ ಓಪನಿಂಗ್ ಸೆರಮನಿಗೆ ನೀವು ಏಕೆ ಹೋಗಲಿಲ್ಲವೆಂದರೆ, ಇದೇ ಕಾರಣ, ಓಪನ್ ಆದ ಐದು ದಿವಸಗಳ ಮೇಲೆ ಇನ್‌ವಿಟೇಶನ್ ಬರುತ್ತದೆ.

ಸರ್ಕಾರದವರು ಇನ್‌ವಿಟೇಶನ್ ಪ್ರಿಂಟ್ ಮಾಡಿದ್ದಾರೆ. ಅದು ಫಂಕ್ಷನ್ ಆದ ಮಾರನೆಯ ದಿವಸ ಬಂದಿತು. ಒಂದು ಲಕ್ಷ ಜನಕ್ಕೆ ಒಬ್ಬ ಪ್ರತಿನಿಧಿ, ಹೆಂಗಸರಾಗಲಿ, ಗಂಡಸರಾಗಲಿ,

ಹುಚ್ಚರಾಗಲಿ ಕೊಡತಕ್ಕ ಮರ್ಯಾದೆಯನ್ನು ಈ ದಿವಸ ಕೊಡದೆ ಇಂಥ ಅಕ್ರಮದ ಕೆಲಸವನ್ನು ಮಾಡಿದರೆ, ಅದಕ್ಕೆ ಏನು ಹೇಳಬೇಕೆನ್ನುವುದೇ ಗೊತ್ತಾಗುತ್ತಾ ಇಲ್ಲ. ಇಷ್ಟು ಎಲ್ಲಾ ಆಯಿತು. ಇದಕ್ಕೆ ಶಂಕುಸ್ಥಾಪನೆ ಆಯಿತು; ಅದೂ ಭರ್ಜರಿಯಾಗಿ ಬೇಕಾದಷ್ಟು ಆಯಿತು. ಊಟ ಆಯಿತು, ತಿಂಡಿ ಆಯಿತು. ವ್ಯವಹಾರ ಆಯಿತು, ವಾಪಸ್ಸು ಬಂದರು. ಈ ದಿವಸದ ಪರಿಸ್ಥಿತಿ ಏನಾಗಿದೆಯೆಂದರೆ ಅದು ರೀಇನ್‌ವೆಸ್ಟಿಗೇಷನ್ ಆಗುತ್ತಾ ಇದೆ. ಆ ಶುಭ ದಿವಸ ನಿರ್ಣಯಿಸಿದರೆ ಆ ಸ್ಥಳ ಸರಿ ಇಲ್ಲವಂತೆ. ಅವರು ಹೇಳಿದಷ್ಟು ಎಕರೆ ಎರಿಗೇಶನ್ ಆಗುವುದಿಲ್ಲವಂತೆ. ವೇಸ್ಟವೇರ್ ಅಲ್ಲಿ ಕಟ್ಟಿದರೆ ಪ್ರಯೋಜನವಿಲ್ಲವಂತೆ. ತಿರುಗಿ ಟೆಕ್ನಿಕಲ್ ಒಪಿನಿಯನ್ ಬೇಕಂತೆ. ಇದೇ ವಿಚಾರದಲ್ಲಿ ಟೆಕ್ನಿಕಲ್ ಹೆಡ್ ಅವತ್ತಿನ ದಿವಸ ಮಾಡಿದ ಭಾಷಣದಲ್ಲಿ ಆಡ್ರೆಸ್ಸಿನಲ್ಲಿ ಹೇಳಿದ್ದು ಏನು? ಅವರಾದರೂ ಆಫೀಸರುಗಳು ಏನು ಮಾಡುತ್ತಾರೆ. ಐ ಹ್ಯಾವ್ ಆಲ್ ಸಿಂಪತಿಸ್ ಫಾರ್ ದೆಮ್.ನಾನು ಸಿಪತೈಸ್ ಮಾಡುತ್ತೇನೆ.ನಿಜವಾಗಿ ಆಫೀಸರುಗಳು ಮಾಡುವುದು ಏನು? ಅವರು ನಿಜ ಸ್ಥಿತಿ ಹೇಳಿದರೆ, ಅವರಿಗೆ ಏನಾದರೂ ತೊಂದರೆ ಮಾಡುತ್ತಾರೆ. ತಪ್ಪು ಮಾಡದೇ ಇರುತ್ತಾರೆಯೇ? ಆ ತಪ್ಪನ್ನು ಹಿಡಿದು ಕೊಂಡು ಚಚ್ಚಿ ಬಲವಂತ ಮಾಘ ಸ್ನಾನ ಮಾಡಿಸುತ್ತಾರೆ. ಕತ್ತು ಹಿಡಿದುಕೊಂಡು ಅಮುಕಿ ಬಿಡುತ್ತಾರೆ. ಆವಾಗ ಅವರು ಹೇಳಿದ ಹಾಗೆ ಮಾಡಲೇಬೇಕು.

ಅಣೆಕಟ್ಟಿಗೆ ನೀರು ಸಾಕಾಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ, ಎಷ್ಟೋ ವರ್ಷಗಳ ಹಿಂದೆ ಸ್ಯಾಂಕ್ಷನ್ ಆಗಿದ್ದ ಪಿಕ್‌ಅಪ್ ಎಲ್ಲಾ ಕ್ಯಾನ್‌ಸಲ್ ಮಾಡಿದ್ದಾರೆ. ಮೇಲುಗಡೆ ಪಿಕ್‌ಅಪ್‌ಗಳೆಲ್ಲಾ ಮಾಡಿ ಆಗಿಹೋಯಿತು ಎಂದರೆ, 30-40 ಎಕರೆ ಸಾಗುವಳಿ ಆಗುತ್ತಿದ್ದುದು ನಿಂತುಹೋಗುತ್ತದೆ. ಈಗ ಅವರ ಹೊಟ್ಟೆಗೆ ಬೆಂಕಿ ಇಟ್ಟುಬಿಟ್ಟು, ಇವರು, ಇವರುಗಳ ಸಂಬಂಧೀಕರು ಕಂಠಪೂರ್ತಿ ಊಟ ಮಾಡಿದರೆ ಸಾಕು ಎಂದು ಹೇಳುತ್ತಾರೆ.

ಶ್ರೀ ಎಂ.ಎನ್. ನಾಗನೂರ್ (ಲೋಕೋಪಯೋಗಿ ಶಾಖೆಯ ಉಪಮಂತ್ರಿಗಳು) ಎಲ್ಲಿ ಸ್ಯಾಂಕ್ಷನ್ ಆಗಬೇಕು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.- ಬಡಗಟ್ಟೆ, ಕೊಳಕಟ್ಟೆ ಹೋದ ಸಾರಿ ಹೇಳಿದ್ದೆ. ಹೊಸಹಳ್ಳಿಯಲ್ಲಿ ಇನ್‌ವೆಸ್ಟಿಗೇಷನ್ ಇಲ್ಲ, ಏನೂ ಇಲ್ಲ. ಸರ್ವೆ ಮಾಡಲಿಲ್ಲ ಆಗಿಹೋಯಿತು ಶಂಕುಸ್ಥಾಪನೆ. ಇಷ್ಟು ಜನ ಕೆರೆ ಆಗಬೇಕೆಂದು ಅರ್ಜಿ ಬರೆದುಕೊಟ್ಟಿದ್ದಾರೆ;ಬುದ್ಧಿವಂತರು ಬೇಡ ಎಂದು ಹೇಳಿದವರು; ಎಷ್ಟು ಜನ ಬೇಕು ಎಂದಿದ್ದಾರೆ ಎಷ್ಟು ಜನ ಬೇಡ ಎಂದಿದ್ದಾರೆ ನೋಡಲಿ (ಮಿನಿಸ್ಟರು ಇದ್ದರೆ ಚೆನ್ನಾಗಿತ್ತು) .ಇದು ಬೇಡವೆಂದು ಮೇಲಿನಿಂದ ಬಂದಾಗಲೂ ನಾನು ಅಲ್ಲಿನ ಎಕ್ಸಿಕ್ಯುಟಿವ್ ಇಂಜನಿಯರನ್ನು ಕೇಳಿದ್ದೇನೆ. ಇಂಜಿನಿಯರಿಂಗ್ ಇಲಾಖೆಯಲ್ಲಿ ದೀಪಹಚ್ಚಿಕೊಂಡು ಹುಡುಕಿದರೂ ಅಂಥ ಇಂಜಿನಿಯರು ಸಿಕ್ಕುವುದಿಲ್ಲ. ಅಂಥ ಬಸವರಾಜೇ ಅರಸಿನವರನ್ನು ಕೇಳಿದ್ದೇನೆ. ಅವರು ಕೇವಲ ಮೂರು ನಾಲ್ಕು ಜನರಿಗೆ ಅನಾನುಕೂಲವಾಗುತ್ತದೆಂದು ಈ ಕೆಲಸವನ್ನು ನಿಲ್ಲಿಸುವುದು ಸರಿಯಲ್ಲವೆಂದು 1958ನೆಯ ಇಸವಿ ಆಗಸ್ಟ್ 12 ನೆಯ ತಾರೀಕಿನಲ್ಲಿ ಬರೆದಿದ್ದಾರೆ. ಆದರೂ ಈ ಹೊತ್ತಿಗೂ ಕೂಡ ಆ ಬಡಗಟ್ಟೆ ಕೆಲಸ ಆಗಿಲ್ಲ. ಮತ್ತೆ ಇನ್‌ವೆಸ್ಟಿಗೇಷನ್‌ಗೆ ಹಾಕಿದ್ದಾರೆ.

ಕಲ್ಲುಕಟ್ಟೆಹಳ್ಳದ ಪಿಕ್‌ಅಪ್ ಕೆಲಸವನ್ನೂ ರೀ-ಇನ್‌ವೆಸ್ಟಿಗೇಷನ್ ಹಾಕಿದ್ದಾರೆ.ಈಗ ಯಾವ ಪಿಕಪ್ಪೂ ಇಲ್ಲದೆ 300 ಎಕರೆಯಷ್ಟು ನೀರಾವರಿಯಾಗುತ್ತಿದೆ., 1959ರಲ್ಲಿ ಅದನ್ನು ಸರ್ವೆಮಾಡಿ ಈ ನೀರನ್ನೆಲ್ಲ ಸರಿಯಾಗಿ ಉಪಯೋಗಿಸಿಕೊಂಡರೆ ಸುಮಾರು 900 ಎಕರೆಗೆ

ನೀರಾವರಿಯಾಗುತ್ತದೆಂದು ಅಂದಾಜು ಮಾಡಿದ್ದರು. ಅದಕ್ಕೆ ಸುಮಾರು ಐದು ಲಕ್ಷ ಖರ್ಚಾಗುವುದೆಂದು ಹೇಳಿದ್ದರು. ಆದರೆ ಅದನ್ನು ಬಿಟ್ಟು ಈ ಹೊತ್ತು ಮೂರು ಲಕ್ಷ ರೂಪಾಯಿ ಖರ್ಚುಮಾಡಿ 350 ಎಕರೆ ನೀರಾವರಿಯಾಗುತ್ತಿರುವಾಗ ಯಾರದೋ ದಾಕ್ಷಿಣ್ಯಕ್ಕೋಳಗಾಗಿ, 350 ಎಕರೆ ನೀರಾವರಿಗೆ ಮೂರು ಲಕ್ಷ ಖರ್ಚು ಮಾಡುತ್ತಾರಂತೆ ನಮಗೆ ಇಂಥ ಯೋಜನೆ ಬೇಕಾಗಿಲ್ಲ.

ನಲ್ಲೂರು ಅಮಾನಿಕೆರೆ ಸರ್ವೆ ಆಗಿ, ಅಂದಾಜಾಗಿ ಟೆಂಡರ್ ನೋಟಿಫಿಕೇಷನ್ ಎರಡು ಸಾರಿ ಬಂದಿತ್ತು. ಇಂಥಾದ್ದನ್ನು ಈ ಹೊತ್ತು ರೀ-ಇನ್‌ವೆಸ್ಟಿಗೇಷನ್‌ಗೆ ಸಾಕಿದ್ದಾರೆ. ಹೀಗೆ ಮಾಡಿದ ಕೆಲಸವನ್ನೇ ಮಾಡುವುದು ನ್ಯಾಯವೆ, ಧರ್ಮವೆ? ಖರ್ಚು ಮಾಡಿ ಸರ್ವೆ ಮಾಡಿದುದನ್ನೇ ಪುನಃ ಪುನಃ ಮಾಡುತ್ತಿದ್ದರೆ ಇದೇನು ಬಿಟ್ಟಿ ನಡೆಯುವ ಕೆಲಸವೆ? ಕೆಲಸ ಮಾಡುವವರಿಗೆ ಒದಗಿಸಿಕೊಡಬೇಕಾದ ಅನುಕೂಲವೇನು, ಅವರಿಗೆ ಕೊಡಬೇಕಾದ ಟಿ.ಎ ಏನು,ಡಿ.ಎ ಏನು? ಹೀಗಾದರೆ ಸರ್ಕಾರಕ್ಕೆ ಹೇಗೆ ಲಾಭ ಬರುತ್ತದೆ? ಇದನ್ನೆಲ್ಲಾ ನೊಡಿಕೊಂಡು ಶ್ರೀಮಾನ್ ಮರಿಯಪ್ಪನವರು ಕಣ್ಣುಮುಚ್ಚಿಕೊಂಡು, ಕಿವಿಮುಚ್ಚಿಕೊಂಡು ಕುಳಿತು,ನಮಗೆ ವರಮಾನ ಬರುವುದಿಲ್ಲ, ಅವರ ಮೇಲೆ ತೆರಿಗೆ ಹಾಕು, ಇವರ ಮೇಲೆ ತೆರಿಗೆ ಹಾಕು ಎಂದು ಹೇಳಿ ತೆರಿಗೆಗಳನ್ನು ಹಾಕುತ್ತಾರೆ. ಈ ಸಭೆಯ ಅನೇಕ ಸದಸ್ಯರು ಪಬ್ಲಿಕ್ ವರ್ಕ್ಸ್ ಮಂತ್ರಿಗಳನ್ನು ಧೀರ, ಶೂರ, ಕೆಲಸ ಮಾಡುವುದರಲ್ಲಿ ನಿಪುಣ ಎಂದು ಹೊಗಳಿದ್ದಾರೆ, ಇರಬಹುದು, ಆದರೆ

ಶ್ರೀ ಟಿ. ಮರಿಯಪ್ಪ.-ಗುಣಕ್ಕೆ ಮತ್ಸರವೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.- ಶರಾವತಿಗೆ ನಾನೂ ಹೋಗಿದ್ದೆ. ಅಲ್ಲಿ ಕೆಲಸವೆಲ್ಲ ಭರದಿಂದ ಸಾಗುತ್ತಿದೆ. ಇವರೂ ಹಗಲು ರಾತ್ರಿ ದುಡಿಯಬಹುದು. ಆದರೆ ಒಂದು ಕಡೆ ಹಾಲಿನ ಹೊಳೆ ಹರಿಸಿ ಇನ್ನೊಂದು ಕಡೆ ವಿಷದ ಹೊಳೆ ಹರಿಸಿದರೆ,ಇದನ್ನು ಕುಡಿದವರು ಸಾಯಲೇಬೇಕು. ಹಾಲಿನ ವಾಸನೆಗೆ ಹಾಲಿಗೆ ಒಂದೇ ತೊಟ್ಟು ಹುಳಿ ಸಾಕು. ಹಾಲು ಹಾಕಿದ ಪುಣ್ಯವನ್ನು ವಿಷಹಾಕಿದ ಪಾಪ ತಿನ್ನುತ್ತದೆ. ನಮ್ಮ ಪ್ರೈಮ್ ಮಿನಿಸ್ಟರು ಅವರು ಇಂಥಾ ನೇಪೋಟಿಸಂ ಕೂಡ ಕರಪ್ಷನ್ ಗೆ ಸೇರಿದ್ದು, ನನಗೆ ದೂರು ಬಂದರೆ ನಾನು ಸರಿಯಾಗಿ ವಿಚಾರ ಮಾಡುತ್ತೇನೆಂದು ಮೊನ್ನೆ ಎ.ಐ.ಸಿ.ಸಿ ಭಾಷಣದಲ್ಲಿ ತಿಳಿಸಿದ್ದಾರೆ. ಇದು ಪತ್ರಿಕೆಗಳಲ್ಲಿಯೂ ಬಂದಿದೆ. ಇದನ್ನು ಪ್ರೈಮ್ ಮಿನಿಸ್ಟರ್ ಅವರ ಗಮನಕ್ಕೆ ತರುವುದು ಅತಿ ಅಗತ್ಯ. ಅಧ್ಯಕ್ಷರ ಅಪ್ಪಣೆ ಪಡೆದು ಇದನ್ನೆಲ್ಲಾ ಅವರಿಗೆ ಕಳಿಸುತ್ತೇನೆ. ಮಂತ್ರಿಗಳು ಸರ್ಕ್ಯುಲರ್ ಮೇಲೆ ಸರ್ಕ್ಯುಲರ್ ಕಳುಹಿಸುತ್ತಾರೆ. ತಾವು ಬಂದಾಗ ತೋರಣ ಕಟ್ಟುವುದು ಬೇಡ, ಹಾರ ಹಾಕುವುದು ಬೇಡ, ನಿಂಬೆಹಣ್ಣು ಕೊಡುವುದು ಬೇಡ ಎಂದು; ಆಮೇಲೆ ನೋಡಿದರೆ ಸಾವಿರಾರು ರೂಪಾಯಿನ ಕ್ಯಾಸೆಕಟ್ ಅದೂ ಹೊಟ್ಟೆಗಿಲ್ಲದ ಜನರ ಹೆಂಡತಿಯರ ತಾಳಿ ಮಾರಿಕೊಟ್ಟ ಹಣದಿಂದ ಮಾಡಿಸಿದ ಕ್ಯಾಸೆಕಟ್ ಹೊತ್ತು ಕೊಂಡು ಬರುವುದು ಇದೆಂಥ ಅಕ್ಷಮ್ಯ ಅಪರಾಧ;

ಶ್ರೀ ಟಿ.ಮರಿಯಪ್ಪ- ಬಹಳ ಉತ್ಪ್ರೇಕ್ಷೆ ಮಾಡುತ್ತಿದ್ದೀರಿ;

ಶ್ರೀಮತಿ ಕೆ.ಎಸ್. ನಾಗರತ್ನಮ್ಮ- ನನಗೆ ಮಕ್ಕಳಿಲ್ಲ. ಆದರೂ ಒಂದು ಲಕ್ಷ ಪ್ರಜೆಗಳು ನಮ್ಮ ಕಡೆ ನನನ್ನು ಅವ್ವ ಎಂದು ಬಾಯಿತುಂಬಾ ಕರೆಯುತ್ತಾರೆ. ಅವರ ಸಾಕ್ಷಿಯಾಗಿ ನಾನು ಹೇಳುತ್ತೇನೆ ನೀವು ಅನ್ಯಾಯ ಮಾಡುತ್ತೀರಿ ಎಂದು ನಾನು ಚಾಲೆಂಜ್ ಮಾಡುತ್ತೇನೆ, ನಾನು

ಉತ್ಪ್ರೇಕ್ಷೆ ಮಾಡುತ್ತಿದ್ದೇನೆಂಬುದನ್ನು ಯಾರಾದರೂ ತೋರಿಸಲಿ, ಉತ್ಪ್ರೇಕ್ಷೆ ಮಾಡಿ ಹೇಳುವುದಕ್ಕೆ ನನಗೇನು ಬೇರೆ ಕೆಲಸವಿಲ್ಲವೆ?

ಇಂಥವರ ಕೈಯಲ್ಲಿ ಆ್ಯಂಟಿ ಕರೆಕ್ಷನ್ ಇಲಾಖೆ ಬೇರೆ. ಇವರಿಗೆ ಶಿಕ್ಷೆ ಮಾಡುವವರು ಯಾರೂ ಇಲ್ಲವೆ. ದೇವರು ಮಾಡುತ್ತಾನೆ; ಕುರಿಕಾಯಿ ತೋಳ ಎಂದಹಾಗಾಯಿತು. ಇವರು ಇದಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಉತ್ತರ ಹೇಳುತ್ತಾ ಇಷ್ಟು ಜನಕ್ಕೆ ಶಿಕ್ಷೆಮಾಡಿದ್ದೇವೆ. ಅಷ್ಟು ಜನಕ್ಕೆ ಡಿಸ್‌ಮಿಸ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಠೀವಿಯಿಂದ ಗತ್ತಿನಿಂದ ಹೇಳುತ್ತಾರೆ; ನನ್ನ ತಾಲ್ಲೂಕಿನ ಒಂದು ಲಕ್ಷ ಜನರಿಗಾಗಿ ನಾನು ಮಮತೆಯಿಂದ ದುಡಿಯಲು, ಕಷ್ಟಪಡಲು ಸಿದ್ಧಳಾಗಿದ್ದೇನೆ. ಇದು ದೇವಸ್ಥಾನ. ನನ್ನೆಲ್ಲ ಜನರ ಸಾಕ್ಷಿಯಾಗಿ ಹೇಳುತ್ತಿದ್ದೇನೆ. ಸ್ವಾರ್ಥತೆಯಿಂದ, ನನ್ನ ಜನ, ನನ್ನ ಸಂಬಂಧೀಕರು ಎಂದು ಭೂತ ದಯೆ ಪಾಶ್ಚಾತ್ತಾಪವಿಲ್ಲದೆ, ಅಕ್ರಮವಾಗಿ ಕೆಲಸ ಮಾಡುವವರಿಗೆ ಪ್ರಾಯಶ್ಚಿತ್ತವನ್ನು ದೇವರೇ ಮಾಡುತ್ತಾನೆ. ಉಪ್ಪು ತಿಂದವರು ನೀರು ಕುಡಿಯಲೇ ಬೇಕು, ಈ ಕಾಗದಗಳನ್ನು ಈ ಟೇಬಲ್ ಮೇಲೆ ಇಡುತ್ತೇನೆ ಅಧ್ಯಕ್ಷರ ಅಪ್ಪಣೆ ಪಡೆದು;ಯಾರು ಬೇಕಾದರೂ ನೋಡಬಹುದು. ಇದರಲ್ಲಿ ಉತ್ಪ್ರೇಕ್ಷೆ ಇದ್ದರೆ ಅವರು ಹೇಳಿದ ಹಾಗೆ ಕೇಳುತ್ತೇನೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ, ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಈಗ ಸಭೆಯಲ್ಲಿಲ್ಲ. ಇದ್ದಕ್ಕಿದ್ದ ಹಾಗೆ ಬಸ್ ಫೇರ್‌ಗಳನ್ನು ಜಾಸ್ತಿ ಮಾಡಿರುವುದು ಬಹಳ ಅನ್ಯಾಯ. ಎಲ್ಲಾ ಭಾಗದ ದರಗಳನ್ನು ಜಾಸ್ತಿ ಮಾಡಿ, ಜನಗಳಿಗೆ ತೊಂದರೆ ಮಾಡುವುದು ಬಹಳ ತಪ್ಪು. ಅನುಕೂಲಸ್ಥರೂ ,ಮಂತ್ರಿಗಳೂ ಅವರ ಕುಟುಂಬದವರೂ ಫಸ್ಟ್‌ಕ್ಲಾಸ್‌ನಲ್ಲೊ ಕಾರುಗಳಲ್ಲೋ ಸಂಚಾರ ಮಾಡುತ್ತಾರೆ. ಆದರೆ ನನ್ನಂಥ ಸಾಮಾನ್ಯ ಜನರು ಬಸ್ಸುಗಳಲ್ಲಿ ಪ್ರಯಾಣ ಮಾಡಲೇಬೇಕು. ಏನಾದರೂ ಕೆಲಸವಿರುತ್ತದೆ.ಅವರು ಇಷ್ಟು ಹೆಚ್ಚು ದುಡ್ಡು ಕೊಡಬೇಕೆಂದರೆ ಹೇಗೆ ಸಾಧ್ಯ? ಈಗಿನ ಪರಿಸ್ಥಿತಿ ಎಲ್ಲರಿಗೂ ತಿಳಿದ ವಿಷಯ. ಕೆಲಸದ ಒತ್ತಡವಿಲ್ಲದೆ ಯಾರೂ ಸರ್ಕಾರ ಒದಗಿಸಿರುವ ಈ ಲೆಕ್ಸುರಿ ಬಸ್‌ಗಳಲ್ಲಿ ಪ್ರಯಾಣ ಮಾಡಲು ಹೋಗುವುದಿಲ್ಲ. ನಾನು ಆಗಾಗ ಬಸ್‌ನಲ್ಲಿ ಹೋಗುವುದುಂಟು. ಅಲ್ಲಿ ನಡೆಯುವ ವಿಚಾರ ಹೇಳತೀರದು, ಹೆಣ್ಣು ಮಕ್ಕಳಿಗೆಂದೇ ಸೀಟುಗಳಿವೆ. ಅಲ್ಲಿ ಅವರಿಗೆ ಜಾಗವಿಲ್ಲ. ಒಂದು ಸಾರಿ ಒಬ್ಬ ಹೆಣ್ಣುಮಗಳು ಒಂದು ಎಳೆಯ ಮಗುವನ್ನೆತ್ತಿಕೊಂಡು ಬಂದಿದ್ದಾಳೆ; ಮಗುವಿಗೆ ಹಾಲು ಕೊಡಬೇಕು. ಅವರಿಗೆ ಹೆಂಗಸರ ಸೀಟಿನಲ್ಲಿ ಜಾಗವಿಲ್ಲ, ಅವಳ ಪಕ್ಕದಲ್ಲಿ ಕುಳಿತಿದ್ದ ಗಂಡಸಿಗೆ ಬದಲಾಗಿ ಇನ್ನೊಬ್ಬ ಹೆಣ್ಣುಮಗಳನ್ನು ಅಲ್ಲಿ ಕೂಡಿಸಿ ಎಂದು ಅಂಗಲಾಚಿ ಬೇಡುತ್ತಿದ್ದಾಳೆ; ಎಲ್ಲರಿಗೂ ತಮಾಷೆಯಾಗಿ ಹೋಯಿತು. ಕಂಡಕ್ಟರೂ ಅವನನ್ನು ಎಬ್ಬಿಸಲಿಲ್ಲ. ಆ ಮನುಷ್ಯನೂ ಏಳಲೊಲ್ಲ. ಕೊನೆಗೆ ನಾನು ಬಾಯಿ ಹಾಕಿ ಸರಿಮಾಡಬೇಕಾಯಿತು. ಬಸ್‌ನಲ್ಲಿ ಕುಳಿತುಬಿಟ್ಟರೆ, ಅದೂ ನನ್ನಂಥವರು ಹಾಕಿ ಕುಳಿತುಬಿಟ್ಟರೆ ಈ ಕಡೆ ಆ ಕಡೆ ತಿರುಗುವ ಹಾಗಿಲ್ಲ, ಕಾಲು ಆಡಿಸುವಹಾಗಿಲ್ಲ.

ಶ್ರೀ ಟಿ. ಮರಿಯಪ್ಪ- ನ್ಯಾಯವಾಗಿ ನೀವು ಡಬಲ್ ಫೇರ್ ಕೊಡಬೇಕು (ನಗು;)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.- ಇಷ್ಟೆಲ್ಲ ಅನಾನುಕೂಲವಿರುವಾಗ ಬಸ್ ದರಗಳನ್ನು ಜಾಸ್ತಿ ಮಾಡಿರುವುದು ನಾಚಿಕೆಗೇಡಿನ ಪ್ರಸಂಗ, ಸರ್ಕಾರ ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಸೂಚಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಅರಣ್ಯ ಶಾಖೆಯ ವಿಷಯ ಪ್ರಸ್ತಾಪ ಮಾಡಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟಂತೆ ನಾನು ಒಂದು ವಿಷಯ ಹೇಳಬೇಕಾಗಿದೆ. ನನ್ನ ತಾಲ್ಲೂಕಿನಲ್ಲಿ

ಹಂಗಳದ ಹತ್ತಿರ ಸ್ಯಾಂಡಲ್ ರಿಸರ್ವ್ ಎಂದು ಸಾವಿರಾರು ಎಕರೆ ಕಾಡಿದೆ. ಇದರಲ್ಲಿ ಕೇವಲ 50 ಮರಗಳೊಳಗಿದೆ ಎಂದು ವರದಿ ಸಹ ಬಂದಿದೆ.300 ಹರಿಜನರ ಸಂಸಾರ, 200 ಪರಿವಾರದವರ ಸಂಸಾರ ಇರುವುದಕ್ಕೆ ಜಾಗವಿಲ್ಲದೆ ಒದ್ದಾಡುತ್ತಿದ್ದಾರೆ. ಇದನ್ನು ದಯವಿಟ್ಟು ರಿಲೀಸ್ ಮಾಡಿಕೊಡಬೇಕೆಂದೂ ಇದೇ ಸಮಯದಲ್ಲಿ ಸೋಷಿಯಲ್ ವೆಲ್‌ಫೇರ್ ಮಂತ್ರಿಗಳು ಅಲ್ಲಿ ಒಂದು ಕಾಲೋನಿ ಮಾಡಲು ಅವರುಗಳಿಗೆ ಎಲ್ಲಾ ಅನುಕೂಲಗಳನ್ನೂ ಒದಗಿಸಿಕೊಡಬೇಕೆಂದೂ ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಲೋಕಲ್ ಸೆಲ್ಫ್ ಗೌರ್ನಮೆಂಟ್ ಮಂತ್ರಿಗಳಲ್ಲಿ ಬಹಳ ವಿನಯದಿಂದ ಪ್ರಾರ್ಥಿಸಿಕೊಳ್ಳುವ ಒಂದು ವಿಷಯವಿದೆ. ಅದೇನೆಂದರೆ, ಅವರಿಗೆ ಮೈಸೂರು ಪಟ್ಟಣದ ಮೇಲೆ ಬಹಳ ಅಕ್ಕರೆ ಎಂದು ತಿಳಿದುಕೊಂಡಿದ್ದೆ. ಸಿಟಿ ಮೇಲೆ ನಿಗಾ ಕೊಟ್ಟರೆ ಸೂಕ್ತ, ಎಕ್ಸಟೆನ್‌ಷನ್ ಕಡೆ ತಮ್ಮ ನಿಗಾ ಬೇಕಾಗಿಲ್ಲವೆಂದು ತಿಳಿದುಕೊಂಡಹಾಗಿದೆ. ಮೈಸೂರು ನಗರದಲ್ಲಿ ವಾಣಿವಿಲಾಸ ಮೊಹಲ್ಲ ಎಂದು ಒಂದು ಎಕ್ಸಟೆನ್‌ಷನ್ ಇದೆ. ಇದು 1930ರಲ್ಲಿ ಲೇಔಟ್ ಆಯಿತು. ಟಿ.ಜಿ.ರಾಮಅಯ್ಯರ್ ಕಾಲದಲ್ಲಾಯಿತು. ಅದಕ್ಕೆ ಇನ್ನೂ 'ಅಂಡರ್‌ಗ್ರೌಂಡ್ ಡ್ರೇನೇಜ್ 'ಬಂದಿಲ್ಲ ಇನ್ನೂ ಎಸ್ಟಿಮೇಟ್ ಸ್ಟೇಜಿನಲ್ಲೇ ಇದೆಯಂತೆ.

ಶ್ರೀ ಟಿ. ಮರಿಯಪ್ಪ-ಮಂಡಿಮೊಹಲ್ಲ, ಲಷ್ಕರ್ ಮೊಹಲ್ಲ, ಅದಕ್ಕಿಂತ ಹಳೆಯವು. ಅಲ್ಲಿ ಬಡವರಿರುವ ಜಾಗ , ಜನಸಾಂದ್ರತೆ ಹೆಚ್ಚು ಟಿ.ಬಿ. ಬರುವುದಕ್ಕೆ ಅವಕಾಶವಿರುವ ಜಾಗ. ಅಲ್ಲಿ ಮೊದಲು ಕೊಡಬೇಕೆ? ಕೊಟ್ಟಿಲ್ಲ.

ಶ್ರೀಮತಿ ಕೆ. ಎಸ್.ನಾಗರತ್ನಮ್ಮ-ವಾಣಿ ವಿಲಾಸ ಮೊಹಲ್ಲ ಆದ ಮೇಲೆ ಆದ ಎಕ್ಸಟೆನ್‌ಷನ್‌ಗಳಿಗೆ ಕೊಟ್ಟಿದ್ದಾರೆ.

ಶ್ರೀ ಟಿ.ಮರಿಯಪ್ಪ- ನಿಮಗೂ ಬರುತ್ತದೆ, ನೀವು ವಿಪರೀತ ಆತುರಪಡುತ್ತೀರಿ. ವಾಣಿವಿಲಾಸ ಮೊಹಲ್ಲ ಸುಂದರವಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.-ಆದರೇನು? ಹೆಣ್ಣು ಚಂದ, ಕಣ್ಣು ಕುರುಡು;ಸುಂದರವಾದ ಮೊಹಲ್ಲ ಆದರೂ ಅದರ ಸ್ಥಿತಿ ಹೀಗಿದೆ;

1945-46ರಲ್ಲಿ ಜಯಲಕ್ಷ್ಮಿ ಎಕ್ಸಟೆನ್‌ಷನ್ ಎಂದು ಅಲ್ಲೇ ಇನ್ನೊಂದು ಬಡಾವಣೆ ಆಯಿತು. ಸೈಟುಗಳನ್ನು ದುಬಾರಿ ಬೆಲೆಗೆ ಹರಾಜು ಮಾಡಿದ್ದಾರೆ. ಅಲ್ಲಿಗೆ ನೀರಿನ ಸೌಕರ್ಯವನ್ನೇ ಒದಗಿಸಿಕೊಟ್ಟಿಲ್ಲ. ನಾನು ವಿಚಾರಿಸುವಲ್ಲಿ ಟ್ರಸ್ಟ್‌ಬೋರ್ಡಿನವರು ಸಬ್‌ಮೇನ್ಸ್ ಹಾಕಲು ಪ್ರಾವಿಷನ್ ಕೂಡ ಮಾಡಿಕೊಂಡಿಲ್ಲವೆಂದು ತಿಳಿದುಬಂತು. ಲೇ ಔಟ್ ಮಾಡಿದಾಗಲೇ ಅದರಲ್ಲಿ ಪ್ರಾವಿಷನ್ ಇಟ್ಟುಕೊಳ್ಳಬೇಕು.

ಎಷ್ಟೋ ಜನರಿಗೆ ಮನೆಗಳಿಲ್ಲ. ಸೈಟುಗಳ ಬೆಲೆ ಬಹಳ ದುಬಾರಿಯಾಗಿದೆ. ಮನೆ ಕಟ್ಟಿಸಿದವರಿಗೆ ಕುಡಿಯಲು ಸರಕಾರಿ ನೀರು ದೊರೆಯುತ್ತಿಲ್ಲ. ಆದುದರಿಂದ ಫಜೀತಿಯಾಗಿದೆ. ಸರಕಾರದವರು ವಾಟರ್ ಸಪ್ಲೇ ಸ್ಕೀಮ್‌ಗೆ ಲೋನ್ ಕೊಡುತ್ತಾರಂತೆ.ಇದನ್ನು ಮೈಸೂರು ಮುನಿಸಿಪಾಲಿಟೀ ಅವರು ಬೇಗ ತೆಗೆದುಕೊಂಡು ಆ ಬಡಾವಣೆಯ ನಿವಾಸಿಗಳಿಗೆ ನೀರು ಒದಗಿಸಿಕೊಡುವಂತೆ ಮಾಡಬೇಕು.

ಇನ್ನು ಕೊನೆಯದಾಗಿ, ವೈದ್ಯಕೀಯ ಇಲಾಖೆ ರಾಜ್ಯ ಪಾಲರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ನಾನು ಮಾತನಾಡಿ ಈಗಾಗಲೇ ಈ ವಿಷಯವನ್ನು ಸಾಕಷ್ಟು ಹೇಳಿದ್ದೇನೆ ಇವರಿಗೆ ಎಷ್ಟು ಹೇಳಿದರೂ ಅಷ್ಟೇ. ಇವರ ಚರ್ಮ ಬಹಳ ಮಂದವಾಗಿದೆ.

ಶ್ರೀ.ಟಿ.ಮರಿಯಪ್ಪ- ಇದು ಬಹಳ ಜಾಗ್ರತೆ ರಿಮಾರ್ಕ್ಸ್ ಆಯಿತು.

ಶ್ರೀಮತಿ.ಕೆ.ಎಸ್.ನಾಗರತ್ನಮ್ಮ- ಅವರ ಚರ್ಮದಪ್ಪ ಎಂದು ಹೇಳಬಾರದೇ? ಚರ್ಮದಪ್ಪ ಇರುವುದಿಲ್ಲವೆ? ಏನಾದರೂ ಹೇಳಿದರೆ ಅದು ಮಾಡುವುದಿರಲಿ, ವಿಚಾರಿಸುವುದಿರಲಿ, ಇದೆಲ್ಲ ಮಂತ್ರಿಗಳವರೆಗೆ ಬರಬೇಕೆ? ಎನ್ನುತ್ತಾರೆ. ಏನಿದು ವಿಚಿತ್ರ 10-15 ಗ್ಯಾಲನ್ ಪೆಟ್ರೋಲ್ ಖರ್ಚು ಮಾಡಿಕೊಂಡು ಅಲ್ಲಿಂದ ಇಲ್ಲಿಗೆ ಬಂದು ಏನಾದರೂ ಹೇಳಿದರೆ ತಾವೇನೂ ಮೇಲಿಂದಲೇ ಇಳಿದವರ ಹಾಗೆ ಮಾತನಾಡುತ್ತಾರೆ. ಅದೇನು ವಿಚಿತ್ರ ನಡವಳಿಕೆ ಎಷ್ಟೋ ಮಂತ್ರಿಗಳು ಬಂದರು, ಎಷ್ಟೋ ಮಂತ್ರಿಗಳು ಹೋದರು. ಇಂಥಾ ಮಂತ್ರಿಗಳನ್ನಂತೂ ನಾನು ನೋಡಲಿಲ್ಲ. ಇನ್ನುಳಿದ ವಿಚಾರಗಳ ಡಿಮ್ಯಾಂಡ್ ಚರ್ಚೆಗೆ ಬಂದ ಕಾಲದಲ್ಲಿ ಮಾತನಾಡುತ್ತೇನೆ.

ಇನ್ನು ಕೊನೆಯದಾಗಿ ಹೇಳಬೇಕಾದದ್ದೇನೆಂದರೆ ರಿಟೈರ್ ಆಗುವವರಿಗೆ ಪೆನ್‌ಷನ್ ತೀವ್ರ ದೊರೆಯುವಂತೆ ಮಾಡಬೇಕು. ಮೂರು ವರ್ಷಗಳವರೆಗೆ ಪೆನ್‌ಷನ್ ದೊರೆಯದೇ ಇರತಕ್ಕ ಜನ ಇದ್ದಾರೆ. ಹೀಗಾದರೆ ಅವರು ಏನು ಮಾಡಬೇಕು? ಇಂಥ ದಿನ ರಿಟೈರ್ ಆಗುತ್ತಾರೆಂದು ಮೊದಲೇ ಗೊತ್ತಿರುತ್ತದೆ. ಆದುದರಿಂದ ಪೆನ್‌ಷನ್ ಪೇಪರ್‌ಗಳನ್ನು ಮೊದಲೆ ತಯಾರಿಸಿ ಇಡಬೇಕು.

ಶ್ರೀ ಟಿ.ಮರಿಯಪ್ಪ- ನೀವು ಹೇಳುವುದು ಒಪ್ಪಿಕೊಳ್ಳೋಣ. ಆದರೆ ವೆರಿಫಿಕೇಷನ್ ಸಲುವಾಗಿ ತಡವಾಗುತ್ತದೆ. ಒಂದೇ ಆಫೀಸಿನಲ್ಲಿ ಕೆಲಸ ಮಾಡದೆ ಬೇರೆ ಯಾರೋ ಒಂದು ಆಫೀಸಿನಲ್ಲಿ ಟೆಂಪರರಿಯಾಗಿ ಕೆಲಸ ಮಾಡಿರುತ್ತಾರೆ. ಅದೆಲ್ಲಾ ವೆರಿಫಿಕೇಶನ್ ಆಗಿ ಪೇಪರ್ಸ್ ಬರಲು ಡಿಲೇ ಆಗುತ್ತದೆ.

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ- ಅವರು ರಿಟೈರ್ ಆಗುವುದು ಮೊದಲೇ ಗೊತ್ತಿರುವುದರಿಂದ ಅವರ ಕೆಲಸ ಸರಿಯಾಗಿ ಇರುವುದೇ ಎಂಬುದನ್ನು ನೋಡುವುದು ಸುಲಭವಾಗಿರುತ್ತದೆ. ಇನ್‌ಫರ್‌ಮೇಷನ್ ಕಂಪ್ಲೀಟ್ ಆಗಿ ಇರುತ್ತದೆ. ಅವರಿಗೆ ಪೆನ್‌ಷನ್ ಕೊಡದೇ ಇದ್ದರೆ ಕಷ್ಟವಾಗುತ್ತದೆ. ಆದಕ್ಕಾಗಿ ಅವರು ರಿಟೈರ್ ಆದ ಕೂಡಲೇ ಪೆನ್‌ಷನ್ ದೊರೆಯುವ ಹಾಗೆ ಮಾಡಬೇಕು.

ಇನ್ನು ಎಕೋನೋಮೈಸ್ ಮಾಡುವ ಬಗ್ಗೆ ಅರ್ಥ ಇಲಾಖೆಯ ಡಿಮಾಂಡುಗಳ ಚರ್ಚೆಯ ಕಾಲದಲ್ಲಿ ಹೇಳುತ್ತೇನೆ. ಫಾರ್‌ಮೇಷನ್ ಆಫ್ ಕಮಿಟೀಸ್, ಕಮಿಟೀ ಚೇರ್‌ಮನ್‌ಗಳ ಬಗ್ಗೆ ಆಯಾ ಡಿಮಾಂಡ್‌ಗಳು ಇದ್ದಾಗ್ಗ. ತಿಳಿಸಲು ಅಧ್ಯಕ್ಷರು ನನಗೆ ಐದೈದು ನಿಮಿಷ ಕಾಲ ಕೊಡಬೇಕೆಂದು ಅಡ್ವಾನ್ಸ್ ಆಗಿ ಈಗಲೇ ಕೇಳಿಕೊಂಡು ನನಗೆ ಇಷ್ಟರಮಟ್ಟಿಗೆ ಈ ದಿನ ನನ್ನ ಅಭಿಪ್ರಾಯವನ್ನು ತಿಳಿಸಲು ಅವಕಾಶ ಕೊಟ್ಟ ಅಧ್ಯಕ್ಷರಿಗೂ ನಿಪುಣ ಫೈನಾನ್ಸ್ ಮಿನಿಸ್ಟರ್‌ಗೂ ಈ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ವಿಧಾನ ಸಭೆ ಕಲಾಪ-ದಿ. 18-05-1960)

# 3. ರಾಜ್ಯ ಆಯವ್ಯಯ ಪತ್ರ ಕುರಿತು

## 1963

ಮಾನ್ಯ ಅಧ್ಯಕ್ಷರೇ ಮೊದಲನೆಯ ವಾಕ್ಯದಲ್ಲಿಯೇ "1963-64ನೇ ಸಾಲಿನ ಆಯವ್ಯಯ ಅಂದಾಜನ್ನು ಈ ಸಭೆಯಲ್ಲಿ ತಮ್ಮ ಮುಂದೆ ಮಂಡಿಸುವುದು ಒಂದು ಸುಯೋಗವೆಂದು ಭಾವಿಸುತ್ತೇನೆ" ಎಂದು ನಮ್ಮ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ನಿಜವಾಗಿಯೂ ಅವರು ಬಹಳ ಧೈರ್ಯಸ್ಥರು ಎಂದು ನಾನು ಹೇಳದೆ ವಿಧಿಯಿಲ್ಲ. ಏಕೆಂದರೆ ನಮ್ಮ ಅಲ್ಪ ಸ್ವಲ್ಪ ಚಿಕ್ಕಪುಟ್ಟ ಬಜೆಟ್ಟನ್ನು ನೋಡಿಕೊಂಡರೆ ಎದೆ ಝಿನ್ ಎನ್ನುತ್ತದೆ. ಬರುವುದು ನೋಡಿದರೆ ಯಾವುದೂ ಅಲ್ಲಿಲ್ಲ, ಖರ್ಚು ನೋಡಿದರೆ ಎಷ್ಟೊಂದು? ಇಂಥಿಂಥದ್ದು, ಎಲ್ಲೆಲ್ಲಿಂದಲೋ ಬರಬೇಕಾಗಿದ್ದು, ಯಾವ ಯಾವ ಕಡೆಯಿಂದಲೋ ಬರಬೇಕಾದ್ದು, ಇಷ್ಟು ಹಣ ಬರುವಂಥಾದ್ದನ್ನು ತೆಗೆದುಕೊಂಡು ಅಂದಾಜುಗಳನ್ನು ತಯಾರು ಮಾಡಿ, ಎಲ್ಲಾ ಮಾಡಿಸಿ ನೆಡೆಸಿ ಬಿಡುತ್ತೇನೆ, ನಾನು ಹಿಡಿದು ನಡೆಸಿಕೊಂಡು ಹೋಗುತ್ತೇನೆ ಎಂದು ಹೇಳುತ್ತಿದ್ದಾರೆ. ನಿಜವಾಗಿಯೂ ಇವರಿಗೆ ಎಷ್ಟು ಧೈರ್ಯ ಅದನ್ನು ಮೆಚ್ಚಬೇಕಾದ್ದೇ ಎಂದು ನಾನು ಹೇಳುತ್ತೇನೆ.

ಶ್ರೀ. ಬಿ.ಡಿ. ಜತ್ತಿ- ತಮ್ಮ ಬೆಂಬಲವಿರುವುದರಿಂದಲೇ ಧೈರ್ಯ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ- ಈ ತುರ್ತು ಪರಿಸ್ಥಿತಿಯಲ್ಲಿ ಒಂದೊಂದು ಕಾಸೂ ಭದ್ರವಾಗಿಟ್ಟು ಕೊಳ್ಳುತ್ತೇವೆ. ಒಂದೊಂದು ಕಾಸೂ ಸರಿಯಾಗಿ ಸೇರಿಸಿ ಖರ್ಚು ಮಾಡುತ್ತೇವೆ ಎನ್ನುವ ಕಾಲದಲ್ಲಿ ಅವರು ಧೈರ್ಯ ಇದೊಂದಕ್ಕೆ ಅಲ್ಲ, ಅನೇಕ ತರಹ ಧೈರ್ಯ ಮಾಡಬೇಕಾಗಿಬರುತ್ತದೆ. ದೇಶದಲ್ಲಿ ಎಷ್ಟೋ ಬಾಬುಗಳಿಗೆ ಎಷ್ಟೆಷ್ಟೋ ಜನಗಳ ಕೈಯಲ್ಲಿ ಹಣವನ್ನು ಕೊಟ್ಟು ಖರ್ಚು ಮಾಡಿಸುತ್ತಾರೆ. ಅದು ಹೇಗೆ ನಡೆಯುತ್ತಿದೆ ಎಂದು ಒಂದನ್ನು ಹೇಳುತ್ತೇನೆ. ನಮ್ಮಲ್ಲಿ ರಾಗಿ, ಜೋಳ, ಭತ್ತ ಇವೆಲ್ಲ ಬಹಳ ಜಾಸ್ತಿ ಬೆಳೆದಿದೆ ಎಂದು ಒಂದು ಕಡೆ ಪಟ್ಟಿ ಕೊಟ್ಟಿದ್ದಾರೆ. ಅದನ್ನು ನೋಡಿದರೆ ನಮ್ಮಲ್ಲಿ ಹೆಚ್ಚಿರುವ ಜನಸಂಖ್ಯೆಗೆ ಈ ಆಹಾರ ಪದಾರ್ಥಗಳು ಸಾಕೇ? ಇದನ್ನು ಮಾಡಿರುವುದು ಸಂತೋಷವೇ? ಎಂದು ಅವರನ್ನು ಕೇಳುತ್ತ, ನಿಜವಾಗಿ ರೈತಾಪಿ ಜನಗಳು ಎಷ್ಟು ಕಷ್ಟದಲ್ಲಿದ್ದಾರೆ. ಅವರಿಗೆ ಯಾವ ತರಹ ಅನುಕೂಲ ಮಾಡಿಕೊಡಬೇಕು ಎನ್ನುವುದನ್ನು ಬಿಟ್ಟು ಜಾಸ್ತಿ ಬೆಳೆ ತೆಗೆದಿದ್ದಾರೆಂದು ಸಂತೋಷಪಟ್ಟು ಅದು ನನ್ನ ಸೌಭಾಗ್ಯವೆಂದು ಹೇಳಿರುವುದನ್ನು ನೋಡಿದರೆ ನನಗಾದರೂ ಸ್ವಲ್ಪ ಆಶ್ಚರ್ಯವಾಗುತ್ತದೆ.

ಇಟ್ಟಿಗೆ, ಹೆಂಚು, ತೇಗ, ತಾಮ್ರ ಇವೆಲ್ಲದರ ಬೆಲೆ ಜಾಸ್ತಿಯಾಯಿತು ಎಂದು ಹೇಳಿದ್ದಾರೆ. ಇವು ರೈತ ತೆಗೆದುಕೊಳ್ಳುವ ಪದಾರ್ಥಗಳು. ಆದರೆ ಅವನು ಬೆಳೆಯುವ ಪದಾರ್ಥಗಳ ಬೆಲೆ ಕಡಿಮೆಯಾಗಿದೆ. ಹೀಗಾಗಿ ರೈತನು ತಾನು ಕೊಂಡುಕೊಳ್ಳುವ ಪದಾರ್ಥಗಳಿಗೆ ಎಷ್ಟು ಕಷ್ಟ ಪಡಬೇಕು? ಆಹಾರ ಪದಾರ್ಥಗಳ ಬೆಲೆ ಬಹಳ ಕಡಿಮೆಯಾಗದಂತೆ ನೋಡಿಕೊಳ್ಳಲು ಸೊಸೈಟಿಗಳವರು ಆಹಾರ ಧಾನ್ಯಗಳನ್ನು ಕೊಂಡು ಶೇಖರಿಸುವ ವ್ಯವಸ್ಥೆ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳಾದ ಕೃಷ್ಣಪ್ಪನವರು ಹೇಳಿದರು. ಇದು "ಊರು ಸೂರೆ ಹೋದ ಮೇಲೆ ಕೋಟೆ ಬಾಗಿಲು ಹಾಕಿ" ದಂತೆ ಆಗಿದೆ. ರೈತ ತಾನು ಬೆಳೆದ ಬತ್ತವನ್ನು ಮಾರಿ ಜೀವಿಸಬೇಕಾಗಿದೆ. ಅದಕ್ಕೆ ಸರಿಯಾದ ಬೆಲೆ ಬರುವಂತೆ ಸರ್ಕಾರದವರು ಸಕಾಲದಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಸರ್ಕಾರ ಮಾಡುತ್ತಿರುವುದನ್ನು ನೋಡಿದರೆ ಇವರಿಗೆ ನಿಜವಾಗಿಯೂ ರೈತರ ವಿಚಾರದಲ್ಲಿ ಕರುಣೆ ಇದೆಯೇ ಇಲ್ಲವೇ ಎಂದು ನನಗೆ ಒಂದೊಂದು ಸಲ ಅನುಮಾನ ಬರುತ್ತದೆ.

ಇನ್ನು ಮುಂದಕ್ಕೆ ಹೋದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ವಿಚಾರ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಮೊನ್ನೆ ಪ್ರಶ್ನೆಗಳ ಸಮಯದಲ್ಲಿ 29 ಸಾವಿರ ಅರ್ಜಿಗಳು ರಿಜಿಸ್ಟರಾಗಿವೆ ಎಂದು ಹೇಳಿದರು. ಇದು ಬೆಂಗಳೂರಿನಲ್ಲಿ ಮಾತ್ರ ಇವರಿಗೆಲ್ಲಾ ಕೆಲಸ ಸಿಕ್ಕುವುದು ಯಾವಾಗ, ಮೈಸೂರಿನಲ್ಲಿರುವ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ವಿಚಾರ ಹೇಳುವುದಕ್ಕೆ ಹೋದರೆ ಅದು ಒಂದು ದೊಡ್ಡ ನಾಟಕವಾಗಿದೆ. ಯಾರ ಹೆಸರು ಹಾಕಬೇಕಾದರೂ ಅವರಿಗೆ ನಾನಾ ತರಹ ಸಮಾಧಾನ ಮಾಡಬೇಕಾಗಿ ಬರುತ್ತದೆ. ಹೀಗಾಗಿ ಯಾರ ಹೆಸರೂ ಹೋಗುತ್ತಾ ಇಲ್ಲ. ಒಂದು ಕಡೆ ಲಿಸ್ಟ್‌ನಲ್ಲಿ ಹೆಸರು ಹೋಯಿತು ಎಂದರೆ, ಒಬ್ಬರು ಸೆಲೆಕ್ಟ್ ಆದರೆ ಬಾಕಿಯವರಿಗೆ ಯಾವ ತರಹ ಛಾನ್ಸ್ ಸಹ ಇರುವುದಿಲ್ಲ. ಆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಇರುವುದು ಕುತ್ತಾಗಿ ಯಾವ ತರಹ ಅನುಕೂಲವೂ ಆಗುತ್ತಿಲ್ಲ.

ರೈತರ ವಿಚಾರದಲ್ಲಿ, ವ್ಯವಸಾಯ, ಆರ್ಥಿಕ ವ್ಯವಸ್ಥೆ ಬಗ್ಗೆ ಹೇಳುತ್ತಾ ನೀರಾವರಿ ಸೌಕರ್ಯ, ಸಾಲದ ಸೌಲಭ್ಯ, ಉತ್ತಮ ಬೀಜ, ಗೊಬ್ಬರ, ಮರ ಮುಟ್ಟು ಇವುಗಳನ್ನು ಒದಗಿಸಿದ್ದರಿಂದ ಆಹಾರೋತ್ಪಾದನೆಯ ಗುರಿಯನ್ನು ಮುಟ್ಟುತ್ತೇವೆ ಎಂದು ಹೇಳಿದ್ದಾರೆ. ಇದು ಬರೀ ನಾಟಕ ನಮ್ಮಂಥವರಿಗೇ ಹೀಗೆಲ್ಲ..........

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು)- ಜೀವನವೇ ಒಂದು ನಾಟಕ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ- ಅದು ದೊಡ್ಡದಾಗಿದೆ ನಾಟಕ. ಅದಕ್ಕೆ ಏನೂ ಹೇಳುವ ಹಾಗೆಯೇ ಇಲ್ಲ.

ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಮೂಲಕ ಗೊಬ್ಬರದ ಸೌಕರ್ಯ ಕೊಟ್ಟಿದ್ದೇವೆಂದು ಹೇಳುತ್ತಾರೆ. ಗೊಬ್ಬರ ಕೇಳಿದರೆ ಕೊಡುವುದಿಲ್ಲ. ಬೀಜ ಕೇಳಿದರೆ ಬೀಜ ಕೊಡುತ್ತಾರೆ: ಅದು ಹೇಗಿರುತ್ತೋ ಏನೋ ಮೊಳಕೇನೆ ಬರುವುದಿಲ್ಲ. ಇನ್ನು ಕೆರೆಕಟ್ಟೆಗಳನ್ನು ರಿಪೇರಿ ಮಾಡಿ ನೀರಾವರಿಗೆ ಅನುಕೂಲ ಮಾಡಿಕೊಡುತ್ತೇವೆನ್ನುತ್ತಾರೆ. ಆದರೆ, ನೀರಾವರಿಗೆ ಸಾಲವನ್ನು ಕೇಳಿದವರಿಗೆ ಕೆಲವರಿಗೆ ಮಾತ್ರ ಸಿಗುತ್ತದೆ. ಆದರೆ ರೈತರು ಸಾಲ ತೆಗೆದುಕೊಳ್ಳುವುದಕ್ಕಿಂತ ವಿಷ ಸಿಕ್ಕಿದರೆ ಕುಡಿದುಬಿಡುವುದು ಸುಖವಾಗಿರುತ್ತದೆ. ಅಷ್ಟು ಮಟ್ಟಿಗೆ ರೈತರ ಗತಿಯಾಗಿದೆ. ಎಲ್ಲೂ ಅವರಿಗೆ ಸಾಲ ದೊರೆಯುವುದಿಲ್ಲ. ಅಲ್ಲದೆ ಒಂದು ಸಾವಿರ ರೂಪಾಯಿನಷ್ಟು ಎಕರೆಗೆ ಬೆಲೆ ಇದ್ದರೂ ಅದಕ್ಕೆ ಒಂದು ನೂರು ರೂಪಾಯಿಗಳಂತೆ ಬೆಲೆ ಕಟ್ಟಿದರೆ ಯಾರೂ ಸಾಲ ಕೊಡುತ್ತಿಲ್ಲ. ಹೀಗಾದರೆ ಇಂತಹ ಜನಕ್ಕೆ ಸಾಲ ಹೇಗೆ ದೊರೆಯಬೇಕು?

ಇನ್ನು ಬಾವಿಗಳನ್ನು ತೆಗೆಸಬೇಕು ಎಂದು ದುಡ್ಡು ಕೊಡುತ್ತಾರೆ. ಬಾವಿಗಳಾಗದಿದ್ದರೂ ದುಡ್ಡನ್ನು ಕೊಡುತ್ತಾರೆ. ಬಾವಿ ಆಗಿದೆಯೇ ಇಲ್ಲವೇ ಎನ್ನುವುದಕ್ಕೂ ನೋಡುವುದಕ್ಕೆ ಹೋಗುವುದಿಲ್ಲ. ಕೆಲವು ಕಡೆಗಳಲ್ಲಿ ಬಾವಿ ತೆಗೆಯಲು ಆಗುವುದಿಲ್ಲ. ನಮ್ಮ ಭಾಗದಲ್ಲಿ ಬಾವಿ ತೋಡಬೇಕಾದರೆ ಬಹಳ ಆಳವಾಗಿ ತೆಗೆಸಬೇಕು. ಅಲ್ಲದೆ ಬರೀ ಕಲ್ಲುಬಂಡೆಗಳು ಸಿಗುತ್ತವೆ. ಇದಕ್ಕೆ ನೀವು ಈಗ ಕೊಡುತ್ತಿರುವ ಖರ್ಚಿಗೆ ಹತ್ತರಷ್ಟು ಖರ್ಚು ನಮಗೆ ಬರುತ್ತದೆ. ಮನೆಯವರೆಲ್ಲ ಸೇರಿ ಬಾವಿಗಳನ್ನು ತೆಗೆಸಿ ಎಂದು ಹೇಳುತ್ತಾರೆ. ಎಷ್ಟು ಅವರು ಡೈನಮೇಟು ಹಾಕಿ ತೆಗೆಯುವುದಕ್ಕೆ

ಸಾಧ್ಯವೇ? ಇಂತಹ ಕಷ್ಟಗಳು ನಮ್ಮ ತಾಲ್ಲೂಕಿನಲ್ಲಿದೆ. ಇದರಿಂದ ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದು ಬಾವಿಯನ್ನು ತೆಗೆಯುವ ಕೆಲಸವನ್ನು ಸರಕಾರವೇ ಮಾಡಿ ಅದರಿಂದ ಎಷ್ಟು ನೀರು ಬರುತ್ತದೋ ನೋಡಿಕೊಂಡು ಸಪ್ಲೈ ಮಾಡಿ, ಅದಕ್ಕೆ ತಕ್ಕಂತೆ ವಾಟರ್‌ರೇಟ್ ಇತ್ಯಾದಿಗಳನ್ನು ಹಾಕಿ ಬೇಕಾದರೆ ಒಂದಿಪ್ಪತ್ತು ಇನ್‌ಸ್ಟಾಲ್‌ಮೆಂಟ್‌ನಂತೆ ಕೊಡಬೇಕೆಂದರೂ ಎಲ್ಲ ರೈತರು ಕೊಡುವುದಕ್ಕೆ ಸಿದ್ಧರಾಗುತ್ತಾರೆ.ಇದನ್ನು ನಮ್ಮ ತ್ಲಾಲೂಕಿನಲ್ಲಾದರೂ ಮಾನ್ಯ ಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಗೊಬ್ಬರದ ವಿಚಾರ ಮಂಗಳೂರಿನಲ್ಲಿ ಒಂದು ಫ್ಯಾಕ್ಟರಿ ಮತ್ತು ಬೆಂಗಳೂರಿನಲ್ಲಿ ಒಂದು ಫ್ಯಾಕ್ಟರಿ ಮಾಡುತ್ತೇನೆಂದು ಹೇಳುತ್ತಿದ್ದಾರೆ. ಎಲ್ಲಿ ಬೇಕಾದರೂ ಮಾಡಲಿ.ನಮಗೆ ಬೇಕಾಗಿರುವುದು ಗೊಬ್ಬರ. ಅದಕ್ಕೆ ಮಾನ್ಯತೆ ಕೊಡಬೇಕು ಮತ್ತು ಜನಕ್ಕೆ ಸಿಕ್ಕುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇರಿಗೇಷನ್ ವಿಚಾರದಲ್ಲಿ ಮಾತನಾಡುತ್ತ ಹೇಳುವುದಾದರೆ, ಚೀಫ್ ಮಿನಿಸ್ಟರ್‌ಗೆ ನಮ್ಮ ತಾಲ್ಲೂಕಿನ ಮೂಲೆಹೊಳೆ ಪ್ರಾಜೆಕ್ಟ್ ಆಗಿದೆ ಬಹಳ ವರ್ಷದಿಂದ ನಿಂತಿದೆ. ಇದನ್ನು ಬೇಗನೆ ಮಾಡಿಸಬೇಕೆಂದು ಕೇಳಿದ್ದಕ್ಕೆ ನನಗೆ ನನ್ನ ಪತ್ರಕ್ಕೆ ಜವಾಬಾಗಿ ನಾಳಿದ್ದು ಇಂಜಿನೀಯರವರು ಹೋಗುತ್ತಾರೆ ಎಂದು ಗೋತ್ತಾಗಿರುವುದನ್ನು ನೋಡಿದರೆ ನಮ್ಮ ಭಾಗದ ಕಡೆಗೆ ಇಷ್ಟು ಬೇಗ ಸರಕಾರಿ ಕೆಲಸ ಆಗಬೇಕಾಗಿದ್ದರೆ ನಮ್ಮ ತಾಲ್ಲೂಕು ಕನಸು ಕಂಡಂತೆ ಒಳ್ಳೆಯ ಭವಿಷ್ಯವಿದೆ ಎಂದು ಕಾಣುತ್ತದೆ. ನಮ್ಮ ಚೀಫ್ ಮಿನಿಸ್ಟರ್‌ರವರು ಇನ್ನು ಮುಂದೆ ಮಂಜಾಗರೂಕತೆ ವಹಿಸಿ ಇದನ್ನು ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಈ ಪ್ರಾಜೆಕ್ಟೇನಾದರೂ ಆದ್ರೆ, ಇದರಿಂದ ಸುಮಾರು ಇಪ್ಪತ್ತೈದು, ಮೂವತ್ತು ಸಾವಿರ ಎಕರೆ ಭೂಮಿಗೆ ನೀರಾವರಿ ಸೌಕರ್ಯ ಒದಗಿ ಕಷ್ಟದಲ್ಲಿರುವ ಎಷ್ಟೋ ಜನಗಳಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಮತ್ತೊಮ್ಮೆ ನಮ್ಮ ಚೀಫ್ ಮಿನಿಸ್ಟರರನ್ನು ಕೇಳುವುದು ಈ ವಿಚಾರವನ್ನು ಸರಿಯಾಗಿ ನೋಡಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ರೂರಲ್ ಕಮ್ಯುನಿಕೇಷನ್ ವಿಚಾರವಾಗಿ ನಮ್ಮ ಶ್ರೀಮಾನ್ ದೇವಯ್ಯನವರು ಮಾತನಾಡುತ್ತ ಮಲೆನಾಡಿನಲ್ಲಿ ಸಂಚಾರಮಾರ್ಗಗಳಿಲ್ಲ- ಇಲ್ಲಿಗೆ ಸಂಚಾರ ಮಾರ್ಗಗಳು ಆಗಬೇಕು, ಎಂದರು. ಕೆಲವು ತಾಲ್ಲೂಕಿನಲ್ಲಿ ಸಂಚಾರ ಮಾರ್ಗಗಳಿಗೆ ರಸ್ತೆ ಇಲ್ಲ, ಎಂದು ಹೇಳಿದ್ದರೆ ಯೋಗ್ಯವಾಗಿತ್ತು. ಸರಕಾರಿ ಬಸ್ಸು ಹಾಕಿಬಿಟ್ಟು ಓಡಾಡಲು ಸರಿಯಾದ ರಸ್ತೆ ಅನುಕೂಲವಿಲ್ಲ. ನಮ್ಮ ಭಾಗದ ಕಡೆ ಯಾರೂ ಬಂದು ನೋಡಿಲ್ಲ ಎಂದು ಕಾಣುತ್ತೆ. ಪ್ರತಿಯೊಬ್ಬರೂ ಬೇಗೂರಿನಿಂದ ಗಂಡ್ಲುಪೇಟೆಯವರೆಗೆ ಬಸ್ಸಿನಲ್ಲಿ ಬರುವವರು 50-50 ನಯಪೈಸಾದಂತೆ ಹೆಚ್ಚು ಕೊಡಬೇಕಾಗುತ್ತದೆ. ಬಡವನಾದ ರೈತರಿಗೆ 50 ನಯಾಪೈಸಾ ಎಂದರೆ ಅವನಿಗೆ ಒಂದು ಹೊತ್ತಿನ ಅನ್ನ ಆಗುತ್ತೆ. ಹೀಗೆ 'ಕೆಲವು ಗ್ರಾಮಗಳು ಒಂದು ದ್ವೀಪದ ಹಾಗೆ ಆಗಿದೆ. ಇಂತಹ ರಸ್ತೆಗಳನ್ನು ಮಾಡಲು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟರೆ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಪಿ.ಡಬ್ಲ್ಯು. ಡಿ. ಮಿನಿಸ್ಟರನ್ನು ಕೇಳಿದರೆ ದುಡ್ಡಿಲ್ಲ ಎನ್ನುತ್ತಾರೆ.ಇದು ನನ್ನ ತಾಲ್ಲೂಕಿಗೆ ದುಡ್ಡಿಲ್ಲವೇನೂ? ಬಾಕೀ ಎಲ್ಲ ರಸ್ತೆಗಳಿಗೆ ಕೊಡುವುದಕ್ಕೆ ದುಡ್ಡಿದೆ. ರೋಡುಗಳು ಕೆಟ್ಟು ಹೋದರೆ ಬಸ್ಸುಗಳು ಹೇಗೆ ಓಡಾಡಲು ಅನುಕೂಲವಾಗುತ್ತದೆ. ಗುಂಡ್ಲುಪೇಟೆಯಿಂದ ತೆರಕಾಣಂಬಿ ಸಂತೆಗೆ ಜನ ಹೋಗುವುದಕ್ಕೆ ಸರಿಯಾದ ರಸ್ತೆಯ ಅವಕಾಶವಿಲ್ಲದೇ ಬಹಳ

ಸಂಕಟಪಡುತ್ತಿದ್ದಾರೆ.ಈ ರೋಡುಗಳನ್ನು ಈಗಲಾದರೂ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬಡ್ಜೆಟ್ ಭಾಷಣವನ್ನು ಬಹಳ ಅಚ್ಚುಕಟ್ಟಾಗಿ ನಮ್ಮ ಮಂತ್ರಿಗಳು ಮಾಡಿದ್ದಾರೆ. ಅವರು "ನಾನು ದುಂದುಗಾರಿಕೆ ಮಾಡುವುದಿಲ್ಲ ನೀವು ಕೊಟ್ಟ ಹಣವನ್ನು ಭದ್ರವಾಗಿ ಇಟ್ಟುಕೊಳ್ಳುತ್ತೇನೆ" ಎಂದು ನಮ್ಮ ಫೈನಾನ್ಸ್ ಮಿನಿಸ್ಟರ್ ಇಲ್ಲಿ ಹೇಳಿದ್ದಾರೆ. ಇದು ಎಷ್ಟು ತಮಾಷೆಯಾಗಿದೆ ಎಂದರೆ ಮಕ್ಕಳ ಕೈಯಲ್ಲಿ ಪೆಪ್ಪರ್‌ಮೆಂಟನ್ನು ಕೊಟ್ಟು ಅದನ್ನು ತಿನ್ನಬೇಡ, ತಿನ್ನಲಿಕ್ಕಲ್ಲ ಎಂದರೆ ಅದು ಸುಮ್ಮನಿರುತ್ತದೆಯೇ? ಹಾಗೆ ಇದರಲ್ಲಿ ದುಡ್ಡನ್ನು ಸ್ಯಾಂಕ್ಷನ್ ಮಾಡಿ ನಾವು ಭದ್ರವಾಗಿ ಇಟ್ಟುಕೊಳ್ಳುತ್ತೇವೆ ಎಂದು ಹೇಳಿದರೆ ಇದು ಎಷ್ಟು ತಮಾಷೆಯಾಗಿದೆ ನೋಡಿ.

ಶಿಕ್ಷಣ ಖಾತೆಗೆ ಬಂದರೆ ಇದು ನಿಜವಾಗಿಯೂ ಬಹಳ ವ್ಯಸನಕರವಾದ ಪ್ರಸಂಗವಾಗಿದೆ. ಎಷ್ಟು ದುಡ್ಡು ಅವರ ಕೈಯಲ್ಲಿ ಕೊಟ್ಟಿದ್ದಾರೆಂದರೆ 18.76 ಕೋಟಿಯಷ್ಟು ಶಿಕ್ಷಣಕ್ಕಾಗಿ ಒದಗಿಸಿರುವುದು. ಶ್ರೀಮಾನ್ ಕಂಠಿಯವರು ಹೋಗತಕ್ಕ ದಾರಿ ಏಕೆ ಹೀಗಾಯಿತು. ಇವರಿಗೇನಾಯಿತು. ನಮ್ಮಲ್ಲಿ ಒಂದು ಗಾದೆ ಇದೆ. "ಹುಚ್ಚಲ್ಲ ಬೆಪ್ಪಲ್ಲ, ಶಿವಲೀಲೆ" ಎಂದು. ಹೀಗೆ ಶಿವಲೀವೆಯಿಂದ ಹಾಗೆ ಅವರು ಕೆಲಸ ಮಾಡುತ್ತಿದ್ದಾರೆ. ನನಗೆ ಅದು ಶಿವಲೀಲೆಯಂತೆಯೇ ಕಾಣುತ್ತಿರುವುದು. ನಮ್ಮ ಹಿಂದಿನ ಮಂತ್ರಿಗಳಾಗಿದ್ದ ಶ್ರೀಮಾನ್ ಅಣ್ಣಾರಾಯರು ಸ್ವಲ್ಪ ಏನಾದರೂ ಒರಟಾಗಿ ಮಾತನಾಡುತ್ತಿದ್ದರೂ ಅವರು ಕೆಲಸ ಆಗುವುದಿದ್ದರೆ ಆಗುತ್ತೆ ಎಂದು ಹೇಳುತ್ತಿದ್ದರು. ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳುಬಿಡುತ್ತಿದ್ದರು. ಅವರ ಕೈಲಾಗುತ್ತಿದ್ದ ಎಷ್ಟೋ ಕೆಲಸವನ್ನು ಬೇಕಾದಷ್ಟು ಮಾಡಿಯೂ ಕೊಟ್ಟರು. ಈಗಿರುವ ಮಂತ್ರಿಗಳಿಗೇನಾಗಿದೆ ಎಂದರೆ ಕಸ್ತೂರಿ ಸಂಗಡ ನಾರು ಕುಸ್ತಿ ಮಾಡಬಹುದು. ಆದರೆ ಸಗಣಿ ಸಂಗಡ ಸರಸ ಮಾಡಬಾರದು ಎಂಬಂತೆ ನಮ್ಮ ಕಷ್ಟವನ್ನು ಪದೇ ಪದೇ ಹೇಳುತ್ತಿದ್ದರೂ ಯಾವುದೂ ಆಗುತ್ತಿಲ್ಲ. ಅದೇ ಕಥೆಯನ್ನು ಪುನಃ ಹೇಳಬೇಕಾಗಿದೆ. ಮಹಾರಾಣೀಸ್ ಕಾಲೇಜು ಮತ್ತು ವಾಣಿವಿಲಾಸ ಕಾಲೇಜಿನಲ್ಲಿ ಎಷ್ಟೋ ಕೆಲಸಗಳಾಬೇಕು, ಮೈಸೂರಿನಲ್ಲಿರುವ ಕಾಲೇಜಿನ ಮಕ್ಕಳಿಗೆ ಎಷ್ಟು ಕಷ್ಟವಾಗಿದೆ ಎಂದರೆ ಕೊಡಲು ಸರಿಯಾದ ಜಾಗವಿಲ್ಲ. ಹೋಂ ಸೈನ್ಸ್‌ಗಾಗಿ ಬರಬೇಕಾದರೆ ಬೆಂಗಳೂರಿಗೆ ಬರಬೇಕು. ಸೈನ್ಸ್ ಸಬ್ಜೆಕ್ಟ್ ಓದಲು ಮಹಾರಾಜಸ್ ಕಾಲೇಜಿಗೇ ಹೋಗಬೇಕು .ಹೀಗಾಗಿರುವುದರಿಂದ ದಯಮಾಡಿ ಈ ಕಾಲೇಜಿಗೆ ಸರಿಯಾದ ಕಟ್ಟಡ ಕಟ್ಟಿಸಿಕೊಡಿ, ಸರಿಯಾಗಿ ಕಾಲೇಜು ಕೆಲಸ ಮಾಡುತ್ತೆ ಎಂದು ಐದಾರು ವರ್ಷದಿಂದಲೂ ಹೇಳುತ್ತಿದ್ದರೂ ಇದುವರೆಗೂ ಮಾಡಿಕೊಡಲಿಲ್ಲ, ಮೊನ್ನೆ ದಿವಸ ತಾನೇ ನಾವೆಲ್ಲ ಇಲ್ಲಿ ನೋಡಿದೆವು. ಹೆಣ್ಣು ಮಕ್ಕಳಿಗೆ ಗೌರವವನ್ನು ಸರಿಯಾಗಿ ಕೊಡುವುದಿಲ್ಲ. ಡೆಪ್ಯೂಟಿ ಎಜುಕೇಷನ್ ಮಿನಿಸ್ಟರ್‌ಗೆ ಕೊಟ್ಟಂಥಾ ಗೌರವ. ಅವರಿಗೆ ನಮ್ಮ ವಿದ್ಯಾ ಸಚಿವರು ಫೈಲನ್ನು ಸಹ ಕೊಡಲಿಲ್ಲ. ಅವರಿಗೇನು ಯೋಗ್ಯತೆ ಇರಲಿಲ್ಲವೇ? ಅವರನ್ನೇಕೆ ನೇಮಕ ಮಾಡಿದಿರಿ. ಬೇಡದಿದ್ದರೆ ವಜಾ ಮಾಡಲಿ, ಅವರಿಗೆ ಆ ಶಕ್ತಿ ಇಲ್ಲದಿದ್ದರೆ ಏತಕ್ಕಾಗಿ ಅವರನ್ನು ಇಟ್ಟುಕೊಂಡು ಈ ರೀತಿ ಅಭಾಸ ಮಾಡುತ್ತೀರಿ? ಹೆಣ್ಣು ಮಕ್ಕಳು ಎಂದು ಅನ್ಯಾಯ ಮಾಡುವುದೇ ನಿಮಗೆ ಕೆಲಸವಾಗುತ್ತದೆ. ಅವರಿಗೆ ಕೆಲಸ ಹರಿಯೊಲ್ಲ ಎಂದರೆ ಬಿಟ್ಟುಬಿಡಿ.

ಶ್ರೀ.ಕೆ.ಪಿ. ರೇವಣ್ಣಸಿದ್ಧಪ್ಪ- ಗಂಡಸರಾಗಿರುವವರಿಗೂ ಅದೇ ಆಗಿದೆ (ನಗು)

ಈ ದೇಶದಲ್ಲಿದ್ದ ಕಾಲೇಜು ಟೀಚರೊಬ್ಬರು ಹದಿನೈದು ಇಪ್ಪತ್ತು ವರ್ಷಗಳ ಕಾಲ

ಹೊರಗಡೆ ಎಂದರೆ ಬಿಜಾಪುರ, ಧಾರವಾಡ, ಈ ಭಾಗಗಳಲ್ಲಿ ಚೆನ್ನಾಗಿ ಕೆಲಸ ಮಾಡಿ ಈಗ ತಮ್ಮ ಊರಾದ ಮೈಸೂರಿಗೆ ಬಂದರೆ ಪುನಃ ಅವರನ್ನು ಎಲ್ಲೋ ಬಹಳ ದೂರವಾದ ಭಾಗಕ್ಕೆ ಬಿಜಾಪುರ ಜಿಲ್ಲೆಯಲ್ಲಿ ಹೋಗಬೇಕೆಂದು ಟ್ರಾನ್ಸ್‌ಫರ್ ಮಾಡಿದ್ದಾರೆ. ಇದಕ್ಕೇನು ಅವರು ತಪ್ಪು ಮಾಡಿದರು ಎಂದು ಅವರು ಇಪ್ಪತ್ತು ವರ್ಷಗಳ ಕಾಲ ನಾನು ಹೊರಗಡೆ ಇದ್ದಾಗ ಯಾವ ತಪ್ಪನ್ನೂ ಮಾಡಿಲ್ಲ, ಏಕೆ ಹಾಕುತ್ತೀರಿ ಎಂದರೆ ಅಲ್ಲಿಗೆ ಹೋಗುವವರು ಯಾರೂ ಇಲ್ಲವೆಂದರಂತೆ, ಇಲ್ಲಿ ಒಂದು ಶಿವಲೀಲೆಯಾಗುತ್ತಿದೆ. ಹೀಗೆ ಚೆನ್ನಾಗಿ ಕೆಲಸ ಮಾಡಿದವರಿಗೆ ಇದು ಫನಿಷ್‌ಮೆಂಟೇ ? ಯಾರೂ ಹೋಗುವುದಿಲ್ಲ ಎನ್ನುತ್ತಾರೆ. ನೀವು ಇಪ್ಪತ್ತು ವರ್ಷ ಹೊರಗಿದ್ದು ಚೆನ್ನಾಗಿ ಕೆಲಸ ಮಾಡಿದ್ದೀರಿ, ಅಲ್ಲಿ ಅಂತಹ ಕೆಲಸ ಮಾಡುವ ಹೆಣ್ಣು ಮಕ್ಕಳಿಲ್ಲ ಎಂದು ಇವರನ್ನೇ ಒತ್ತಾಯದಿಂದ ನೀವೇ ಹೋಗಿ ಎನ್ನುತ್ತಾರೆ, ಇದಾವ ನೀತಿ. ಇದು ಅಡ್ಮಿನಿಸ್ಟ್ರೇಷನ್‌ನಲ್ಲಿರುವ ಶಿವಲೀಲೇಯಲ್ಲದೆ ಬೇರೆ ಏನೂ ಅಲ್ಲ.

ಒಬ್ಬೊಬ್ಬರಿಗೆ ಒಂದೊಂದು ಕಾನೂನು. ಅವರಿಗೆ ಇಷ್ಟ ಬಂದವರಿಗೆ ಒಂದು ಕಾನೂನು, ಇವರಿಗೆ ಇಷ್ಟ ಬರದವರಿಗೆ ಒಂದು ಕಾನೂನು. ಹೀಗೆ ಏಕೆ ಮಾಡಿದ್ದೀರೆಂದು ಕೇಳಿದರೆ ನಾನು ಮಾಡಿಲ್ಲ, ಡಿ.ಪಿ.ಐ. ಮಾಡಿದ್ದಾರೆಂದು ಹೇಳುತ್ತಾರೆ; ಅದು ಒಂದು ಕಾನೂನು: ಅವರನ್ನು ಕೇಳಿದರೆ, ಮಿನಿಸ್ಟರು ಮಾಡಿದ್ದಾರೆಂದು ಹೇಳುತ್ತಾರೆ. ನಿಮಗೆ ಇಷ್ಟ ಬಂದವರಿಗೆ ಒಂದೊಂದು ಕಾನೂನೇ? ಪ್ರತಿಯೊಂದಕ್ಕೂ ನಿಗದಿಯಾದ ಕಾನೂನಿಲ್ಲವೆ? ಇದು ಒಂದು ಶಿವಲೀಲೆ.

ಹಿಂದಿ ವಿದ್ವಾನ್‌ಗಳ ವಿಚಾರ ಅನೇಕರು ಹೇಳಿದ್ದಾರೆ.ಅನೇಕರು ಹಿಂದಿಯಲ್ಲಿ ಎಂ.ಎ.ಪರೀಕ್ಷೆಗೆ ಈಕ್ವಲೆಂಟ್ ಆಗಿರುವ ಪರೀಕ್ಷೆ ಪಾಸು ಮಾಡಿದ್ದಾರೆ.ಅವರಿಗೆ ಗವರ್ನ್‌ಮೆಂಟಿನವರು ಟ್ರೈನಿಂಗ್ ಕೊಟ್ಟಿದ್ದಾರೆ. ಅವರ ಬಗ್ಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಅವರು ಎಷ್ಟೇ ಅಪ್ಲಿಕೇಷನ್ಸ್, ರೆಪ್ರೆಸೆಂಟೇಷನ್ಸ್ ಕಳುಹಿಸಿದರೂ ಅವಕ್ಕೆ ಬೆಲೆಯೇ ಇಲ್ಲ: ಪ್ರಪಂಚದ ಮೇಲೆ ಇರದ ಹಾಗೆ ಅವರ ಸ್ಥಿತಿ ಆಗಿದೆ. ಯಾರಾದರೂ ಟೆಂಪೊರರಿ ಹ್ಯಾಂಡ್ಸ್ ಅವರಲ್ಲಿದ್ದರೆ ಅವರನ್ನೂ ಕೆಲಸಕ್ಕೆ ತೆಗೆದುಕೊಳ್ಳಿ. ನಿಮಗೆ ದುಡ್ಡು ಕುಣಿಯುತ್ತಿದೆಯೇ? ಅವರನ್ನು ಏತಕ್ಕೆ ಟ್ರೇನ್ ಮಾಡಿದಿರಿ?ಟ್ರೇನ್ ಮಾಡಿರುವುದರಿಂದ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಿ. ನಿಮಗೆ ಕೆಲಸ ಕೊಡುವುದಕ್ಕಾಗದಿದ್ದರೆ ಟ್ರೇನ್ ಮಾಡಬೇಡಿ. ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಬೇಕಾದಷ್ಟು ಹೇಳುತ್ತೀವಿ; ಒಣ ಪುರಾಣ ಹೇಳುವುದಕ್ಕೆ ಬದಲು ಟ್ರೇನಿಂಗ್ ಆಗಿರುವವರರನ್ನು ಕೆಲಸಕ್ಕೆ ತೆಗೆದುಕಂಡು ಅವರ ಜೀವನಕ್ಕೆ ಅನುಕೂಲ ಮಾಡಿಕೊಡಿ.

ಈ ಸ್ಕಾಲರ್‌ಷಿಪ್ ಕಮಿಟಿ ವಿಚಾರದಲ್ಲಿ ಇಷ್ಟರವರೆಗೆ ಎಲ್ಲಾ ಹೇಳಿದ್ದಾರೆ. ಈ ಸ್ಕಾಲರ್‌ಷಿಪ್ ಕಮಿಟಿಯಲ್ಲಿ ಕೆಲವರನ್ನು ಚೇರ್ಮನ್ನಾಗಿ ಮಾಡಿದ್ದಾರೆ. ಸ್ಕಾಲರ್‌ಷಿಪ್ ಹಂಚಬೇಕೆಂದು ಇಟ್ಟುಕೊಂಡ ಮೀಟಿಂಗಿನ ಇಂಟಿಮೇಷನ್ ಯಾವ ದಿವಸ ಚೇರ್ಮನ್ನಿಗಾಗಲಿ, ಇತರ ಸದಸ್ಯರಿಗಾಗಲೀ ಬರಬೇಕು? ನಾಳೆ ಮೀಟಿಂಗ್ ಇಟ್ಟುಕೊಂಡರೆ, ಇಂಥ ದಿವಸ ಮೀಟಿಂಗ್ ಇದೆ, ಬರಬೇಕು ಎಂದು ಪ್ರಯರ್ ನೋಟೀಸ್ ಕೊಡುವುದೇ ಇಲ್ಲ; ಅದೇನು ಮೆಂಬರುಗಳು ಬರಬಾರದೆಂದೇ ಹಾಗೆ ಮಾಡುತ್ತಾರೆಯೋ? ಅಸೆಂಬ್ಲಿ ಸೇರುವ ಹಿಂದಿನ ದಿವಸ,ಮರುದಿವಸ ಮೀಟಿಂಗ್ ಇದೆಯೆಂದು ಇಂಟಿಮೇಷನ್ ಬರುತ್ತದೆ. ಏತಕ್ಕೆ ಇಂಥ

ವ್ಯವಹಾರ. ನಮ್ಮ ಆರ್ಥಿಕ ಮಂತ್ರಿಗಳಿಗೆ ಹೇಳಿಬಿಟ್ಟರೆ, ಮಾರ್ಚ್ ತಿಂಗಳಿಗೆ ಮುಂಚಿತವಾಗಿಯೇ ಸ್ಕಾಲರ್‌ಷಿಪ್ ಹಂಚುತ್ತೇವೆಂದು ಹೇಳುತ್ತಾರೆ. ಸ್ವಲ್ಪವಾದರೂ ಮಾಡಿರುವ ತಪ್ಪು ಒಪ್ಪಿಕೊಳ್ಳಿ, ಮೊರಾರ್ಜಿಯವರು ಬೊಂಬಾಯಿನಲ್ಲಿ ಅವರು ಮಾಡಿದ ತಪ್ಪನ್ನು ಒಪ್ಪಿಕೊಳ್ಳುತ್ತಿದ್ದರು; "ಹೌದು, ನಾನು ತಪ್ಪು ಮಾಡಿದ್ದೇನೆ, ಅದನ್ನು ಸರಿಮಾಡುತ್ತೇನೆ "ಎಂದು ಹೇಳುತ್ತಿದ್ದರು. ಈ ಸ್ಕಾಲರ್‌ಷಿಪ್ ವಿಚಾರ ಈ ಸಭೆಯಲ್ಲಿ ಮೊನ್ನೆ ಬಂದಾಗ, ಚೀಫ್ ಮಿನಿಸ್ಟರ್ ಎದ್ದು "ಹೌದು ಕೊಡುವುದರಲ್ಲಿ ತಡವಾಗಿದೆ, ಮುಂದೆ ಬೇಗ ಹಣ ಕೊಟ್ಟು ಅನುಕೂಲ ಮಾಡಿಕೊಡುವ ಹಾಗೆ ಮಾಡುತ್ತೇನೆ" ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಆದರೆ ಆರ್ಥಿಕ ಮಂತ್ರಿಗಳು ಹಠ, ಮಾರ್ಚಿಯೊಳಗೆ ಸ್ಕಾಲರ್‌ಷಿಪ್ ಕೊಟ್ಟಿರುವೆವು ಎಂದು ಹೇಳುತ್ತಾರೆ; ಈ ತರಹ ಅನ್ಯಾಯ ಕೆಲಸಕ್ಕೆ ಹೋಗಬೇಡಿ.

(ವಿಧಾನ ಸಭಾ ಕಲಾಪ- ದಿ. 7-3-1963)

# 4.ಆರೋಗ್ಯ ಶಿಕ್ಷಣ ಮತ್ತು ಆರೋಗ್ಯ ಇಲಾಖೆ ಕುರಿತು

## 1964

ಮಾನ್ಯ ಅಧ್ಯಕ್ಷಣೆಯವರೇ, ಈ ನಮ್ಮ ವೆಲ್‌ಫೇರ್ ಸ್ಟೇಟಿನಲ್ಲಿ ಮೊಟ್ಟ ಮೊದಲನೆಯ ಸ್ಥಾನವನ್ನು ಬಹಳ ಪ್ರಾಮುಖ್ಯವಾದ ಸ್ಥಾನವನ್ನು ಹೊಂದಿರುವ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಯ ಬೇಡಿಕೆಯ ಮೇಲೆ ನಾನು ಮಾತನಾಡಬೇಕೆಂದು ನಿಂತಿದ್ದೇನೆ. ರೋಗದಿಂದ ನರಳುವ ಜನಗಳಿಗೆ, ನೋವಿನಿಂದ ಒದ್ದಾಡುವ ಜನಗಳಿಗೆ, ಸಾವಿನೊಂದಿಗೆ ಹೋರಾಡುವುದಕ್ಕೆ ಅಶಕ್ತರಾದ ಜನಗಳಿಗೆ, ಪ್ರಾಣಭಿಕ್ಷೆಯನ್ನು ಕೊಡುವ, ನೋವನ್ನು ನಿವಾರಣೆ ಮಾಡುವ ಪ್ರಾಣ ಪಾರುಮಾಡುವ, ವೃತ್ತಿಯನ್ನು ಒಳಗೊಂಡಿರತಕ್ಕ ಈ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗೆ ಸುಮಾರು 7 1/2 ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಬೇಕೆಂದು ಹೊರಟ್ಟಿದ್ದೀರಿ. ನೀವು ಇಷ್ಟು ಭಾರೀ ಹಣವನ್ನು ಖರ್ಚು ಮಾಡುವಾಗ ಇದರ ಉದ್ದೇಶ ಎಷ್ಟರಮಟ್ಟಿಗೆ ಸಾಧನೆಯಾಗಿದೆ ಎಂದು ನೋಡುವುದಾದರೆ ಅದರ ಉದ್ದೇಶ ಹಾಗಿರಲಿ, ಇದು ವ್ಯಾಪಾರ ಉದ್ಯಮವಾಗಿದೆಯೆಂದು ಹೇಳಬೇಕಾಗಿದೆ. ಮೆಡಿಕಲ್ ಕಾಲೇಜಿನಲ್ಲಿ ಒಬ್ಬ ಹುಡುಗ ಫೀಜು ಕೊಡುವುದು ಒಂದು ವರ್ಷಕ್ಕೆ 720 ರೂಪಾಯಿಗಳು. ಸರ್ಕಾರದವರು ಒಬ್ಬ ಹುಡುಗನಿಗೆ ಖರ್ಚು ಮಾಡುವುದು ಒಂದು ವರ್ಷಕ್ಕೆ 3,500 ರೂಪಾಯಿಗಳು. ಎಂದರೆ ಒಬ್ಬ ಹುಡುಗ ಆಸ್ಪತ್ರೆಯಲ್ಲಿ ಡಾಕ್ಟರಾಗುವುದಕ್ಕೆ ಸರ್ಕಾರದವರು 20 ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ.ಇದು ಯಾರ ದುಡ್ಡು? ಆಮೇಲೆ ಅವನನ್ನು ಸ್ಪೆಷಲಿಸ್ಟ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು ಫಾರಿನ್ ಕಂಟ್ರಿಗೆ ಕಳುಹಿಸುತ್ತಾರೆ. ಇಲ್ಲಾ ಬೇರೆ ಇನ್ನು ಯಾವುದಾದರೂ ಕಾಲೇಜಿಗೆ ಕಳುಹಿಸಿಕೊಡುತ್ತಾರೆ. ಈ ದುಡ್ಡು ಎಲ್ಲವೂ ಯಾವುದು? ಬಡಬೋರೇಗೌಡನ ದುಡ್ಡು. ಈ ದುಡ್ಡಿನಲ್ಲಿ ಅವನು ಓದಿ ಪರೀಕ್ಷೆಗಳನ್ನು ಪಾಸು ಮಾಡಿಕೊಂಡು ಸ್ಪೆಷಲಿಸ್ಟ್ ಆಗಿ ಡಾಕ್ಟರಾಗಿ ಬರುವಾಗ ಅವರು ನಾವು ಪ್ರಿವಿಲೇಜ್ ಕ್ಲಾಸ್ ಎಂದು ತಿಳಿದುಕೊಂಡು ವಾಪಸ್ಸು ಬರುತ್ತಾರೆ. ಯಾವ ಆಸ್ಪೆತ್ರೆಗೆ ಹೋದರೂ ಕೂಡ ಎಲ್ಲರೂ ದುಡ್ಡು ಎಂದು ಕೇಳುತ್ತಿದ್ದಾರೆ. ಪ್ರತಿಯೊಬ್ಬರೂ ದುಡ್ಡನ್ನು ಕಲೆಕ್ಷನ್ ಮಾಡುವುದಕ್ಕೆ ತೊಡಗುತ್ತಾರೆ. ಯಾರಿಗೆ ಎಷ್ಟು ಸಂಬಳವನ್ನು ಕೊಟ್ಟರೂ ಸಾಕಾಗುವುದಿಲ್ಲ. ಅದು ಏನು ಕಾರಣವೋ ನನಗಂತೂ ಗೊತ್ತಾಗುವುದಿಲ್ಲ. ಆ ವಿಷಯದಲ್ಲಿ ನಾನು ಹೇಳಬೇಕಾದರೆ ನಾವು ಬರೀ ಆಸ್ಪತ್ರೆಗಳಿಗೆ ಸಂಬಂಧಪಟ್ಟ ಡಾಕ್ಟರುಗಳು ಮತ್ತು ಇತರೇ ನೌಕರರುಗಳನ್ನು ಬ್ಲೇಮ್ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.ಈ ರೀತಿ ನಡೆಯುವುದಕ್ಕೆ ಸರ್ಕಾರದ್ದೂ ಕಾರಣ ಇದೆ. ಇದಕ್ಕೆ ಕಾರಣ ಸರ್ಕಾರದ ಅಡ್ಮಿನಿಸ್ಟ್ರೇಷನ್ ಸ್ಲಾಕ್‌ನೆಸ್ ಎಂದು. ಹೇಳದೆ ವಿಧಿಯಿಲ್ಲ. ಈಗಾಗಲೇ ಶ್ರೀಮತಿ ರತ್ನಮ್ಮ ಮಾಧವರಾವ್ ಅವರು ಹೇಳಿದರು ನಮ್ಮ ಆರೋಗ್ಯ ಖಾತೆಯ ಮಂತ್ರಿಗಳು ತುಂಬಾ ಶಾಂತ ಮೂರ್ತಿಗಳಾಗಿದ್ದಾರೆ; ಅವರು ಸ್ವಲ್ಪ ಉಗ್ರರೂಪವನ್ನು ತಾಳಬೇಕು ಎಂದು. ಅದಕ್ಕೆ ನಾನು ಹೇಳುವುದು ಏನೆಂದರೆ ಅವರು ಉಗ್ರರೂಪವನ್ನು ತಾಳಬೇಕಾಗಿಲ್ಲ. ಎಲ್ಲಿ ಏನು ಮಾಡಬೇಕೋ ಅದನ್ನು ಮಾಡಿದರೆ ಎಲ್ಲವೂ ಸರಿಹೋಗುತ್ತದೆ ಎಂದು ನನ್ನ ಭಾವನೆ.

ಈಗ ನನ್ನ ಹತ್ತಿರ ಒಂದು ಗೌರ್ನಮೆಂಟ್ ಆರ್ಡರ್ ಇದೆ. ಬೇಕಾದರೆ ಅದನ್ನು ಕೊಡುತ್ತೇನೆ. ಅದರಲ್ಲಿ ಬಹಳ ಕಟ್ಟು ನಿಟ್ಟಾಗಿ ಹೇಳಿದ್ದಾರೆ. ಅದು ಏನೆಂದರೆ ಅಸೋಸಿಯೇಟೆಡ್ ಪ್ರೊಫೆಸರ್ಸ್ ಟೀಚಿಂಗ್ ಇನ್‌ಸ್ಟಿಟ್ಯೂಷನ್ ವರ್ಕ್‌ನಲ್ಲಿರುವವರು ಕನ್‌ಸಲ್ಟೇಷನ್ ಪ್ರಾಕ್ಟೀಸ್ ಏನೂ ಮಾಡಕೂಡದು ಎಂದು. ಆದರೆ ಅವರು ಏನು ಮಾಡುತ್ತಿದ್ದಾರೆಂದರೆ ಪ್ರತಿಯೊಬ್ಬರೂ ಆಸ್ಪತ್ರೆಯ ಚೀಟಿಗಳನ್ನು ಮನೆಯಲ್ಲಿಟ್ಟುಕೊಂಡು ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಆಸ್ಪತ್ರೆಗೆ ಬಂದ ರೋಗಿಗಳನ್ನು ಸರಿಯಾಗಿ ನೋಡುವುದಿಲ್ಲ. ಅವರನ್ನು ಆಸ್ಪತ್ರೆಯಲ್ಲಿ ನೆಗ್ಲೆಕ್ಟ್ ಮಾಡಿ ಅವರನ್ನು ಮನೆಗೆ ಬರುವ ಹಾಗೆ ಮೆನೋವರ್ ಮಾಡಿಕೊಂಡು ಜನತೆಗೆ ಅವರಿಗೆ ದುಡ್ಡು ಕೊಡುವ ಹಾಗೆ ಮಾಡಿಕೊಳ್ಳುತ್ತಾರೆ. ನಾನು ಸರ್ಕಾರವನ್ನು ಕೇಳುತ್ತೇನೆ. ಅವರು ಪ್ರೈವೇಟ್ ಕನ್‌ಸಲ್ಟೇಷನ್ ಪ್ರಾಕ್ಟೀಸ್ ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಅವಕಾಶವನ್ನು ಕೊಡಬೇಕು? ಸರ್ಕಾರದವರು ಅವರಿಗೆ ಸಾಕಷ್ಟು ಸಂಬಳವನ್ನು ಕೊಟ್ಟು ಮೇಲೆ ಅವರು ಸರ್ಕಾರದ ರೂಲ್ಸ್ ಪ್ರಕಾರ ಕಟ್ಟುನಿಟ್ಟಾಗಿ ಇರಬೇಕು. ಯಾರೇ ಆಗಲಿ ಒಂದು ಸಾರಿ ಸರ್ಕಾರದ ಕೆಲಸಕ್ಕೆ ಬಂದ ಮೇಲೆ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳಲೇಬೇಕು. ಒಂದು ವೇಳೆ ಅವರು ಆ ರೀತಿ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳದೇ ಹೋದರೆ ಅವರಿಗೆ ಶಿಕ್ಷೆಯನ್ನು ವಿಧಿಸಬೇಕು. ಇಲ್ಲದೇ ಹೋದರೆ ಅವರು ಅವರ ಮನಸ್ಸಿಗೆ ಬಂದಹಾಗೆ ನಡೆದುಕೊಂಡು ಹೋಗುತ್ತಾರೆ. ಸರ್ಕಾರಿ ಆಸ್ಪತ್ರೆ ಗಳಲ್ಲಿ ಡಾಕ್ಟರಾಗತಕ್ಕವರಿಗೆ ನಾನಾವಿಧವಾದ ಸೌಲಭ್ಯಗಳು ದೊರೆಯುತ್ತವೆ. ಸರ್ಕಾರದವರು ಅವರನ್ನು ಫಾರಿನ್ನಿಗೆ ಕಳುಹಿಸುತ್ತಾರೆ. ಅವರಿಗೆ ಸ್ಟಡಿ ಲೀವವನ್ನು ಕೊಡುತ್ತಾರೆ. ಮೆಟರ್ನಿಟಿ ಲೀವನ್ನು ಕೂಡುತ್ತಾರೆ. ಆಮೇಲೆ ಅವರು ರಿಟೈರ್ಡ್ ಆದ ಮೇಲೆ ಪೆನ್‌ಷನ್ ಕೊಡುತ್ತಾರೆ. ಈ ರೀತಿ ಅವರಿಗೆ ನಾನಾ ವಿಧವಾದ ಸೌಲಭ್ಯಗಳು ದೊರೆಯುತ್ತವೆ. ಸರ್ಕಾರಿ ಆಸ್ಪತ್ರೆಗಳನ್ನು ನರ್ಸಿಂಗ್ ಹೋಮ್ ಮಾಡಿ ಕೊಂಡು ಬೆಡ್‌ಗಳು, ಆಪರೇಷನ್ ಥಿಯೇಟರ್ಸ್, ಎಕ್ಸರೇ ಫೆಸಿಲಿಟೀಸ್, ಔಷಧಿ ಇತ್ಯಾದಿ ಎಲ್ಲಾ ಸೌಲಭ್ಯಗಳನ್ನೂ ತಮ್ಮ ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಪ್ರೈವೇಟ್ ನರ್ಸಿಂಗ್ ಹೋಮ್ ಮಾಡಿಕೊಂಡು ಆಸ್ಪತ್ರೆಯ ಸಾಮಾನುಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅದನ್ನು ತಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. 5 ರೂಪಾಯಿ ಕೊಟ್ಟು ಒಂದು ಸಿರಂಜ್‌ನ್ನು ಕೂಡ ಇವರು ಕೊಂಡುಕೊಳ್ಳುವುದಿಲ್ಲ. ಇಷ್ಟೆಲ್ಲಾ ಸೌಲಭ್ಯಗಳನ್ನೂ ಮತ್ತು ಆ ಸಾಮಾನುಗಳನ್ನೂ ಅವರು ತಮ್ಮ ಸ್ವಂತ ಉಪಯೋಗಕ್ಕೆ ಇಟ್ಟುಕೊಳ್ಳಲು ಅವುಗಳನ್ನೇನಾದರೂ ಅವರು ಭೋಗ್ಯಕ್ಕೆ ಹಾಕಿ ಕೊಂಡಿದ್ದಾರೆಯೆ? ಇವೆಲ್ಲವೂ ಸರ್ಕಾರದವರ ದೃಷ್ಟಿಗೆ ಏತಕ್ಕೆ ಬಂದಿಲ್ಲ? ಯಾರಾದರೂ ಅವರನ್ನು ವಿಚಾರ ಮಾಡಿದರೆ ನಾವು ಸ್ಪೆಷಲೈಜ್ ಮಾಡಿಕೊಂಡು ಬರಲಿಲ್ಲವೇ ಎಂದು ಉದ್ಧಟತನದ ಜವಾಬನ್ನು ಕೊಡುತ್ತಾರೆ. ಈಗ ಬೊಂಬಾಯಿನಲ್ಲಿ ಆನರರಿ ಸರ್ಜನ್ ಆಗಿ ಆಸ್ಪತ್ರೆಯಲ್ಲಿ ಇರುವುದನ್ನು ನೋಡಿರಿ. ಟೀಚಿಂಗ್ ಮತ್ತು ವರ್ಕ್‌ಕಿಂಗ್ ಸ್ಟಾಫ್ ಎಲ್ಲಾ ಆನರರೀ ದೊಡ್ಡ ದೊಡ್ಡ ಡಾಕ್ಟರುಗಳನ್ನು ಸರ್ಕಾರದವರು ಆನರರಿ ಆಗಿ ವರ್ಕ್ ಮಾಡಲು ಕರೆಯುವುದು ಆನರ್ ಎಂದು ತಿಳಿದಿಲ್ಲ.ಡಾಕ್ಟರ್‌ಗಳು ತಾವು ಕೆಲಸ ಮಾಡುವುದು ಗೌರವ ಎಂದು ಕೊಂಡಿದ್ದಾರೆ. ಇಲ್ಲಿಯ ಹಾಗೆ ಹೊಟ್ಟೆಗಿಲ್ಲದೆ, ಕೆಲಸವಿಲ್ಲದೆ ಅವರಿಗೆ ಬೇಕಾದ ಡಾಕ್ಟರ್‌ಗಳು ಬರುತ್ತಾರೆ ಎಂದು ತಿಳಿದಿದ್ದಾರೆ. ಇಲ್ಲೂ ಹಾಗೆ ಸರ್ಕಾರಿ ಡಾಕ್ಟರ್‌ಗಳಿಗೆ ಎಫಿಷಿಯನ್ಸಿ ಇದ್ದರೆ ರಿಜೈನ್ ಮಾಡಿ ಹೋಗಲೀ ಯಾರು ಬೇಡ ಎಂದು ಹೇಳಿದ್ದಾರೆ? ಇವರೂ ಆನರರಿ.

ಸರ್ಜನ್ ಆಗಿ ಕೆಲಸ ಮಾಡಿ ತಮ್ಮ ಷೋ ತೋರಿಸಲಿ. ಅದು ಬಿಟ್ಟು ಸರ್ಕಾರಿ ಹಣ, ಸಂಬಳ, ಕೆಲಸ ತೆಗೆದುಕೊಂಡು ಬಡ ರೋಗಿಗಳನ್ನು ನೆಗ್ಲೆಕ್ಟ್ ಮಾಡುವುದು ಸರಿಯೇ? ಬಡ ರೈತರು ಕೊಡತಕ್ಕ ಕಂದಾಯದಿಂದ ಆಸ್ಪತ್ರೆಗೆ ಸಾಮಾನುಗಳನ್ನು ತಂದಿದ್ದರೆ ಅವುಗಳನ್ನು ಇವರು ತಮ್ಮ ಸ್ವಂತಕ್ಕೆ ಏತಕ್ಕೆ ಉಪಯೋಗ ಮಾಡಿಕೊಳ್ಳಬೇಕು. ಆಸ್ಪತ್ರೆಗೆ ಬಂದ ರೋಗಿಗಳನ್ನು ಸರಿಯಾಗಿ ನೋಡದೆ ಅವರು ತಮ್ಮ ಮನೆಗೆ ಬರುವ ಹಾಗೆ ಮಾಡಿಕೊಂಡು ಅವರಿಂದ ದುಡ್ಡನ್ನು ತೆಗೆದುಕೊಳ್ಳುವುದು ಯಾವ ಧರ್ಮ ಎಂದು ನಾನು ಕೇಳುತ್ತೇನೆ.ನಿಜವಾಗಿಯೂ ಇದನ್ನು ನೋಡಿದರೆ ಸಹಿಸಲಾರದಂತಹ ಸಂಕಟವಾಗುತ್ತದೆ.

ಆಸ್ಪತ್ರೆಗಳಲ್ಲಿ ದೊಡ್ಡ ಮನುಷ್ಯರಿಗಾದರೆ ಬೇಕಾದಷ್ಟು ಅನುಕೂಲತೆಗಳಿರುತ್ತವೆ. ಆದರೆ ಬಡವರಿಗೆ ಸರಿಯಾದ ಚಿಕಿತ್ಸೆ ದೊರೆಯುವುದಿಲ್ಲ. ಮಿಷನ್ ಆಸ್ಪತ್ರೆಗಳನ್ನು ಎಷ್ಟೋ ಚೆನ್ನಾಗಿ ನಡೆಸುತ್ತಾರೆ. ಆದರೆ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿಲ್ಲ. ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಅನುಕೂಲಸ್ಥರಾಗಿರತಕ್ಕವರು ಆಸ್ಪತ್ರೆಗಳಲ್ಲಿ ಕ್ಯೂನಲ್ಲಿ ನಿಂತುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಆಸ್ಪತ್ರೆಗಳಲ್ಲಿ ಅವರಿಗೆ ಪ್ರಿಸ್‌ಕ್ರಿಪ್‌ಷನ್ ಕೊಡುವುದಕ್ಕೆ ಕನ್ಸ್‌ಲ್ಟೇಷನ್‌ಗೋಸ್ಕರ ಒಂದು ಏಜನ್ಸಿ ಫಿಕ್ಸ್ ಮಾಡಿ. ಈ ಸೆಕ್ರೆಟರಿ ಡಾಕ್ಟರುಗಳನ್ನು ನೇಮಿಸಿ ಒಂದು ದಿವಸಕ್ಕೆ ಎರಡು ಗಂಟೆ ಮೂರು ಗಂಟೆಯಂತೆ ಆ ಕನ್‌ಸಲ್ಟೇಷನ್ ಪ್ರಾಕ್ಟೀಸ್ ನಡೆಸಿ ಅದರಿಂದ ಬಂದ ದುಡ್ಡನ್ನು ಸರ್ಕಾರಕ್ಕೆ ಡಿಪಾಜಿಟ್ ಮಾಡಬೇಕೆಂದು ಹೇಳಿದರೆ ಆಗ ಸರ್ಕಾರದವರು ಒಬ್ಬರು ಡಾಕ್ಟರಿಗೆ ಅವರ ವಿದ್ಯಾಭ್ಯಾಸಕ್ಕೋಸ್ಕರ ಖರ್ಚು ಮಾಡಿರತಕ್ಕ 20 ಸಾವಿರ ರೂಪಾಯಿಗಳಾದರೂ ಸರ್ಕಾರಕ್ಕೆ ವಾಪಸ್ಸು ಬರುತ್ತದೆ. ಗೌರ್ನಮೆಂಟ್ ಶುಡ್ ಅರ್ನ್ ದಿ ಮನಿ ಬ್ಯಾಕ್. ಇದರಲ್ಲಿ ಎರಡು ವಾದವಿದೆ. ಹಾಸ್ಪೆಟಲ್‌ನಲ್ಲೂ ಕೆಲಸಮಾಡಿ, ಮನೆಯಲ್ಲೂ ಪ್ರಾಕ್ಟೀಸ್ ಮಾಡಲು ಶಕ್ತಿ ಅವರಿಗಿದೆ ಎಂದು ಕೆಲವರವಾದ. ನಾನಾದರೂ ಅವರಿಗೆ ಹೇಳುವುದೇನೆಂದರೆ, ಇವರೂ ಮನುಷ್ಯ ಮಾತ್ರದವರು. ಇವರು ದೇವಲೋಕದಿಂದ ಇಳಿದು ಬಂದಿಲ್ಲ. ಇವರು ಹಾಗೇ ವಿಪರೀತ ಕೆಲಸ ಮಾಡಿ ಶಕ್ತಿಗುಂದಬಾರದು, ಅವರೂ ರೆಸ್ಟ್ ತೆಗೆದುಕೊಳ್ಳಬೇಕು. ವಿ. ಶುಡ್ ನಾಟ್ ಅಲೋ ದೆಮ್ ಬಿಕಾಸ್ ದೇ ಆರ್ ಅನ್ ಅಸೆಟ್ ಟು ಅವರ್ ಕನ್‌ಟ್ರೀ, ವಿ ಕೆನಾಟ್ ಆಫರ್ಡ್ ಟು ಲೂಸ್ ದೆಮ್. ಆದ್ದರಿಂದ ಅವರುಗಳು ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದು ಎಂದು ಸರ್ಕಾರದವರು ಹೇಳಬೇಕು.

ಹೀಗೆಯೇ ನಾವು ಹೇಳುತ್ತಾ ಬಂದರೆ ಇವರು ನಮಗೆ ಕನ್ಸ್‌ಲ್ಟೇಷನ್ ಪ್ರಾಕ್ಟೀಸ್ ಬೇಕು, ದುಡ್ಡು ಬೇಕು ಎಂದು ಕೇಳುತ್ತಾರೆಂದು ಇಟ್ಟುಕೊಳ್ಳೋಣ. ಹಾಗಾದರೆ ಸರ್ಕಾರದಲ್ಲಿ ಡಿಸ್ಕ್ರೀಮಿನೇಟ್ ಮಾಡಿದ ಹಾಗಾಗುತ್ತದೆ. ಅವರಿಗೆ ಆ ತರಹ ಸೌಲಭ್ಯವನ್ನು ಕೊಟ್ಟರೆ ಬಾಕಿ ಸರ್ಕಾರಿ ನೌಕರರಿಗೂ ಕೊಡಬೇಕು. ರಾಜ್ಯದಲ್ಲಿ ಇಂಜಿನಿಯರುಗಳಿದ್ದಾರೆ. ಪ್ರೊಫೆಸರುಗಳಿದ್ದಾರೆ, ಆಡಿಟರುಗಳಿದ್ದಾರೆ, ಜಡ್ಜಿಗಳಿದ್ದಾರೆ, ಇತರರಿದ್ದಾರೆ. ಅವರವರ ವೃತ್ತಿಯಲ್ಲಿ ಅವರವರು ಪ್ರವೀಣರು. ಇಂಜಿನಿಯರುಗಳು ಕೆಲಸದ ವೇಳೆ ಮುಗಿದನಂತರ ಕಂಟ್ರಾಕ್ಟ್ ಮಾಡಿಕೊಳ್ಳುತ್ತೇವೆಂದೂ, ಎಲ್ಲಿಯಾದರೂ ಹೋಗಿ ಪಾಠ ಹೇಳಿಕೊಂಡು ಸಂಪಾದನೆ ಮಾಡುತ್ತೇವೆಂದೂ ಆಡಿಟರುಗಳು ಖಾಸಗಿ ಕಂಪೆನಿಗಳಲ್ಲಿ ಕೆಲಸ ಮಾಡುತ್ತೇವೆಂದು ಹೇಳುತ್ತಾರೆ.

ಇದು ಏಕೆ ಆಗ ಬಾರದು, ನ್ಯಾಯಾಧೀಶರೂ ಜಡ್ಜ್‌ಮೆಂಟ್ ಕೊಟ್ಟಾದ ಮೇಲೆ ಪ್ರಾಕ್ಟೀಸ್ ಮಾಡುತ್ತೇವೆಂದರೆ ಏಕೆ ಆಗಬಾರದು, ಹೀಗಿರುವಾಗ ಡಾಕ್ಟರುಗಳದು ಮಾತ್ರ ಯಾವ ತರಹ ಪ್ರಿವಿಲೇಜ್ಡ್ ಕೆಲಸ ಎನ್ನುವುದು ನನಗೆ ಗೊತ್ತಿಲ್ಲ. ಸತ್ತು ಬೀಳುವ ಪರಿಸ್ಥಿತಿಯಲ್ಲಿ ಕೇಳಿಕೊಂಡು ಬರುವಂಥ ಜನರ ಮೇಲೆ ಇವರು ವ್ಯಾಪಾರ ಮಾಡುತ್ತಾರೆಂದರೆ ಇದು ನಿಜವಾಗಿಯೂ ನಾಚಿಕೆ ಬರುವಂಥ ವಿಚಾರ. ಹಾಸ್ಯಾಸ್ಪದವಾದ ವಿಚಾರವೆಂದು ಹೇಳುತ್ತಿದ್ದೇನೆ.

ಹಿಂದಿನ ಕಾಲದಲ್ಲಿ ಅಶ್ವಿನೀಕುಮಾರರು ಹಣ ತೆಗೆದುಕೊಳ್ಳದೆ ಚಿಕಿತ್ಸೆ ಮಾಡಿ ಔಷಧಿಕೊಟ್ಟರೆ ಆಗ ಹಸ್ತ ಶುದ್ಧಿ ಇರುತ್ತದೆಂದು ವೇದದಲ್ಲಿ ಬರೆದಿದೆ ಎಂದು ಹೇಳುತ್ತಾರೆ. ಆದರೆ ಈಗ ಯಾರಾದರೂ ಆಸ್ಪತ್ರೆಗೆ ಹೋಯಿತು ಎಂದರೆ ಹೋಗುತ್ತಿದ್ದ ಹಾಗೆಯೇ ದುಡ್ಡು ಕೊಡಿ, ದುಡ್ಡುಕೊಡಿ ಎಂದು ಯಾವ ಲಜ್ಜೆ ಇಲ್ಲ, ಮುಂದೆ ಬರುತ್ತಾರೆ. ದುಡ್ಡು ಕೊಡದೆ ಯಾರೂ ಯಾವ ಕೇಸನ್ನೂ ನೋಡುವ ಹಾಗೆಯೇ ಇಲ್ಲ.

ಟ್ರಾನ್ಸ್‌ಫರ್ ವಿಚಾರದಲ್ಲಿ ನಾನಾಗಲೇ ಹೇಳಿದ್ದೇನೆ. ಯಾರಾದರೂ ಮೈಸೂರು ಬೆಂಗಳೂರು, ಇಂಥ ಕಡೆ ಬಂದರೂ ಅವರು ಅಲ್ಲಿಂದ ಬೇರೆ ಕಡೆ ಹೋಗುವ ಹಾಗೆಯೇ ಇಲ್ಲ .ಮೈಸೂರು ಬೆಂಗಳೂರುಗಳನ್ನು ಗುತ್ತಿಗೆಗೆ ಕೊಟ್ಟಿದ್ದೀರಾ ಇವರಿಗೆ? ಶ್ರೀಮತಿ ರತ್ನಮ್ಮನವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್‌ನಲ್ಲಿ ಕತ್ತಿ ಹಿಡಿಯುವುದಕ್ಕೆ ಬರದೆ ಇರುವವರನ್ನು ಹಾಕುತ್ತಾರೆಂದು ಹೇಳಿದರು. ಎಫ್.ಆರ್.ಸಿ.ಎಸ್. ಓದಿ, ಸ್ಪೆಷಲೈಜ್ ಮಾಡಿಕೊಂಡು ಇರುವವರು ಜಿಲ್ಲೆಗಳಿಗೆ ಹೋಗಿ ಅಲ್ಲಿಯ ಜನಗಳಿಗೂ ಸ್ವಲ್ಪ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು. ಅವರು ಬೆಂಗಳೂರು, ಮೈಸೂರು ನಗರಗಳಲ್ಲಿ ಮಾತ್ರ ಏಕೆ ಇರಬೇಕು? ಇಲ್ಲಿರುವವರು ಆಸ್ಪತ್ರೆಗಳನ್ನು ಪ್ರೈವೇಟ್ ನರ್ಸಿಂಗ್ ಹೋಮ್ಸ್ ಮಾಡಿಕೊಳ್ಳುತ್ತಾರೆ. ನಮ್ಮ ಮಂತ್ರಿಗಳು ಹಿಂದೆ ಹೇಳಿದರು ಎಂ.ಎಲ್.ಎ ಆದವರು ಯಾರೂ ಇಂಟರ್‌ಫಿಯರ್ ಮಾಡಬಾರದು,ಎಲ್ಲರನ್ನೂ ವರ್ಗ ಮಾಡುತ್ತೇವೆ ಎಂದು. ಆದರೆ ಒಂದು ವರ್ಷವಾದರೂ ಯಾರನ್ನಾದರೂ ವರ್ಗಮಾಡಿದ್ದಾರೆಯೇ? ಎಲ್ಲೆಲ್ಲೂ ಅವರವರ ಸ್ಥಳದಲ್ಲಿಯೇ ಇದ್ದಾರೆ.

ರೆವೆನ್ಯೂ ಇಲಾಖೆಯಲ್ಲಿ ಒಂದು ಖಾತೆಯನ್ನೂ ಬೇರೆಯವರಿಗೆ ಬದಲಾಯಿಸಿ ಎಂದರೆ ಹತ್ತು ರೂಪಾಯಿ ಕೊಟ್ಟರೆ ಅದು ಲಂಚ, ಒಬ್ಬ ಉಪಾಧ್ಯಾಯರಿಗೆ ಪಾಠ ಹೇಳಿ ಎಂದು ಇಪ್ಪತ್ತೈದು ರೂಪಾಯಿ ಕೊಟ್ಟರೆ ಲಂಚ, ಆದರೆ ಡಾಕ್ಟರುಗಳು ತೆಗೆದುಕೊಳ್ಳುವುದು ಲಂಚವಲ್ಲದೆ ಮತ್ತೇನು?

AN HON'BLE MEMBER- Medical charges

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.- ಬೇರೆ ಬೇರೆ ಹೆಸರು ಕೊಡಬಹುದು. ಯಾರಿಗಾದರೂ ಸ್ಕಾಲರ್‌ಷಿಪ್ ಕೊಡಬೇಕು ಎಂದು ಕೇಳಿದರೆ ಮಾನ್ಯ ಸದಸ್ಯರು ಡೊನೇಷನ್ ಕೊಟ್ಟರೆ ಕೊಡುತ್ತೇವೆಂದು ಹೇಳುತ್ತಾರೆ. ಅಷ್ಟು ಲಘುವಾಗಿ ಉತ್ತರ ಕೊಡದೆ ಸರಿಯಾಗಿ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಎಕ್ಸರೇ ಉಪಕರಣಗಳನ್ನು ಎಷ್ಟೋ ಖರ್ಚು ಮಾಡಿ ಏಕೆ ತರಿಸುತ್ತಾರೆನ್ನುವುದು ನನಗೆ ಗೊತ್ತಾಗುವುದಿಲ್ಲ. ಮೊನ್ನೆ ಮಲ್ಲೇಶ್ವರಕ್ಕೆ ಹೋಗಿ ನೋಡಿಕೊಂಡು ಬಂದೆ. ಹಾಗೇಯೇ

ಮೈಸೂರಿನಲ್ಲಿಯೂ ಒಂದು ಎಕ್ವೀಪ್‌ಮೆಂಟ್ ಬಿದ್ದಿದೆ. ಯಾರಾದರೂ ಆಸ್ಪತ್ರೆಗೆ ಹೋದರೆ ಅದನ್ನು ಉಪಯೋಗಿಸಲು ಟೆಕ್ನೀಷಿಯನ್ಸ್ ಇಲ್ಲ ಎಂದು ಹೇಳುತ್ತಾರೆ. ಇವತ್ತಿನ ದಿವಸ ವರ್ಷಕ್ಕೆ 36 ಜನರನ್ನು ಟ್ರೈನ್ ಮಾಡುತ್ತೇವೆಂದು ಹೇಳುತ್ತಾರೆ. ಇವರೆಲ್ಲ ಎಲ್ಲಿಗೆ ಹೋಗುತ್ತಾರೆ, ಏನು ಎನ್ನುವುದನ್ನು ಸ್ವಲ್ಪ ದಯಮಾಡಿ ಹೇಳಬೇಕು.

ನಾನು ಒಂದು ಸ್ಟಾರ್ಡ್ ಕ್ವಶ್ಚನ್ ಕಳಿಸಿ, ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಬೆಡ್ ಸ್ಟ್ರೇನ್ತ್ ಎಷ್ಟಿದೆ, ಸಿಬ್ಬಂದಿ ಎಷ್ಟಿದೆ ಎಂದು ಎಲ್ಲ ಕೇಳಿದ್ದೇನೆ. 1962ರಲ್ಲಿ 336 ಬೆಡ್ ಸ್ಟ್ರೇನ್ತ್ ಇದ್ದುದು ಈಗ ಸುಮಾರು 650-700 ಜನರಿದ್ದಾರೆ. ಆ ಹೊತ್ತು ನರ್ಸಿಂಗ್ ಸ್ಟಾಫ್ ಎಷ್ಟು ಇತ್ತು ಇವತ್ತೋ ಅಷ್ಟೇ ಇದೆ. ಇವರು 650-700 ಜನ ರೋಗಿಗಳು ಇದ್ದಾರೇನೆ ನೋಡಿಕೊಳ್ಳುವುದು ಕಷ್ಟವಾಗುವಾಗ 750 ಜನ ರೋಗಿಗಳನ್ನು ಒಂದೇ ಸಮನಾಗಿ 27 ಜನ ಸ್ಟಾಫ್ ನರ್ಸ್ ಮತ್ತು 119 ಜನ ಪ್ರೊಬೇಷನರಿ ನರ್ಸ್‌ಗಳು ಇದ್ದರೆ ನೋಡಿಕೊಳ್ಳುವುದಕ್ಕೆ ಸಾಧ್ಯವೆ? ಅದೇ ಬೆಂಗಳೂರು ಆಸ್ಪತ್ರೆಗಳಲ್ಲಿ ಬೇಕಾದಷ್ಟು ಜನರಿದ್ದಾರೆ. ಇವರನ್ನೂ ಕೆಲವರನ್ನು ಅಲ್ಲಿಗೆ ಬದಲಾಯಿಸಿ ಕೆಲಸ ಮಾಡಿಸಬಹುದು. ಅಷ್ಟು ಕೂಡ ಈ ಆಡಳಿತದಲ್ಲಿ ನಡೆಯುವುದಿಲ್ಲವೆ? ಇದನ್ನು ಸರಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ? ಇದನ್ನೂ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಹೊತ್ತು 890ಜನ ನರ್ಸ್‌ಗಳಿಗೆ ತರಬೇತಿ ಕೊಡುತ್ತಿದ್ದೇವೆಂದು ಹೇಳುತ್ತಾರೆ. ಹೀಗೆ ಟ್ರೈನ್ ಮಾಡಿದವರನ್ನೆಲ್ಲ ಎಲ್ಲಿಗೆ ಕಳಿಸುತ್ತೀರಿ? ಇಷ್ಟು ಖರ್ಚು ಮಾಡಿ ಟ್ರೈನ್ ಮಾಡಿದವವರ ಕಥೆ ಏನಾಗುತ್ತದೆಂದು ಸ್ವಲ್ಪ ಹೇಳಿ.

ಯಾವ ಆಸ್ಪತ್ರೆಯಲ್ಲಿಯೂ ನರ್ಸ್, ಆಯಾ, ಆಳು ಮತ್ತು ಸಾಕಾದಷ್ಟು ಮ್ಯಾನ್ಯುಯಲ್ ಸ್ಟಾಫ್ ಇಲ್ಲ. ಬೆಡ್ ಪ್ಯಾನ್ ಕೊಟ್ಟರೆ ಅದನ್ನು ತೆಗೆಯುವವರೇ ಗತಿ ಇಲ್ಲ. ರೋಗಿಗಳು ಸತ್ತು ಹೋಗುವವರೆಗೂ ಕೂಗಿಕೊಳ್ಳುವಂತಾದರೆ ಹೇಗೆ? ಹೀಗಾದರೆ ಇದಕ್ಕೆ ಆಸ್ಪತ್ರೆ ಎಂದು ಏಕೆ ಹೇಳುತ್ತೀರೋ ನನಗೆ ಅರ್ಥವಾಗುತ್ತಿಲ್ಲ. ನಮ್ಮ ಮಂತ್ರಿಗಳು ಡಾಕ್ಟರಾಗಿದ್ದುಕೊಂಡು ಡಾಕ್ಟರೇ ಆರೋಗ್ಯ ಮಂತ್ರಿಗಳಾದ ಮೇಲೆ ಸಹ ಈ ರೀತಿ ನಡೆಯುತ್ತಿದೆ.ಇದನ್ನು ಕೂಡಲೇ ಸರಿಪಡಿಸುವರೆಂದು ನಾನು ತಿಳಿಯುತ್ತೇನೆ.

ಸ್ಯಾನಿಟೋರಿಯಂ ವಿಚಾರ ಹೇಳುವುದಾದರೆ, ಮೈಸೂರು ಸ್ಯಾನೆಟೋರಿಯಂನಲ್ಲಿ, ಲಿಸ್ಟ್ ಯಾವಾಗಲೂ ಎಕ್ಸಾಸ್ಟ್ ಆಗುವುದಿಲ್ಲವೆಂದು ಕಾಣುತ್ತದೆ. ಕೆಲವು ಅಡ್ವನ್ಸ್‌ಡ್ ಕೇಸಸ್ ಹೋಗಿ ಸೇರಿಸಿ ಎಂದರೆ ಅವರು ಹೇಳುತ್ತಾರೆ. ಇಂಥ ಹಳೆಯ ರೋಗಿಗಳಿಗಿಂತ ಸ್ವಲ್ಪ ವಾಸಿಯಾದವರನ್ನು ತೆಗೆದುಕೊಂಡರೆ ಎಷ್ಟೋ ಅನುಕೂಲ ಎಂದು. ಹಾಗಾದರೆ ಅಡ್ವಾನ್ಸ್‌ಡ್ ಕೇಸಸ್ ಏನು ಮಾಡಬೇಕು. ಅವರುಗಳು ಮನೆಗೆ ಹೋಗಿ ಇನ್ನು 20 ಜನಗಳಿಗೆ ರೋಗವು ಹರಡುತ್ತದೆ. ಆಸ್ಪತ್ರೆಯಲ್ಲಿಟ್ಟುಕೊಳ್ಳುವುದಕ್ಕೆ ಜಾಗವಿಲ್ಲವೆಂದು ಹೇಳುತ್ತಾರೆ. ಸರ್ಕಾರದವರು ಎಲ್ಲಿಯಾದರೂ ಹೇಗಾದರೂ ಮಾಡಿ ಇ.ಡಿ.ಹಾಸ್ಪೆಟಲ್‌ನಲ್ಲಾದರೂ ಇಂಥ ರೋಗಿಗಳಿಗೆ ಜಾಗ ಕೊಟ್ಟು ಸಾಯುವವರೆಗಾದರೂ ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಮೈಸೂರಿನಲ್ಲಿರುವ ವಾಣಿ ವಿಲಾಸ ವಾಟರ್‌ವರ್ಕ್ಸ್ ವಿಷಯ ಹೇಳಲು ನಾಚಿಕೆಯಾಗುತ್ತದೆ. ಮೈಸೂರು ನಗರದಲ್ಲಿ ಹಾಫ್ ಫಿಲ್ಟ್ರೆಡ್ ವಾಟರ್ ಸಪ್ಲೆ ಮಾಡುತ್ತಿದ್ದಾರೆ.

ಯಾವ ಕಾಲದಿಂದಲೂ ಹೀಗೆ ಇರಲಿಲ್ಲ. ನಮ್ಮ ರಾಜ್ಯ, ಅದರ ಅಡ್ವಾನ್ಸ್‌ಮೆಂಟ್ ನೋಡಿದರೆ ನಿರ್ವಾಹವಿಲ್ಲ. ನಮ್ಮ ಸರ್ಕಾರದವರು ತಕ್ಷಣ ಕ್ರಮ ತೆಗೆದುಕೊಂಡು ಶುದ್ಧವಾದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ರತ್ನಮ್ಮನವರು ಮೆಡಿಕಲ್ ಕಾಲೇಜು ವಿಚಾರ ಹೇಳಿದರು. ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಿಗಳೂ ಅಷ್ಟು ಒಳ್ಳೆಯ ಅಭಿಪ್ರಾಯವನ್ನು ನಮ್ಮ ಕಾಲೇಜು ವಿಷಯದಲ್ಲಿ ಕೊಟ್ಟಿಲ್ಲ, ಆದುದರಿಂದ ನಮ್ಮ ಮೆಡಿಕಲ್ ಕಾಲೇಜಿನ ಮಟ್ಟವನ್ನು ಹೆಚ್ಚಿಸಿ ಅದನ್ನು ಪರಿವರ್ತನೆ ಮಾಡಿ ಅದಕ್ಕೆ ಮಾನ್ಯತೆ ದೊರೆಯುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಆಸ್ಪತ್ರೆಗಳಿಗೆ ಕೊಡುವ ಖಾದಿ ಬಟ್ಟೆಯ ವಿಚಾರ, ಖಾದಿ ಬಟ್ಟೆಯನ್ನು ಆಸ್ಪತ್ರೆಗಳಿಗೆ ಕೊಡಬಾರದು ಎಂದರೆ ನಮಗೆ ದೇಶಭಿಮಾನವಿಲ್ಲ ಎಂದಲ್ಲ. ಅಥವಾ ಖಾದಿಯನ್ನು ಉಪಯೋಗಿಸಬಾರದು ಎಂದಲ್ಲ. ಖಾದಿ ಬಟ್ಟೆ ನಾಲ್ಕು ಸಲ ಡೋಭಿಗೆ ಹೋದರೆ ಅದು ಬಟ್ಟೆಯಾಗಿರುವುದಿಲ್ಲ. ಹಂಜಿಯಾಗಿರುತ್ತದೆ. ಅಂಥ ಹಂಜಿಯನ್ನು ಇಟ್ಟುಕೊಂಡು ಆಸ್ಪತ್ರೆಯಲ್ಲಿ ಸುಧಾರಿಸಬೇಕು ಎಂದರೆ ಅದರಲ್ಲಿ ಹತ್ತಿಕೊಂಡಿರುವ ಕಶ್ಮಲಗಳು ಒಂದು ಸಲ ಒಗೆಯುವ ಕಡೆ ಹತ್ತು ಸಲ ಒಗೆದರೂ ಹೋಗುವುದಿಲ್ಲ. ಹಾಗೆಯೇ ಇರುತ್ತದೆ, ಆ ಬಟ್ಟೆಗಳನ್ನು ಆಸ್ಪತ್ರೆಗಳಿಗೆ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಸಾಕಾದಷ್ಟು ಬೇಗ ಅಚ್ಚುಕಟ್ಟಾಗಿರುವ ಗಟ್ಟಿಯಾದ ಬಟ್ಟೆಯನ್ನು ಆಸ್ಪೆತ್ರೆಗೆ ದಯಮಾಡಿ ಕೊಡಬೇಕೆಂದು ಹೇಳುತ್ತೇನೆ.

ವಿಸಿಟರ್ಸ್ ಬೋರ್ಡ್ ವಿಚಾರ ಹೇಳುವುದಾದರೆ ಮೈಸೂರಿನ ಚೆಲುವಾಂಬ ಆಸ್ಪತ್ರೆ, ಕೃಷ್ಣರಾಜೇಂದ್ರ ಆಸ್ಪತ್ರೆ ಇವುಗಳಿಗೆ ಹೋದ ವರ್ಷದಿಂದ ವಿಸಿಟರ್ಸ್ ಬೋರ್ಡ್‌ನೇಮಕ ಮಾಡದೆ ಹಾಗೆಯೇ ತಳ್ಳಿದ್ದಾರೆ. ಇಂಥವು ಎಷ್ಟೋ ಮಾನ್ಯ ಮಂತ್ರಿಗಳ ಗಮನಕ್ಕೆ ಬರದೆ ಹಾಗೆಯೇ ನಡೆದುಕೊಂಡು ಹೋಗುತ್ತಿದೆ. ಇಂಥವನ್ನು ತಪ್ಪಿಸಬೇಕಾದರೆ ಮಂತ್ರಿಗಳು ಸ್ವಲ್ಪ ಭಯೋತ್ಪಾದನೆಯನ್ನು ಮಾಡಬೇಕು. ಈ ಸಂದರ್ಭದಲ್ಲಿ ನಾನು ಒಂದು ಕಥೆಯನ್ನು ಹೇಳುತ್ತೇನೆ. ನಾಗಪ್ಪ ಎಂಬ ಒಂದು ನಾಗರ ಹಾವು ಇತ್ತು. ಅದು ತಪಸ್ಸು ಮಾಡಿತಂತೆ. ಪರಮೇಶ್ವರನು ಪ್ರತ್ಯಕ್ಷನಾಗಿ ಹೇಳಿದನಂತೆ ನೀನು ಒಳ್ಳೆಯವನಾಗಿ ಬಾಳು ಯಾರಿಗೂ ಕಷ್ಟ ಕೊಡಬೇಡ ಯಾರಿಗೂ ತೊಂದರೆ ಕೊಡಬೇಡ ಯೋಗ್ಯನಾಗಿರು ಎಂದು. ಸರಿ ಈ ಹಾವು ಸುಮ್ಮನೆ ಮಲಗಿತ್ತಂತೆ. ಯಾವಾಗ ಇದು ಇಷ್ಟು ಸದರವಾಯಿತೋ ಎಲ್ಲರೂ, ಹೋಗಿ ಬರುವವರೆಲ್ಲ ತುಳಿಯುವುದು,ಕಲ್ಲು ಒಗೆಯುವುದು ಹೊಡೊಯುವುದು ಹೀಗೆ ಹಿಂಸೆ ಮಾಡಲು ಶುರುಮಾಡಿದರಂತೆ, ಹೀಗೆ ತೊಂದರೆಗೆ ಒಳಗಾದ ಹಾವು ನಾಗಪ್ಪ ಪುನಃ ಪರಮೇಶ್ವರನನ್ನು ಕುರಿತು ತಪ್ಪಸ್ಸುಮಾಡಿತಂತೆ, ಹೋಗಿ ಬರುವ ಜನರೆಲ್ಲ ನನ್ನನ್ನು ತುಳುಯುತ್ತಾರೆ, ಕಲ್ಲು ಹೊಡೆಯುತ್ತಾರೆ, ಮುಂತಾಗಿ ಹಿಂಸೆ ಮಾಡುತ್ತಾರೆ. ಹಾಗೆ ಅವರು ಮಾಡದಂತೆ ಮಾಡಬೇಕೆಂದು ಮತ್ತೆ ತಪ್ಪಸ್ಸು ಮಾಡಿ ನನ್ನನ್ನು ಕಾಪಾಡು ಎಂದಿತಂತೆ. ಆಗ ದೇವರು ಹೇಳಿದನಂತೆ, ಹಾಗೆ ಸುಮ್ಮನಿರಬಾರದು, ಬುಸ್ ಎನ್ನುವುದನ್ನಾದರೂ ಕಲಿ, ಆಗ ಜನ ಹೆದರುತ್ತಾರೆ ಎಂದು. ಹಾಗೆ ಬುಸುಗುಟ್ಟುವುದನ್ನಾದರೂ ಕಲಿತರೆ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತವೆ.

ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ವಿಧಾನ ಸಭಾ ಕಲಾಪ- ದಿ: 12-3-1964)

# 5. ಕೈಗಾರಿಕೆಗಳ ಸ್ಥಾಪನೆ ಬಗ್ಗೆ

## 1964

ಮಾನ್ಯ ಅಧ್ಯಕ್ಷಣೆಯರೇ ಈ ಇಂಡಸ್ಟ್ರೀಸ್ ಡಿಮ್ಯಾಂಡುಗಳ ಮೇಲೆ ಮಾತನಾಡುವ ಸಂದರ್ಭದಲ್ಲಿ ನಾನು ನನ್ನ ಕೆಲವು ವಿಚಾರಗಳನ್ನು ಈ ಸಭೆಯ ಮುಂದಿಡಬೇಕೆಂದು ನಿಂತಿದ್ದೇನೆ. ಈಗ ತಾನೆ ನಮ್ಮ ಶ್ರೀ ಶಿವಪ್ಪನವರೂ ಮತ್ತು ಶ್ರೀ ಮಾದಯ್ಯಗೌಡರೂ ಹೇಳಿದ ಹಾಗೆ ನಮ್ಮ ಮೈಸೂರು ದೇಶ ಈ ಕೈಗಾರಿಕೆಗಳಲ್ಲಿ ಬಹಳ ಮುಂದುವರಿದ ದೇಶವಾಗಿತ್ತು. ಆದರೆ ಈಗ ಇದು ಬಹಳ ಹಿಂದು ಹಿಂದಕ್ಕೆ ಹೋಗುತ್ತಿದೆಯೆಂದು ವ್ಯಸನಪಡತಕ್ಕವರಲ್ಲಿ ನಾನೂ ಕೂಡ ಒಬ್ಬಳಾಗಿದ್ದೇನೆ. ಆದರೆ ಈಗತಾನೇ ಮಾತನಾಡಿದ ಶ್ರೀಟಿ. ಮಾದಯ್ಯಗೌಡರು ಈಗೀಗ ನಮ್ಮಲ್ಲಿ ಕೆಲವು ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿವೆಯೆಂದು ಅವರೇನೂ ಒಂದು ರೀತಿಯಲ್ಲಿ ಸ್ವಲ್ಪ ಮಟ್ಟಿಗೆ ಸಮಾಧಾನವನ್ನು ಮಾಡಿಕೊಂಡರು. ಆದರೆ ನಾನು ಅವರ ಹಾಗೆ ಸಮಾಧಾನಪಟ್ಟುಕೊಳ್ಳುವ ಹಾಗಿಲ್ಲ. ಇವುಗಳ ಅಭಿವೃದ್ಧಿ ಹಿಂದು ಹಿಂದಕ್ಕೆ ಹೋಗುತ್ತಿದೆ ಎಂಬ ಶಬ್ದಕ್ಕಿಂತಲೂ ಇನ್ನೊಂದು ಶಬ್ದವಿದ್ದರೆ ಅದನ್ನೂ ಕೂಡ ಬಳಸಬಹುದು, ಅಂದರೆ ಇದು ಅಷ್ಟು ಹಿಂದಕ್ಕೆ ಹೋಗುತ್ತಿದೆ ಎಂದು ಹೇಳಬಹುದು. ಆದರೆ ಈ ಹಿಂದೆ ಚರ್ಚೆ ನಡೆದ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಕಾಲದಲ್ಲೂ ಮತ್ತು ಹಿಂದೆ ನಡೆದ ಬಡ್ಜೆಟ್ ಚರ್ಚೆಯ ಕಾಲದಲ್ಲೂ ನಾನು ನಮ್ಮಲ್ಲಿ ಈ ಅಲ್ಯೂಮಿನಿಯಂ, ಮತ್ತು ಸ್ಟೀಲ್ ಪ್ಲಾಂಟುಗಳ ಸ್ಥಾಪನೆಯ ವಿಚಾರ ಎಲ್ಲಿಗೆ ಬಂದಿದೆ ಎಂದು ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ. ಆದರೆ ಅದಕ್ಕೆ ಜವಾಬೇ ಬರಲಿಲ್ಲ. ಈಗ ನಮ್ಮ ಕೈಗಾರಿಕೆಯ ಮಂತ್ರಿಗಳಾದರೂ ಅಲ್ಯೂಮಿನಿಯಂ ಫ್ಯಾಕ್ಟರಿಯ ವಿಚಾರ ಎಲ್ಲಿಗೆ ಬಂದಿದೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಾನು ಕೆಲವು ಪತ್ರಿಕೆಗಳಲ್ಲಿ ಸ್ಟೀಲ್ ಪ್ಲಾಂಟನ್ನು ಗೋವಾದಲ್ಲೊ ಅಥವಾ ಹೊಸಪೇಟೆಯ ಬಳಿಯೋ ಎಲ್ಲಿಯೋ ಒಂದು ಕಡೆ ಹಾಕಲಾಗುತ್ತದೆಂದೂ ಈ ವಿಚಾರದಲ್ಲೂ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದೊಡನೆ ಕನ್‌ಸಲ್ಟೇಷನ್ ನಡೆಸುತ್ತಿದ್ದಾರೆಂತಲೂ ಓದಿದ ಜ್ಞಾಪಕವಿದೆ. ಈ ಎರಡು ಹೆಸರುಗಳನ್ನು ಕೇಳಿದರೆ ನನಗನಿಸುತ್ತಿದೆ- ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ ಎಂದಹಾಗೆ ಎಲ್ಲಿ ಇದು ಗೋವಾಕ್ಕೆ ಹೋಗಿ ಬಿಡುತ್ತದೋ ಎಂಬ ಶಂಕೆ ನನಗೆ ಬಂದಿದೆ. ಹಾಗೊಂದು ವೇಳೆ ಇದನ್ನು ಗೋವಾದಲ್ಲೇ ಹಾಕಬೇಕೆಂದು ನಿರ್ಧಾರವಾದರೆ ಮುಂದೆ ನಮ್ಮ ಶರಾವತಿಯಲ್ಲಿ ತಯಾರಾಗತಕ್ಕ ಪವರನ್ನೆಲ್ಲಾ (ವಿದ್ಯುಚ್ಛಕ್ತಿ) ನಾವು ಏನು ಮಾಡಬೇಕು? ಅದನ್ನು ನಾವು ಬಳಸುವುದು ಹೇಗೆ? ನಮಗೆ ಆ ಪವರನ್ನೆಲ್ಲಾ ಉಪಯೋಗಿಸಲು ಅವಕಾಶವೆಲ್ಲಿದೆ?

ಈಗ ನಾವು ಸುಮಾರು 100 ಕೋಟಿ ರೂಪಾಯಿನ ಪವರನ್ನು ಉತ್ಪಾದನೆ ಮಾಡುತ್ತಿದ್ದೇವೆ. ಅದನ್ನೆಲ್ಲಾ ಉಪಯೋಗಿಸುವುದಕ್ಕೆ ಅವಕಾಶವೆಲ್ಲಿದೆ? ಈ ವಿಚಾರಗಳನ್ನೆಲ್ಲಾ ಪ್ರಬಲವಾದ ಕಾರಣಗಳಿವೆಯೆಂದು ಅವರಿಗೆ ಮನವರಿಕೆಯಾಗುವಂತೆ ತಿಳಿಸಬೇಕು. ಅಲ್ಲಿ ಹೈ ಫರ್ಸ್‌ಂಟೇಜ್ ಓರ್ ಸಿಕ್ಕುತ್ತದೆ. ಈಗ ಹೊಸಪೇಟೆಯಿಂದ ಮದ್ರಾಸಿಗೆ ಬ್ರಾಡ್‌ಗೇಜ್ ರೈಲ್ವೆ ಲೈನು ಕೇಳುವುದಕ್ಕೆ ಬಹಳ ಅನುಕೂಲವಾಗುತ್ತದೆ. ನಮ್ಮಲ್ಲಿ ಪವರ್ ಸಹಾ ಇರುತ್ತದೆ.ಈ ಎಲ್ಲ ಕಾರಣಗಳಿಂದ ನಮ್ಮ ಸರ್ಕಾರದವರು ತಮ್ಮ ಎಲ್ಲಾ ಇನ್‌ಫ್ಲುಯೆನ್ಸನ್ನೂ ಉಪಯೋಗಿಸಿ ಅದನ್ನು

ಆ ಹೊಸಪೇಟೆಯಲ್ಲೇ ಸ್ಥಾಪನೆಯಾಗುವಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಶ್ರೀಮಾನ್ ಸಿದ್ದಯ್ಯ. ಕಾಶೀಮಠ- ಇವರು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಒಂದು ಕಟ್‌ಮೋಷನ್ ತಂದಿದ್ದಾರೆ. ನನಗೆ ಇದರಲ್ಲಿ ಸಂಪೂರ್ಣ ನಂಬಿಕೆಯಿದೆ. ನಾನು ಈ ಕೈಗಾರಿಕೆಗಳಲ್ಲಿ ಮತ್ತು ವ್ಯವಸಾಯದಲ್ಲಿ ಅಭಿವೃದ್ಧಿ ಹೊಂದಿರತಕ್ಕ ಯಾವ ಯಾವ ದೇಶಗಳನ್ನು ನೋಡಿದ್ದೇನೋ ಮತ್ತು ಏನು ವಿಚಾರಗಳನ್ನು ಓದಿದ್ದೇನೋ ಆ ದೇಶಗಳಲ್ಲೆಲ್ಲಾ ಎಲ್ಲಿ ಕೈಗಾರಿಕೆ ಮುಂದುವರಿದಿರುತ್ತದೆಯೋ ಅಲ್ಲಿ ಜನರೂ ಮುಂದುವರಿದಿರುತ್ತಾರೆ. ಜಪಾನಿನಲ್ಲಿ ಪ್ರತಿಯೊಬ್ಬರೂ ಇಂಡಸ್ಟ್ರಿಯಲಿಸ್ಟುಗಳೇ ಆಗಿದ್ದಾರೆ. ಇಲ್ಲಿ ಅಥವಾ ಧಾರವಾಡದಲ್ಲೇ ಏಕೆ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಕೆಲವರು ಕೇಳಬಹುದು. ಅದಕ್ಕೆ ನಾನು ಹೇಳುವುದು ಎಲ್ಲಿ ವ್ಯವಸಾಯಕ್ಕೆ ನೀರಾವರಿ ಸೌಕರ್ಯಗಳಿರುವುದಿಲ್ಲವೋ ಅಂಥ ಸ್ಥಳಗಳಿಗೆ ಮೊದಲು ಈ ಅನುಕೂಲವನ್ನು ಕಲ್ಪಿಸಬೇಕೆಂದು ಹೇಳುತ್ತೇನೆ. ಗುಂಡ್ಲುಪೇಟೆಯಲ್ಲಿ 2-3 ಪ್ರಾಜೆಕ್ಟ್‌ಗಳನ್ನು ಕಟ್ಟಿದರೆ ಅಲ್ಲಿ 15-20 ಸಾವಿರ ಎಕರೆ ನೀರಾವರಿಯಾಗುತ್ತದೆ. ನಮ್ಮ ರಾಜ್ಯದಲ್ಲಿ ವ್ಯವಸಾಯದ ಕಸುಬನ್ನುವಲಂಬಿಸಿರುವವರಿಗೆ ವರ್ಷದಲ್ಲಿಯೊಂದು 5-6 ತಿಂಗಳು ಯಾವ ಉದ್ಯೋಗವೂ ಇರುವುದಿಲ್ಲ. ಅಂಥವರಿಗಾಗಿ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲೂ ಗೃಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿರತಕ್ಕ ಗೋಪಾಲಸ್ವಾಮಿ ಬೆಟ್ಟದಲ್ಲಿ ಬೆಲೆಬಾಳತಕ್ಕ ಅನೇಕ ಬಗೆಯ ರತ್ನಗಳು ಸಿಗುತ್ತವೆಂದು ಹೇಳುತ್ತಿದ್ದಾರೆ. ಇದನ್ನೂ ಸಹಾ ನೋಡಿಸಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಹಾಗೊಂದು ವೇಳೆ ಸರ್ಕಾರದವರಿಗೆ ಅದೂ ಸಾಧ್ಯವಾಗದೆ ಹೋದರೆ ಮಣ್ಣಿನಿಂದ ಆಗತಕ್ಕ ಹೆಂಚು ಇಂಥ ಕಾರ್ಖಾನೆಗಳನ್ನಾದರೂ ಅಲ್ಲಿ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಏನಾದರೂ ಕೈಗಾರಿಕೆಯನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಸ್ಥಾಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪಿಸಲು ಯಾವ ರಾ ಮೆಟೀರಿಯಲ್ ಸಿಕ್ಕಿದಿದ್ದರೂ ಈಗ ಅಲ್ಲಿ ರೇಷ್ಮೆ ಬೆಳೆಯನ್ನು ಬೆಳೆಸುವುದು ಪ್ರಾರಂಭವಾಗಿದೆ. ಇದೇ ವಿಚಾರದಲ್ಲಿ ರೇಷ್ಮೆ ಕ್ವಾಲಿಟಿಯನ್ನು ಇನ್ನೂ ಉತ್ತಮಗೊಳಿಸಬೇಕೆಂದು ಮೊನ್ನೆ ತಾನೆ ಪ್ಲಾನಿಂಗ್ ಕಮೀಷನ್ನಿನ ವೈಸ್ ಛೇರ್‌ಮನ್ನರ ಒಂದು ಹೇಳಿಕೆಯನ್ನು ನಾನು ಪತ್ರಿಕೆಗಳಲ್ಲಿ ಓದಿದೆನು. ಆದರೆ ಈ ಹಿಂದೆ ಮಾತನಾಡಿದ ಶ್ರೀಮಾನ್ ಎಂ.ಸಿ. ಬಸಪ್ಪನವರು ರೇಷ್ಮೆ ವಿಚಾರವಾಗಿ ಮಾತನಾಡುತ್ತಾ ಇದರಲ್ಲಿ ಎಷ್ಟು ವಿಭಾಗವಿದೆ. ಇದನ್ನು ಎಷ್ಟು ಎಕರೆಗಳಲ್ಲಿ ಬೆಳೆಯಲಾಗುತ್ತಿದೆ ಇದರಲ್ಲಿ ಎಷ್ಟು ಜಾತಿಯಿರುತ್ತದೆ ಎಂಬತಕ್ಕ ವಿಚಾರಗಳನ್ನೆಲ್ಲಾ ಅವರು ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನೀಗ ಅಂಥ ಕಷ್ಟದ ಕೆಲಸಕ್ಕೆ ಹೋಗುವುದಿಲ್ಲ. ಅವರ ವಿಚಾರ ಸರಣಿಗೂ ನನ್ನ ವಿಚಾರಕ್ಕೂ ಸ್ವಲ್ಪ ವ್ಯತ್ಯಾಸವಿರುತ್ತದೆ. ಆದರೆ ನಾನು ಹೇಳಬೇಕೆಂದಿರುವುದೇನೆಂದರೆ ಪ್ರೈವೇಟ್ ಗ್ರೋಯರ್ಸ್‌ಗಳಿಗೆ ಒಳ್ಳೆಯ ಬಿತ್ತನೆಯ ಗೂಡುಗಳನ್ನು ಒದಗಿಸಬೇಕೆಂದೂ ಮತ್ತು ಈ ಉದ್ಯಮವನ್ನು ನ್ಯಾಷನಲೈಜ್ ಮಾಡಬೇಕೆಂದು ನನ್ನ ಅಭಿಪ್ರಾಯ. ಹೀಗೆ ಮಾಡಿ ಯಾರ್‍ಯಾರು ರೇಷ್ಮೆಯನ್ನು ದೇಶದಲ್ಲಿ ಬೆಳೆಸುತ್ತಾರೋ ಅಂಥವರಿಗೆಲ್ಲಾ ಒಳ್ಳೆಯ ರೇಷ್ಮೆಯ ಬಿತ್ತನೆಯ ಗೂಡುಗಳು ದೊರೆಯುವಂತೆ ಮಾಡಬೇಕೆಂದು ನನ್ನ ಉದ್ದೇಶ. ಒಳ್ಳೆಯ ಹೈಬ್ರೀಡ್ ರೇಷ್ಮೆ ಗೂಡುಗಳನ್ನು ಉತ್ಪತ್ತಿ ಮಾಡಿ ಅದನ್ನು ಬಿಳಿಗಿರಿ ರಂಗನ ಬೆಟ್ಟದಲ್ಲೂ ಬಿತ್ತನೆ

ಮಾಡಿ ಹಿಲ್ ಸ್ಟೇಷನ್‌ಗಳಲ್ಲೂ ಈ ಬೆಳೆಯನ್ನು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತೇನೆ. ಹೀಗೆ ಆ ನಾಟೀ ಗೂಡುಗಳನ್ನೂ ಸಹಾ ಅವುಗಳ ಉತ್ಪನ್ನವನ್ನು ಹೆಚ್ಚಿಸುವಂತೆ ಪ್ರಯತ್ನ ಪಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಎರಡನೆಯದಾಗಿ ಚಾಕೀ ಸೆಂಟರುಗಳ ವಿಷಯವನ್ನು ಕೆಲವು ಸಂದರ್ಭಗಳಲ್ಲಿ ಒಂದೇ ತೋಟದ ಸೊಪ್ಪನ್ನು ತಂದು ಹಾಕಿ ಒಂದೇ ಮಟ್ಟದ ಬೆಳೆಯನ್ನು ಪಡೆಯಬೇಕೆಂದು ಪ್ರಯತ್ನಪಟ್ಟ ಹಲವೆಡೆಗಳಲ್ಲಿ ಸಾಕಿದವರಿಗೆ ಏಟು ಬೀಳತಕ್ಕ ಪ್ರಸಂಗವುಂಟು. ನಾನು ಹೇಳುವುದು ಈ ಚಾಕೀ ಸೆಂಟರುಗಳಿಗೆ 8-10 ಎಕರೆ ಜಮೀನನ್ನು ಕೊಟ್ಟು ಅದನ್ನು ಒಂದು ಮಾಡಲ್ ಸೆಂಟರನ್ನಾಗಿ ಮಾಡಿ ಅಲ್ಲಿ ಒಂದೇ ತರಹ ಚಂದ್ರಿಕೆ, ಒಂದೇ ತರಹ ತಟ್ಟೆ, ಒಂದೇ ತರಹ ಸೊಪ್ಪು ಹೀಗೆ ಎಲ್ಲವೂ ಒಂದೇ ರೀತಿಯಿರುವಂತೆ ಒಂದು ಮಾಡಲ್ಲಾಗಿ ರೇಷ್ಮೆಯನ್ನು ತಯಾರಿಸತಕ್ಕ ವಿಧಾನವನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಇನ್ನು ಈ ಚರಕಗಳನ್ನು ರೀಪ್ಲೇಸ್ ಮಾಡಿ ಬೇಸನ್‌ಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈ ಬದಲಾವಣೆಗಳನ್ನು ನಾವು ಮಾಡದೇ ಹೋದರೆ ನಾವು ಈ ದಿವಸ ಈ ರೇಷ್ಮೆಯ ದಾರವನ್ನು ಚೆನ್ನಾಗಿ ತೆಗೆಯುತ್ತೇವೆಂದು ಹೇಳಿಕೊಳ್ಳುತ್ತಿದ್ದರೂ ಮುಂದೆ ಇದರಿಂದ ನಮ್ಮ ದೇಶಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೂ ಬೇಸಿನ್‌ಗಳನ್ನು ಕೊಡಬೇಕೆಂದು ಹೇಳುತ್ತೇನೆ.

ಈ ಬೇಸಿನ್ನುಗಳನ್ನು ರೀಪ್ಲೇಸ್ ಮಾಡುವಾಗ ಸಬ್ಸಿಡೈಜ್ ಮಾಡಬೇಕು.ಅವರಿಗೆ ಸಾಲ, ಸಬ್ಸಿಡಿ ಎಲ್ಲಾ ಕೊಡುತ್ತಿದ್ದಾರೆ. ಆದರೆ ಈಗ ರೈತನಿಗೆ ಒಂದು ಕೈಲಿ ಹಣ ಕೊಡುತ್ತಾರೆ. ಇನ್ನೊಂದು ಕೈಲಿ ಹಣವನ್ನು ಕಿತ್ತುಕೊಳ್ಳುವುದಕ್ಕೆ ನೋಡುತ್ತಿದ್ದಾರೆ. ಸುಮಾರು 20-21 ಇಲಾಖೆಗಳಲ್ಲಿ ರಿಜಿಸ್ಟ್ರೇಷನ್ ಚಾರ್ಜ್‌ಸ್ಸನ್ನು ತೆಗೆದುಕೊಳ್ಳುತ್ತಾ ಇಲ್ಲ. ಇಲ್ಲದೇ ಹೋದರೆ ಒಬ್ಬೊಬ್ಬ ರೈತ ಒಂದು ಸಾವಿರಕ್ಕೆ ನೂರು ರೂಪಾಯಿಗಳ ಸ್ಟಾಂಪು ಫೀ ಕೊಡಬೇಕಾಗುತ್ತದೆ. ರಿಜಿಸ್ಟ್ರೇಷನ್ ಫೀಯನ್ನು ಇಷ್ಟು ಹೆಚ್ಚಿಗೆ ಅವನಿಂದ ತೆಗೆದುಕೊಳ್ಳುವುದು ತುಂಬಾ ಅನ್ಯಾಯ . ಆದ್ದರಿಂದ ಇದನ್ನು ವಿನಾಯಿತಿ ಕೊಡತಕ್ಕಂಥ ಪಟ್ಟಿಯಲ್ಲಿ ಸೇರಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ಅಸಿಸ್ಟೆಂಟ್ ಡೈರೆಕ್ಟರ್ಸ್ ಆಗಿರುವವರು ಅದರಲ್ಲೂ ಇಲಾಖೆಗೆ ಸಂಬಂಧಪಟ್ಟವರು ತಂತಮಗೆ ಕಂಡ ರೀತಿಯಲ್ಲಿ ವ್ಯವಹಾರಗಳನ್ನು ನೆಡೆಸುತ್ತಿದ್ದಾರೆ. ಅದೇನು ಒಳ್ಳೆಯ ವ್ಯವಹಾರವೇ,ಖಂಡಿತವಾಗಿಇಲ್ಲ;ಅದಕ್ಕಾಗಿ ಅವರಿಗೆ ಯೂನಿಫಾರಂ ಐಡಿಯಾ ಕೊಡುವ ಹಾಗೆ ಕೇಂದ್ರದಲ್ಲಿರುವ ಹಾಗೆ ರೀ ಓರಿಯೆಂಟೇಷನ್ ಕೋರ್ಸನ್ನು ಇಲ್ಲಿ ಪ್ರಾರಂಭ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ವೀವಿಂಗ್ ಯೂನಿಟ್ಟುಗಳ ವಿಷಯವಾಗಿ ಹೇಳುವುದಾದರೆ ಮಳೆಗಾಲದಲ್ಲಿ ಈಗ ಇರುವ ಸುಧಾರಿಸಿದ ಕಕೂನ್ಸ್ ಸ್ಕೀಮಿನಲ್ಲಿ ರೀಲ್ಸ್ ಬಹಳ ನಷ್ಟವಾಗುತ್ತವೆಂಬುದಾಗಿ ಸೆಂಟ್ರಲ್ ಸಿಲ್ಕ್ ಬೋರ್ಡಿನಲ್ಲಿ ಹೇಳಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಸುಧಾರಿಸಿದ ಕಕೂನ್, ಸರಬರಾಯ ಮಾಡುವ ಮತ್ತು ಬೇರೆ ತರಹ ವರ್ಮ್ಸ್ ಕೊಡುವ ವಿಚಾರದಲ್ಲಿ ಅವರಿಗೆ ಸಹಾಯ ಮಾಡಬೇಕೆಂದು ನಾನು ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿಯೇ ಸುಮಾರು 6 ಸಾವಿರ ಚರಕಗಳು, ಅವುಗಳಿಂದಲೇ ಹೆಣ್ಣು ಮಕ್ಕಳು ನೂಲುತ್ತಾ ಇದ್ದಾರೆ. ನಮ್ಮಲ್ಲಿ ವೇಸ್ಟ್

ಕಕೂನ್ಸ್ ಬಹಳವಾಗಿ ಸಿಗುತ್ತದೆ.

ವೆಸ್ಟ್‌ಬಂಗಾಳದಲ್ಲಿ ಕೆಲವು ಕಡೆಗಳಲ್ಲಿ ಅವರು ನೂತು ಫಾರೆನ್ನಿಗೆ ಕಳುಹಿಸಿ ಫಾರೆನ್ ಎಕ್ಸ್ಚೇಂಜನ್ನು ಸಂಪಾದಿಸುತ್ತಾರೆ. ನಮ್ಮಲ್ಲಿ ಸಿಕ್ಕುವ ನೂಲನ್ನು ಅವರಿಗೆ ಕೊಟ್ಟಿದ್ದರಿಂದ ಅವರು ಹೆಚ್ಚಿಗೆ ಸಂಪಾದನೆ ಮಾಡಿದ್ದಾರೆ. ಇದು ತುಂಬಾ ವಿಷಾದಕರ. ಹೆಣ್ಣು ಮಕ್ಕಳು ನಿಜವಾಗಿ ಮಾಡುವ ಕೆಲಸವಿದು. ಅಲ್ಲಿ ಯಾವ ರೀತಿಯಲ್ಲಿ ನೂಲನ್ನು ತೆಗೆಯುತ್ತಿದ್ದಾರೆಂಬುದನ್ನು ಮತ್ತು ಯಾವ ರೀತಿ ಅವರಿಗೆ ಸಹಾಯ ಮಾಡಬೇಕೆಂಬುದನ್ನು ಸರ್ಕಾರದವರು ನೋಡಬೇಕು. ಈ ವಿಷಯದಲ್ಲಿ ಅನೇಕ ಅರ್ಜಿಗಳನ್ನು ಖಾದೀಬೋರ್ಡಿಗೆ ಬರೆದಿದ್ದೇವೆ. ಇದುವರೆಗೂ ಅದು ಏನಾಗಿದೆ ಯಾವ ಮಟ್ಟದಲ್ಲಿದೆ ಎನ್ನುವುದಕ್ಕೆ ಜವಾಬು ಬರಲಿಲ್ಲ. ಸಂಬಂಧಪಟ್ಟ ಮಂತ್ರಿಗಳು ಈ ವಿಚಾರವನ್ನು ನೋಡಬೇಕು. ಇದು ಸ್ಥಾಪನೆಯಾದ ಕೂಡಲೇ, ಶುರುವಾದ ಕೂಡಲೇ ಪ್ರಿಂಟಿಂಗ್, ವೀವಿಂಗ್, ಸಬ್ಸಿಡಿಯರಿ ಹಾಬೀಸ್ ಕ್ರಮೇಣವಾಗಿ ಆಗುತ್ತವೆ. ಇದಕ್ಕೆ ಸರ್ಕಾರದವರು ಗಮನಕೊಡಬೇಕು.

ಇನ್ನು ಸಿಲ್ಕ್ ಫೀಲೇಚರ್‌ನಲ್ಲಿ ಬಹಳ ನಷ್ಟವಾಗುತ್ತಿದೆ. ಇದು ಯಾವ ಕಾರಣವೋ, ಎಷ್ಟು ಪರೀಕ್ಷೆಮಾಡಿದರೂ ನಷ್ಟವೇ ಆಗುತ್ತಿದೆ. ನಮ್ಮಲ್ಲಿ ಜಾಪನೀಸ್ ಕೊಲ್ಯಾಬರೇಷನ್ನಿಂದ ಒಂದು ಫಿಲೇಚರ್ ಇಂಡಸ್ಟ್ರಿಯನ್ನು ಪ್ರಾರಂಭಮಾಡಿ ಅವರಿಂದ ಸಾಕಷ್ಟು ಮೆಷಿನರಿಗಳನ್ನು ತೆಗೆದುಕೊಂಡು ಈ ಕೈಗಾರಿಕೆಯನ್ನು ಅಭಿವೃದ್ಧಿಮಾಡಬೇಕು. ಅವರು ಯಾವ ರೀತಿ ನೂಲು ತೆಗೆಯುತ್ತಾರೋ ಆ ರೀತಿ ನೂಲು ತೆಗೆಯಲು ಜಪಾನಿನವರ ರೇಷನ್ನಿನಿಂದ ಈ ಫೀಲೆಚರ್ ಇಂಡಸ್ಟ್ರೀಯನ್ನು ಗುಂಡ್ಲುಪೇಟೆಯಲ್ಲಿ ಸ್ಥಾಪನೆಮಾಡಬೇಕೆಂದು ನಾನು ಸರ್ಕಾರದವರನು ಕೇಳಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ವಿಧಾನ ಸಭಾ ಕಲಾಪ-ದಿ. 20-3-1964)

# 6. ಗ್ರಾಮೀಣ ಸಮಸ್ಯೆಗಳನ್ನು ಕುರಿತು

## 1964

-ಮಾನ್ಯ ಅಧ್ಯಕ್ಷರೇ, ರೆವೆನ್ಯೂ ಡಿಮ್ಯಾಂಡ್ ಮೇಲೆ ಮಾತನಾಡುತ್ತಿರುವ ಸಂದರ್ಭದಲ್ಲಿ ನಾನು ನಾಲ್ಕು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಈ ರೆವೆನ್ಯೂ ಡಿಮ್ಯಾಂಡ್ ಸಂಬಂಧದಲ್ಲಿ ಬೇಕಾದಷ್ಟು ವಿಷಯ ಹೇಳಬೇಕಾಗಿತ್ತು. ಕಾಲ ಕಡಿಮೆ ಇರುವುದರಿಂದ ಯಾವುದರ ಮೇಲೆ ಮಾತನಾಡಬೇಕು, ಯಾವುದನ್ನು ಬಿಡಬೇಕು ಎನ್ನುವುದು ತಿಳಿಯದಂತಾಗಿದೆ. ಆದರೂ ಮುಖ್ಯವಾಗಿರುವ ವಿಚಾರಗಳಲ್ಲಿ ನಾಲ್ಕು ಮಾತುಗಳನ್ನಾಡುತ್ತೇನೆ.

ಈಗ ತಾನೇ ಶ್ರೀಮಾನ್ ಕೇಶವಮೂರ್ತಿಗಳು ಹೇಳಿದರು. ಪಟೇಲ್ ಶ್ಯಾನುಭೋಗರ ಗತಿ ಏನಾಗಿದೆ, ಅವರನ್ನು ಏನು ಮಾಡುತ್ತೀರಿ ಎಂದು. ನಮ್ಮ ಊರಿನಲ್ಲಿಯೂ ಕೆಲವು ಜನ ಪಟೇಲ್ ಶ್ಯಾನುಭೋಗರಿದ್ದಾರೆ. ನಿಮ್ಮ ಅಧಿಕಾರಿಗಳು ಅವರಿಗೆ ಬಹಳ ಹಿಂಸೆ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ನನಗೆ ಬಹಳ ಸಂಕೋಚವಾಗುತ್ತದೆ. ಏಕೆಂದರೆ ಎಷ್ಟೋಜನ ಪಟೇಲರೂ, ಶ್ಯಾನುಭೋಗರೂ ಬಹಳ ಹಿಂದಿನಿಂದ ಇದ್ದಾರೆ. ಅವರಲ್ಲಿ ಬಹಳ ಜನ ಬರೀ ಪೋಟಿಗಿ ತಿಂದುಕೊಂಡು, ದುಡ್ಡು ತಿಂದುಕೊಂಡು ಇರತಕ್ಕ ವ್ಯಕ್ತಿಗಳಾಗಿರುವುದಿಲ್ಲ. ಎಷ್ಟೋ ಜನ ದೊಡ್ಡ ಮನೆತನದವರಿದ್ದಾರೆ. ಅವರು ಹೊರಟು ಹೋಗುತ್ತಾರೆಂದು ಅವರನ್ನು ಕ್ಷುಲ್ಲಕ ರೀತಿಯಿಂದ ನೋಡುತ್ತಿದ್ದಾರೆ. ಇದನ್ನು ತಪ್ಪಿಸಿ ಅವರನ್ನು ಇಟ್ಟುಕೊಳ್ಳುವ ಹಾಗಿದ್ದರೆ ಮಾನ, ಮರ್ಯಾದೆ, ಬೆಲೆ ಕೊಟ್ಟು ಇಟ್ಟುಕೊಳ್ಳಬೇಕು, ಇಲ್ಲದೆ ಹೋದರೆ ಅವರಿಗೆ ಕೊಡಬೇಕಾದ ಕಾಂಪೆನ್‌ಸೇಷನ್ ಕೊಟ್ಟು ಕಳುಹಿಸಬೇಕು. ಇದು ಸರ್ಕಾರದ ಕರ್ತವ್ಯವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದನ್ನು ಗಮನಕ್ಕೆ ತೆಗೆದುಕೊಂಡು ಅವರನ್ನು ಕೆಲಸದಲ್ಲಿ ಇಟ್ಟುಕೊಳ್ಳುವುದು, ಇಲ್ಲದೆ ಹೋದರೆ ಕಾಂಪೆನ್‌ಸೇಷನ್ ಕೊಡುವುದು, ಎರಡರಲ್ಲಿ ಒಂದು ಮಾಡಬೇಕು ಎಂದು ಒತ್ತಾಯಮಾಡುತ್ತಿದ್ದೇನೆ.

ರಿಜಿಸ್ಟ್ರೇಷನ್ ಮತ್ತು ಸ್ಟಾಂಪುಗಳ ವಿಚಾರಕ್ಕೆ ಬಂದರೆ 21 ಇಲಾಖೆಗಳಿಗೆ ಇದರಿಂದ ವಿನಾಯಿತಿ ಕೊಟ್ಟಿದ್ದೀರಿ. ತಕಾವಿಸಾಲ ತೆಗೆದುಕೊಳ್ಳುವಾಗ, ರಿಜಿಸ್ಟ್ರೇಷನ್ ಮತ್ತು ಸ್ಟಾಂಪು ಚಾರ್ಜ್ ವಿನಾಯಿತಿ ಇದೆ. ಅಡಮಾನ ಬ್ಯಾಂಕಿಗೆ ರಿಜಿಸ್ಟರು ಮಾಡಿಕೊಡುವಾಗ ಸ್ಟಾಂಪ್ ತೆಗೆದುಕೊಳ್ಳಬೇಕು. ಅದೇ ರೀತಿ ಒಬ್ಬ ರೇಷ್ಮೆ ಬೆಳೆಯತಕ್ಕ ವ್ಯವಸಾಯಗಾರ ಸಾಲ ತೆಗೆದುಕೊಳ್ಳಬೇಕಾದರೆ ಸಾವಿರಕ್ಕೆ ಸುಮಾರು 50 ರೂಪಾಯಿ ಖರ್ಚು ಮಾಡಬೇಕು. ಐದು ಸಾವಿರ ರೂಪಾಯಿ ಸಾಲ ಪಡೆಯುವಂಥ ಸಂದರ್ಭದಲ್ಲಿ, ಅವನಿಗೆ ಸಿಕ್ಕತಕ್ಕ 500 ರೂಪಾಯಿ ಸಬ್ಸಿಡಿ ಏನಿದೆ ಅದನ್ನು ಈ ಕೈಯಿಂದ ಕೊಟ್ಟು ಆ ಕೈಯಿಂದ ಸ್ಟಾಂಪ್ ಮುಂತಾದ ರೂಪದಲ್ಲಿ ಕಿತ್ತುಕೊಳ್ಳುವುದಾದರೆ ಅದರಿಂದ ರೈತನಿಗೆ ಸಹಾಯ ಮಾಡಿದಂತಾಗುವುದಿಲ್ಲ, ಅವನು ಸಾಲ ಕೇಳುತ್ತಿರುವ ಸಮಯದಲ್ಲಿ ಅವನಿಂದ ಸ್ಟಾಂಪ್ ಮತ್ತು ರಿಜಿಸ್ಟ್ರೇಷನ್ನಿಗೆ ಏನೂ ತೆಗೆದುಕೊಳ್ಳದೆ ಸಹಾಯ ಮಾಡಬೇಕು. ರೇಷ್ಮೆ ವ್ಯವಸಾಯ ಮಾಡುವವರಿಗೆ ಸಾಲ ಕೊಡುವಾಗ ಕೂಡ ಅದೇ ರೀತಿಯಲ್ಲಿ ಒದಗಿಸಿಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮುಜರಾಯಿ ಸಂಸ್ಥೆಗಳ ವಿಚಾರ ತೆಗೆದುಕೊಂಡರೆ ನಮ್ಮ ರೆವೆನ್ಯೂ ಮಂತ್ರಿಗಳು ಹೇಮಗಿರಿ ಮುಂತಾದ ಕಡೆ ಹೋಗುತ್ತಾರೆಯೇ ಹೊರತು ನಮ್ಮ ಕಡೆ ಬನ್ನಿ ಎಂದರೆ ಬರುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ದೇವಸ್ಥಾನಗಳಿವೆ. ಅಭಿವೃದ್ಧಿ ಸ್ಥಿತಿಗೆ ತರಬೇಕಾದಂಥ ಕಟ್ಟಡಗಳು, ದೇವಸ್ಥಾನಗಳೂ ಇವೆ. ಅದರಲ್ಲಿ ಗೋಪಾಲ ಸ್ವಾಮಿ ಬೆಟ್ಟ ಎಷ್ಟೋ ವರ್ಷಗಳಿಂದ ಇರುವ ಒಂದು ಸುಂದರವಾದ ಪ್ರದೇಶ. ಅಲ್ಲಿಯ ದೇವಸ್ಥಾನವನ್ನು ಉತ್ತಮ ಸ್ಥಿತಿಗೆ ತರಬೇಕಾಗಿದೆ. ರೆವೆನ್ಯೂ ಮಂತ್ರಿಗಳನ್ನು ಕರೆದದ್ದಾಯಿತು. ಟೂರಿಸ್ಟ್ ಮಂತ್ರಿಗಳಾದ ಪಾಟೀಲರನ್ನು ಕರೆದದ್ದಾಯಿತು. ಯಾರೂ ಬಂದು ನೋಡುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿರುವ ದೇವಸ್ಥಾನಗಳು ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಮುಜರಾಯಿ ಇಲಾಖೆಗೆ ಬರತಕ್ಕ ಹಣದಿಂದ ತೆರಕಣಾಂಬಿ ದೇವಸ್ಥಾನವನ್ನು ಉತ್ತಮಪಡಿಸಲು ಈ ವರ್ಷ ಸ್ವಲ್ಪ ಹಣ ಕೊಟ್ಟು ಸಹಾಯ ಮಾಡಿದ್ದಾರೆ. ಅದಕ್ಕಾಗಿ ನಾನು ನಿಜವಾಗಿಯೂ ಆಭಾರಿಯಾಗಿದ್ದೇನೆ. ಗೋಪಾಲಸ್ವಾಮಿ ಬೆಟ್ಟವಲ್ಲದೆ ಅನೇಕ ವರ್ಷಗಳ ಹಿಂದೆ ಕಟ್ಟಿದ ಜಕಣಾಚಾರಿ ಕಾಲದಲ್ಲಿ ಕಟ್ಟಿರುವ ದೇವಸ್ಥಾನಗಳಿವೆ. ಇವುಗಳನ್ನು ರಿನೋವೇಟ್ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಆಹಾರದ ವಿಚಾರಕ್ಕೆ ಬಂದರೆ, ನಮ್ಮ ರಾಜ್ಯದಲ್ಲಿ ಆಹಾರದ ಕೊರತೆ ಇದೆ. ಈಗಾಗಲೇ ಒಂದು ಕಿಲೋಗ್ರಾಂ ಅಕ್ಕಿಗೆ ಒಂದು ರೂಪಾಯಿ ಆಗಿದೆ. ನಾವೆಲ್ಲ ಮೂವತ್ತು ಮೂತ್ತೊಂದು ರೂಪಾಯಿಗಳಿಗೆ ಬತ್ತವನ್ನು ಕೊಟ್ಟುಬಿಟ್ಟಿದ್ದೇವೆ. ಈಗಿರುವ ಪರಿಸ್ಥಿತಿಯನ್ನು ನೋಡಿದರೆ ಅಕ್ಕಿಯ ಬೆಲೆ ಒಂದು ಕಿಲೋಗ್ರಾಮಿಗೆ 20 ರೂಪಾಯಿ ಆಗುತ್ತದೆಂದು ಹೇಳುತ್ತಾರೆ. ಇದಕ್ಕೆ ಏನು ಮಾಡುತ್ತಿದ್ದೀರಿ? ಇದೂ ಅಲ್ಲದೆ ಡೆವಲಪ್‌ಮೆಂಟ್ ಕೌನ್ಸಿಲ್ಲಿನಲ್ಲಿ ಮೈಸೂರು ಜಿಲ್ಲೆ ಡೆಪ್ಯೂಟಿ ಕಮಿಷನರು ನಮಗೆ ಒಂದು ಆಶ್ವಾಸನೆಯನ್ನು ಕೊಟ್ಟರು. ನಮ್ಮ ತಾಲ್ಲೂಕಾದ ಗುಂಡ್ಲುಪೇಟೆಗೆ ಬಹಳ ಕಷ್ಟವಿದೆ. ಅದನ್ನು ನಿವಾರಣೆ ಮಾಡಲು ಅಕ್ಕಿ, ಜೋಳ ಸಪ್ಲೆ ಮಾಡಬೇಕೆಂದು ಕೇಳಿದಾಗ ಜೋಳ ಕೇಳಬೇಡಿ, ಬೇಕಾದಷ್ಟು ಅಕ್ಕಿಯನ್ನು ತರಿಸಿಕೊಡುತ್ತೇವೆ. ಅಮೆರಿಕ ಅಕ್ಕಿ ಬೇಕಾದಷ್ಟು ಬಿದ್ದಿದೆ, ತರಿಸಿಕೊಡುತ್ತೇವೆಂದು ಹೇಳಿದರು. ನಾವು ಇವರು ಹೇಳಿದುದನ್ನು ನಂಬಿಕೊಂಡು ಹಳ್ಳಿಗಳಲ್ಲಿ ಹೋಗಿ ನಿಮಗೆ ಕೆಲಸ ಎಲ್ಲಿರುತ್ತವೆಯೋ ಅಲ್ಲಿಗೆ ಹೋಗಿ ಕೆಲಸ ಮಾಡಿ ಬನ್ನಿ, ನಿಮಗೆ ಕಷ್ಟವಿರುವುದಿಲ್ಲ, ನಿಮಗೆ ಅಕ್ಕಿಯನ್ನು ತಂದುಕೊಡುತ್ತೇವೆಂದು ಹೇಳಿದೆವು.ಅದರಂತೆ ಹಳ್ಳಿಯ ಜನ 10-12 ಮೈಲಿ ದೂರ ಹೋಗಿ ಪ್ರಾಜೆಕ್ಟ್ ಕೆಲಸ ಮಾಡಿಕೊಂಡು ಬಂದರೆ ಅವರಿಗೆ ಅಕ್ಕಿಯೇ ಇಲ್ಲ. ಸರ್ಕಾರದವರ ಮಾತನ್ನು ಕೇಳಿ ನಾವು ನಮ್ಮ ಮಾತನ್ನು ಉಳಿಸಿಕೊಳ್ಳದಂತಾಗಿದೆ. ಹದಿನೈದು ದಿವಸವಾದರೂ ನಮ್ಮ ತಾಲ್ಲೂಕಿಗೆ ಅಕ್ಕಿಯೇ ಬರಲಿಲ್ಲ.ಮಾನ್ಯ ಮಂತ್ರಿಗಳನ್ನು ವಿಚಾರಿಸಿ ಕಾಗದ ಬರೆದಿದ್ದೇವೆ. ಈಗ ಬರುತ್ತದೆ, ಆಗಬರುತ್ತದೆಂದು ಹೇಳಿದರು. ಕೊನೆಗೆ ನೋಡಿದರೆ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಬೇಕಾದ್ದನ್ನು ಸಕಾಲದಲ್ಲಿ ತೆಗೆದುಕೊಳ್ಳದೆ ಅದು ಕ್ಯಾನ್ಸಲ್ ಆಯಿತು ಎಂದು ಹೇಳಿದರು. ಹಾಗಾದರೆ ಅಕ್ಕಿ, ಜೋಳ ಇವುಗಳನ್ನು ಅಭಾವವಿರತಕ್ಕ ಕಡೆಗೆ ಹೇಗೆ ಒದಗಿಸುತ್ತೀರಿ? ನಮಗೆ ಅಕ್ಕಿ ಜೋಳ ಬೇಕು ಎಂದು ಕೇಳಿದರೆ, ಉಪ್ಪು ಇದೆಯೇ ಎಂದರೆ ಪಪ್ಪು ಇದೆ, ಎಂದು ಹೇಳುವಂತೆ ಗೋಧಿ ತೆಗೆದುಕೊಳ್ಳಿ, ರವೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇವಕ್ಕೆ ತುಪ್ಪವನ್ನು ಸರ್ಕಾರದವರು ಕೊಡುತ್ತಾರೆಯೆ? ಅದೂ ಅಲ್ಲದೆ ನಮ್ಮ ಜನಗಳಿಗೆ ಒಂದು ತರಹ ಆಹಾರ

ಪದಾರ್ಥಗಳನ್ನು ತಿಂದು ಅಭ್ಯಾಸವಾಗಿ ಬೇರೆ ಪದಾರ್ಥಗಳನ್ನು ತಿಂದರೆ ರಕ್ತಭೇದಿ, ಆಮಶಂಕೆ, ಶುರುವಾಗಿ ಡಾಕ್ಟರ್ ನಾಗಪ್ಪ ಆಳ್ವರನ್ನು ಬಿಟ್ಟಿ ಔಷಧಿ ಕೊಡಿ ಎಂದು ಕೇಳಬೇಕಾಗುತ್ತದೆ. ಆದುದರಿಂದ ಆ ಜನಗಳಿಗೆ ಬರುವ ವರ್ಷ ಮಳೆ ಬಂದು ಬೆಳೆ ಬರುವವರೆಗೂ ಅವರಿಗೆ ಬೇಕಾದ ಆಹಾರವನ್ನು ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಸಕ್ಕರೆ ವಿಷಯ ಬೇಕಾದಷ್ಟು ಜನ ಮಾತನಾಡಿದ್ದಾರೆ, ಸಕ್ಕರೆಯನ್ನು ಸೊಸೈಟಿ ಮುಖಾಂತರ ಹಂಚುತ್ತಾರೆ, ನಮ್ಮ ಕಡೆ ಸೊಸೈಟಿಯಲ್ಲಿ ಸಕ್ಕರೆಯನ್ನು ತೂಕಮಾಡಿ ಕೊಡುವುದಿಲ್ಲ, ಅಳತೆಮಾಡಿ ಕೊಡುವುದಿಲ್ಲ ಅವರು ಕೊಟ್ಟಷ್ಟು ತೆಗೆದುಕೊಂಡು ಹೋಗಬೇಕು, ಮಂತ್ರಿಗಳು ಅಲ್ಲಿಗೆ ನಾಟಕ ವಗ್ಗೆರೆ ನೋಡುವುದಕ್ಕೆ ಬರುತ್ತಾರೆ. ನಾಟಕ ನೋಡುವ ಮಂತ್ರಿಗಳು ಅಲ್ಲಿಯ ಜನರ ಕಷ್ಟ ಸುಖ ಕೇಳುತ್ತಾರೆಯೇ ಎಂದರೆ ಇಲ್ಲವೇ ಇಲ್ಲ. ಇದು ಯಾವ ಧರ್ಮ?

**Mr. Speaker- It does not apply to all the Ministers.**

**ಶ್ರೀಮತಿ ಕೆ.ಎಸ್.ನಾಗರತ್ನಮ್ಮ-** ನಾಟಕ ನೋಡುವ ಮಂತ್ರಿಗಳಿಗೆ ಹೇಳಿದ್ದು, ನಮ್ಮ ಪ್ರಾರಬ್ಧ ಕರ್ಮವನ್ನು ಹೇಳುತ್ತಿದ್ದೇನೆ.

ಮಿಸಲೇನಿಯಸ್, ಡಿಪಾರ್ಟ್‌ಮೆಂಟ್‌ನಲ್ಲಿ ವಾರ್ತಾ ಇಲಾಖೆ ಸೇರಿದೆ ಎಂದು ತಿಳಿದುಕೊಂಡಿದ್ದೇನೆ. ಮಾನ್ಯ ಗೃಹ ಮಂತ್ರಿಗಳಿಗೆ ಈ ಇಲಾಖೆ ಸೇರಿದೆ. ಮೈಸೂರಿನಲ್ಲಿ ಒಂದು ಆಫೀಸ್ ಇದೆ. ಬೆಂಗಳೂರಿನಲ್ಲಿರುವ ಆಫೀಸು ಬಹಳ ಗಲೀಜು ಪ್ರದೇಶದಲ್ಲಿದೆ. ಅವರು ನೋಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಮೈಸೂರಿನಲ್ಲಿರುವ ಆಫೀಸು ಬಹಳ ಚೆನ್ನಾಗಿದೆ. ಈ ಆಫೀಸುಗಳಿಗೆ ಎಷ್ಟು ಸಿಬ್ಬಂದಿ ಕೊಟ್ಟಿದ್ದಾರೆ ಎಂದು ಕೇಳಬೇಕಾಗಿದೆ. ಇದು ಫಾರಿನ್ ಎಕ್ಸ್ ಚೇಂಜ್ ಬರುವಂಥ ವಿಚಾರ, ಇದಕ್ಕೆ ಎಷ್ಟರಮಟ್ಟಿಗೆ ಸಿಬ್ಬಂದಿಯನ್ನು ಕೊಟ್ಟಿದೆ,ಟ್ರೈನ್ಡ್ ಗೈಡ್ಸ್ ಇದ್ದಾರೆಯೇ, ಕನ್‌ವೆಯನೇಸ್ ಏನಾದರೂ ಕೊಟ್ಟಿದೆಯೇ? ಕೃಷ್ಣರಾಜಸಾಗರದಲ್ಲಿ ಒಂದು ವಿಶ್ರಾಂತಿ ಗೃಹವನ್ನು ಕೊಟ್ಟಿದ್ದಾರೆ. ಅಲ್ಲಿ ಒಂದು ಕಪ್ ಕೊಡುವವರೇ ಇಲ್ಲ, ಕೂಲ್ ಡ್ರಿಂಕ್ಸ್ ಕೂಡ ಇಲ್ಲ. ಬಬ್ಬ ಹೋಟೆಲ್‌ನವನಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಒಂದು ಗ್ಲಾಸ್ ಲೈಮ್ ಜ್ಯೂಸ್‌ಗೆ ಒಂದೂವರೆ ರೂಪಾಯಿ ಕೊಡಬೇಕು. ಹೀಗಾದರೆ ಪ್ರವಾಸಿಗರು ಹೇಗೆ ಬರುತ್ತಾರೆ? ಆ ಕಟ್ಟಡದಲ್ಲಿರುವುದೆಲ್ಲ ಸಿಂಗಲ್ ರೂಮ್ಸ್. ಪ್ರವಾಸಿಗರ ಅನುಕೂಲಕ್ಕಾಗಿ ಡಬಲ್ ರೂಮ್ಸ್ ಇರಬೇಕಾದ್ದು ಅಗತ್ಯ. ಇಷ್ಟು ಹಣ ಬರತಕ್ಕ ಮುಖ್ಯವಾದ ಇಲಾಖೆಯನ್ನು ಇಗ್ನೊರ್ ಮಾಡದೆ ಸರಿಯಾಗಿ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ನಾನು ಮುಖ್ಯವಾಗಿ ಹೇಳಬೇಕಾಗಿರುವ ಕ್ಷಾಮದ ವಿಚಾರಕ್ಕೆ ಬರುತ್ತೇನೆ. ಈ ವಿಚಾರ ಮಾತನಾಡುವುದಕ್ಕೆ ಮುಂಚೆ ಒಂದು ಮಾತು ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ, ಬಡ್ಜೆಟ್ ಮೇಲೆ ಚರ್ಚೆ ನಡೆಯುವಾಗ ಈ ವಿಚಾರ ಹೇಳಿದೆ. ಮಾನ್ಯ ಉಪಮಂತ್ರಿಗಳಾದ ಪ್ರಭಾಕರ್ ಅವರು ಹೇಳಿದರು. ನಾಗರತ್ನಮ್ಮ ಹೇಳುವುದೆಲ್ಲ, ಸುಳ್ಳು, ಸುಳ್ಳಿನ ಮೊಟ್ಟೆ ಎಂದು ಯಾರೋ ಹೇಳಿದರು ಎಂದು. ಅವರಿಗೂ ಮತ್ತು ಅವರಿಗೆ ಯಾರು ಹೇಳಿದರೋ ಅವರಿಗೂ

ಹೇಳುತ್ತೇನೆ. ಸುಳ್ಳಿನ ಮೊಟ್ಟೆ ನಾನು ಏಕೆ ಹೇಳಬೇಕು? ಶ್ರೀ ಪ್ರಭಾಕರ್ ಅವರು ಸುಳ್ಳಿನ ಮೊಟ್ಟೆ, ಇದು ಸುಳ್ಳು ಎಂದು ಹೇಳಿದ್ದಕ್ಕೆ ನನಗೆ ಬಹಳ ವ್ಯಸನವಾಯಿತು. ಏಕೆಂದರೆ ಅಂಥ ಸುಳ್ಳು ಹೇಳಬೇಕಾದ ಪ್ರಮೇಯವೇನೂ ಒದಗಿಲ್ಲ. ಪ್ರಪಂಚದಲ್ಲಿ ಬರಬಾರದಂಥ ಕಷ್ಟ ಬಂದರೂ ನಗುತ್ತ ಅದನ್ನು ಎದುರಿಸುತ್ತೇನೆ. ಹೊಟ್ಟೆಯಲ್ಲಿ ಎಷ್ಟೇ ಸಣ್ಣ ಕುದಿಯಲಿ ಅದನ್ನು ತೋರ್ಪಡಿಸುವುದಿಲ್ಲ. ಸುಳ್ಳು ಹೇಳಿ ನಾನು ಬದುಕಬೇಕಾಗಿಲ್ಲ.

ಸುಳ್ಳು ಹೇಳಿದ್ದಾರೆಂದು ಯಾರು ಇವರಿಗೆ ಹೇಳಿದರೋ ಅವರಿಗೆ ಅದು ಸುಳ್ಳಲ್ಲ, ನಿಜ ಹೇಳಿದ್ದಾರೆಂದು ಇವರು ಹೇಳಬೇಕಾಗಿತ್ತು. ನಮ್ಮ ಜನರಿಗೆ ನಾನು ದ್ರೋಹಮಾಡಬಾರದು, ಅದಕ್ಕೆ ಅವರು ನನ್ನನ್ನು ಆರಿಸಿ ಈ ಸಭೆಗೆ ಕಳುಹಿಸಿರುವುದು, ನಾನು ನಿಜ ಹೇಳಬೇಕೆಂದು. ನಾನು ನಿಜ ಹೇಳದಿದ್ದರೆ ಮುಂದೆ, ದೇವರ ಮುಂದೆ ನನಗೆ ಕ್ಷಮೆ ದೊರಕುವುದಿಲ್ಲವೆಂದು ತಿಳಿದು ನಿಜವನ್ನು ಹೇಳಿದ್ದೇನೆ. ಹೀಗಿರುವಾಗ ಅವರಿಗೆ ಯಾರಾದರೂ ಹಾಗೆ ಹೇಳಿದ್ದರೆ ಇವರೇ ಅವರಿಗೆ ಸರಿಯಾಗಿ ಹೇಳಬೇಕಾಗಿತ್ತು. ನಮ್ಮೂರಿನಲ್ಲಿರುವ ಕ್ಷಾಮ ನಿಮ್ಮೂರಿನಲ್ಲೆಲ್ಲಿಯೂ ಇಲ್ಲವೆಂದು ಅವರಿಗೆ ಹೇಳುತ್ತೇನೆ. ನಮ್ಮ ಮಂತ್ರಿಗಳು ಅಲ್ಲಿ ಬಂದು ನೋಡಬೇಕು. ಅಲ್ಲಿ ಕ್ಷಾಮವಿಲ್ಲ, ಆದ್ದರಿಂದ ರಿಲೀಫ್ ಕಾಮಗಾರಿಗಳನ್ನು ಮಾಡಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರಂತೆ. ರಿಲೀಫ್ ವರ್ಕ್ಸ್‌ನಲ್ಲಿ ಕೊಟ್ಟರೂ ಹತ್ತಾಣೆ ಕೂಲಿ ಕೊಟ್ಟು ಕೆಲಸ ಮಾಡಿ ಎಂದು ಹೇಳುತ್ತಾರೆ. ಇವರು ಕೊಡುವ ಹತ್ತಾಣೆಗೆ ಮುಕ್ಕಾಲುಸೇರು, ಒಂದು ಸೇರು ಅಕ್ಕಿ ಕೂಡ ದೊರಕುವುದಿಲ್ಲ. ಇದನ್ನು ಬಿಟ್ಟು ಹತ್ತು ಮೈಲಿ ದೂರ ಹೋದರೆ ಅಲ್ಲಿ ನಡೆಯುತ್ತಿರುವ ಯೋಜನೆಯಲ್ಲಿ ಅವರಿಗೆ ಕೆಲಸ ಸಿಕ್ಕುತ್ತದೆ, ಹೆಚ್ಚಿನ ಕೂಲಿ ಸಿಕ್ಕುತ್ತದೆ. ರೆವಿನ್ಯೂ ಅಧಿಕಾರಿಗಳು ಬಿ.ಡಿ.ಓ.ಗೆ ಹಾಕುವುದು. ಇವರು ಮತ್ತೆ ಅವರಿಗೆ ಕಳುಹಿಸುವುದು, ಹೀಗೆ ಮಾಡಿ ಇಬ್ಬರೂ ಸೇರಿ ಎರಡು ತಿಂಗಳು ಕಾಲ ಕಳೆದರು, ಎಲ್ಲರೂ ಬಡಜನರ ಕಡೆ ಕೈತೋರಿಸುತ್ತಾರೆ: ಆದರೆ ಅಧಿಕಾರಿಗಳು ಮಾಡುವುದು ಅವರಿಗೆ ಗೊತ್ತಾಗುವುದಿಲ್ಲ. ತಕಾವಿ ಸಾಲ ಕೇಳಿದರೆ ಬಿದರೆಗೆ ಅಷ್ಟು ಕೊಟ್ಟೆವು, ಗುಲ್‌ಬರ್ಗಕ್ಕೆ ಇಷ್ಟು ಕೊಟ್ಟೆವು ಎಂದು ಲೆಕ್ಕ ಹೇಳುತ್ತಾರೆ. ಅಲ್ಲಿ ದನಗಳಿಗೆ ಕುಡಿಯಲು ನೀರಿಲ್ಲ; ತಿನ್ನಲು ಹುಲ್ಲಿಲ್ಲ. ಇಂತಹ ಸಮಯದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರು ಮನೆಮನೆಗೆ ಹೋಗಿ ನುಗ್ಗಿ ಕಂದಾಯ ವಸೂಲು ಮಾಡುತ್ತಿದ್ದಾರೆ. ಜನರು ಕಂದಾಯವನ್ನು ಯಾವ ರೀತಿ ಕೊಡಬೇಕು? ಜನರಲ್ಲಿ ವಿಷ ತೆಗೆದುಕೊಳ್ಳಬೇಕೆಂದರೂ ಮೂರು ಕಾಸಿಲ್ಲ. ಹೀಗಿರುವಾಗ ನಮಗೆ, ನಮ್ಮ ತಾಲ್ಲೂಕಿಗೆ ಅನುಕೂಲ ಕೊಡದಿರುವುದು ಸರಕಾರಕ್ಕೆ ಅವಮಾನಕರ. ಆದಕಾರಣ, ಅಲ್ಲಿನ ಕಷ್ಟವನ್ನು ನಿವಾರಣೆ ಮಾಡಬೇಕು. ನಮ್ಮಲ್ಲಿ ಬೇಕಾದಷ್ಟು ಎಕ್ಸೈಸ್ ಫಂಡ್ಸ್ ಇದೆ. ಮಂತ್ರಿಗಳು ನಂಜನಗೂಡಿನಿಂದ ಮುಂದಕ್ಕೆ ಏಕೆ ಬರುವುದಿಲ್ಲ?

ಶ್ರೀ ಎಂ.ವಿ.ಕೃಷ್ಣಪ್ಪ - ನಾನು ಹೋದ ವರ್ಷ ಬಂದಿದ್ದೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ಯಾವುದೋ ಸಂಸ್ಥೆಯನ್ನೋ, ಕಟ್ಟಡವನೋ ಪ್ರಾರಂಭೋತ್ಸವ ನಡೆಸುವುದಕ್ಕೆ ಬಂದಿದ್ದರೆಂದು ಕಾಣುತ್ತದೆ;ನಾವು ಅಂತಹ ಸಮಾರಂಭಗಳನ್ನಿಟ್ಟುಕೊಳ್ಳಲು ನಮ್ಮಲ್ಲಿ ಹಣವಿಲ್ಲ. ದಯವಿಟ್ಟು ಚಾಮರಾಜನಗರ, ಕೊಳ್ಳೇಗಾಲ ಮತ್ತು ನಮ್ಮ ತಾಲ್ಲೂಕು, ಈ ಎಲ್ಲ ಕಡೆಯೂ ಬಂದು ಮಂತ್ರಿಗಳು ನೋಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ವಿಧಾನಸಭೆ ಕಲಾಪ;ದಿನಾಂಕ:21-3-1964)

## 7. ರಾಜ್ಯ ಆಯವ್ಯಯ ಪತ್ರ ಕುರಿತು ಚರ್ಚೆ

### 1967

ಮಾನ್ಯ ಅಧ್ಯಕ್ಷರೇ, ಈ ದಿವಸ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಚರ್ಚೆಯಾಗುತ್ತಿರವಾಗ ನಾನು ಕೆಲವು ವಿಚಾರಗಳನ್ನು ಮತ್ತು ಸೂಚನೆಗಳನ್ನು ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ನಮ್ಮ ತಾಲ್ಲೋಕಿನ ಪರವಾಗಿ ಮತ್ತು ಬರಗಾಲ ಪ್ರದೇಶದಲ್ಲಿ ವಾಸಿಸುತ್ತಿರುವ ನಮ್ಮ ತಾಲ್ಲೂಕಿನವರ ಪರವಾಗಿ ಲೋಕೋಪಯೋಗಿ ಇಲಾಖೆಗೆ ಮತ್ತು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಸರಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸದಿದ್ದರೆ ಕರ್ತವ್ಯಲೋಪಮಾಡಿದಂತಾಗುತ್ತದೆ. ಏಕೆಂದರೆ ನಾವು 10-12 ವರ್ಷಗಳಿಂದ ಎಷ್ಟೋ ಕಷ್ಟಪಟ್ಟವರು. ಈಗ ಚನ್ನಬಸಪ್ಪನವರಿಲ್ಲ. ಅವರಿದ್ದರೆ ಚೆನ್ನಾಗಿತ್ತು. ಅವರು ಎಷ್ಟೋ ಸಾರಿ ಟೆಕ್ನಿಕಲ್ ಸಾಂಕ್ಶನ್,ಆಗಿದೆಯೇ, ಅಪ್ರೂವ್ ಮಾಡಿದರೆ ಏಕೆ ಮಾಡಿದ್ದಾರೆ ಎಂಬುದಾಗಿ ಹತ್ತಾರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರು ನಮ್ಮ ತಾಲ್ಲೂಕನ್ನು ಏನು ಮಾಡಿದ್ದರು ಏನು ಆಗಿತ್ತು ಹೇಳುತ್ತಿದ್ದೆ. ಅವರು ಮಾಡಿರುವ ಪಾಪವನ್ನು ಅವರ ಕಾಲದಲ್ಲಿ ತಾಲ್ಲೂಕು ಸುಟ್ಟು ಭಸ್ಮವಾಗಿದ್ದನ್ನು ಇನ್ನೊಂದು ದಿವಸ ಅವರಿದ್ದಾಗ ಹೇಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ನನಗೆ ಗೊತ್ತಿರುವ ವಿಚಾರ ಹೇಳುತ್ತೇನೆ. ನಿನ್ನೆ ನನಗೆ ಒಂದು ಪುಸ್ತಕ ಸಿಕ್ಕಿದೆ ಅದರಲ್ಲಿ ಮೈಸೂರು ಜಿಲ್ಲೆಯ ಕೆಲವು ವಿಚಾರ ತಿಳಿಸಿದ್ದಾರೆ. ಅದರಲ್ಲಿ ಒಂದು ದೊಡ್ಡ ಪಟ್ಟಿಯಿದೆ, ಯಾವ ಕೆಲಸ ತೆಗೆದುಕೊಳ್ಳಬಹುದು, ತೆಗೆದು ಕೊಳ್ಳಬೇಕಾದ್ದೆಷ್ಟಿದೆ ಎಂಬ ವಿವರವಿದೆ. ಆದರೆ ಕೆಲವು ಎರಡು ಮೂರು ಸಲ ಪ್ರಿಂಟಾಗಿರುವುದರಿಂದ ದೊಡ್ಡ ಪಟ್ಟಿ ಕಂಡಿತೇ ಹೊರತು ಇರುವ ಕೆಲಸಗಳ ಪಟ್ಟಿ ನಿಜವಾಗಿ ನೋಡಿದರೆ ಚಿಕ್ಕದು, ದಯವಿಟ್ಟು ಹಾಗೆ ಮಾಡಬಾರದು, ಎಷ್ಟು ಕೆಲಸಗಳಿವೆಯೋ ಅಷ್ಟೇ ತೋರಿಸಬೇಕು. ಹಾಗೆ ಮಾಡಿ ಮನಸ್ಸು ಶಾಂತವಾಗುವ ಹಾಗೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಈ ಪುಸ್ತಕದಲ್ಲಿ ಬಾಡಿಗೆ ಮನೆ ಯೋಜನೆ ಇದೆ, ನಮ್ಮ ತಾಲ್ಲೂಕಿನ ಯಾವ ಯೋಜನೆಯೂ ಇಲ್ಲ, ನಮ್ಮ ತಾಲ್ಲೂಕಿಗೆ ಯಾವ ಮಂತ್ರಿಗಳೂ ಬರುವುದಿಲ್ಲ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳೂ ಬರುವುದಿಲ್ಲ. ಚೀಫ್ ಇಂಜಿನಿಯರ್ ಜನರಲ್‌ರವರು  ಒಂದು ಸಲ ಬರುತ್ತಿದ್ದಾಗ ಆಕ್ಸಿಡೆಂಟಾಗಿ ಅವರು ಬರುವುದಕ್ಕಾಗಲಿಲ್ಲ. ಮಂತ್ರಿಗಳಂತೂ ಬರುವುದೇ ಇಲ್ಲ. ಯಾರು ಮಂತ್ರಿಸಿ ನೀರು ಹಾಕಿದ್ದಾರೋ ಏನೋ ನಮ್ಮ ತಾಲ್ಲೂಕಿನಲ್ಲಿ ಯಾವ ಯೋಜನೆಯನ್ನೂ ತೆಗೆದುಕೊಳ್ಳುವುದಿಲ್ಲ. ಬಾಡಿಗೆ ಮನೆ ಯೋಜನೆ ನೋಡಿದರೆ ಚಾಮರಾಜನಗರಕ್ಕೆ 4 ಲಕ್ಷ ಕೊಟ್ಟಿದ್ದಾರೆ. ಗುಂಡ್ಲುಪೇಟೆಗೆ ಯಾವುದೂ ಬೇಡವೇ? ರಾಚಯ್ಯನವರು ನಮಗೆ 10-12-ಮೈಲಿ ದೂರದಲ್ಲಿದ್ದರೂ ಅಭಾವ ಪ್ರದೇಶವಾದ ನಮ್ಮ ತಾಲ್ಲೂಕಿಗೆ ಅಲ್ಲಿಂದ ನೀರನ್ನೊದಗಿಸುವುದಾಗಲೀ ಅಥವಾ ಬೇರೆ ಯಾವ ಸಹಾಯಕ್ಕಾಗಲೀ ಬರುವುದಿಲ್ಲ. ಅವರು ತಮಗೆ ಬೇಕಾದ ಅನುಕೂಲಮಾಡಿಕೊಳ್ಳುತ್ತಿದ್ದಾರೆ. ನೀರಾವರಿಯಿಲ್ಲದಿರುವ ಗುಂಡಲುಪೇಟೆ ತಾಲ್ಲೂಕಿನಲ್ಲೆ ಯಾವುದಾದರೂ ಕೆರೆಯಾದರೂ ಆಗಲಿ ಅಂದರೆ ಅದಕ್ಕೂ ಬ್ರೇಕ್ ಹಾಕುತ್ತಾರೆ. ಹಾಗೆ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನುಗು ರಿಸರ್ವಾಯಿರ್ 20 ಸಾವಿರ ಎಕರೆಗಳಿಗೆ ನೀರನ್ನೊದಗಿಸುವುದು. ಅದರಲ್ಲೂ 2-3 ವರ್ಷದಿಂದ ನೀರಿಲ್ಲದೆ ತೊಂದರೆಯಾಗಿದೆ. ಕಪಿನಿಯೋಜನೆ ಕೈಬಿಡುವ ಪರಿಸ್ಥಿತಿ ಕಾಣುತ್ತಿದೆ.

ಅದನ್ನು ಕೈಬಿಡಬಾರದು, ಕಪಿನಿ ಯೋಜನೆಯಿಂದ ಫೀಡರ್‌ಚಾನಲನ್ನು ನುಗು ಜಲಾಶಯಕ್ಕೆ ಒದಗಿಸಲು ಅನುಕೂಲವಾಗಬೇಕು. 48ನೆಯ ಪುಟದಲ್ಲಿ ಮಂಗಳ ಪ್ರಾಜೆಕ್ಟ್ ನಮೂದಿಸಲಾಗಿದೆ. ಇದರಿಂದ ಯಾರಿಗೆ ಅನುಕೂಲ? ರಾಚಯ್ಯನವರಿಗೇ ಅನುಕೂಲವಾಗಬಹುದು, ಅವರ Game Sanctuary ಆನೇ,ಕುರಿ, ಕರಡಿ ಮುಂತಾದವುಗಳಿಗೆ ಅನುಕೂಲವಾಗುವ ಹಾಗೆ ಇದನ್ನು ತೆಗೆದುಕೊಳ್ಳಲು ಸೇರಿಸಿದ್ದಾರೆಯೇ ಹೊರತು ಜನರಿಗೆ ಅನುಕೂಲವಾಗಲೆಂದು ಸೇರಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ಆದರೆ ಇಬ್ಬರು ಅಥವಾ ಮೂರು ಜನರಿಗೆ ಅನುಕೂಲವಾಗಬಹುದು, ಅಷ್ಟೆ. ಆದುದರಿಂದ ದಯಮಾಡಿ ಇದನ್ನೇ ದೊಡ್ಡದುಮಾಡಿ ಬಾಕಿ ಕೆಲಸ ಕೈಬಿಡದೆ ಜನರಿಗೆ ಬೇಕಾದ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹೆಬ್ಬಳ್ಳ ಪ್ರಾಜೆಕ್ಟ್ ಗುಂಡಲಿಗೆ ಸೇರಿಸುವುದಿದೆ. ಚೀಫ್ ಇಂಜಿನಿಯರು ಅದನ್ನು ನೋಡಿದ್ದಾರೆ, ನಿಜವಾಗಿಯೂ ಇದರಿಂದ ಜನತೆಗೆ ಅನುಕೂಲವಾಗುತ್ತದೆ. ಅದನ್ನು ಮಾಡಿದರೆ ಗುಂಡಲುಪೇಟೆ ಜನರಿಗೆ ನೀರು ದೊರೆಯುತ್ತದೆ, ಗುಂಡಲು ನೀರು ದೊರೆತು ನೀರಾವರಿಗೆ ಅವಕಾಶವಾಗುವುದು. ಆದುದರಿಂದ ಹೆಬ್ಬಳ್ಳ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳಬೇಕು. ಕಮರಹಳ್ಳಿ ಪ್ರಾಜೆಕ್ಟ್ ಮಾಡಿದ್ದಾರೆ, ಆದರೆ ಅದನ್ನು ಪೂರೈಸಿದರೆ ನೀರು ಯಾರಿಗೋ ಇತರರಿಗೆ ದೊರೆತು ಗುಂಡಲುಪೇಟೆ ತಾಲ್ಲೂಕಿನವರ ಜಮೀನು ಮುಳುಗಡೆಯಾಗುವುದು ಕಂಡು ಬಂದಿದೆ. ಮುಳುಗಡೆಯಾಗಿರುವ ಪ್ರದೇಶದ ಮಾಲೀಕರಿಗೆ ಪರಿಹಾರ ಸಹ ಕೊಟ್ಟಿಲ್ಲ. ದಯೆಯಿಟ್ಟು ಬೇಗ ಅದನ್ನು ಪಾವತಿಮಾಡಬೇಕು.

ಆಮೇಲೆ ದೊಡ್ಡ ದೊಡ್ಡ ಕಟ್ಟಡಗಳಿಗೆ ವಿಪರೀತ ಹಣವನ್ನು ಪಟ್ಟಣಗಳಲ್ಲಿ ಖರ್ಚು ಮಾಡುವುದು ವ್ಯರ್ಥ ಎಂದು ಮಾನ್ಯ ಸದಸ್ಯರು ಈಗತಾನೇ ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಶಾಲೆಗಳಿಗೆ ಕೇಳಿದರೆ ಹಣವಿಲ್ಲ ಎಂದು ಹೇಳುವುದು ಆಗಬೇಕಾದ ಕಟ್ಟಡಗಳಿಗೆ ಹಣವಿಲ್ಲ ಹೆಣ್ಣುಮಕ್ಕಳ ಶಾಲೆಗಳ ಬಳಿ ಲ್ಯಾವೇಟರೀಸ್ ಕಟ್ಟಿಸುವುದಕ್ಕೆ ಹಣ ಕೊಡುವುದಿಲ್ಲ, ರಾಜ್ಯಪಾಲರ ಬಂಗಲೆ ಕೆಲಸ ಮುಂತಾದುವುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದು ಅನ್ಯಾಯ. ಈ ರೀತಿ ಅನಾವಶ್ಯಕವಾದ ಕೆಲಸಗಳಿಗೆ ದುಬಾರಿ ಖರ್ಚುಮಾಡುವುದನ್ನು ಬಿಟ್ಟು ಹಳ್ಳಿಗಳಲ್ಲಿ ಹೆಣ್ಣುಮಕ್ಕಳ ಶಾಲೆಗಳಿಗೆ ಅನುಕೂಲಮಾಡಿಕೊಡಿ.

ಹೀಗೆ ಮಿಡಲ್ ಸ್ಕೂಲ್ ಇದೆ, ಗರ್ಲ್ಸ್ ಸ್ಕೂಲ್ ಇದೆ, ನಮ್ಮ ಗುಂಡ್ಲುಪೇಟೆಯಲ್ಲಿ. ಅಲ್ಲಿ ನಾನು ನೋಡಿದ್ದೇನೆ ಮಕ್ಕಳನ್ನು ಕುರಿ ತುಂಬಿದ ಹಾಗೆ ತುಂಬುತ್ತಾರೆ. ಇಂಥದಕ್ಕೆ ದುಡ್ಡು ಖರ್ಚುಮಾಡಿ ಕೆಲಸ ಮಾಡಬೇಕು. ಅಲ್ಲದೆ, ಅಲ್ಲಿ ಇಲ್ಲಿ ಏರ್ ಕಂಡೀಶನ್‌ನ ಬಿಲ್ಡಿಂಗ್ ಕಟ್ಟಿಸುವುದಕ್ಕೆ ದುಡ್ಡು ಖರ್ಚು ಮಾಡುವುದು ಶುದ್ಧ ಅನ್ಯಾಯ.

ವಾಟಾಳ್ ನಾಗರಾಜ್ - ಏರ್ ಕಂಡೀಶನ್ ಆಗಬಾರದು

ಶ್ರೀಮತಿ ನಾಗರತ್ನಮ್ಮ - ಇನ್ನು ಈ ಮುದಗೂರ್ ಟ್ಯಾಂಕ್ ಕೆಲಸ ನಡೆಯುತ್ತಿದೆ. ನಮ್ಮ ಡಿವಿಜನ್‌ಗೆ ಅಲ್ಲೇನು ಆಫೀಸರನ್ನು ಪೋಸ್ಟು ಮಾಡುತ್ತಾರೋ, ಗೊತ್ತಿಲ್ಲ. ಮೊದಲು ಒಬ್ಬ ಎಕ್ಸಿಕ್ಯೂಟಿವ್ ಇಂಜಿನೀಯರ್ ಇದ್ದರು. ಈಗ ಇನ್ನೊಬ್ಬರು ಬಂದಿದ್ದಾರೆ. ಇವರ ರೂಲ್ಸ್, ಏನೆಂದರೆ, ಗೊತ್ತಿಲ್ಲವೆನ್ನುತ್ತಾರೆ. ಇಂಥ ಸ್ಕೇರ್ಸಿಟಿ ಪರಿಸ್ಥಿತಿಯಲ್ಲಿ ಈ ರೀತಿ ಮಾಡಬಾರದು. ಇನ್ನು ನಾಲೂರು ಅಮನಿಕೆರೆಯ ಕೆಲಸ ಕೂಡ ನಿಂತು ಹೋಗಿದೆ. ಅಲ್ಲಿಯ ಕೆಲಸ ಕೂಡ ನಿಂತು ಹೋಗಿ, ಅಲ್ಲಿ ಏನಾದರೂ ಕೂಲಿ ಮಾಡತಕ್ಕ ಜನರಿಗಾದರೂ ಅನುಕೂಲವಾಗುತ್ತಿತ್ತು. ಅದು ಕೂಡ ಇಲ್ಲದಾಗೆ ಆಗಿದೆ.

ಇನ್ನು ನಂಜನಗೂಡು ಬ್ರಿಜ್, ಅಲ್ಲಿ ಒಂದು ಸಾರಿ ಹೋದರೆ, ಒಂದೊಂದು ಗಂಟೆ ಕಾಯಬೇಕು, ಒಂದು ಬಸ್, ಕಾರು ಗಾಡಿ ಎಂದು ಬರಲಿಕ್ಕೇನೇ ಆಗುವುದಿಲ್ಲ. ಅದನ್ನು ನೀವು ತೆಗೆದುಕೊಂಡು ಸ್ವಲ್ಪ ಅನುಕೂಲವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಇನ್ನು ಪವರ್ ಫೈಲ್ಯೂರ್. ನಮ್ಮ ಸಹೋದರಿ, ಶ್ರೀಮತಿ ಬಸವರಾಜೇಶ್ವರಿ ಯವರು ಹೇಳಿದರು-ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ, 20-25 ಜನರನ್ನು ನೀರು ಬಿಡುವುದಕ್ಕೆ ಕರಕೊಂಡು ಹೋದಾಗ, 10-15 ಸಾರಿ ವಿದ್ಯುಚ್ಛಕ್ತಿ ಫೈಲ್ಯೂರ್ ಆದರೆ, ಇಲಾಖೆಯ ಮೇಲೆ ಕೇಸ್ ಹಾಕುವ ಪರಿಸ್ಥಿತಿ ಬರುತ್ತದೆ. ಹೀಗಾಗಬಾರದು, ಇದನ್ನು ಸರಿಪಡಿಸುವುದಕ್ಕೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ನಿಮ್ಮ ಟ್ರಾನ್ಸ್‌ಫಾರ್ಮರ್ಸ್ ಏನಿವೆ, ಅವನ್ನು ಎಲ್ಲಾ ಒಳ್ಳೆಯ ರೀತಿಯಿಂದ ಇಡಬೇಕು ಕೆಲವು ಕಡೆ ಇದರಿಂದ ರೈತರ, ಪಂಪ್‌ಸೆಟ್ಟೇ ಭಸ್ಮವಾಗುವ ಪರಿಸ್ಥಿತಿ ಬರುತ್ತದೆ. ಮತ್ತು ಅದನ್ನು ರೈತರಿಗೆ ರಿಪೇರಿ ಮಾಡಬೇಕಾದರೆ, 300-400 ರೂಪಾಯಿ ಖರ್ಚಾಗುತ್ತದೆ.

ಇನ್ನು ಈ ಟ್ರಾನ್ಸ್‌ಫರ್ಸ್ ವಿಚಾರ, ಕೆಲವರು ನಮ್ಮನ್ನು ಕಾಡಿ, ಬೇಡಿಕೊಳ್ಳುತ್ತಿದ್ದಾರೆ. ಅವರ ನಿಜವಾದ ಸ್ಥಿತಿಯನ್ನು ಹೇಳಿದರೆ; ಖಂಡಿತವಾಗಿ ಅದನ್ನು ಮಾಡಬೇಕು. ಏಕೆಂದರೆ, ನಮ್ಮ ಕೈಯಲ್ಲಿ ಆಗುವುದಿಲ್ಲವೆಂದ ತಕ್ಷಣ, ಅವರು ಹಿಂದಿನ ಬಾಗಿಲುಗಳಲ್ಲಿ ಹೋಗುತ್ತಾರೆ. ಒಬ್ಬೊಬ್ಬರು ಒಂದೊಂದು ಸಾವಿರ ರೂಪಾಯಿ ಖರ್ಚು ಮಾಡಿತ್ತಿದ್ದುದನ್ನು ನಾನು ನೋಡಿದ್ದೇನೆ. ನಿಮ್ಮ ಚೀಫ್ ಇಂಜಿನಿಯರ ಮಾತು, ಏನೂ ನಡೆಯುವುದಿಲ್ಲ. ಅಲ್ಲಿ ಒಬ್ಬರು ಇದ್ದಾರೆ, ಹಣ ಕೊಡದೆ ಯಾವ ಟ್ರಾನ್ಸ್‌ಫರ್ಸ್ ಕೂಡ ಮಾಡುತ್ತಿಲ್ಲ, ಪೇಪರಿಗೆ ಸೈನ್ ಕೂಡ ಮಾಡುವುದಿಲ್ಲ. ನೀವೇ ಅದರಿಂದ ಮಾಡಿದರೆ ತಂಟೆ, ದೂರು ಎಲ್ಲಾ ತಪ್ಪಿಹೋಗುತ್ತದೆ. ಇದು ಮೇಜರ್ ಇರಿಗೇಷನ್ ಚೀಫ್ ಇಂಜೀನಿಯರ್ ಆಫೀಸಿನಲ್ಲಾಗಲೀ ಚೀಫ್ ಇಂಜೀನಿಯರ್ ಜನರಲ್ ಆಫೀಸಿಸಲ್ಲಾಗಲೀ ಇಲ್ಲ ಸಿ, ಮತ್ತು ಬಿ ಆಫೀಸಿನಲ್ಲಿ ನಡೆಯುತ್ತಿದೆ. ಇದು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಆದ್ದರಿಂದ ಇನ್ನಾದರೂ ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಹೇಳುತ್ತೇನೆ.

ಕೊನೆಯದಾಗಿ, ಒಗರಗಟ್ಟ ಪ್ರೊಜೆಕ್ಟ್ ಆಗಿದೆ. ಅಲ್ಲಿ ಮಳೆ ಇಲ್ಲದೆ ನೀರು ಸಾಕಾಗುತ್ತಾ ಇಲ್ಲ. ಅದಕ್ಕೆ ಆಂಜನೇಯನ ದೇವಸ್ಥಾನದ ಹತ್ತಿರ ಹರಿಯುತ್ತಾ ಇರುವ ನೀರನ್ನು ಇದಕ್ಕೆ ಸೇರಿಸಿಕೊಂಡರೆ, ಈ ಟ್ಯಾಂಕಿಗೆ ಸಹಾಯವಾಗುತ್ತದೆ. ಈ ವಿಚಾರದಲ್ಲಿ ಸುಮಾರು ಅರ್ಜಿಗಳು ಬಂದಿವೆ. ಅದನ್ನು ದಯವಿಟ್ಟು ಪರಿಶೀಲಿಸಿ, ಕೆಲಸಮಾಡಿಸಿಕೊಡಬೇಕೆಂದು ಹೇಳಿ, ಅಧ್ಯಕ್ಷರಿಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ, ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ವಿಧಾನ ಸಭಾ ಕಲಾಪ-ದಿ; 20-7-1967)

# 8. ವ್ಯವಸಾಯ ಕೈಗಾರಿಕೆ ಮತ್ತು ಸಾಮಾನ್ಯ ಆಡಳಿತ ಕುರಿತು

## 1967

ಅಧ್ಯಕ್ಷರೇ, ಈ ಮೂರು ಬೇಡಿಕೆಗಳು ಅಂದರೆ, ವ್ಯವಸಾಯ, ಕೈಗಾರಿಕೆ ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಚರ್ಚೆಯಾಗುವ ಸಂದರ್ಭದಲ್ಲಿ ನಾನಾದರೂ ಕೆಲವು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ವ್ಯವಸಾಯದ ವಿಚಾರವಾಗಿ ಈಗ ಆಗುತ್ತಾ ಇರತಕ್ಕ ಕೆಲವು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ರಾಮೇಗೌಡರು ರೈತರಿಗೆ ಈಗ ಏನೇನು ಸಿಗುತ್ತಿದೆ, ಏನೇನು ಸಿಗುತ್ತಾ ಇಲ್ಲ, ಉಳುವ ಹಾಗೂ ಬೆಳೆಯುವ ರೈತನಾದವನಿಗೇ ಆಹಾರ ಎಷ್ಟರಮಟ್ಟಿಗೆ ಆಗುತ್ತಿದೆ, ಆಗುತ್ತಾ ಇಲ್ಲವೆನ್ನುವುದನ್ನು ಬಹಳ ಚೆನ್ನಾಗಿ ವಿಷದಪಡಿಸಿದ್ದಾರೆ. ದಯಮಾಡಿ ಅದನ್ನು ಜಾಗ್ರತೆಯಾಗಿ ಸರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಿನ ಕಾಲ ಹೈಬ್ರಿಡ್ ಜೋಳವನ್ನು ಜಾಸ್ತಿಯಾಗಿ ಉತ್ಪತ್ತಿ ಮಾಡುವ ಕಾಲ. ಇಂತಹ ಕಾಲದಲ್ಲಿ ಬಿತ್ತನೆ ಬೀಜಗಳು ಏನಿವೆಯೋ ಅವನ್ನು ಸೊಸೈಟಿಗಳ ಮುಖಾಂತರ ಮಾರಬೇಕೆಂದು ನಿಗದಿಯಾಗಿದೆ. ಈಗ ಅದನ್ನು ಕೊಯಮತ್ತೂರಿನಲ್ಲಿ ಕೇವಲ 8 ರೂಪಾಯಿಗಳಿಗೆ ಮಾರುತ್ತಿದ್ದರೆ ಗುಂಡ್ಲುಪೇಟೆಯಲ್ಲಿ 12-13 ರೂಪಾಯಿಗಳಿಗೆ ಮಾರುತ್ತಿದ್ದಾರೆ. ಆದ್ದರಿಂದಲೇ ಅದರ ಉಪಯೋಗ ಅರ್ಧಕ್ಕೆ ಇಳಿಯಿತು. ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ಸ್, ಮತ್ತು ಕೆಲವು ಸೊಸೈಟಿಗಳ ಅಧಿಕಾರಿಗಳು ಅದನ್ನು ಲಾಭಕ್ಕೆ ಮಾರುವುದಲ್ಲದೆ ರೈತರಿಗೆ ತಂಬಾ ಅನ್ಯಾಯಮಾಡುತ್ತಿದ್ದಾರೆ. ಅಂತಹವರನ್ನು ಹಾಕಿದರೆ ಏನೂ ಉಪಯೋಗವಿಲ್ಲ. ಇಂಥಾದ್ದನ್ನು ಪೂರ್ತಿಯಾಗಿ ತಪ್ಪಿಸಿ ಬಿತ್ತನೆಬೀಜಗಳು ರೈತರಿಗೆ ಸರಿಯಾದ ರೀತಿಯಲ್ಲಿ ದೊರಕುವಂತೆ ಮಾಡಬೇಕು. ಒಂದು ವೇಳೆ ಹೈಬ್ರಿಡ್ ಜೋಳ ಸಾಕಷ್ಟು ದೊರಕಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ಅದಕ್ಕೆ ಬದಲಾಗಿ ಸಾಕಾಗುವಷ್ಟು ರಾಸಾಯನಿಕ ಗೊಬ್ಬರವನ್ನಾದರೂ ಸರಬರಾಜು ಮಾಡಬೇಕು.

ಇನ್ನು ಫರ್ಟಿಲೈಜರ್ಸ್ ಇಟ್ಟುಕೊಂಡಿರುವವರು ಈಗ ಅದರ ಬೆಲೆಯನ್ನು ಶೇಕಡ 57 ರಷ್ಟು ಜಾಸ್ತಿಮಾಡಿದ್ದಾರೆ. ಇದಕ್ಕಾಗಿ ಸರ್ಕಾರದವರು ಸಬ್ಸಿಡೈಜ್ ಮಾಡದೆ ಇದ್ದರೆ ಆಗುವುದಿಲ್ಲ. ಈಗ ರೂಪಾಯಿಯ ಡಿ-ವ್ಯಾಲ್ಯುಯೇಷನ್ ಆಗಿರುವುದರಿಂದ ಇನ್‌ಸೆಕ್ಟಿಸೈಡ್ಸ್ ಮತ್ತು ಪೆಸ್ಟಿಸೈಡ್ಸ್ ಬೆಲೆ ಜಾಸ್ತಿಯಾಗಿ ಅವು ಹೆಚ್ಚಿಗೆ ಸಿಗುತ್ತಾ ಇಲ್ಲ, ಅದಕ್ಕಾಗಿ ಸುಳಿಗೆ ಹುಳುಬಿದ್ದಾಗ ಆ ಔಷಧಿಗಳನ್ನು ಉಪಯೋಗಿಸುವುದಕ್ಕಾಗಿ ಅವು ಯಾ ಗ್ರಾಮ ಪಂಚಾಯತಿಗಳಲ್ಲಿ ಸಿಗುವ ಹಾಗೆ ಮತ್ತು ಸೊಸೈಟಿಯವರ ಮುಖಾಂತರ ಸಿಗುವ ಹಾಗೆ ವ್ಯವಸ್ಥೆಮಾಡಬೇಕು.

ಇನ್ನು ಟ್ರಾಕ್ಟರ್ಸ್ ಮತ್ತು ಡೀಸಲ್ ಪಂಪ್ಸ್ ಇಟ್ಟುಕೊಂಡಿರುವವರು ಡೀಸಲ್ ಖರೀದಿ ಬಹಳ ಜಾಸ್ತಿಯಾಗಿದೆ; ವ್ಯಾಪಾರಸ್ಥರು ಡೀಸಲ್‌ಗೆ ಸೀಮೆ ಎಣ್ಣೆಯನ್ನು, ವಿಶೇಷವಾಗಿ ಬೆರೆಸುತ್ತಿದ್ದಾರೆಂದು ಹೇಳಿದರು. ಆದರಿಂದಾಗಿ ಟ್ರಾಕ್ಟರುಗಳಿಂದ ಈಗ ಅಷ್ಟಾಗಿ ಕೆಲಸವೇನೂ ಆಗುತ್ತಾ ಇಲ್ಲ. ಆದ್ದರಿಂದ ಈ ಒಳ್ಳೆಯ ಡೀಸಲ್ ಆಯಲನ್ನು ಸಬ್ಸಿಡೈಜ್ಡ್ ರೇಟ್‌ನಲ್ಲಿ ಕೊಡಬೇಕು. ಈಗ ಡಿವ್ಯಾಲ್ಯುಯೇಷನ್ ಆದಮೇಲೆ ಟ್ರಾಕ್ಟರುಗಳಿಗೋಸ್ಕರ ಸಾಲ ಕೇಳಿದವರಿಗೆ 25 ಸಾವಿರ

ರೂಪಾಯಿಗಳಷ್ಟು ಸಾಲವನ್ನು ಕೊಡಬಹುದೆಂದು ನಿಗದಿಮಾಡಿದ್ದಾರೆ. ಅದರ ಬೆಲೆ ಈಗ ಜಾಸ್ತಿಯಾಗಿರುವುದರಿಂದ ಇಲಾಖೆಯಿಂದ ಅವನ್ನು ರಿಲೀಜ್ ಮಾಡಿದರೆ ಕಂಪೆನಿಯವರೇ ತೆಗೆದುಕೊಳ್ಳಲು ಸಿದ್ದರಾಗುತ್ತಿದ್ದರು. ಡಿ-ವ್ಯಾಲ್ಯುಯೇಷನ್ ಆಗುವುದಕ್ಕೆ ಮುಂಚೆ ವಿನಾಕಾರಣ ಈ ಕಾಗದಗಳನ್ನು ಇಟ್ಟುಕೊಂಡು ಅವರಿಗೆ ಕೊಡದೆ ಬೆಲೆಗಳು ಜಾಸ್ತಿಯಾಗಿವೆ. ಆದರೂ ಸಾಲಗಳನ್ನು ಜಾಸ್ತಿಕೊಡುತ್ತಾ ಇಲ್ಲ. ಎಷ್ಟೇ ಆಧಾರ ಕೊಟ್ಟರೂ ಸಾಲ ಕೊಡುತ್ತಾ ಇಲ್ಲ.

ಇದರಿಂದ ಟ್ರಾಕ್ಟರುಗಳು ಅವರಿಗೆ ದೊರಕುತ್ತಾ ಇಲ್ಲ. ಮಾನ್ಯ ಶ್ರೀ ರಾಮೇಗೌಡರು ಹೇಳಿದ ಹಾಗೆ ರಿಜಿಸ್ಟ್ರೇಷನ್ ಕಾಲದಲ್ಲಿ ಅನೇಕರು 700 ರೂಪಾಯಿಗಳನ್ನು ಸಾಲ್‌ವೆನ್ಸಿ ಸರ್ಟಿಫಿಕೇಟ್‌ಗೆ ಖರ್ಚು ಮಾಡಿದ್ದಾರೆ. ಮುಂದೆ ಬರುವವರಿಗೆ 3 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇದೇ ರೀತಿಯಾಗಿ ಹಿಂದೆ ಅದಕ್ಕಾಗಿ ಅಪ್ಲೆ ಮಾಡಿರುವವರಿಗೂ ಸಾಲವನ್ನು ಕೊಡಿಸಬೇಕು.

ಇನ್ನು ಸಾಯಿಲ್ ಕನ್‌ಸರ್‌ವೇಷನ್ ವಿಚಾರದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಮಾಡುತ್ತೇವೆಂದು ಹೇಳಿದ್ದಾರೆ. ಈ ಸಾಯಿಲ್ ಕನ್‌ಸರ್‌ವೇಷನ್ ಮಾಡುವಾಗ ಎಲ್ಲಿ ರೇನ್ ಫಾಲ್ ಕಡಿಮೆಯಾಗಿದೆ, ಎಲ್ಲಿ ಅಭಾವ ಪರಿಸಿತ್ಥಿಯುಂಟಾಗಿದೆ ಎಂಬುದನ್ನು ಮನಗಂಡು ಆ ತಾಲ್ಲೂಕಿಗೆ ಪ್ರೈಯಾರಿಟಿ ಕೊಡಬೇಕು. ಆದರೂ ಜಾಗ್ರತೆಯಾಗಿ ಸಾಯಲ್ ಕನ್‌ಸರ್‌ವೇಷನ್ ಕೆಲಸವನ್ನು ಸರ್ಕಾರದವರು ತೆಗೆದುಕೊಳ್ಳಬೇಕು.

ಇನ್ನು ಅರ್ಧಕೆಲಸ ಆಗಿರುವ ಬಾವಿಗಳಿಗೆ ಈಗ ಸರ್ಕಾರದವರು ಕೊಡುತ್ತಿರುವ ಹಣ ಏನೂ ಸಾಲುವುದಿಲ್ಲ. ಅವು ಅರ್ಧಂಬರ್ಧವಾಗಿ ನಿಲ್ಲುವುದಕ್ಕೆ ಬದಲಾಗಿ ಬೋರ್ ಹಾಕಿ ಡೈನಾಮಾಯಿಟ್ ಹಾಕಿ ಬಾವಿಗಳನ್ನು ಕಟ್ಟಿಸಿದರೆ ಒಳ್ಳೆಯದು. ಇನ್ನಷ್ಟು ಹಣ ಕೊಟ್ಟು ಬಾವಿಗಳನ್ನು ಪೂರೈಸಬೇಕು. ಅದಕ್ಕೆ ಕೂಡಲೇ ಸರ್ಕಾರದವರು ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಗ್ರಿಕಲ್‌ಚರಲ್ ಕಾಲೇಜಿನಲ್ಲಿ ಸೀಟುಗಳನ್ನು ಕೊಡುವ ವಿಷಯದಲ್ಲಿ ಕೇವಲ ಮಾರ್ಕ್ಸ್‌ನೋಡಿ ತೆಗೆದುಕೊಳ್ಳುತ್ತಾರೆ. ಹಾಗೆ ಮಾಡಿದರೆ ಹಳ್ಳಿಗಳಿಂದ ಬರತಕ್ಕ ಮಕ್ಕಳಿಗೆ ಅನುಕೂಲವಿರುವುದಿಲ್ಲ. ಇದರಲ್ಲಿ ಹಳ್ಳಿಗೂ ಪಟ್ಟಣಕ್ಕೂ ಸಂಬಂಧಬರುವುದಿಲ್ಲ. ಮುಖ್ಯವಾಗಿ ಬೇಕಾಗಿರುವುದು ಹಳ್ಳಿಯ ಮಕ್ಕಳಿಗೆ ಸೀಟುಗಳನ್ನು ಕಾಲೇಜ್‌ಗಳಲ್ಲಿ ಹಂಚುವಾಗ ಅವರಿಗೆ ಹೆಚ್ಚಿನ ಸೀಟುಗಳನ್ನು ಹಂಚಬೇಕು. ಅವರಿಗೆ ರಿಜರ್ವೇಷನ್ ಜಾಸ್ತಿ ಕೊಡಬೇಕೆಂದು ಕೇಳುತ್ತೇನೆ.

ಇನ್ನು ಕೈಗಾರಿಕೆಗಳ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದು ನನ್ನ ಅಭಿಪ್ರಾಯ. ವ್ಯವಸಾಯದಲ್ಲಿ ರೇಷ್ಮೆ ಕೈಗಾರಿಕೆ ಏನಿದೆ, ಅದರ ಒಂದು ಉತ್ಪಾದನೆ ಏನಿದೆ ಅದು ಹೆಣ್ಣು ಮಕ್ಕಳ ಕೈಗಾರಿಕೆ ಎಂದು ಹೇಳುತ್ತೇನೆ. ಏಕೆಂದರೆ ಸೊಪ್ಪು ಕೀಳುವುದರಿಂದ ಹಿಡಿದು ನೂಲು ತೆಗೆಯುವವರೆಗೂ ಹೆಣ್ಣುಮಕ್ಕಳೇ ವಿಶೇಷವಾಗಿ ಕೆಲಸ ಮಾಡುತ್ತಾರೆ. ಇಂತಹ ಒಂದು ಕೈಗಾರಿಕೆಗೆ ನಿಜವಾಗಿ ಇವತ್ತಿನ ದಿವಸ ಪೆಟ್ಟು, ಧಕ್ಕೆ ಬೀಳುತ್ತಿದೆ. ಇದೇಕೋ ನನಗೆ ಬಹಳ ವ್ಯಸನವಾಗುತ್ತದೆ. ನಮ್ಮ ತಾಲ್ಲೋಕಿನೊಳಗೆ ಮಳೆ ಇಲ್ಲದೆ ಯಾವಾಗಲೂ ಬರ ಬರುವ ಕಾಲದಲ್ಲಿ ಈ ಕೈಗಾರಿಕೆಯಿಂದ ಎಷ್ಟೋ ಜನಗಳು ಜೀವನಮಾಡುತ್ತಿದ್ದರು. ಈಗ ಏನಾಗಿದೆಯೆಂದರೆ ಹೆಣ್ಣುಮಕ್ಕಳು ಇಷ್ಟು ಕಷ್ಟಪಟ್ಟು ರೇಷ್ಮೆಯನ್ನು ತಯಾರುಮಾಡಿ ಗೂಡು ಸಿದ್ದ ಮಾಡಿದರೆ

ಮಾರ್ಕೆಟ್ ಮಾಡುವುದಕ್ಕೆ ಸರ್ಕಾರದವರು ಹಿಂದೆ ಏನು ಮಾರ್ಗಗಳನ್ನು ಅನುಸರಿಸುತ್ತಿದ್ದರೋ ಅದನ್ನೇ ಈಗಲೂ ಮಾಡುತ್ತಿದ್ದಾರೆ .ಅಲ್ಲಿಂದಿಲ್ಲಿಗೆ ಹಣ ಸಿಗುತ್ತದೆಂದು ಆ ರೀತಿ ಮಾಡುತ್ತಿದ್ದಾರೆ. ಸರ್ಕಾರೀ ಫಿಲೇಚರ್ಸ್ ಪ್ರತಿನಿಧಿಗಳು ಇಲ್ಲಿ ಬಂದು ಅದನ್ನು ಹರಾಜಿಗೆ ತರುತ್ತಿದ್ದರು. ಖಾಸಗೀ ರೀಲರ್ಸ್ ಸಹ ಇಲ್ಲಿಗೆಂದು ಕೀನ್ ಕಾಂಪಿಟೇಷನ್ ಒಬ್ಬರಿಗೊಬ್ಬರಿಗೆ ಬರುತ್ತಿದ್ದುದರಿಂದ ರೈತರಿಗೆ 4 ಕಾಸು ಸಿಗುತ್ತಿತ್ತು. ಈಗ ಅದು ಕಮರ್ಷಿಯಲ್ ಟ್ರೇಡ್ ಆಗಿರುವುದರಿಂದ ಅವರೇ ನಮ್ಮ ಫೀಲೇಚರ್ ಬಾಗಿಲಿಗೆ ತೆಗೆದುಕೊಂಡು ಬರಲಿ ಎಂದು ಹೇಳುತ್ತಾರೆ. ಹೆಣ್ಣುಮಕ್ಕಳು ಯಾರು ಅಲ್ಲಿಗೆ ತೆಗೆದುಕೊಂಡು ಹೋಗುವುದಿಲ್ಲ. ರಾಮನಗರ, ನರಸೀಪುರ, ನಂಜನಗೂಡು, ಮತ್ತು ಕೋಳ್ಳೆಗಾಲ ಇವುಗಳಿಗೆ ಯಾರಿಂದಲೋ ಕಳುಹಿಸುತ್ತಾರೆ, ಅಲ್ಲಿಗೆ ತೆಗೆದುಕೊಂಡು ಹೋದಮೇಲೆ ಏನಾಗುತ್ತದೆ. ಕೆಲವರು ರಿಂಗಾಗಿ ಸ್ಮಶಾನಕ್ಕೆ ಹೋದ ಹೆಣದ ಹಾಗೆ ಅಲ್ಲಿ ಎಷ್ಟು ದುಡ್ಡು ಹೋಗುತ್ತದೋ ಅಷ್ಟು ದುಡ್ಡನ್ನು ಸುರಿದು ವಾಪಸ್ಸು ಬರುತ್ತಿದ್ದಾರೆ. ಕೊನೆಗೆ ಫಿಲೇಚರ್ ಬೇಡವೆಂದು ಹೇಳಿ ಕೇಳಿದಷ್ಟು ದುಡ್ಡನ್ನು ಕೊಟ್ಟು ವಾಪಸ್ಸು ಬರುತ್ತಿದ್ದಾರೆ, ನನ್ನ ತಾಲ್ಲೋಕಿನೊಳಗೆ 2-3 ಮಾರ್ಕೆಟ್ಸ್‌ಗಳಿವೆ. ಅಲ್ಲಿರತಕ್ಕ ಮಾರ್ಕೆಟಿಂಗ್ ಆಫೀಸರ್ಸ್ ಮೂರು ಕಾಸು ಕೆಲಸವಿಲ್ಲದೆ ಬರೀ ಸಂಬಳವನ್ನು ತೆಗೆದುಕೊಳ್ಳುತ್ತಿದ್ದಾರೆ, ಅವರಿಗೆ ಸ್ವಲ್ಪವಾದರು ಮುಂದಾಲೋಚನೆ ಇಲ್ಲ, ಅವರಿಗೆ ಹೆಣ್ಣು ಮಕ್ಕಳ ಇಂತಹ ಕೈಗಾರಿಕೆಗೆ ಉತ್ತೇಜನ ಕೊಡಬೇಕೆಂದೂ ಸಹ ಇಲ್ಲ. ರೇಷ್ಮೆ ರೀಲರ್ಸ್ ಪೈಕಿ ನಾನು ಒಬ್ಬ ರೀಲರ್. ಚಾಮರಾಜನಗರ ರೇಷ್ಮೆಗೂ ಮತ್ತು ನಮ್ಮಲ್ಲಿ ತಯೂರುಮಾಡತಕ್ಕ ರೇಷ್ಮೆಗೂ ಹೋಲಿಸಿದರೆ ನಮ್ಮ ರೇಷ್ಮೆಗೆ ಎಷ್ಟು ಬೆಲೆ ಬರುತ್ತದೋ ನನಗೆ ಗೊತ್ತಿಲ್ಲ. ಅದನ್ನು ಇಲ್ಲಿಗೆ ತರಬೇಕಾದರೆ ಚಾಮರಾಜನಗರದಲ್ಲಿ ಒಂದು ಅಕ್ಟ್ರಾಯ್,ಇಲ್ಲಿಗೆ ಬಂದಾಗ ಬೆಂಗಳೂರಿನಲ್ಲಿ ಒಂದು ಅಕ್ಟ್ರಾಯಿ, ಹೀಗೆ ಜಾಸ್ತಿ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಇನ್ನು ಸೊಸೈಟಿಗಳಲ್ಲಿರುವವರು ಇಷ್ಟಕ್ಕೆ ಇಷ್ಟೇ ಕೊಡಬೇಕೆಂದು ಒಂದು ಕಂಡೀಷನ್ ಹಾಕಬೇಕಾಗುತ್ತದೆ. ಅವರು ಹಾಕತಕ್ಕಚಾ ರ್ಜು ಒಂದಕ್ಕೆ ಒಂದೂವರೆಯಷ್ಟು. ಆದರೆ ಅದೇ ಬೆಲೆಗೆ ಅವರು ತೆಗೆದುಕೊಂಡ ಬಾಕಿ ದುಡ್ಡನ್ನು ಅವರೇ ಹಂಚಿಕೊಳ್ಳುತ್ತಾರೆ. ಇದರಿಂದ ರೀಲರ್ಸ್‌ಗೆ ಬಹಳ ಅನ್ಯಾಯವಾಗುತ್ತದೆ. ಅದನ್ನು ಸರ್ಕಾರದವರು ಕೂಡಲೇ ಸರಿಪಡಿಸಬೇಕು. ಇನ್ನು ಗೌವರ್‌ನಮೆಂಟ್ ಫಿಲೇಚರ್ ವಿಷಯ.

ಶ್ರೀ ಡಿ.ದೇವರಾಜ ಅರಸ್ (ಪಶುಪಾಲನೆ,ಮೀನುಗಾರಿಕೆ, ವಾರ್ತಾ ಮತ್ತು ಪ್ರಚಾರ ಶಾಖೆಗಳ ಮಂತ್ರಿಗಳು)- ಮಾನ್ಯ ಸದಸ್ಯರು ಸೊಸೈಟಿಯ ವಿಚಾರವಾಗಿ ಹೇಳಿದರು. ಇಲ್ಲಿಗೆ ತಂದಿಟ್ಟಂಥ ರೇಷ್ಮೆಗೆ ಸರಿಯಾದ ಬೆಲೆ ಸಿಗಲಿಲ್ಲವೆಂದು ಹೇಳಿದ್ದಾರೆಯೇ ವಿನಾ ಅಲ್ಲಿಯ ಕಷ್ಟೇವೆನೆಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದು ನಾನು ಮಾನ್ಯ ಸದಸ್ಯರನ್ನು ಕೇಳುತ್ತೇನೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ-

ಈಗ ನಮಗೆ ಬಂದಿರುವ ತೊಂದರೆಯೇನೆಂದರೆ, ಈ ರೇಷ್ಮೆಯನ್ನು ಕೊಂಡುಕೊಳ್ಳತಕ್ಕ 4-5 ಜನಗಳ ರಿಂಗ್ ಇದೆ. ಅವರು ಈ ರೇಷ್ಮೆಯನ್ನು ಬೇರೆಕಡೆಗೆ ತೆಗೆದುಕೊಂಡುಹೋಗಿ ಹೆಚ್ಚಿನ ಬೆಲೆಗೆ ಮಾರುತ್ತಾರೆ. ನ್ಯಾಯವಾಗಿ ರೀಲರ್ಸ್‌ಗೆ  ಸಿಕ್ಕಬೇಕಾದಂತಹ ಹಣವನ್ನು ಅವರು ತೆಗೆದುಕೊಳ್ಳುತ್ತಾರೆ. ಸರ್ಕಾರದ ಫಿಲೇಚರ್‌ನಲ್ಲಿ ಡೈರೆಕ್ಟಾಗಿ ಕೊಂಡುಕೊಳ್ಳತಕ್ಕ ಏಜೆಂಟರನ್ನು ನೇಮಕ ಮಾಡಿಕೊಂಡಿದ್ದಾರೆ. ಆದ್ದರಿಂದ ರೀಲರ್ಸ್‌ಗೆ ಪ್ರೋತ್ಸಾಹ ಸಿಕ್ಕಬೇಕಾದರೆ ಬೆಲೆಯನ್ನು

ಕೊಡಬೇಕು, ರೇಷ್ಮೆಯನ್ನು ಜಾಸ್ತಿಬೆಲೆಗೆ ಮಾರಿದರೆ ಆ ಹಣವನ್ನು ರೀಲರ್ಸ್‌ಗೆ ಕೊಡಬೇಕೇ ಹೊರತು ಅದನ್ನು ಸೊಸೈಟಿಗಳಿಗೆ ಕೊಡತಕ್ಕದ್ದಲ್ಲ. ಈ ದೃಷ್ಟಿಯಿಂದ ಅಲ್ಲಿ ಆಗುತ್ತಿರುವ ಅನ್ಯಾಯವನ್ನು ಕಂಡುಹಿಡಿದು ಹೆಣ್ಣು ಮಕ್ಕಳಿಗೆ ನ್ಯಾಯವಾಗಿ ಬರಬೇಕಾದಂತಹ ಹಣವನ್ನು ಯಾರ ಬಾಯಿಗೋ ಹಾಕುವುದನ್ನು ತಪ್ಪಿಸಿ ಅದು ನ್ಯಾಯವಾಗಿ ಹೆಣ್ಣುಮಕ್ಕಳಿಗೆ ಸೇರುವಂತೆ ಮಾಡಬೇಕು. ಈಗ ಸರ್ಕಾರಿ ಫಿಲೇಚರಿನಲ್ಲಿ ಡೈರೆಕ್ಟಾಗಿ ಏಜೆಂಟರನ್ನು ನೇಮಿಸಿಕೊಂಡು ಏನು ವ್ಯಾಪಾರ ನಡೆಯುತ್ತಿದೆ ಅದು ಆಗಬಾರದು ಅದು ಏನಿದ್ದರೂ ಸೊಸೈಟಿಗಳಿಗೆ ಬಂದು ವಿತರಣೆ ಆಗಬೇಕೇ ಹೊರತು ಡೈರೆಕ್ಟಾಗಿ ಕೊಟ್ಟು ಅನ್ಯಾಯವಾಗುವುದನ್ನು ತಪ್ಪಿಸಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಕೈಗಾರಿಕೆಯ ವಿಷಯದಲ್ಲಿ ಹೇಳಬೇಕಾದರೆ ಈ ಕೈಗಾರಿಕೆಯನ್ನು ಡೀಸೆಂಟ್ರಲೈಜ್ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಅದನ್ನು ಮಾಡುವುದಿಲ್ಲ. ಯಾರೋ ಒಬ್ಬರು ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರು. ಆದರೆ ಅವರಿಗೆ ಅವಕಾಶವನ್ನು ಕೊಡಲಿಲ್ಲ. ಅವರು ಹೊರಟುಹೋದರು. ಕೈಗಾರಿಕೆ ಇಲಾಖೆಯಲ್ಲಿ ಯಾವ ಸಮಾಚಾರವನ್ನೂ ಸರಿಯಾಗಿ ಹೇಳುವುದಿಲ್ಲ. ಲೈಸನ್ಸಿಂಗ್ ಆಫೀಸರನ್ನು ಕೇಳಿದರೆ ಯಾರು ಬೇಕಾದರೂ ಬರಲಿ ವಿಷಯವನ್ನು ತಿಳಿದುಕೊಂಡುಹೋಗಲಿ ಎಂದು ಹೇಳುತ್ತಾರೆ. ಅಂತೂ ನಮ್ಮಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಸಾಕಷ್ಟು ಆಗಿಲ್ಲ. ಯಾರೋ ಇನ್ನೊಬ್ಬರು ನಮಗೆ ಜಮೀನ ಕೊಡಿ ನಾವು ಕೋಆಪರೇಟೀವ್ ಫಾರಂ ಮಾಡುತ್ತೇವೆ. ಬಾವಿಗಳನ್ನು ತೋಡಿಸುತ್ತೇವೆ. ಪಂಪುಸೆಟ್ಟುಗಳನ್ನು ಹಾಕುತ್ತೇವೆ. ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿದರೆ ಸರ್ಕಾರದವರು ಏನೇನೋ ಹೇಳುತ್ತಾರೆ. ಮೈಸೂರಿನ ಮೇಲೆ ಅಭಿಮಾನವಿದ್ದವರು ಕೈಗಾರಿಕೋದ್ಯಮಿಗಳು ಯಾರು ಬೇಕಾದರೂ ಬರಲಿ ಅವರಿಗೆ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಅವರು ಸರ್ಕಾರಕ್ಕೆ ಕಾಗದವನ್ನು ಬರೆದರೆ ಅವರಿಗೆ ಒಂದು ಜವಾಬುಕೊಡುವುದಿಲ್ಲ. ಮೈಸೂರಿನ ಕೈಗಾರಿಕೆಯ ನೀತಿ, ಕೈಗಾರಿಕೆಯ ಬೇಸಿಸ್ ಏನು ಎಂಬುದು ಒಂದೂ ಗೊತ್ತಾಗುವುದಿಲ್ಲ. ಮುಖ್ಯಮಂತ್ರಿಗಳು ಆ ಕಾಗದಪತ್ರಗಳು ಏನಾಗಿವೆ ಎಂದು ಹುಡುಕುತ್ತಾ ಹೋದರೆ ಎಷ್ಟೋ ತಪ್ಪುಗಳನ್ನು ತಿದ್ದಿಕೊಂಡು ಕೆಲಸಗಳನ್ನು ಮಾಡಬಹುದು.

ಇನ್ನು ಸ್ಮಾಲ್ ಕಾರ್ ಪ್ರಾಜೆಕ್ಟ್‌ಯೋಜನೆಯ ವಿಚಾರ, ನಮ್ಮಲ್ಲಿ ಒಂದು ಅಭ್ಯಾಸ ಆಗಿಬಿಟ್ಟಿದೆ. ಅದೇನೆಂದರೆ ಯಾರಿಗಾದರೂ ಏನಾದರೂ ಹೇಳಿದರೆ ನಗುತ್ತಾರೆ. ಪ್ಲಾನಿಂಗ್ ಕಮಿಷನ್‌ನವರು, ಕೇಂದ್ರ ಸರ್ಕಾರದವರು ಈ ಸಣ್ಣಕಾರಿನ ಯೋಜನೆಯ ವಿಷಯದಲ್ಲಿ ಏನೇ ಹೇಳಿದರೂ ಕೂಡ ನಮ್ಮ ಮುಖ್ಯಮಂತ್ರಿಗಳು ಧೈರ್ಯವಾಗಿ ಮುಂದಿನ ಪೀಳಿಗೆಯ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡಬೇಕೆಂದು ಹೋರಾಡುತ್ತಿದ್ದಾರೆ. ಈಗ ಅಮೇರಿಕಾದಲ್ಲಿ 40 ಪರ್ಸೆಂಟ್ ಆದಾಯವನ್ನು ಸ್ಟೀಲಿನಿಂದ ತೆಗೆದುಕೊಳ್ಳುತ್ತಾರೆ. 50-60 ಪರ್ಸೆಂಟ್ ಆದಾಯವನ್ನು ರಬ್ಬರ್‌ನಿಂದ ತೆಗೆದುಕೊಳ್ಳುತ್ತಾರೆ. ಇದೇ ರೀತಿಯಾಗಿ ಗ್ಲಾಸ್ ಕೈಗಾರಿಕೆ, ಮತ್ತು ಚರ್ಮದ ಕೈಗಾರಿಕೆಯಿಂದ ಆದಾಯವನ್ನು ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ದೇಶದಲ್ಲಿ ಕೈಗಾರಿಕೆಗಳ ಯೋಜನೆಗಳೇ ಕಾರ್ಯಗತವಾಗುವುದಿಲ್ಲ. ಹೀಗಿರುವಾಗ ಮುಖ್ಯಮಂತ್ರಿಗಳು ಧೈರ್ಯವಾಗಿ ಸಣ್ಣಕಾರು ಯೋಜನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ,

ಈ ಸಣ್ಣಕಾರು ಪ್ರಾಜೆಕ್ಟಿಗೆ ಮಹಾ ಎಷ್ಟು 40 ಕೋಟಿ ರೂಪಾಯಿಗಳು ಮಾತ್ರ. ಈಗ ಶರಾವತಿ ಪ್ರಾಜೆಕ್ಟಿಗೆ 120 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದ್ದರಿಂದ 40 ಕೋಟಿ ಖರ್ಚುಮಾಡಿ ನಮ್ಮಲ್ಲಿ ಸಣ್ಣಕಾರು ಕಾರ್ಖಾನೆಯನ್ನು ಸ್ಥಾಪನೆ ಮಾಡಬಹುದು. ಇದಕ್ಕೆ ಬೇಕಾದ ಅನುಕೂಲತೆಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಇವೆ. ಭದ್ರಾವತಿಯಲ್ಲಿ ಸ್ಪೆಷಲ್‌ಸ್ಟೀಲ್ ಅಲಾಯ್ ಸಿಕ್ಕುತ್ತದೆ. ಬೆಳಗಾಮಿನಲ್ಲಿ ಅಲ್ಯೂಮೀನಿಯಂ ಸಿಕ್ಕುತ್ತದೆ. ಈಗ ಎಚ್.ಎಂ.ಟಿಯಲ್ಲಿ ಸ್ಪೆಷಲ್ ಮಿಷನರಿ ಮಾಡುವುದಕ್ಕೆ ಅವರು ಹೊರಟಿದ್ದಾರೆ. ಸ್ಪೆಷಲ್ ಟೂಲ್ಸ್ ಮಾಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ನಮ್ಮದೇಶದಲ್ಲಿ ಈಗ ಸರ್ಕಾರದವರು ಸಣ್ಣಕಾರಿನ ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ವಂದಿಸುತ್ತಾರೆ. ಆದ್ದರಿಂದ ಅದಷ್ಟು ಬೇಗ ಈ ಕೈಗಾರಿಕೆಯನ್ನು ಪ್ರಾರಂಭ ಮಾಡುಬೇಕು. ಎಷ್ಟು ಬೇಗ ಆಗಬೇಕೆಂಬ ಹುರುಪು ನಮ್ಮಲ್ಲಿ ಇದೆಯೋ ಅಷ್ಟೇ ಹುರುಪು ನಮ್ಮ ಅಧಿಕಾರಿಗಳಲ್ಲಿ ಇದ್ದರೆ ಇದು ನಿಜವಾಗಿಯೂ ಜಾಗ್ರೇತೆಯಾಗಿ ಆಗುತ್ತದೆ. ಈ ಕೈಗಾರಿಕೆಯ ಇಲಾಖೆಯಲ್ಲಿರತಕ್ಕ ಆಫೀಸರುಗಳನ್ನು ಬದಲಾವಣೆ ಮಾಡಿದರೆ ಈ ಕೆಲಸ ಜಾಗ್ರತೆಯಾಗಿ ಆಗುತ್ತದೆ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಜನರಲ್ ಆಡ್ಮಿನಿಸ್ಟ್ರೇಷನ್ ಬಗ್ಗೆ ನಾನು ಒಂದೆರಡು ವಿಷಯುಗಳನ್ನು ಹೇಳಬಯಸುತ್ತೇನೆ. ನಮ್ಮ ಎನ್.ಜಿ.ಓ.ಗಳ ಬಗ್ಗೆ ಜಾಗ್ರತೆಯಾಗಿ ಉಂಟು ಅಥವಾ ಇಲ್ಲ ಎನ್ನುವ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಾಳೆ ರಿಟೈರ್ ಆಗುವವರಿಗೆ ಪೆನ್‌ಷನ್‌ನ ಎಫೆಕ್ಟ್ ಆಗುತ್ತದೆ. ಆದ್ದರಿಂದ ದಯಮಾಡಿ ಯಾವುದಾದರೂ ಅವರ ಬಗ್ಗೆ ಬೇಗ ಒಂದು ತೀರ್ಮಾನವನ್ನು ತೆಗೆದುಕೊಳಬೇಕು. ಈಗ ಉಂಟಾಗುತ್ತಿರುವ ಹಾನಿಯನ್ನು ತಪ್ಪಿಸಬೇಕು. ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಟೆಲಿಫೋನ್ ವಿಷಯದಲ್ಲಿ ಹೇಳುವುದಾದರೆ ಟೆಲಿಫೋನ್ ಇಟ್ಟು ಕೊಂಡಿರುವವರಿಗೆ ಅದು ಒಂದು ದೊಡ್ಡ ಶಾಪವಾಗಿ ಪರಿಣಮಿಸಿದೆ. ನಾವು ಒಂದು ಕಾಲ್ ಮಾಡಬೇಕಾದರೆ ಅರ್ಧಗಂಟೆ ಕಾಯಬೇಕು. ಪ್ರತಿ ದಿವಸ ಫೋನು ಕೆಟ್ಟುಹೋಗುತ್ತದೆ. ಅದಕ್ಕೆ ಅಂಕೆ ಸಂಖ್ಯೆ ಹೇಳುವವರೂ ಕೇಳುವವರು ಯಾರೂ ಇಲ್ಲ. ಇವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ನೋಡಬೇಕು.

ಇನ್ನು ಡೆತ್ ಸರ್ಟಿಫಿಕೇಟ್ ವಿಷಯದಲ್ಲಿ ನಾನು ಒಂದು ವಿಚಾರವನ್ನು ಹೇಳಬೇಕಾಗಿದೆ. 6,8 ತಿಂಗಳಾದರೂ ಒಂದು ಡೆತ್ ಸರ್ಟಿಫಿಕೇಟ್ ಸಿಕ್ಕವುದಿಲ್ಲ. ಸರ್ಕಾರದವರು ಕೆಲಸ ಮಾಡುವ ತಪ್ಪಿಗೆ ಸಂಬಂಧಪಟ್ಟವರಿಗೆ ಸರಿಯಾಗಿ ಡೆತ್ ಸರ್ಟಿಫಿಕೇಟ್ ಸಿಕ್ಕದೆ ಅವರಿಗೆ ಪೆನ್‌ಷನ್ ಸಿಕ್ಕುವುದಿಲ್ಲ, ಕಾಂಪೆನ್‌ಸೇಷನ್ ಸಿಕ್ಕವುದಿಲ್ಲ ಇದರಿಂದಾಗಿ ಸಂಬಂಧಪಟ್ಟವರ ಮಕ್ಕಳಿಗೆ ವಿದ್ಯಾಭ್ಯಾಸ ಇತ್ಯಾದಿಗಳಿಗೆ ತೊಂದರೆಯುಂಟಾಗುತ್ತದೆ. ಡೆತ್ ಸರ್ಟಿಫಿಕೇಟ್ ಕೊಡುವುದಕ್ಕೆ ಇಷ್ಟು ಕಷ್ಟ ಆದರೆ ಅವರ ಗತಿ ಏನು? ದಯವಿಟ್ಟು ಹಾಗೆ ಮಾಡಬಾರದು. ಸರ್ಕಾರದವರು ಈ ಬಗ್ಗೆ ನಿಗಾ ವಹಿಸಬೇಕು. ಯಾರು ಯಾರು ರಿಟೈರ್ ಆಗುವವರು ಇದ್ದಾರೆಯೋ ಅವರನ್ನು ಕೊನೆಯ ವರ್ಷದಲ್ಲಿ ಬೇರೆ ಕಡೆ ಟ್ರಾನ್ಸ್‌ಫರ್ ಮಾಡಬಾರದು, ಅವರು ಎಲ್ಲೆಲ್ಲಿ ಇರಬೇಕೆಂದು ಅಪೇಕ್ಷೆ ಮಾಡುತ್ತಾರೆಯೋಆಯಾ ಸ್ಥಳಕ್ಕೆ ವರ್ಗಾಯಿಸಿಕೊಡಬೇಕು. ಇದ್ದಿದ್ದರಲ್ಲಿ ಹೆಣ್ಣು ಮಕ್ಕಳಿಗೆ

ಜಾಸ್ತಿ ಅನುಕೂಲಮಾಡಿ ಕೊಡಬೇಕು. ಕೊನೆಯಲ್ಲಿ ಹೆಣ್ಣುಮಕ್ಕಳು ಮಗನ ಹತ್ತಿರವೋ ಸೊಸೆಯ ಹತ್ತಿರವೋ ಅಥವಾ ಮಗಳ ಹತ್ತಿರವೋ ನಿಲ್ಲಬೇಕಾಗುತ್ತದೆ. ಅದಕ್ಕೆ ಅವರಿಗೆ ಅನುಕೂಲಮಾಡಿಕೊಡಬೇಕು. ಈಗ ಹೆಣ್ಣುಮಕ್ಕಳಿಗೆ ಕೊಡತಕ್ಕ ಸ್ಥಾನದಲ್ಲಿ ಬಹಳ ಅನ್ಯಾಯವಾಗುತ್ತಿದೆ. ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿ ಸದಸ್ಯರ ಸ್ಥಾನದಲ್ಲಿ ಆಗಲೀ ಆಸ್ಪತ್ರೆಯಲ್ಲಾಗಲೀ ಕಛೇರಿಗಳಲ್ಲಾಗಲೀ ಅವರಿಗೆ ಸಲ್ಲಬೇಕಾದಂತಹ ಸ್ಥಾನಗಳು ಸರಿಯಾಗಿ ಸಿಕ್ಕುತ್ತಿಲ್ಲ. ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ಒಬ್ಬರು ಹೆಂಗಸರು ಇರುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಎಲ್ಲಾ ಕಡೆಗಳಲ್ಲಿಯೂ ಹೇಗೆ ಅವರ ಹಿತವನ್ನು ನೋಡಿಕೊಳ್ಳುವುದಕ್ಕೆ ಸ್ಥಾನಗಳನ್ನು ಕೊಡುತ್ತಿರೋ ಅದೇ ರೀತಿಯಲ್ಲಿ ಪ್ರತಿಯೊಂದು ಕಮಿಟಿಯಲ್ಲಿ ಹೆಣ್ಣುಮಕ್ಕಳು ಅವರ ಹಿತವನ್ನು ಕಾಪಾಡಿಕೊಳ್ಳುವುದಕ್ಕೆ ಒಬ್ಬೊಬ್ಬರು ಹೆಣ್ಣಮಕ್ಕಳಿಗೆ ಒಂದೊಂದು ಸ್ಥಾನವನ್ನು ಕೊಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ. ಇನ್ನು ನಮ್ಮ ಹೆಣ್ಣುಮಕ್ಕಳ ವಿಚಾರದಲ್ಲಿ ನಮ್ಮ ಮುಖ್ಯಮಂತ್ರಿಗಳಿಗೆ ಹೆಚ್ಚು ಮಾನ್ಯತೆ ಮತ್ತು ಹೆಚ್ಚು ವಿಶ್ವಾಸವೂ ಇದೆ. ಇದು ಏನಾಗಿದೆ ಎಂದರೆ ಎಷ್ಟು ಅಕ್ಕರೆ ಇದ್ದರೂ ನನಗೆ ಒಂದು ಚಿಕ್ಕ ಕಥೆ ಜ್ಞಾಪಕಕ್ಕೆ ಬರುತ್ತದೆ. ಬಬ್ಬ ಅಧಿಕಾರಿ ಸಾಕಷ್ಟು ಶ್ರೀಮಂತನಾದನಂತೆ. ಅವನು ನನಗೆ ಮುತ್ತಿನಂಥ ಹೆಂಡತಿ ಇದ್ದಾಳೆ ಎಂದು ಹೆಂಡತಿಯನ್ನು ಬಹಳ ಮರ್ಯಾದೆಯಿಂದ ಕಾಣುತ್ತಾ ಇದ್ದನು. ಮರ್ಯಾದೆ ಕೊಡಬೇಕಂದರೆ ನಮ್ಮ ಯಜಮಾನಿ ಎಂದು ಕರೆಯುತ್ತಾ ಇದ್ದನು ಮತ್ತು ಆಕೆಗೆ ಏನೂ ತೊಂದರೆ ಆಗಬಾರದು ಎಂದು ಚೆನ್ನಾಗಿ ನೋಡಿಕೊಳ್ಳುತ್ತಾ ಇದ್ದನಂತೆ. ಬೆಳಗ್ಗೆ ಎದ್ದ ತತ್‌ಕ್ಷಣ ಏತಕ್ಕೆ ತೊಂದರೆ ಕೊಡಬೇಕು ಎಂದು ತಾನು ಹೋಟೇಲಿಗೆ ಹೋಗಿ ದೋಸೆ ತಿಂದು ಕಾಫಿ ಕುಡಿದು ಹೆಂಡತಿಯನ್ನು ಕೇಳುತ್ತಾ ಇದ್ದನಂತೆ. ಏನು ಮಾಡಿದೆ, ಊಟ ಮಾಡಿದೆಯಾ, ತಂಗಳನ್ನ ಇತ್ತು, ಮಜ್ಜಿಗೆ ಇತ್ತು ಎಂದು ವಿಶ್ವಾಸದಿಂದ ವಿಚಾರಿಸಿಕೊಳ್ಳುತ್ತಿದ್ದನು. ಆಮೇಲೆ ಬಟ್ಟೆಯನ್ನು ಕೇಳುತ್ತಾ ಇದ್ದನು. 5-10 ರೂಪಾಯಿಗೆ ಎರಡು ಸೀರೆ ತೆಗೆದುಕೊಂಡು ಒಗೆದು, ಒಗೆದು ಚೆನ್ನಾಗಿ ಉಟ್ಟುಕೋ ಎಂದು ಹೇಳುತ್ತಿದ್ದನು. ತನಗೆ 5-6 ಉಲ್ಲನ್ ಸೊಟ್‌ಟರ್ಲಿನ್ ಸೊಗಸಾದ ಷೂಫಿನ್ಲೆ ಪಂಚೆ ಇವುಗಳನ್ನೆಲ್ಲಾ ತೆಗೆದುಕೊಂಡು ಬರುತ್ತಿದ್ದನು. ಮತ್ತು ಅವನಿಗೆ ಎಷ್ಟು ಹೆದರಿಕೆ ಎಂದರೆ ತನ್ನ ಹೆಂಡತಿ ಮಲಗಿಕೊಳ್ಳುಲು ಒಂದು ಮಂದಲಿಗೆಕೊಟ್ಟು ಚಾಪೆ ಕೊಟ್ಟು, ಹಳೆ ಸೀರೆ ಕೊಟ್ಟು ಹಳೆ ಸೀರೆಯನ್ನೇ ಹೊದ್ದುಕೋ ಎಂದು ಮಲಗಿಸುತ್ತಿದ್ದನು. ತಾನು ಒಂದು ದೊಡ್ಡ ಮಂಚಹಾಕಿಕೊಂಡು ಡನ್‌ಲಪ್ ಪಿಲ್ಲೋ ಹಾಕಿಕೊಂಡು ಮಲಗಿಕೊಳ್ಳುತ್ತಿದ್ದನು. ಹೀಗೆ ಆತ ಭಯಪಟ್ಟುಕೊಂಡು ಹೆಂಡತಿಯನ್ನು ಹೊರಗೆ ಕರೆದುಕೊಂಡು ಹೋದರೆ ದೃಷ್ಟಿಯಾಗುತ್ತದೆ ಎಂದು ಬಾಗಿಲಿಗೆ ಬೀಗ ಹಾಕಿಕೊಂಡು ಒಳಗೇ ಬಿಟ್ಟು ಹೋಗುತ್ತಿದ್ದನು. ದುಡ್ಡನ್ನು ಅವಳ ಎದುರಿಗೆ ಎಣಿಸಿ ಎಣಿಸಿ ಕಬ್ಬಿಣದ ಪೆಟ್ಟಿಗೆಯಲ್ಲಿ ಬೀಗ ಹಾಕಿಬೀಗದ ಕೈಯನ್ನು ಸೊಂಟದಲ್ಲಿ ಇಟ್ಟುಕೊಳ್ಳುತ್ತಿದ್ದನು. ಎಷ್ಟು ವಿಶ್ವಾಸ ಇದ್ದರೂ ಹೆಣ್ಣುಮಕ್ಕಳ ಪಾಡು ಹೀಗಾಗುತ್ತದೆ. ದಯಮಾಡಿ ಹೀಗಾಗಬಾರದು ಎಂದು ನಮ್ಮ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಮತ್ತು ನಮ್ಮ ಹೆಣ್ಣುಮಕ್ಕಳನ್ನು ವೀಕರ್ ಸೆಕ್ಷೆನ್ ಎಂದು ಭಾವಿಸಿ ಅವರಿಗೆ ಕೊಡಬೇಕಾದಷ್ಟು ಕೊಡಬೇಕು ಎಂದು ಹೇಳಿ ತಾವು ನನಗೆ ಮಾಡನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಮತ್ತು ಸ್ವಲ್ಪ ಕಾಲಾವಕಾಶವನ್ನು ನಾನು ಹೆಚ್ಚಿಗೆ ತೆಗೆದುಕೊಂಡಿದ್ದಕ್ಕಾಗಿ ಕ್ಷಮಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ವಿಧಾನ ಸಭಾ ಕಲಾಪ-ದಿ:25-7-1967)

# 9. ರಾಜ್ಯ ಆಯವ್ಯಯ ಪತ್ರ ಕುರಿತು

## 1968

ಮಾನ್ಯ ಅಧ್ಯಕ್ಷರೇ, ನನಗೆ ತಾವು ಕೊಟ್ಟಿರತಕ್ಕ ಅವಕಾಶ ಕೇವಲ ಹತ್ತು ನಿಮಿಷಗಳು ಮಾತ್ರ. ಆದುದರಿಂದ ನಾನು ಮಾತನಾಡತಕ್ಕ ಕಾಲದಲ್ಲಿ ಯಾರೂ ಮಧ್ಯೆ ನನಗೆ ಅಡಚಣೆಯನ್ನು ಒಡ್ಡದಂತೆ ತಾವು ನೋಡಿಕೊಳ್ಳಬೇಕು. ಹಾಗೆ ಏನಾದರೂ ಆತಂಕ ಆದರೆ ಆ ವೇಳೆಯನ್ನು ನನಗೆ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೇ, ಈ ಜನರಲ್ ಅಡ್ಮಿನಿಸ್ಟ್ರೇಷನ್ ಎಂಬ ಬಾಬು ಏನಿದೆ ಇದು ಒಂದು ದೊಡ್ಡ ಸಮುದ್ರವಿದ್ದ ಹಾಗೆ. ಇಷ್ಟೊಂದು ಇಲಾಖೆಗಳಲ್ಲಿ ಯಾವುದರ ಮೇಲೆ ಮಾತನಾಡುವುದು ಯಾವುದನ್ನು ಕೈ ಬಿಡುವುದು ಎನ್ನುವುದೊಂದೂ ಗೊತ್ತಾಗುತ್ತಿಲ್ಲ. ಇದರಲ್ಲಿ ಎಲ್ಲಾ ಇಲಾಖೆಗಳೂ ಅಡಗಿರುತ್ತವೆ. ಆದರೆ ಅವುಗಳ ಬಗ್ಗೆ. ಮಾತನಾಡಲು ಈಗ ಸಾಕಷ್ಟು ಕಾಲಾವಕಾಶವಿಲ್ಲ; ಆದುದರಿಂದ  ಅವುಗಳ ಬಗ್ಗೆ ಇನ್ನಾವುದಾದರೂ ಕಾಲದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದುದರಿಂದ ನಾನು ಈ ದಿವಸ ಕೇವಲ ಎರಡು ಇಲಾಖೆಗಳ ವಿಚಾರವಾಗಿ ಮಾತ್ರಮಾತನಾಡಲು ನಿಂತಿದ್ದೇನೆ.

ಸರಕಾರ ಅನುಸರಿಸುವ ನೀತಿಯ ವಿಚಾರದಲ್ಲಿ ಆಗಾಗ್ಗೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಆಗಿಂದಾಗ್ಯೆ ತಮ್ಮ ಕಾರ್ಯನೀತಿಗಳನ್ನು ತಿಳಿಸಿದಾಗಲೆಲ್ಲಾ ಅದು ಪತ್ರಿಕೆಗಳಲ್ಲಿ ಬರುತ್ತಿದೆ. ಅಂಥಾ ಕೆಲವು ಘೋಷಣೆಗಳನ್ನು ನಾನು ನೋಡಿದ್ದೇನೆ. ಆದರೆ ಹಾಗೆ ನಾವು ಒಂದಾವರ್ತಿ ನಮ್ಮ ನೀತಿ ಹೀಗಿದೆ ಎಂಬುದಾಗಿ ಘೋಷಣೆ ಮಾಡಿ ಅದನ್ನು ಅನುಸರಿಸದೆ ಇದ್ದರೆ ನಾಳೆ ನಾವುಗಳ್ಯಾರೂ ಹೊರಗಡೆ ತಲೆ ಎತ್ತಿ ತಿರುಗಾಡುವುದಕ್ಕಾಗುವುದಿಲ್ಲ. ತಲೆಯನ್ನು ನಾವು ತಗ್ಗಿಸಬೇಕಾಗುತ್ತದೆ. ನಾನು ಮೊನ್ನೆ ಡೆಲ್ಲಿಯಿಂದ ಬರುತ್ತಿದ್ದಾಗ ದಾರಿಯಲ್ಲಿ ಒಬ್ಬ ಮಿಲಿಟರಿ ಕರ್ನಲ್ ಸಿಕ್ಕಿದ್ದರು. ಆಗ ಅವರು ಏನು-ನಿಮ್ಮ ಗೌರ್ನಮೆಂಟಿನವರು ಬೇಕಾದಷ್ಟು ಬಾಯಿನಲ್ಲಿ ಹೇಳಿಬಿಡುತ್ತಾರೆ. ಆದರೆ ಕಾರ್ಯದಲ್ಲಿ ಮಾತ್ರ ಒಂದನ್ನೂ ಮಾಡುತ್ತಿಲ್ಲ ಎಂದು ಕೇಳಿದರು. ಅವರು ನೀಫಾ ಬಾರ್ಡರ್‌ನಿಂದ ಬರುತ್ತಿದ್ದರು. ಅವರು ಕೇಳಿದರು, ಆರ್ಮಿಯಿಂದ ನಿವೃತ್ತಿಹೊಂದಿ ಬರತಕ್ಕ ಜನರಿಗೆ ಭೂಮಿಯನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ; ಪ್ರಾಮಿಸ್ ಮಾಡುತ್ತಿದ್ದಾರೆ ಆದರೆ ಒಬ್ಬರಿಗೂ ಹಾಗೆ ಕೊಟ್ಟಿದ್ದನ್ನು ಕಾಣಲಿಲ್ಲ ಎಂದು ಹೇಳಿದರು. ಅಷ್ಟೇ ಅಲ್ಲದೆ ಅವರು ಇನ್ನೂ ಏನು ಹೇಳಿದರು ಎಂದರೆ ಅವರೇ ಸ್ವತ: ನಮ್ಮ ಮುಖ್ಯಮಂತ್ರಿಗಳಿಗೆ ಒಂದಲ್ಲಾ-ಎರಡಲ್ಲ-ಸಾವಿರಾರು ಕಾಗದಗಳನ್ನು ಬರೆದೆ, ಅವುಗಳಲ್ಲಿ ಒಂದಕ್ಕೂ ಉತ್ತರ ಸಹಾ ಬರಲಿಲ್ಲ ಎಂಬುದಾಗಿ ಹೇಳಿದರು. ನಾವು ಬರೆಯತಕ್ಕ ಕಾಗದಗಳಿಗೆ ಇಲ್ಲಿಂದ ಒಂದು ಪುರಾವೆ ಕೂಡ ಸಿಕ್ಕವುದಿಲ್ಲ ಎಂದು ಕೇಳುತ್ತಿದ್ದರು. ಆದರೆ ನಾವೇನೋ ಅಲ್ಲಿ ನಮ್ಮ ಆಡಳಿತವನ್ನು ಡಿಫೆಂಡ್ ಮಾಡಿಕೊಂಡಾಗ್ಯೂ ನಮಗಾಗಿ ಪ್ರಾಣ ಕೊಡತಕ್ಕ ಜನರ ಬಗ್ಗೆ ನಾವು ಈ ರೀತಿ ನಡೆಯುತ್ತಿರುವುದು ಸರಿಯಲ್ಲ ಎಂದು ಹೇಳುತ್ತೇನೆ. ಇಲ್ಲಿ ಇಷ್ಟು ಜನರು ನೌಕರರಿದ್ದಾರಲ್ಲ ಅವರಿಗೆ ಬರೆದ ಕಾಗದಕ್ಕೆ ಒಂದು ಜವಾಬನ್ನು ಕೊಡುವುದಕ್ಕಾಗಲಿಲ್ಲ ಎಂದರೆ ಇದೆಂಥ ಅಕ್ಷಮ್ಯವಾದದ್ದು? ಇದಕ್ಕೆ ಯಾರು ಕಾರಣರು ಎಂಬುದನ್ನು ಕಂಡುಹಿಡಿದು ಅವರಿಗೆ ಉಗ್ರ ಶಿಕ್ಷೆ ಮಾಡಬೇಕೆಂದು ಹೇಳುತ್ತೇನೆ. ಆ ಮಿಲಿಟರಿ ಸರ್ವೀಸಿನಿಂದ ಬಂದ ಅನೇಕ ಜನ

ಇಂಜಿನಿಯರೂ ಮತ್ತು ಡಾಕ್ಟರುಗಳು ಇಲ್ಲಿ ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಅವರಿಗೆ ನಾವು ಹಿಂದೆ ಮಾತು ಕೊಟ್ಟ ಪ್ರಕಾರ ಅದನ್ನು ಉಳಿಸಿಕೊಳ್ಳಬೇಕು. ಅದನ್ನು ಈ ದಿವಸ ನಾವು ಉಳಿಸಿಕೊಂಡಿಲ್ಲ. ಇತ್ತ ಕಡೆಗೆ ಸರ್ಕಾರದವರು ಕೂಡಲೆ ಗಮನ ಕೊಟ್ಟು ಅವರಿಗೆ ಅನುಕೂಲಗಳನ್ನು ನಾವು ಆಡಿದ್ದ ಪ್ರಕಾರ ಮಾಡಬೇಕೆಂದು ನಾನು ಅಗ್ರಹ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಅಧಿಕಾರಿಗಳಿಗೆ ಒಂದು ಚಾಳಿ ಆಗಿಹೋಗಿದೆ. ಕೆಳಗಿನಿಂದ ಮೇಲಿನವರೆಗೆ ಫೈಲುಗಳನ್ನು ತಳ್ಳಿಹಾಕಿಕೊಂಡು ಹೋಗುವ ದುರಭ್ಯಾಸ. ಅದಕ್ಕಾಗಿ ಅವರಿಗೆ ಒಂದು ಜವಾಬ್ದಾರಿಯನ್ನು ಗೊತ್ತುಮಾಡಬೇಕು. ನಾವು ಸರ್ಕಾರಕ್ಕೆ ಒಳಪಟ್ಟಿರುತ್ತೇವೆಂದು ಹೇಳಿ ಮೇಲಿನ ಆಫೀಸಿಗೆ ಫೈಲುಹೋಗಿದೆ ಎಂದು ಸುಮ್ಮಸುಮ್ಮನೆ ಅದನ್ನು ತಮ್ಮಲ್ಲಿ ಇಟ್ಟುಕೊಂಡು ಕೆಲವು ಅಧಿಕಾರಿಗಳು ಹೇಳುವುದರಲ್ಲಿ ಅರ್ಥವಿಲ್ಲ. ಅವರಿಗೆ ಅಲ್ಲಿ ಒಂದು ಚುರುಕು ಮುಟ್ಟಿಸಬೇಕು;ಇಲ್ಲದೇ ಹೋದರೆ ಅಂತಹ ಅಧಿಕಾರಿಗಳಿಗೆ ಇಂತಹ ಶಿಕ್ಷೆಯಾಗುತ್ತದೆಂದಾದರೂ ನಿಗದಿಯಾಗಿ ಹೇಳಬೇಕು.ಇಟ್ಟುಕೊಂಡು ಏನು ಮಾಡಬೇಕು? ಸರ್ಕಾರದವರು ಈ ಬಗ್ಗೆ ಹೆಚ್ಚಿನ ಗಮನಕೊಡಬೇಕು.

ಇನ್ನು ಮೆಡಿಕಲ್ ಡಿಪಾರ್ಟಮೆಂಟ್ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಇಲ್ಲಿಯೂ ಒಬ್ಬ ಅಧಿಕಾರಿಯ ಮೇಲೆ ಇನ್ನೊಬ್ಬ ಅಧಿಕಾರಿ ದೂರು ಹೇಳುವುದು ಜಾಸ್ತಿಯಾಗಿದೆ ಯಾರಾದರೂ ಟೆಕ್ನಿಕಲೀ ಕ್ವಾಲಿಫೈ ಆಗದೆ ಇದ್ದರೂ ಅವರನ್ನು ನೇಮಕ ಮಾಡಿ ಎಂದು ಹೇಳುವುದಲ್ಲದೆ ಅಡ್ಮಿನಿಸ್ಟ್ರೇಷನ್ ವರ್ಕ್ ಮಾಡುವವರ ಮೇಲೆ ಸಾಕಷ್ಟು ರೀತಿಯ ಪ್ರಭಾರ ಬೀರಿ ಕೆಲಸಮಾಡಿ ಕೊಳ್ಳುತ್ತಾರೆ. ಅದಕ್ಕಾಗಿ ಯಾರಾದರೂ ಐ.ಎ.ಎಸ್.ಅಧಿಕಾರಿಗಳನ್ನು ಅಲ್ಲಿಗೆ ಅಡ್ಮಿನಿಸ್ಟ್ರೇಟರ್ ಆಗಿ ಹಾಕಿದರೆ ಆಗ ಅವರು ಕಳುಹಿಸುವ ಶಿಫಾರ್ಸಿಗೆ ಉತ್ತಮಮಟ್ಟದಲ್ಲಿ ಬೆಲೆ ಬರಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಬೆಂಗಳೂರು, ಮೈಸೂರು ಮುಂತಾದ ದೊಡ್ಡ ಪಟ್ಟಣಗಳಲ್ಲಿರುವ ಆಸ್ಪತ್ರೆಗಳ ಆಡಳಿತವನ್ನು ಸರ್ಕಾರೀ ಡಾಕ್ಟರುಗಳಿಗೆ ಕೊಡುವುದಕ್ಕಿಂತ ಆನರರಿ ಸರ್ಜನ್ಸ್ ಕೈಲಿ ಕೊಡುವುದು ಒಳ್ಳೆಯದು. ಏಕೆಂದರೆ ಬೊಂಬಾಯಿನಲ್ಲಿ ಜಿ.ಎನ್.ಮೆಡಿಕಲ್ ಕಾಲೇಜು,ಜೆ.ಟಿ.ಗ್ರೂಪ್ ಆಸ್ಪತ್ರೆ, ಕೆ.ಇ.ಎಂ. ಆಸ್ಪತ್ರೆ, ಸಂಯಾನ್ ಆಸ್ಪತ್ರೆ ಮತ್ತು ನಾಯನ್ ಅಸ್ಪತ್ರೆ-ಇವು ಸ್ಯಾಂಪಲ್‌ಗೆ ಒಂದೊಂದು ಯೂನಿಟ್ ಇದೆಯೇ ಹೊರತು, ಹೆಚ್ಚಿಗೆ ಪೇಡ್ ಡಾಕ್ಟರ್ಸ್ ಇಲ್ಲ. ಅಲ್ಲಿರತಕ್ಕ ಪ್ರತಿಯೊಂದು ಆಸ್ಪತ್ರೆಯೂ ಆನರರಿ ಸರ್ಜನ್ಸ್‌ಗಳಿಂದಲೇ ನಡೆಯುತ್ತಿವೆ. ಮದ್ರಾಸ್ ಗುಜರಾತ್, ಆಂಧ್ರ ಮತ್ತು ದೆಹಲಿ ಮುಂತಾದ ಕಡೆಗಳಲ್ಲಿ ಆನರರಿ ಸರ್ಜನ್ಸ್ ಅಲ್ಲಿನ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೇವಲ 100-150 ರೂಪಾಯಿಗಳನ್ನು ಆನರರಿಯಾಗಿ ಕೊಡುತ್ತಾರೆ. ಆದರೆ ಇಲ್ಲಿರತಕ್ಕ ಆಸ್ಪತ್ರೆಗಳಲ್ಲಿರುವವರು ತಮ್ಮ ಒಂದು ಸ್ವಪ್ರತಿಷ್ಠೆಗೋಸ್ಕರ ಕೆಲಸಮಾಡುತ್ತಿದ್ದಾರೆ. ಇವರಿಗೆ ಇಲ್ಲಿ ಸಾವಿರಾರು ರೂಪಾಯಿಗಳ ಸಂಬಳವನ್ನು ಕೊಟ್ಟರೂ ಬಡವರನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಅಂತಹವರನ್ನು ಇಲ್ಲಿ ನೇಮಿಸಿದರೆ ಅವರ ಸರ್ವಿಸ್ ಇಲ್ಲಿ ಫ್ರೀಯಾಗಿ ಸಿಗುತ್ತದೆ. ಆಗ ಬಡವರಿಗೆ ಬೇಕಾದಷ್ಟು ಸಹಾಯವಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು

ವಿಚಾರಮಾಡಿ ಇಲ್ಲಿಯೂ ಆ ತರಹ ವ್ಯವಸ್ಥೆ ಅಡಾಪ್ಟ್ ಮಾಡಿಕೊಳ್ಳುವುದು ಬಹಳ ಒಳ್ಳೆಯದು ಎಂಬುದಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೌರಿಂಗ್ ಆಸ್ಪತ್ರೆಯಲ್ಲಿ ಒಂದು ಟೀಚಿಂಗ್ ಇನ್‌ಸ್ಟಿಟ್ಯೂಷನ್ ಇದೆ. ಅಲ್ಲಿನ ಡಾಕ್ಟರಿಗೆ ಏನು ಅದೃಷ್ಟ ಖುಲಾಯಿಸಿದೆಯೊ ಗೊತ್ತಿಲ್ಲ. ಅವರು ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಹೆಚ್ಚಿನ ಕಾಲ ತೆಗೆದುಕೊಳ್ಳುತ್ತಿದ್ದಾರೆ. ಪ್ರೈವೇಟ್ ನರ್ಸಿಂಗ್ ಹೋಂಗಳನ್ನು ಅಲ್ಲಿಯೇ ಪಕ್ಕದಲ್ಲಿ ಮಾಡಿಕೊಂಡಿದ್ದಾರೆ. ಅನೇಕ ಡಾಕ್ಟರುಗಳು ಸೆಂಟ್‌ಫಿಲೋಮಿನಾ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಾರೆ. ಸೆಂಟ್‌ಮಾರ್ತಾ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಾರೆ. ಇವರಿಗೆ ಒಂದು ವರ್ಕಿಂಗ್ ಅವರ್‍ಸ್ ಇಲ್ಲ. ಅದನ್ನು ನೋಡುವವರೂ ಇಲ್ಲ. ಕೇಳುವವರೂ ಇಲ್ಲ. ಹೀಗಾಗಿದೆ. ನಾನು ಅದಕ್ಕೆ ಏನು ಸಲಹೆ ಮಾಡುತ್ತೇನೆಂದರೆ, ಅಲ್ಲಿ ಸರ್‌ಪ್ರೈಜ್ ಚೆಕ್ ಇರಬೇಕು. ಇಲ್ಲದಿದ್ದರೆ ಅಲ್ಲಿ ಹೇಳುವವರು ಕೇಳುವವರು ಇಲ್ಲದೆ ಇಂತಹ ಆಸ್ಪತ್ರೆಗಳಲ್ಲಿ ಕೆಲಸಗಳು ಚೆನ್ನಾಗಿ ನಡೆಯುವುದಿಲ್ಲ. ಇವರಿಗೆ ಸಂಬಳದ ಜೊತೆಗೆ ನಾನ್ ಪ್ರಾಕ್ಟೀಸಿಂಗ್ ಅಲೋಯನ್ಸ್ ಬೇರೆ ಕೊಡುತ್ತಿದ್ದಾರೆ. ದಯವಿಟ್ಟು ಸರ್ಕಾರದವರು ಇದನ್ನು ವಿಚಾರಮಾಡಬೇಕು.

ಇನ್ನು ಅಕ್ವೈಸಿಷನ್ ಆಫೀಸರುಗಳ ವಿಷಯವಾಗಿ ಒಂದು ಮಾತನ್ನು ಹೇಳುತ್ತೇನೆ. ಆ ಹುದ್ದೆಗಳಿಗೆ ಕೆಲಸಕ್ಕೆ ಬಾರದೇ ಇರತಕ್ಕ ಅಧಿಕಾರಿಗಳನ್ನು ಹಾಕಿದ್ದಾರೆ. ಅವರು ಕೇಸಸ್ ಬೇಗನೇ ಇತ್ಯರ್ಥಮಾಡಿ ಕಾಂಪನ್‌ಸೇಷನ್ ಕೊಡುವುದಿಲ್ಲ. ಹೀಗಾಗಬಾರದು. ಅಂತಹ ಹುದ್ದೆಗಳಿಗೆ ಚಿಕ್ಕವಯಸ್ಸಿನ ಉತ್ಸಾಹಶಾಲಿಗಳಾದ ಅಧಿಕಾರಿಗಳನ್ನು ಹಾಕಬೇಕು ಎಂಬುದಾಗಿ ನನ್ನ ಸಲಹೆ.

ಇನ್ನು ನ್ಯಾಯವಾಗಿ ಲೆವಿ ಕೊಟ್ಟಿರುವ ರೈತರಿಗೆ ಕೆಲವು ಅನುಕೂಲತೆಗಳನ್ನು ಮಾಡಿಕೊಡಬೇಕು. ಇತ್ತೀಚೆಗೆ ಕೆಲವು ಜನ ವಕೀಲರು, ಡಾಕ್ಟರುಗಳು ಆಗಿ ವ್ಯವಸಾಯವನ್ನು ಉಪಕಸಬಾಗಿ ಇಟ್ಟುಕೊಂಡಿದ್ದಾರೆ. ಬರೀ ವ್ಯವಸಾಯವನ್ನೇ ತಮ್ಮ ಜೀವನವನ್ನಾಗಿ ಇಟ್ಟುಕೊಂಡಿರುವ ರೈತರಿಂದ ಲೆವಿಯನ್ನು ವಸೂಲುಮಾಡಿದ್ದಾರೆ. ಅಂಥ ರೈತರಿಗೆ ಕಂತುಗಳ ಮೇಲೆ ಟ್ರಾಕ್ಟರ್‌ಗಳನ್ನು ಕೊಟ್ಟು, ಫರ್ಟಿಲೈಜರ್‍ಸ್, ಡೀಸಲ್, ಸ್ಪೇರ್‌ಪಾರ್ಟ್ಸ್, ಇವುಗಳಿಗೆ ಸರ್ಕಾರದವರು ಸಬ್ಸಿಡಿ ಕೊಟ್ಟು ಹೆಚ್ಚಿನ ರೀತಿಯಲ್ಲಿ ಅನುಕೂಲಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ನಮ್ಮ ದೇಶದಲ್ಲಿ ಹೆಣ್ಣುಮಕ್ಕಳು ಸಾಕಷ್ಟು ಜನ ವಿದ್ಯಾವಂತರಿದ್ದಾರೆ. ಅವರಿಗೆ ಉಪಾಧ್ಯಾಯರ, ಲಾಯರುಗಳ, ಡಾಕ್ಟರುಗಳ ಹುದ್ದೆಗಳನ್ನು ಹೆಚ್ಚು ಹೆಚ್ಚಿಗೆ ಕೊಡಲು ಸಾಕಷ್ಟು ಕೋಟಾ ಇಟ್ಟಿರಬೇಕೆಂದು ಹೇಳುತ್ತೇನೆ. ಇಷ್ಟು ಹೊತ್ತು ನನಗೆ ಇಲ್ಲಿ ಮಾತನಾಡಲು ಕಾಲಾವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ವಿಧಾನಸಭಾ ಕಲಾಪ:ದಿ-26-3-1968)

# 10. ಅಧ್ಯಕ್ಷ ಪೀಠದಲ್ಲಿ

## 1972

ಅಧ್ಯಕ್ಷರು-ನಾನು ಎದ್ದು ನಿಂತಿರುವಾಗ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು. ಮೊದಲು ತಾವು ಅರಿತುಕೊಳ್ಳಬೇಕಾದಂಥ ನಿಬಂಧನೆ ಇದು. ಈಗ ಸಂಬಂಧಪಟ್ಟ ವಿಷಯಗಳ ಬಗ್ಗೆ ತಾವು ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಬೇಕು. ಮುಂದೆ ಗೌರ್ನರ್ ಅಡ್ರಸ್ ಚರ್ಚೆಗೆ ಬಂದಾಗ ಮಾತನಾಡಲು ಬೇಕಾದಷ್ಟು ಅವಕಾಶ ಇರುತ್ತದೆ. ಈಗ ನೇರವಾದ ಪ್ರಶ್ನೆ ಕೇಳಿದರೆ ಅವರು ಉತ್ತರ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್-ತಮ್ಮನ್ನು ಅಧ್ಯಕ್ಷರು ಎಂದು ಕರೆಯಬೇಕೇ ಅಥವಾ ಅಧ್ಯಕ್ಷಿಣಿಯವರು ಎಂದು ಕರೆಯಬೇಕೇ?

**ಅಧ್ಯಕ್ಷರು** - ಯಾವರೀತಿ ಬೇಕಾದರೂ ಕರೆಯಬಹುದು.

ಶ್ರೀ ವಾಟಾಳ್ ನಾಗರಾಜ್-ಅಧ್ಯಕ್ಷರಲ್ಲಿ ಒಂದು ವಿನಂತಿ. ಈ ಸಭೆಯನ್ನು ಮುಂದಕ್ಕೆ ಹಾಕಿ, ಆಸ್ಪತ್ರೆಯಲ್ಲಿರುವ ಕಾರ್ಮಿಕರನ್ನು ಮತ್ತು ಸತ್ತ ಕುಟುಂಬದವರನ್ನೂ ಹೋಗಿನೋಡಿದರೆ ತಮಗೆ ಕಣ್ಣೀರು ಸುರಿಯುತ್ತದೆ, ಎಂದು ನನ್ನ ಭಾವನೆ. ಸಾರ್ವಜನಿಕರ ಒಂದು ಕಾರ್ಖಾನೆಯಲ್ಲಿ ಅಂದರೆ ಸರ್ಕಾರವೇ ನಡೆಸತಕ್ಕಂಥಹ ಈ ಕಾರ್ಖಾನೆಯಲ್ಲಿ ಯಾವುದೇ ವಾದ ವಿವಾದಗಳು ಇದ್ದರೂ ಕಾರ್ಮಿಕರ ದೃಷ್ಟಿಯಿಂದ ಶಾಂತರೀತಿಯಿಂದ ಬಗೆಹರಿಸಬೇಕೇ ವಿನಹ ಇವರು ಮಾಡುವ ತಪ್ಪನ್ನು ಕಾರ್ಮಿಕರ ಮುಖಂಡರ ಮೇಲೆ ಗೂಬೆ ಕೂರಿಸುವಂಥ ಪ್ರವೃತ್ತಿಗೆ ಹೋಗಬಾರದು. ಒಂದು ವೇಳೆ ಅವರು ಸತ್ಯಾಗ್ರಹ ನಡೆಸಿದ್ದರೂ ಪೋಲೀಸಿನವರು ಈ ಗೂಂಡಾಗಿರಿಯನ್ನು ನಿಲ್ಲಿಸಿದ್ದರೆ ಇಷ್ಟೊಂದು ರಕ್ತಪಾತ ಆಗುತ್ತಿರಲಿಲ್ಲ. ಈ ರಕ್ತಪಾತದ ಬಟ್ಟೆ ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಮುಖ್ಯಮಂತ್ರಿಗಳು ತಾವು ಇದನ್ನು ನೋಡಿ ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ

**(ತಾವು ತಂದಿದ್ದ ಪೊಟ್ಟಣವನ್ನು ಬಿಚ್ಚಿ ರಕ್ತದ ಕಲೆಯಿದ್ದ ಬಟ್ಟೆಯನ್ನು ಬಿಚ್ಚಿದರು)**

ಈ ಸರ್ಕಾರಿ ಕಾರ್ಖಾನೆಯ ಕಾರ್ಮಿಕರ ಮೇಲೆ ನಡೆಸಿದಂಥ ಹಲ್ಲೆಯ ಪರಿಣಾಮವಾಗಿ ಕಾರ್ಮಿಕನೊಬ್ಬನ ರಕ್ತದ ಕಲೆಯಿರುವ ಬಟ್ಟೆಯನ್ನು ಕೊಟ್ಟುಹೋಗುತ್ತೇನೆ. ಇದು ಹೊಸ ಸರ್ಕಾರದ ಪ್ರಥಮ ಕೊಡುಗೆ. ಈ ರಕ್ತಪಾತದ ಬಟ್ಟೆ ನೋಡಿದರೆ ಕಣ್ಣಿನಲ್ಲಿ ರಕ್ತ ಬರುತ್ತದೆ ಮತ್ತು ಅತೀವ ದು:ಖವಾಗುತ್ತದೆ. ನನಗೆ ಅದನ್ನು ನೋಡಲು ಸಾಧ್ಯವಾಗುತ್ತಿಲ್ಲ. ನನಗೆ ಏನು ಮಾತನಾಡುವುದಕ್ಕೂ ಮನಸ್ಸು ಬರುತ್ತಾ ಇಲ್ಲ.

(ನಂತರ ಅವರು ಅಧ್ಯಕ್ಷರ ಬಳಿ ಬಂದು ಅವರ ವೇದಿಕೆ ಮೇಲೆ ರಕ್ತದ ಕಲೆಯಿದ್ದ ಬಟ್ಟೆಯನ್ನು ಇಟ್ಟು ಸಭಾತ್ಯಾಗ ಮಾಡಿದರು)

(ಪ್ರೇಕ್ಷಕರು ಚಪ್ಪಾಳೆ ತಟ್ಟಿದರು)

ಅಧ್ಯಕ್ಷರು- ಪ್ರೇಕ್ಷಕರು ಇನ್ನೊಮ್ಮೆ ಗ್ಯಾಲರಿಯಲ್ಲಿ ಚಪ್ಪಾಳೆ ತಟ್ಟಿಕೂಡದು, ಹಾಗೇನಾದರೂ ಮಾಡಿದರೆ ಅವರನ್ನು ಹೊರಗೆ ಕಳುಹಿಸುತ್ತೇವೆ. ಗ್ಯಾಲರಿಯಲ್ಲಿ ಚಪ್ಪಾಳೆ ತಟ್ಟುವ ಶಬ್ದ ಈ ಸಭೆಯಲ್ಲಿ ಕೇಳಕೂಡದು.

ಶ್ರೀ ಎಸ್.ಬಂಗಾರಪ್ಪ-ಮಾನ್ಯ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಹೇಳಿಕೆ ಮತ್ತು ಶ್ರೀ ವಾಟಾಳ್‌ನಾಗರಾಜ್ ಅವರು ಕಾರ್ಮಿಕರಿಗೆ ಆದಂಥ ಗಾಯಗಳು ಮತ್ತು ರಕ್ತದ ಕಲೆಗಳು ಇರತಕ್ಕಂಥ ಬಟ್ಟೆಗಳು ಇವುಗಳನ್ನು ತಮ್ಮ ಅವಗಾಹನೆಗೆ ತಂದಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯವಾದ್ದರಿಂದ ಇದರ ಬಗ್ಗೆ ಒಂದೆರಡು ಕ್ಲಾರಿಫಿಕೇಷನ್ ಮಾತ್ರ ಕೇಳುತ್ತೇನೆ.

ಮೊದಲನೆಯದಾಗಿ ಮಾನ್ಯ ಸಚಿವರು ನೀಡಿರುವ ಹೇಳಿಕೆಯಲ್ಲಿ ಲಾಠಿ ಛಾರ್ಜು ಮತ್ತು ಟಿಯರ್‌ಗ್ಯಾಸ್ ಪ್ರಯೋಗ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾನು ಆ ಕಾರ್ಖಾನೆಯ ಒಬ್ಬ ಕಾರ್ಮಿಕನ ಸಾವಿನ ಬಗ್ಗೆ ಕೇಳುತ್ತೇನೆ, ಇದರ ಬಗ್ಗೆ ಪೋಸ್ಟ್‌ಮಾರ್ಟಂ ರಿಪೋರ್ಟ್ ಬರದೇ ಆತನು ನ್ಯಾಚುರಲ್ ಡೆತ್‌ನಿಂದ ಸತ್ತ ಎಂದು ಹೇಳುವುದು ನಾನು ಒಪ್ಪುವುದಿಲ್ಲ. ಆದುದರಿಂದ ಅವರು ಏನು ಹೇಳಿದ್ದಾರೆ, ನ್ಯಾಚುರಲ್ ಡೆತ್‌ನಿಂದಿ ಸತ್ತ ಎಂದು ಹೇಳುವುದು ತಪ್ಪು. ಪೋಸ್ಟ್‌ಮಾರ್ಟಂರಿಪೋರ್ಟ್ ಬಂದಿದ್ದರೆ ಅದನ್ನು ಒಪ್ಪಿಬಹುದಾಗಿತ್ತು. ಈಗ ಅವರ ಹೇಳಿಕೆ ಪ್ರಕಾರ ದ್ವಂದ್ವ ಅಭಿಪ್ರಾಯಕ್ಕೆ ಎಡೆ ಮಾಡಿ ಕೊಟ್ಟಂತಾಗುತ್ತದೆ. ಆದುದರಿಂದ ಕಾರ್ಮಿಕನ ಸಾವಿನ ಬಗ್ಗೆ ಸರಿಯಾದ ಒಂದು ಉತ್ತರ ಕೊಡಬೇಕು ಎಂದು ಕೇಳುತ್ತೇನೆ.

ಎರಡನೆಯದಾಗಿ 2500 ರೂಪಾಯಿಗಳ ಪರಿಹಾರವನ್ನು ಆತನ ಕುಟುಂಬದವರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಉಳಿದ ಗಾಯಗೊಂಡ ಕಾರ್ಮಿಕರು ಏನು ಇದ್ದಾರೆ ಅವರಿಗೆ ಏನಾದರೂ ಪರಿಹಾರವನ್ನು ಕೊಡವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ಎನ್ನುವುದಕ್ಕೆ ತಾವು ಉತ್ತರ ಕೊಡಬೇಕು.

ಮೂರನೆಯದಾಗಿ ಈಗತಾನೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. ಈ ವರದಿ ಎನ್.ಜಿ.ಡಿ.ಇ.ಎಫ್ ಮ್ಯಾನೇಜ್‌ಮೆಂಟ್‌ನವರಿಂದ, ಅವರ ಎಸ್ಟಾಬ್ಲಿಷ್‌ಮೆಂಟ್‌ನಿಂದ ಬಂದಿದೆ, ಇದು ಪೋಲೀಸ್‌ನವರ ರಿಪೋರ್ಟ್ ಅಲ್ಲ ಎಂದು. ಅವರು ಹಾಗೆ ಹೇಳುವುದನ್ನು ಒಪ್ಪೋಣ. ಮಾನೇಜ್‌ಮೆಂಟ್‌ನವರ ಹೇಳಿಕೆಯನ್ನು ತೆಗೆದುಕೊಳ್ಳೋಣ. ಆದರೆ ಅವರು ತಮ್ಮ ಅಭಿಪ್ರಾಯವನ್ನು ಸಕಾರಣವಾಗಿ ಕೊಡಬೇಕು. ಅವರು ಕೊಟ್ಟಿರುವ ವರದಿಯನ್ನು ಈ ಸಭೆಯಲ್ಲಿ ಓದಿದ್ದೀರಿ. ಅದನ್ನು ಒಪ್ಪುತ್ತೇವೆ. ಆದರೆ ಆ ವರದಿಯನ್ನು ಕೈಗಾರಿಕಾ ಮಂತ್ರಿಗಳು ಓದಿದ್ದಾರೆ. ಅಲ್ಲದೆ ಇದಕ್ಕೆ ಸಂಬಂಧಪಟ್ಟ ಲೇಬರ್ ಮಿನಿಸ್ಟರ್ ಈ ಸದನಕ್ಕೆ ಬರುತ್ತಾಇಲ್ಲ. ಬಂದರೂ ಕೂಡ 1-2 ನಿಮಿಷ ಇರುತ್ತಾರೆ. ಆದಕ್ಕೆ ನಾನು ಕೇಳುವುದು ಇಷ್ಟೆ. ಇದಕ್ಕೆ ಸಂಬಂಧಪಟ್ಟ ಕಾರ್ಮಿಕ ಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಇಬ್ಬರೂ ಕೂಡ ಆ ಫ್ಯಾಕ್ಟರಿಗೆ ಹೋಗಿ ವಿಚಾರಣೆ ಮಾಡಿದ್ದೀರಾ? ತಾವು ಇಬ್ಬರೂ ಖುದ್ದಾಗಿ ಹೋಗಿ ವಿಚಾರಣೆ ಮಾಡಲಿಲ್ಲ ಎಂದು ನನಗೆ ಅನಿಸುತ್ತದೆ. ಮೃತಪಟ್ಟ ಕಾರ್ಮಿಕನ ಕುಟುಂಬಕ್ಕೆ 2500 ರೂಪಾಯಿ ಪರಿಹಾರವನ್ನು ಕೊಡುವುದಾಗಿ ಹೇಳಿದ್ದಾರೆ. ಮೃತನ ಕುಟುಂಬದವರಿಗೆ ದು:ಖ ಸೂಚಕ ಪತ್ರವನ್ನು

ಕಳುಹಿಸುವುದಿಲ್ಲ, ಮಾನ್ಯಮಂತ್ರಿಗಳೇ ಖುದ್ದಾಗಿ ಹೋಗಿ ಮೃತರ ಕುಟುಂಬದವರಿಗೆ ತಮ್ಮ ಕಣ್ಣೀರು ಸುರಿಸಿ ಸಮಾಧಾನ ಹೇಳಿ ಬರುವುದಕ್ಕೆ ಆಗಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ = ನಾನು ಹೋಗಿದ್ದೆ.

ಶ್ರೀ ಎಸ್. ಬಂಗಾರಪ್ಪ = ಬಹಳ ಸಂತೋಷ ಕಾರ್ಮಿಕರ ಮೇಲೆ ಮಿನಿಮಮ್ ಫೋರ್ಸ್ ಉಪಯೋಗಿಸಲಾಯಿತು ಎಂದು ಹೇಳಿರುವ ವಿಚಾರ. ಮಾನ್ಯ ಮಂತ್ರಿಗಳಾದ ಕೃಷ್ಣ ಅವರು ಈ ಕಡೆ ಇದ್ದಾಗ ಇಂಥ ವಿಷಯಗಳ ಬಗ್ಗೆ ಹೆಚ್ಚಾಗಿ ಹೇಳಿದ್ದಾರೆ. ಅವರಲ್ಲಿ ಬದಲಾವಣೆಯಾಗಿರಬಹುದು. ಆದರೆ ಪೋಲಿಸೀನವರಲ್ಲಿ ಏನೂ ಬದಲಾವಣೆಯಾಗಿಲ್ಲ. ಇಡೀ ಲಾಠಿಚಾರ್ಜ್ ಎಂದರೆ ಮಿನಿಮಮ್ ಫೋರ್ಸ್. ಎಂದರೂ ಸಾಯುವವರೆಗೂ ಹೊಡೆಯುವುದು. ಅದೇ ಅವರಿಗೆ ಮಿನಿಮಮ್ ಫೋರ್ಸ್. ಅಂಥ ಪೋಲೀಸ್ ಇಲಾಖೆಯವರು ಕೊಟ್ಟಿರುವ ಹೇಳಿಕೆಯನ್ನು ತಂದು ಮಾನ್ಯ ಸಭೆಯಲ್ಲಿ ನಮ್ಮ ಮಂತ್ರಿಗಳು ಓದುತ್ತಾರಲ್ಲ. ಇದರ ಬಗ್ಗೆ ಅವರೇನಾದರೂ ವಿಚಾರಣೆ ಮಾಡಿದ್ದಾರೆಯೇ? ಸಾಯುವವರೆಗೂ ಹೊಡೆಯುವುದು ಮಿನಿಮಮ್ ಫೋರ್ಸ್ ಎನ್ನುವುದು ತಮಗೆಲ್ಲಾ ಗೊತ್ತಿದೆ, ನಿಮಗೆ ಸರ್ಕಾರವನ್ನು ನಡೆಸುವುದಕ್ಕೆ ನಾಚಿಕೆಯಾಗುವುದಿಲ್ಲವೇ? ಏಕೆ ಈ ರೀತಿಯ ಆಡಳಿತವನ್ನು ನಡೆಸುತ್ತೀರಿ? ಸಭೆಗೆ ವಂಚನೆ ಮಾಡುವ ಹೇಳಿಕೆಯನ್ನು ಕೊಡುತ್ತಿದ್ದೀರಿ? ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಕೊಡುತ್ತಿದ್ದೀರಿ?

**Sri D. DEVARAJ URS-**

I take objection in the statement made. This is not the occasion to make statement. The hon Member can ask for any clarification. If any comments have to be made,there are other occasions..

ಶ್ರೀ.ಎಸ್.ಬಂಗಾರಪ್ಪ-

ಬೇರೆ ಬೇರೆ ವಿಷಯಗಳು ಚರ್ಚೆಗೆ ಬರುವವರೆಗೂ ನಾವು ಕಾಯುತ್ತ ಕುಳಿತಿರುವುದಕ್ಕಾಗುವುದಿಲ್ಲ. ಮಿನಿಮಮ್ ಫೋರ್ಸ್ ಎಂದರೆ ಎಷ್ಟು ಫೋರ್ಸ್ ಪ್ರಯೋಗ ಮಾಡಿದರು.

Sri D. DEVARAJ URS-This is not in order, He can ask for Clarifications.

ಶ್ರೀ.ಎಸ್.ಬಂಗಾರಪ್ಪ -ನಾನು ಯೀಲ್ಡ್ ಆಗಿಲ್ಲ. ಮಾನ್ಯ ಸಭಾ ನಾಯಕರಿಗೆ ಇಷ್ಟೂ ಸಹನೆ ಇಲ್ಲವೆನ್ನುವುದಾದರೆ....

ಶ್ರೀ.ಡಿ. ದೇವರಾಜ ಅರಸ್-

ನಾನು ಕ್ರಿಯಾಲೋಪವನ್ನು ಎತ್ತಬೇಕಾಗುತ್ತದೆ.

ಶ್ರೀ.ಎಸ್.ಬಂಗಾರಪ್ಪ-

ಪಾಯಿಂಟ್ ಆಫ್ ಆರ್ಡರ್ ದುರುಪಯೋಗಪಡಿಸಿಕೊಳ್ಳುತ್ತೀರಿ.

ಶ್ರೀ.ಡಿ. ದೇವರಾಜ ಅರಸ್-

ನಾನು ದುರುಪಯೋಗಪಡಿಸುತ್ತಿಲ್ಲ. ತಾವು ದುರುಪಯೋಗಪಡಿಸುತ್ತಿದ್ದೀರಿ.

(ವಿಧಾನ ಸಭಾ ಕಲಾಪ-ದಿ:7-4-1972)

## 11. ಹಕ್ಕು ಚ್ಯುತಿ ನಿಲುವಳಿ ಸೂಚನೆ ಬಗ್ಗೆ ತೀರ್ಪು

**1974**

**Sri H.D.DEVEGOWDA-**

who is encouraging these fellows ? Whether Mr. Deve Gowda or Mr.Konandur Lingappa or Mr. Ananda Rao? Even if it is referred to the Privilege committee, I know the conclusions of the Privilege Committee. Whether I am responsible for the nasty things going on in the University campus or Indira Brigade Commandant Mr.M.D.Nataraj, who is the Son-in law of the Chief Minister? We have got a Police Department in which there are C.I.Ds. What does their Police report say? That matter has to be settled. I am very sorry for this type of nasty statement issued by the son-in-law of Sri Devaraj Urs.

**Sri M.H.JAYAPRAKASHNARAYAN-**

I want to know whether the use of the word nasty is parliame ntary or Un-parliamentary?

(At that stage several Members from opposition side stood and shouted)

ಶ್ರೀ ಕಾಗೋಡು ತಿಮ್ಮಪ್ಪ ಅವರು ಮುಖ್ಯಮಂತ್ರಿಗಳ ಅಳಿಯ.

ಶ್ರೀ ಕೋಣಂದೂರು ಲಿಂಗಪ್ಪ - ಎಲ್ಲಿದೆ ಗೌರವ?

ಶ್ರೀ ಎಂ.ಹೆಚ್.ಜಯಪ್ರಕಾಶ ನಾರಾಯಣ್ - ಸದಸ್ಯರಿಗೆ ಇರತಕ್ಕ ಹಕ್ಕನ್ನು ರಕ್ಷಣೆ ಮಾಡಬೇಕು. ಅದನ್ನು ತಮಗೆ ಬಿಟ್ಟಿದೆ. Nasty ಎನ್ನುವುದು is it a parliamentary word.?

ಅಧ್ಯಕ್ಷರು-ತಾವೂ ಕೂಗುತ್ತಾ ಇದ್ದರೆ, ಅವರಿಗೆ ಹೇಳುವುದಕ್ಕೆ ತಮಗೆ ಯಾವ ತರಹ ಹಕ್ಕು ಇದೆ.

ಶ್ರೀ ಎಂ.ಹೆಚ್.ಜಯಪ್ರಕಾಶ್‌ನಾರಾಯಣ್-ಇನ್ನೂ ಹೆಚ್ಚು ಕೂಗಬೇಕು ಏನು? ಅಧ್ಯಕ್ಷರು- ಸದಸ್ಯರು ಮಾಡುತ್ತಾ ಇರುವ ಕೆಲಸ ನೋಡಿದರೆ ಯಾರು ಕೂಗುತ್ತಾ ಇದ್ದಾರೆ ಯಾರು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ತಮಗೆ ಅಷ್ಟೊಂದು ಕೋಪ ಉದ್ರೇಕ ಏಕೆ? the word used by the hon. Leader of the opposition is not unparliamentary.

**ಶ್ರೀ ಹೆಚ್.ಡಿ.ದೇವೇಗೌಡ-**

ನಾನು ಯಾವ ಒಂದು ಕಾರಣಕ್ಕೋಸ್ಕರ ಈ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆ ಎಂದು ಪಾರ್ಲಿಮೆಂಟರಿ ಸಚಿವರು ತಿಳಿದುಕೊಳ್ಳಬೇಕಾಗುತ್ತದೆ. ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ನಡೆದಿರತಕ್ಕ ಮತ್ತು ನಡೆಯುತ್ತಾ ಇರತಕ್ಕ ದುಷ್ಕೃತ್ಯಗಳಿಗೆ ಶ್ರೀಮಾನ್ ದೇವೇಗೌಡರು ಮತ್ತು ಅವರ ಅನುಯಾಯಿಗಳು ಕಾರಣರೋ ಅಥವಾ ರಾಜ್ಯದ ಮುಖ್ಯಮಂತ್ರಿಗಳು ಕಾರಣರೋ ಅದನ್ನು ಸ್ಪಷ್ಟೀಕರಿಸಬೇಕಾಗುತ್ತದೆ.

**Sir S.M.KRISHNA -**

How is the Chief Minister responsible when a statement is made by somebody out side the House. I the Chief Minister has said any thing, he is responsible. If Tom Dick and Harry made statements, the Chief Minister is not responsible for it.

**ಶ್ರೀ ಹೆಚ್.ಡಿ.ದೇವೇಗೌಡ-**

ಮುಖ್ಯಮಂತ್ರಿಗಳು ಏತಕ್ಕೆ ಕಾರಣರು ಎಂದು ಸ್ಪಷ್ಟೀಕರಣ ಮಾಡಬೇಕು ಎಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**Sri S.BANGARAPPA -**

Mr. M.D. Nataraj is not Tom nor Harry. He is the son-in-law of our Chief Minister.

**ಶ್ರೀ ಹೆಚ್.ಡಿ.ದೇವೇಗೌಡ-**

ಮಾನ್ಯಮಂತ್ರಿಗಳು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಏತಕ್ಕೆಂದರೆ ಇವತ್ತು ದುಷ್ಕೃತ್ಯಗಳು ನಡೆಯುತ್ತಾ ಇರತಕ್ಕಂಥಾದಕ್ಕೆ ಇಂದಿರಾ ಬ್ರಿಗೇಡ್ ಕಾರಣ ಎನ್ನುವುದಕ್ಕೆ ಸದನದಲ್ಲಿ ಸಾಕಷ್ಟು ಚರ್ಚೆ ಆಗಿದೆ. ಇಂದಿರಾ ಬ್ರಿಗೇಡ್ ಕಮಾಂಡೆಂಟ್ ಆಗಿರತಕ್ಕವರು ವಿರೋಧ ಪಕ್ಷಗಳ ಮುಖಕ್ಕೆ ಮಸಿ ಬಳಿಯುವುದಕ್ಕೆ ಹೆಸರು ಹಿಡಿದು ದೇವೇಗೌಡರನ್ನು, ಕೋಣಂದೂರು ಲಿಂಗಪ್ಪನವರನ್ನು ಟೀಕಿಸಿದ್ದಾರೆ. ಇಲ್ಲಿ 12ನೇ ತಾರೀಖು ನಡೆದಿರತಕ್ಕ ಯಾವುದೇ ಕಾರ್ಯಕಲಾಪಗಳಲ್ಲಿ ನಾನು ಅವರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗಿಲ್ಲ. ಗಂಭೀರವಾದ ಎಚ್ಚರಿಕೆ ಸೂಚನೆ ಕೊಟ್ಟು ಇಂಥದಕ್ಕೆ ಅವಕಾಶ ಕೊಡಬೇಡಿ ಎಂದು ಈ ಸಭೆಯಲ್ಲಿ ಹೇಳಿಕೆ ಕೊಟ್ಟಿದ್ದು ಜ್ಞಾಪಕ ಇದೆ. ಅದಕ್ಕೆ ಮುಖ್ಯಮಂತ್ರಿಗಳು ಈ ವಿಷಯ ಅಷ್ಟೊಂದು ಗಹನವಾಗಿರುವುದು, ಅದು ಅಷ್ಟೊಂದು ಅತಿರೇಕಕ್ಕೆ ಹೋಗಿರುವುದು ಗೊತ್ತಿಲ್ಲ, ದೇವೇಗೌಡರು ನನ್ನ ಗಮನಕ್ಕೆ ತಂದಿದ್ದಾರೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರು. ಅದಾಗಿ 4-5 ದಿವಸದೊಳಗೆ ಅರೆಸ್ಟ್ ಮಾಡಿದರು. ಅವರು ದೇಶಕ್ಕೆ ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಅವರ ಹತ್ತಿರ ಪೋಲೀಸ್ ಇಲಾಖೆ ಇದೆ, ಸಿ.ಐ.ಡಿ. ಡಿಪಾರ್ಟ್‌ಮೆಂಟ್ ಕೆಲಸ ಮಾಡುತ್ತಿದೆ. ಅವರಿಂದ ವರದಿ ತರಿಸಿ ಸಭೆಯಲ್ಲಿ ಇಡಬೇಕು. ಅದರಲ್ಲಿ ದೇವೇಗೌಡ ಪಾಲುದಾರ ಆಗಿದ್ದಾನೆಯೇ ಎಂದು ಹೇಳಬೇಕು. ಇಲ್ಲದಿದ್ದರೆ ದೇಶದ ಜನತೆ ತಪ್ಪು ಅರ್ಥವನ್ನು ಕಲ್ಪನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ನನ್ನ ಇತಿಮಿತಿಯಿಂದ ಇಷ್ಟು ಅರ್ಥ ಮಾಡಿಕೊಂಡಿದ್ದೇನೆ. ಈ ಒಂದು ವ್ಯವಹಾರದಲ್ಲಿ ದೇವೇಗೌಡರ ಕೈವಾಡ ಇದೆಯೇ ಎಂಬುದನ್ನು ಸಂಬಂಧಪಟ್ಟವರು ವಿವರಣೆ ಕೊಡದೆ ಹೋದರೆ ಇವತ್ತು ನಾಡಿಗೆ ತಪ್ಪು ಅರ್ಥಕಲ್ಪನೆ ಮಾಡುವುದಕ್ಕೆ ಸಾಧ್ಯವಿದೆ. ನಾನು ಕೃಷ್ಣಾರವರನ್ನು ಕೇಳುತ್ತೇನೆ, ತಮಗೆ ಸರ್ಕಾರದ ವರದಿ ಪ್ರಕಾರ ಪೋಲೀಸ್ ಇಲಾಖೆ ಕಳುಹಿಸಿಕೊಟ್ಟಿರತಕ್ಕ ಸರದಿ ಪ್ರಕಾರ ದೇವೇಗೌಡರು ಪಾಲುದಾರರೇ ಎಂದು ವಿವರಣೆ ಕೊಡಲಿಕ್ಕೆ ಕಷ್ಟವಾಗುವುದಿಲ್ಲ. If Mr. Devegowda is responsible for all the things which happened in the University campus. ದೇಶದ

ಜನತೆ ಮುಂದೆ ಕ್ಷಮೆ ಕೇಳುತ್ತೇನೆ. ಸರ್ಕಾರ ಸ್ಪಷ್ಟೀಕರಣ ಮಾಡಬೇಕು ಎಂದು ತಮ್ಮ ರಕ್ಷಣೆ ಕೇಳುತ್ತೇನೆ. ದೇಶದಲ್ಲಿ ಗೊಂದಲ ಉಂಟಾಗುವುದು ಬೇಡ. ದೇವೇಗೌಡನ ವ್ಯಕ್ತಿತ್ವಕ್ಕೆ ಕಳಂಕ ಬರುವುದು ಬೇಡ.

ಅಧ್ಯಕ್ಷರು-ಕಳಂಕ ಬಂದಿದೆ ಎಂದು ತಿಳಿದುಕೊಳ್ಳುವುದು ಏಕೆ?

**Sri H.D. DEVEGOWDA -**

Unless this point is clarified by the authorities concerned it is very difficult for me to function.

**Sri. K. PUTTASWAMY -**

it is not the statement of the Chief Minister

**Sri H.D. DEVEGOWDA -**

It is the statement made by the son-in-law of the Chief Minister. ಈ ಒಂದು ವಿವರಣೆಯನ್ನು ಕೊಡತಕ್ಕಂಥಾದ್ದು ಸರ್ಕಾರಕ್ಕೆ ಬಹುಶಃ ಯೋಗ್ಯ ಮತ್ತು ಅದರ ಜವಾಬ್ದಾರಿ ಎಂದು ತಿಳಿದುಕೊಂಡಿದ್ದೇನೆ. ಸರ್ಕಾರ ಈ ಕೆಲಸ ಮಾಡಬೇಕು. ಇಂದಿರಾ ಬ್ರಿಗೇಡ್ ಕಮಾಂಡೇಂಟ್‌ರಾದ ಶ್ರೀ ನಟರಾಜ್‌ರವರ ಹಾವಳಿ ಬಹಳ ಹೆಚ್ಚಾಗಿದೆ. ಅದರ ಬಗ್ಗೆ ಈ ಸಭೆಯಲ್ಲಿ ಹಲವಾರು ಸಾರಿ ಪ್ರಸ್ತಾಪ ಮಾಡಿದ್ದಾರೆ. ಹಿಂದೆ ನಡೆದಂಥ ಘಟನೆಗಳನ್ನು ಬಹಳ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಅತಿರೇಕ ಪ್ರಸಂಗ ಆಗಲಿಕ್ಕೆ ಕಾರಣ ನಾನು ಮೊದಲೇ ಹೇಳಿದ್ದೇನೆ, ಬಾಳೆ ಹಣ್ಣನ್ನು ಕದ್ದಾಗ ತಲೆ ಮೇಲೆ ಹೊಡೆದು ಬುದ್ಧಿ ಕಲಿಸದೇ ಇದ್ದ ಪರಿಸ್ಥಿತಿ ರಾಜ್ಯದ ಮುಖ್ಯಮಂತ್ರಿಗಳಿಗೆ ಬಂದಿದೆ. ಆ ಮಾತನ್ನು ಪದೇ ಪದೇ ಹೇಳುತ್ತೇನೆ.

**Sri H.SIDDAVEERAPPA-**

I think Mr.Deve Gowda can hear the parliamentary affairs Minister.

**Sri H.D.DEVEGOWDA-**

I am prepared to hear anybody; whether it is parliamentary Affairs Minister or Legislature Congress party. I am prepared to hear them. ದಯಮಾಡಿ ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳಹಿಸಿ ಕೊಡಬೇಕು, ಇದು ವಿಚಾರಣೆ ಆಗಬೇಕು ಮತ್ತು ಸಂಬಂಧಪಟ್ಟವರಿಗೆ ಶಿಕ್ಷೆ ಆಗಬೇಕು. ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ- ನನ್ನ ಹೆಸರು ಅದರಲ್ಲಿ ಇದೆ. ಈಗ ನಮ್ಮ ನಾಯಕರಾದ ದೇವೇಗೌಡರು ಪ್ರಿವಿಲೇಜ್ ಕಮಿಟಿಗೆ ಕಳಿಸಬೇಕು ಅಂಥ ಏನು ಹೇಳಿದ್ದಾರೆ. ಅದರ ಬಗ್ಗೆ ನಾನು ಕೂಡ ಪ್ರಿವಿಲೇಜ್ ಮೋಷನ್ ಕಳಿಸಿದ್ದೇನೆ. ಅದಕ್ಕಿಂತ ಮುಖ್ಯವಾಗಿ ಮುಂಚಿತವಾಗಿ ಪ್ರೈಮಾಫೇಸಿ ಕೇಸ್ ಇದೆ. ಈ ಸದನದ ಮೇಲ್ಮನೆ ಸದಸ್ಯರ ಹಕ್ಕು ಬಾಧ್ಯತೆಗೆ

ಚ್ಯುತಿ ತಂದಿರತಕ್ಕ ಅವರ ಹೇಳಿಕೆ ಸಾಕಷ್ಟು ಸ್ವತ: ಸಾಕ್ಷಿ ಕೊಟ್ಟಿದೆ. ಮುಖದಲ್ಲಿಯೇ ಹಕ್ಕುಬಾಧ್ಯತೆಗೆ ಧಕ್ಕೆ ತಂದಿರುವುದರಿಂದ ಆ ಮಹಾನುಭಾವರನ್ನು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ಅಳಿಯಂದಿರಾದ ಶ್ರೀಮಾನ್ ಎಂ.ಡಿ.ನಟರಾಜರನ್ನು ಸದನಕ್ಕೆ ಕರೆಸಿ ವಿಚಾರಣೆ ಮಾಡಬೇಕು. ಲೋಕಸಭೆಯಲ್ಲಿ ಬ್ಲಿಟ್ಸ್ ಸಂಪಾದಕರನ್ನು ಇದೇ ರೀತಿ ಕರೆಸಿದ್ದರು.

ಅಧ್ಯಕ್ಷರು- ಮಾನ್ಯ ಸದಸ್ಯರ ನೋಟೀಸ್ ನನಗೆ ಇನ್ನೂ ಬಂದಿಲ್ಲ. ಮಾನ್ಯ ಬಂಗಾರಪ್ಪನವರು ಕಳುಹಿಸಿರುವ ನೋಟೀಸ್ ಈಗ ತಾನೇ ಬಂದಿದೆ. ಮಾನ್ಯ ದೇವೇಗೌಡರು ಸಾಕಷ್ಟು ವಿವರವಾಗಿ ಹೇಳಿದ್ದಾರೆ. ಸರ್ಕಾರದವರು ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಕೋಣಂದೂರು ಲಿಂಗಪ್ಪ-ಲೋಕಸಭೆಯಲ್ಲಿ ಆಚಾರ್ಯ ಕೃಪಲಾನಿಯವರು ಸದಸ್ಯರಾಗಿದ್ದಾಗ ಬ್ಲಿಟ್ಜ್ ಪತ್ರಿಕೆ ಇಂಥದೇ ಒಂದು ಲೇಖನವನ್ನು ಅವರ ಬಗ್ಗೆ ಬರೆದಿದ್ದಿತು ಅದು ಎಲ್ಲರಿಗೂ ಗೊತ್ತಿದೆ. ಈಗ ಎಂ.ಡಿ.ನಟರಾಜ್‌ರವರು ಮುಖ್ಯಮಂತ್ರಿಗಳ ಅಳಿಯಂದಿರು ನಮ್ಮ ಗೌರವಕ್ಕೆ ಚ್ಯುತಿ ತರುವಂಥ ಕೆಲಸ ಮಾಡಿರುವುದರಿಂದ.

ಇಲ್ಲಿ ಅವರಿಗೆ ಛೀಮಾರಿ ಹಾಕತಕ್ಕ ದಂಡನೆಯನ್ನು ಈ ಸದನವೇ ವಿಧಿಸಬೇಕು, ಅದಕ್ಕೆ ತಾವು ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**Sri S.M.KRISHNA -**

I respectfully submit that some of the expressions which the hon. Member has used are thoroughly unparliamentary. The Hon. Speaker may kindly take appropriate action.

**MADAM SPEAKER -**

I will get the report and examine it.

**Sri S.BANGARAPPA-**

Before the hon. Minister gives a sort of reply to the points raised by the hon. Leader of the opposition, I would like to speak.

**Sri S.M.KRISHNA -**

I am not replying.

ಶ್ರೀ ಎಸ್.ಬಂಗಾರಪ್ಪ -ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಈಗ ಹಕ್ಕುಬಾಧ್ಯತೆ ನಿರ್ಣಯವನ್ನು ಪ್ರಸ್ತಾಪ ಮಾಡಿದ್ದಾರೆ. ರೂಲ್ಸ್ ಪ್ರಕಾರ ಮೂರು ವಿಚಾರಗಳು ಇವೆ. ಕಮಿಟಿಯ ವಿಚಾರ ಇಲ್ಲಿ ಬರುವುದಿಲ್ಲ. ಇದರಲ್ಲಿ ಸಭೆಯ ಸದಸ್ಯರಿಗೆ ಹಾಗೂ ಸಭೆಯ ಹಕ್ಕಿಗೆ ಚ್ಯುತಿ ಬಂದಿದೆ. ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದಿ ನೋಡಿದ್ದೇನೆ. ಅವರ ಹೇಳಿಕೆಯ ಪ್ರಕಾರ ನನಗನ್ನಿಸುತ್ತದೆ, ಮಾನ್ಯ ಸದಸ್ಯರು ಹಾಗೂ ಸಭೆಯ ಹಕ್ಕಿಗೆ ಚ್ಯುತಿ ಬಂದಿರುವುದು ನಿಜ..He has personally attacked the honourable members of this Au-

***Words expunged as ordered by the chair.

gust House.ಇಲ್ಲಿ ನಾವು ವೇಳೆಯನ್ನು ಹಾಳು ಮಾಡುತ್ತೇವೆ ಮತ್ತೊಂದು ಮಾಡುತ್ತೇವೆಂದು ಹೇಳಿದ್ದಾರೆ.He has no business to comment upon the exact business that takes place on the floor of this House.

ರೂಲ್ 177ರ ಪ್ರಕಾರ ಈ ಸಭೆಯ ಹಕ್ಕಿಗೆ ಚ್ಯುತಿಯನ್ನು ತಂದಿದ್ದಾರೆ, ಈ ಸದನದ ಸದಸ್ಯರ ಹಕ್ಕಿಗೂ ಚ್ಯುತಿಯನ್ನು ತಂದಿದ್ದಾರೆ. ಈ ಹೊತ್ತು ಶ್ರೀ ದೇವೇಗೌಡರ ಹಾಗೂ ಕೋಣಂದೂರು ಲಿಂಗಪ್ಪನವರ ಹೆಸರು ಎತ್ತಿದ್ದಾರೆ. ಮೇಲ್ಮನೆಯ ಅನೇಕ ಮಾನ್ಯ ಸದಸ್ಯರ ಹೆಸರನ್ನೂ ಪ್ರಸ್ತಾಪ ಮಾಡಿದ್ದಾರೆ. ನಾಳೆಯ ದಿವಸ ಬೇರೆಯವರ ಹೆಸರನ್ನೂ ಪ್ರಸ್ತಾಪ ಮಾಡಬಹುದು.

**Sri K.PUTTASWAMY-**

Supposing it is a reasonable comment on our actions here, has the public no right?

ಶ್ರೀ ಕೋಣಂದೂರು ಲಿಂಗಪ್ಪ -

ಧೂರ್ತ ಸಮೂಹ, ಕುಟಿಲ ರಾಜಕೀಯ;...ಎಂದೆಲ್ಲ ಹೇಳಬಹುದೋ?

ಶ್ರೀ ಕೆ. ಪುಟ್ಟಸ್ವಾಮಿ-

ಇಲ್ಲಿ ವೇಳೆ ಹಾಳು ಮಾಡುತ್ತಿದ್ದೇವೆಂದು ಅವರು ಹೇಳುತ್ತಾರೆ ಅದನ್ನು ಹೇಳಬಾರದೆ?

ಶ್ರೀ ಎಸ್.ಬಂಗಾರಪ್ಪ-

ಇಲ್ಲಿ ನಡೆಯುವ ವಿಚಾರಗಳ ಬಗ್ಗೆ ಕಾಮೆಂಟ್ ಮಾಡುವ ಹಕ್ಕು ಬೇರೆಯವರಿಗೆ ಇದೆ. ಅದರೆ ಯಾವ ರೀತಿಯಲ್ಲಿ ಎಷ್ಟರ ಮಟ್ಟಿಗೆ ಮಾಡಬಹುದು. ಅದಕ್ಕು ಕೂಡ ಕೆಲವು ಅಡೆತಡೆಗಳಿವೆ, ಲಿಮಿಟೇಷನ್ಸ್ ಇದೆ ಎನ್ನುವ ಮಾತು ಸರಿಹೋಗುತ್ತದೆಂದು ಭಾವಿಸುತ್ತೇನೆ.

ಅಧ್ಯಕ್ಷರು -

ಒಳ್ಳೆಯದನ್ನು ಮಾತ್ರ ಹೇಳಬೇಕು.

ಶ್ರೀ ಎಸ್.ಬಂಗಾರಪ್ಪ

ಹೌದು. ಒಂದು ವೇಳೆ ಏನಾದರೂ ತಪ್ಪು ನಡೆದಿದ್ದರೆ ಅದನ್ನು ಹೇಳತಕ್ಕ ರೀತಿ ನೀತಿ ಇದೆ. ಅವರಿಗೆ ವಾಕ್‌ಸ್ವಾತಂತ್ರ್ಯವಿದೆ, ಬೇಡ ಎನ್ನುವುದಿಲ್ಲ. ಆದರೆ ಮಿತಿಮೀರಿ ಹೋದಾಗ ಹಕ್ಕಿಗೆ ಚ್ಯುತಿ ಬರತಕ್ಕ ವಿಷಯ ಪ್ರಾರಂಭವಾಗುತ್ತದೆ. ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಪುನ:ಓದುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ಅಸಭ್ಯ ಪದಗಳ ಪ್ರಯೋಗ ಮಾಡಿದ್ದಾರೆ. ಧೂರ್ತ ಸಮೂಹ, ಕುಟಿಲ ರಾಜಕೀಯ ಎಂದು ಮುಂತಾದ ಪದಗಳ ಪ್ರಯೋಗ ಮಾಡಿದ್ದಾರೆ. ಈ ಹೊತ್ತು ಶ್ರೀ ಲಿಂಗಪ್ಪನವರ ಹೆಸರು ತಂದಿದ್ದಾರೆ. ನಾಳೆ ನಮ್ಮ ಹೆಸರನ್ನು ತರಬಹುದು. He thinks he is the Almighty or the big person above the House or the Members of this August House.ನನ್ನ ಮಾತಿನ ಅಭಿಪ್ರಾಯವಿಷ್ಟೇ:

ಸದನದ ಸದಸ್ಯರ ಮತ್ತು ಸದನದ ಹಕ್ಕಿಗೆ ಸಂಪೂರ್ಣವಾಗಿ ಚ್ಯುತಿಯನ್ನು ತಂದಿದ್ದಾರೆ. ಮೇಲ್ನೋಟದಲ್ಲಿ ಅದು ಗೊತ್ತಾಗುತ್ತದೆ. ಆದ್ದರಿಂದ ರೂಲ್ಸ್ ಪ್ರಕಾರ ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತಿರೋ ಅದನ್ನು ತೆಗೆದುಕೊಳ್ಳಿ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಹಕ್ಕಿಗೆ ಚ್ಯುತಿ ತಂದಿಲ್ಲವೆನ್ನುವುದಕ್ಕೆ ದಾರಿಯಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಜೊತೆಗೆ ನಮ್ಮನ್ನೆಲ್ಲ ಹೆದರಿಸಿ, ಬೆದರಿಸಿ ಮಾಡುತ್ತ ಹೋಗುವುದಾದರೆ ಇನ್ನೂ 28 ಹೆಸರುಗಳನ್ನು ಪತ್ರಿಕೆಗಳಿಗೆ ಕೊಟ್ಟು ಬೆದರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಬೆದರಿಕೆಗೆ ಜಗ್ಗತಕ್ಕ ಸದಸ್ಯರು ಇಲ್ಲಿ ಯಾರೂ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. If Tom, Dick and Harry make a statement, how can the hon. Member hold the Government responsible for such statements ನಾವೇನು ಮಾಡೋಣ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಾವು ಹೇಳುತ್ತಿರುವುದು ಎಂ.ಡಿ.ನಟರಾಜ್,ಕಮಾಂಡೆಂಟ್, ಸೌತ್‌ಜೋನ್ ಇಂದಿರಾ ಬ್ರಿಗೇಡ್ ಇವರು ಮುಖ್ಯಮಂತ್ರಿಯವರ ಅಳಿಯಂದಿರು. ಮುಖ್ಯಮಂತ್ರಿಗಳಾದವರು ಯಾವತ್ತಿಗೂ ಜವಾಬ್ದಾರಿಯಿಂದ ತಮ್ಮ ಪಕ್ಕದಲ್ಲಿರುವವರನ್ನು ಬಹಳ ಹುಷಾರಾಗಿ ನೋಡಿಕೊಳ್ಳಬೇಕು.Sri M.D.Nataraj is the Son-in-law of the hon. Chief Minister.

ಶ್ರೀ ಎಸ್.ಎಂ.ಕೃಷ್ಣ -

ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹು ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸದನದಲ್ಲಿ ದೇಶದ ಆಗುಹೋಗುಗಳ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಮಾನ್ಯ ಸದಸ್ಯರಿಗೆ ಅನಿರ್ಬಂಧಿತ ಸ್ವಾತಂತ್ರ್ಯ ಮತ್ತು ಹಕ್ಕು ಇರಬೇಕು ಎನ್ನುವುದರ ಬಗ್ಗೆ ಎರಡು ಅಭಿಪ್ರಾಯಗಳು ಸಾಧ್ಯವೇ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ತಮಗೆ ಒಂದು ಪತ್ರದ ಮುಖೇನ ತಿಳಿಸಿದ್ದಾರೆ. Prima facie it amounts to a Breach of Privilege of this House. We want this to be referred to the Committee of Privileges. ಎರಡನೆಯದೇನೆಂದರೆ ಬೆಂಗಳೂರಿನಲ್ಲಿ ಪ್ರಕಟವಾಗತಕ್ಕ ದಿನಪತ್ರಿಕೆಗಳ ಪೈಕಿ ಒಂದು ಪತ್ರಿಕೆಯಲ್ಲಿ ಮಾತ್ರ ಈ ಹೇಳಿಕೆ ಬಂದಿದೆ. ಆದುದರಿಂದ ಪ್ರಿವಿಲೇಜಸ್ ಕಮಿಟಿಯಲ್ಲಿ ಈ ಎಲ್ಲ ವಿಚಾರಗಳನ್ನೂ, ಈ ಹೇಳಿಕೆ ಮಾಡಿದ್ದಾರೆಯೇ ಎನ್ನತಕ್ಕ ವಿಚಾರ ಇವುಗಳ ಬಗ್ಗೆ ನೋಡಬೇಕಾಗುತ್ತದೆ. ಆದುದರಿಂದ ಸರ್ಕಾರದ ಪರವಾಗಿ ಇದನ್ನು ಪ್ರಿವಿಲೇಜಸ್ ಕಮಿಟಿಗೆ ರೆಫರ್ ಮಾಡುವುದಕ್ಕೆ ನಾವು ಕೂಡ ಒಪ್ಪಿದ್ದೇವೆಂದು ಹೇಳುತ್ತೇನೆ.

**MADAM SPEAKER-**

I feel the matter is in order. The Hon.Leader of the opposition may please move the Motion

**Sri H.D.DEVEGOWDA -**

I beg to move: "That the statement of Dr.M.D.Nataraj, published in Lok Vani, dated 2nd September 1974 is a breach of privilege of the Member of the House and it involves the contempt of the House also and may be referred to the Committee of privileges for Enquiry."

**MADAM SPEAKER -**

The question is: "That the statement of Dr.M.D.Nataraj, published in Lok Vani, dated 2nd September 1974, is a Breach of Privilege of the Members of the House and it involves the contempt of the House also and may be referred to the Committee of Privileges for Enquiry".

ಹಕ್ಕುಚ್ಯುತಿ ನಿಲುವಳಿ ಸೂಚನೆಯನ್ನು ಅಂಗೀಕರಿಸಿ ಅದನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಲಾಯಿತು.

(ವಿಧಾನಸಭಾ ಕಲಾಪ: ದಿ:2-9-1974)

## 12. ಸದನದಲ್ಲಿ ಚರ್ಚೆಯ ಕಾಲಾವಕಾಶದ ಬಗ್ಗೆ

**1988**

ಅಧ್ಯಕ್ಷರು - ಈಗ ಆಗುವುದಿಲ್ಲ, ಅವಕಾಶ ಕೊಡುವುದಕ್ಕೆ ಸಾಧ್ಯವೇ ಇಲ್ಲ, ನೀವು ಕೊಡುತ್ತೀರೋ ಇಲ್ಲವೊ? I have to take action ............

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ - ನಾನು ಕೊಡುವುದಿಲ್ಲ, ನೀವು ಕ್ರಮ ತೆಗೆದುಕೊಳ್ಳುವುದು ಇದ್ದರೆ ತೆಗೆದುಕೊಳ್ಳಿ, ನನ್ನನ್ನು ಹೊರಗೆ ಕಳುಹಿಸಬೇಕೆಂದಿದ್ದರೆ ಕಳುಹಿಸಿ.

ಅಧ್ಯಕ್ಷರು-

ಈಗ ಮಾತಮಾಡಲಿಕ್ಕೆ ಅವಕಾಶ ಕೊಡವುದಿಲ್ಲ. ಮಾನ್ಯ ಫರ್ನಾಂಡೀಸ್‌ರವರು ಕುಳಿತುಕೊಳ್ಳಿ ಅಂದಾಗ ಹೇಗೆ ಗೌರವದಿಂದ ಕುಳಿತುಕೊಂಡರು, ಹೆಚ್ಚಿಗೆ ಸಮಯ ಇಲ್ಲದೇ ಇರುವುದರಿಂದ ಅವಕಾಶ ಕೊಡವುದಕ್ಕೆ ಆಗುವುದಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ-

ಮಾನ್ಯ ಸದಸ್ಯರು ವೈಜ್ಞಾನಿಕವಾಗಿ ವಿಷಯಗಳನ್ನು ಮಂಡಿಸುತ್ತಿದ್ದಾರೆ, ಅಂತಹ ಸಂದರ್ಭದಲ್ಲಿ ಕುಳಿತುಕೊಳ್ಳಿ ಅಂದರೆ ಇದೇನಿದು? ನಾವು ಈ ಮನೆಯ ಸದಸ್ಯರಲ್ಲವೆ?

**Mr.SPEAKER-**

I just bring to your notice rule 318 and 330 of the Rules of Procedure.

318. The Speaker may, in cases not specifically Provided for in the rules and having regard to the State of business before the House, and the nature of the motion prescribes a time limit for speech on the motion.

330. The Speaker may, direct any member whose conduct is in his opinion grossly, disorderly to withdraw immediately from the House, and any member so ordered to withdraw shall do so forthwith and shall absent himelf during the remainder of the days, sitting. ಎರಡು ಗಂಟೆಗೆ ಚರ್ಚೆ ಮುಗಿಯಬೇಕು ಎರಡು ಗಂಟೆಯ ನಂತರ ಮಾನ್ಯ ಮಂತ್ರಿಗಳಿಂದ ಉತ್ತರ ಆಗಬೇಕು. ಆದ್ದರಿಂದ ಒಬ್ಬರು ಮಾತನಾಡಲಿಕ್ಕೆ 10 ನಿಮಿಷ ಅವಕಾಶ ಕೊಟ್ಟಿದ್ದೇನೆ. ಫರ್ನಾಂಡೀಸ್‌ರವರು ಮಾತನಾಡುವಾಗ ಹೆಚ್ಚಿಗೆ ಸಮಯ ಕೊಡಲಿಲ್ಲ ಹೆಚ್ಚಿಗೆ ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲವೆಂದು ಹೇಳಿದ್ದೇನೆ. ಅದೇ ರೀತಿ ನಿಮಗೆ ಕೂಡ ಹೆಚ್ಚಿಗೆ ಸಮಯಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀಮತಿ ಕೆ.ಎಸ್.ನಾಗರತ್ನಮ್ಮ-

ಅಧ್ಯಕ್ಷರೇ, ಶ್ರೀ ಪ್ರತಾಪಚಂದ್ರಶೆಟ್ಟಿಯವರು ಇನಿಶಿಯೇಟ್ ಮಾಡಬೇಕಿತ್ತು. ಆ ಲಿಸ್ಟ್‌ನಲ್ಲಿ ಹೇಗೋ ವ್ಯತ್ಯಾಸವಾಗಿ ಮತ್ತೆ ಬರೆದು ಕಳಿಸಿದ್ದೆ. ಅದು ತಮಗೆ ದೊರೆಯಿತೋ ಇಲ್ಲವೋ ಗೊತ್ತಿಲ್ಲ. ಅವರು ಮಾಡಬೇಕಿತ್ತು. ಈಗ ತಿರುಗಿ ಬರೆದು ಕಳಿಸಿದ್ದೇನೆ...

ಅಧ್ಯಕ್ಷರು-

ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಇನಿಶಿಯೇಟ್ ಮಾಡಿದ್ದಾರೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ -

ನಾನು ಮಾತನಾಡಿದ್ದು ಕೇಳುವುದಿಲ್ಲ ಎಂದರೆ ಹೇಗೆ? ತಾವು ಅಲ್ಲಿ ಕುಳಿತುಕೊಂಡು ಜಾಸ್ತಿ ಮಾತನಾಡಬಾರದು ಅಧ್ಯಕ್ಷರೇ....

ಅಧ್ಯಕ್ಷರು-

ಮಾತನಾಡಬಾರದು ಎಂದರೆ ಸಭೆ ಹೇಗೆ ನಡೆಸಬೇಕು? ತಾವು ಇಲ್ಲಿ ಕುಳಿತುಕೊಂಡು ಕೆಲಸ ಮಾಡಿದ್ದೀರಿ. ನೀವು ಇಲ್ಲಿ ಇದ್ದಾಗ ಐದೈದು ನಿಮಿಷ ಕೊಟ್ಟರಿ ನನಗೆ ಮಾತನಾಡಿ ಅನುಭವ ಇದೆ. ನಾನು ಎಲ್ಲರಿಗೆ ಅವಕಾಶ ಕೊಡಬೇಕಲ್ಲ? ಈ ಕಡೆಯವರೂ ಇದ್ದಾರೆ, ಆ ಕಡೆಯವರೂ ಇದ್ದಾರೆ. ಶ್ರೀ ಧರ್ಮಸಿಂಗ್ ಅವರು ಇದ್ದಾರೆ, ಶ್ರೀ ಬಸವಲಿಂಗಪ್ಪನವರು ಇದ್ದಾರೆ. ಎರಡು ಗಂಟೆಗೆ ಚರ್ಚೆಮುಗಿಸಬೇಕು. ಇನ್ನು ಒಂದು ತಾಸು ಇದೆ. ನಾನು ಮಾತನಾಡಬಾರದು ಎಂದರೆ...

ಶ್ರೀಮತಿ ಕೆ.ಎಸ್.ನಾಗರತ್ನಮ್ಮ -ನಾನು ಮಾತನಾಡುವುದು ಸ್ವಲ್ಪ ಕೇಳಿ ನೀವು.

ಅಧ್ಯಕ್ಷರು-ಸಾಧ್ಯ ಇಲ್ಲ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ- ನಾನು ಮಾತನಾಡುವುದನ್ನು ಕೇಳುವುದಿಲ್ಲವೆ?

ಅಧ್ಯಕ್ಷರು- ಯೋಗ್ಯ ಇದ್ದರೆ ಕೇಳಬೇಕು. ಯೋಗ್ಯ ಅಲ್ಲದಿದ್ದರೆ ಏಕೆ ಕೇಳಬೇಕು?

ಶ್ರೀಮತಿ ಕೆ.ಎಸ್.ನಾಗರತ್ನಮ್ಮ- ಹಾಗಾದರೆ ನಾನು ಯೋಗ್ಯತೆ ಇಲ್ಲದೆ ಮಾತನಾಡುತ್ತೀನಾ? ಯೋಗ್ಯತೆ ಇಲ್ಲದೆ ಮಾತನಾಡ್ತೀನಾ ನಾನು? ದಯವಿಟ್ಟು ಈ ಮಾತನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು.

## (ಗೊಂದಲ)

ಅಧ್ಯಕ್ಷರು-ತಾವು ಇಲ್ಲಿ ಕುಳಿತು ಕೆಲಸ ಮಾಡಿದ್ದೀರಿ, ನೀವೇ ಐದು ಮಿನಿಟು ಹತ್ತು ಮಿನಿಟು ಕೊಟ್ಟಿದ್ದೀರಿ. ಐದು ಮಿನಿಟು ಮಾತನಾಡಿ ನನಗೆ ಅನುಭವ ಇದೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ- ಅದೆಲ್ಲ ಬೇರೆ ವಿಚಾರ.

ಅಧ್ಯಕ್ಷರು :- ನೀವು ಸ್ಟ್ರಿಕ್ಟ್ ಆಗಿ ಕೆಲಸ ಮಾಡಿದ್ದೀರಿ. ನಾನೂ ಸ್ಟ್ರಿಕ್ಟ್ ಆಗಿ ಕೆಲಸ ಮಾಡಬೇಕಾಗಿದೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ನಾನು ಯೋಗ್ಯತೆ ಇಲ್ಲದೆ ಮಾತನಾಡುತ್ತಿದ್ದೀನಾ? ಮೊದಲು ಹೇಳಿ.

ಅಧ್ಯಕ್ಷರು - ಅವರಿಗೆ ಹತ್ತು ನಿಮಿಷ ಕೊಟ್ಟಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ - ಅದು ಬೇರೆ ವಿಚಾರ. ನಾನು ಯೋಗ್ಯತೆ ಇಲ್ಲದೆ ಮಾತನಾಡುತ್ತಿದ್ದೀನಾ ದಯವಿಟ್ಟು ಹೇಳಿ. .You have got to withdraw that wore.....

ಅಧ್ಯಕ್ಷರು ತಾವು ಏನು ಹೇಳುತ್ತಿದ್ದೀರಿ?;

ಶ್ರೀಮತಿ ಕೆ.ಎಸ್.ನಾಗರತ್ನಮ್ಮ-ಯೋಗ್ಯತೆ ಇಲ್ಲದೆ ಮಾತನಾಡುವುದಕ್ಕೆ ಬಂದಿದ್ದೀನಾ ನಾನು?35 ವರ್ಷ ಆಯಿತು ಇಲ್ಲಿಗೆ ಬಂದು. ಇವತ್ತಲ್ಲ ಬಂದಿರುವುದು. ಯೋಗ್ಯತೆ ಇಲ್ಲದೆ ಮಾತನಾಡುವುದಕ್ಕೆ ಬಂದಿದ್ದೀನಾ?

ಅಧ್ಯಕ್ಷರು - ನಿಮ್ಮ ಅನುಭವವನ್ನು ನಾನು ತೆಗೆದುಕೊಂಡಿದ್ದೇನೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ಅದೆಲ್ಲ ಹಳೆ ಕತೆ ಆಯಿತು.

ಅಧ್ಯಕ್ಷರು - ಹತ್ತು ನಿಮಿಷ ಕೊಟ್ಟಿದ್ದೇನೆ.?

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ಹತ್ತು ನಿಮಿಷ ಕೊಡಿ, ಎರಡು ನಿಮಿಷ ಕೊಡಿ. ಅದು ಬೇರೆ ವಿಚಾರ, ನಾನು ಇಲ್ಲಿ ಕುಳಿತಿರುವವರೆಗೆ ನಾನು ಮಾತನಾಡಿದ್ದನ್ನು ತಾವು ಕೇಳಬೇಕು.

(ಗೊಂದಲ)

ಅಧ್ಯಕ್ಷರು - ಈ ಇಂಟರ್‌ಫಿಯರೆನ್ಸ್ ಯಾಕೆ?

ಶ್ರೀಮತಿ ಕೆ.ಎಸ್.ನಾಗರತ್ನಮ್ಮ -ನಾನು ಇಂಟರ್‌ಫಿಯರೆನ್ಸ್ ಮಾಡಿದ್ದನ್ನು ನೋಡಿದ್ದೀರಾ?

ಅಧ್ಯಕ್ಷರು - ಅವರಿಗೆ ನೋಡಿ, 12 ಮಿನಿಟ್ ಕೊಟ್ಟಿದ್ದೇನೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ನಾನು ಯೋಗ್ಯತೆ ಇಲ್ಲದೆ ಮಾತನಾಡಿದ್ದೇನೆ ಎನ್ನುವ ಪದವನ್ನು ನೀವು ಏನು ಹೇಳಿದ್ದೀರಿ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ತಾವು ಅಪಾಲಜೈಸ್ ಮಾಡಬೇಕು.

ಅಧ್ಯಕ್ಷರು - ನೀವು ಕುಳಿತುಕೊಳ್ಳಿ.

SMT.K.S. NAGARATHNAMMA -we will not allow to proceed to do any business, You have got to apolizise. I won,t sit...

ಅಧ್ಯಕ್ಷರು - ನಾನು ನಿಮಗೆ ಹೇಳಿಲ್ಲ. ನೀವು ಇಂಟರ್‌ಫಿಯರ್ ಮಾಡುವುದು ಬೇಡ, ದಯವಿಟ್ಟು ಕುಳಿತುಕೊಳ್ಳಿ ಎಂದು ಅವರಿಗೆ ಹೇಳಿದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ -ನಾನು ಕುಳಿತುಕೊಳ್ಳುವುದಿಲ್ಲ. I cannot sit down... ತಾವು ಯೋಗ್ಯತೆ ಇಲ್ಲವೆಂದು ಹೇಳಿದ್ದೀರಿ. ನಾನು ಯೋಗ್ಯತೆ ಇಲ್ಲದೆ ಮಾತನಾಡುತ್ತೀನಾ?

(ಗೊಂದಲ)

ಶ್ರೀ ಎ.ಲಕ್ಷ್ಮೀಸಾಗರ್ - ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ನಾಯಕಿಯವರಿಗೆ ಒಂದು ಮಾತನ್ನು ಹೇಳುತ್ತೇನೆ, ಮಾನ್ಯ ಅಧ್ಯಕ್ಷರು ತಮ್ಮನ್ನು ಕುರಿತು ಆ ಮಾತನ್ನು ಹೇಳಲಿಲ್ಲ.ನಾನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎ.ಲಕ್ಷ್ಮೀಸಾಗರ್ - ತಮ್ಮನ್ನು ಕುರಿತು ಆ ಮಾತನ್ನು ಹೇಳಲಿಲ್ಲ. ಒಂದು ಸ್ವಲ್ಪ ಇರಿ ಸ್ವಾಮಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್ - ಸ್ವಲ್ಪ ಇರಿ ಅಪ್ಪ, ಒಂದು ನಿಮಿಷ ಇರಿ.

(ಗೊಂದಲ)

SMT.K.S.NAGARATHNAMMA - I am not going to allow this House to proceed until he apoligise.

ಶ್ರೀ ಎ.ಲಕ್ಷ್ಮೀಸಾಗರ್ - ಒಂದು ನಿಮಿಷ ಕೇಳುವುದೂ ಬೇಡವೇ, ನೀವು ಹೇಳಿದುದನ್ನು ಕೇಳಬೇಕು ನಾವು ಹೇಳಿದುದನ್ನು ಕೇಳುವುದು ಬೇಡವೇ. ದಯವಿಟ್ಟು, ಪ್ಲೀಸ್,ಯೋಗ್ಯವಾಗಿ ಮಾತನಾಡತಕ್ಕವರು ಸಮಯ ನೋಡಿ ಮಾತನಾಡಬೇಕು ಎಂದು ಅಧ್ಯಕ್ಷರು ಹೇಳಿದರು, ಮಾನ್ಯ ಅಧ್ಯಕ್ಷರದ್ದು ಧಾರವಾಡದ ಕನ್ನಡ.

(ಗೊಂದಲ)

ಅಧ್ಯಕ್ಷರು - ಇದು ನಿಮ್ಮ ಯೋಗ್ಯತೆಯ ಪ್ರಶ್ನೆ ಅಲ್ಲ.

(ಗೊಂದಲ)

ಶ್ರೀ ಎ.ಲಕ್ಷ್ಮೀಸಾಗರ್ - ದಯವಿಟ್ಟು ಕೇಳಿ, ಅಧ್ಯಕ್ಷರು, ಆ ರೀತಿ ಹೇಳಲಿಲ್ಲ. ಯೋಗ್ಯತೆ ಎಂಬ ವಿಚಾರವನ್ನು ಅವರು ಹೇಳಲಿಲ್ಲ. ಯೋಗ್ಯವಾದ ಮಾತನಾಡತಕ್ಕವರೂ ಕೂಡಾ....

(ಗೊಂದಲ)

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ನಾವೇನೂ ಕಿವಿಯ ಒಳಗೆ ಬೆಟ್ಟು ಹಾಕಿಕೊಂಡು ಕುಳಿತಿಲ್ಲ.

(ಗೊಂದಲ)

ಶ್ರೀ ಎ.ಲಕ್ಷ್ಮೀಸಾಗರ್ - ನಾನು ಮಾತನಾಡುವುದನ್ನು ಕೇಳಿ. ಅವರು ಈ ರೀತಿ ಹೇಳಲಿಲ್ಲ.

(ಗೊಂದಲ)

ಶ್ರೀ ಎ.ಲಕ್ಷ್ಮೀಸಾಗರ್ - ಅಯ್ಯೋ ಶಿವನೇ, ಈ ರೀತಿ ತಮಗೆ ಹೇಳುವುದಕ್ಕೆ ಆಗುತ ದೆಯೇ 35 ವರ್ಷಗಳ ಅನುಭವ ಇದೆ ತಮಗೆ....

ಅಧ್ಯಕ್ಷರು - ನನಗೆ ಗೊತ್ತಿದೆ, ತಾವೂ ಇಲ್ಲಿ ಆರು ವರ್ಷ ಕುಳಿತು ಕೆಲಸ ಮಾಡಿರುತ್ತೀರಿ. ನಾವು ತಮ್ಮಿಂದ ಬೇಕಾದಷ್ಟು ಅನುಭವ ಕಲಿತಿದ್ದೇವೆ. ನಿಮ್ಮ ಯೋಗ್ಯತೆಯನ್ನು ಪ್ರಶ್ನೆ ಮಾಡುವ ವಿಚಾರ ಇಲ್ಲಿ ಯಾರಿಗೂ ಬರುವುದಿಲ್ಲ. ಬೇರೆಯವರ ಯೋಗ್ಯತೆಯನ್ನು ಪ್ರಶ್ನೆ ಮಾಡುವ ಪ್ರಶ್ನೆ ಬರುವುದಿಲ್ಲ ಇಲ್ಲಿ.

(ಗೊಂದಲ)

ಶ್ರೀ ಎ.ಲಕ್ಷ್ಮೀಸಾಗರ್ - ಇಲ್ಲ ಇಲ್ಲ. ಅಧ್ಯಕ್ಷರು ಹಾಗೆ ಹೇಳಲಿಲ್ಲ.

(ಗೊಂದಲ)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ - ಅಧ್ಯಕ್ಷರೇ ನಾನು ಮುಂದುವರಿಸುತ್ತೇನೆ,

(ವಿಧಾನ ಸಭಾ ಕಲಾಪ:ದಿ: 10-6-1988)

## 13. ವಿಧಾನಸಭೆಯ ವಿರೋಧಪಕ್ಷದ ನಾಯಕಿಯಾಗಿ ಚರ್ಚೆಯಲ್ಲಿ ಭಾಗಿ (1988)

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - 10 ನಿಮಿಷ ಅಥವಾ 5 ನಿಮಿಷ ಮಾತನಾಡುತ್ತೇನೆ. ನೀವು ಹೇಳಿದ ಲಿಸ್ಟ್ ಅನ್ನು...

ಅಧ್ಯಕ್ಷರು - 68ರ ನಿಯಮದ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಅಡ್ಜರ್ನಮೆಂಟ್ ಮೋಷನ್ ತೆಗೆದುಕೊಳ್ಳುವ ಮೊದಲು ಈ ಸಭೆಯಲ್ಲಿ ಇಡುತ್ತೇನೆ. ನೀವು ಏನು ಬೇಕಾದರೂ ನಿಲುವಳಿ ತೆಗೆದುಕೊಳ್ಳಿ.

ಅಧ್ಯಕ್ಷರು - ಶ್ರೀಮತಿ ನಾಗರತ್ನಮ್ಮನವರೇ ಇಲ್ಲಿ ಕೇಳಿ, ಚರ್ಚೆಗೆ ಅವಕಾಶ ಮಾಡಿಕೊಡುವುದು ನನ್ನ ಕರ್ತವ್ಯ. ಇದು ಮಹತ್ವವಾದ ವಿಷಯ ಐ ಡೂ ಅಗ್ರಿ ಅದನ್ನು ನಾನು ಒಪ್ಪುತ್ತೇನೆ. ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಮೊಯಿಲಿಯವರೇ, ಅದಕ್ಕೂ ಇದಕ್ಕೂ ಎರಡಕ್ಕೂ ಮಹತ್ವ ಕೊಡೋಣ. ಅವರು ಫಸ್ಟ್ ಕೊಟ್ಟಿದ್ದಾರೆ, ಅವರು ಪ್ರಾರಂಭ ಮಾಡಲಿ.

ಶ್ರೀ .ಬಿ.ಎಸ್. ಯಡಿಯೂರಪ್ಪ - ನಮಗೂ ಅವಕಾಶ ಕೊಡಿ.

ಶ್ರೀ .ಡಿ.ಟಿ - ಜಯಕುಮಾರ್ - ವಿರೋಧ ಪಕ್ಷದವರು ಹೇಳಿದರೆ ಮಾತ್ರ ಅವಕಾಶ ಮಾಡಿಕೊಡುತ್ತೀರಾ? ದಯವಿಟ್ಟು ನಮ್ಮ ವಿಷಯದ ಬಗ್ಗೆ ಏನು ಮಾಡಿದ್ದೀರಿ ಹೇಳಿ.

(ಗೊಂದಲ)

ಶ್ರೀ. ವೈ.ಕೆ. ರಾಮಯ್ಯ - ಕಾವೇರಿ ನದಿ ನೀರಿನ ವಿವಾದದ ಬಗ್ಗೆ ....

ಅಧ್ಯಕ್ಷರು - ನಿಮಗೂ ಅವಕಾಶ ಮಾಡಿಕೊಡುತ್ತೇನೆ.

ಶ್ರೀ. ಡಿ.ಟಿ. ಜಯಕುಮಾರ್ - ಯಾವಾಗ ಅವಕಾಶ ಮಾಡಿಕೊಡುತ್ತೀರಿ.

ಅಧ್ಯಕ್ಷರು - ಇವೊತ್ತು ಇಡೀ ದಿವಸ ಚರ್ಚೆ ಮಾಡೋಣ.

ಶ್ರೀ.ಬಿ.ಎಸ್. ಯಡಿಯೂರಪ್ಪ - ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು - ಸ್ವಲ್ಪ ಕುಳಿತುಕೊಳ್ಳಿ, ಅವರು ಪ್ರಾರಂಭ ಮಾಡಲಿ, ದಯವಿಟ್ಟು ಕುಳಿತುಕೊಳ್ಳಿ, ನಿಮಗೂ ಅವಕಾಶ ಮಾಡಿಕೊಡುತ್ತೇನೆ.

ಶ್ರೀ. ಬಿ.ಆರ್. ನೀಲಕಂಠಪ್ಪ - ನಮಗೂ ಅವಕಾಶ ಮಾಡಿಕೊಡಿ.

ಅಧ್ಯಕ್ಷರು - ಆಯಿತು ಕೊಡುತ್ತೇನೆ, ಹೆಣ್ಣು ಮಕ್ಕಳಿಗೆ ಫಸ್ಟ್ ಪ್ರಿಫರೆನ್ಸ್ ಕೊಡಬೇಕು.

ಶ್ರೀ.ಬಿ.ಆರ್. ನೀಲಕಂಠಪ್ಪ - ಮೂರು ದಿವಸದಿಂದ ಪ್ರಯತ್ನ ಮಾಡಿದರೂ ಆಗುತ್ತಾ ಇಲ್ಲ.

ಅಧ್ಯಕ್ಷರು - ದಯವಿಟ್ಟು ಕೂಡಿ, ಎಲ್ಲರೂ 10-10 ಮಿನಿಟ್ ಮಾತನಾಡಿ.

ಶ್ರೀ.ಬಿ.ಆರ್. ನೀಲಕಂಠಪ್ಪ - ಸತತವಾಗಿ ಮೂರು ದಿವಸದಿಂದ ಪ್ರಯತ್ನ ಮಾಡಿದರೂ ಸಾಧ್ಯವಾಗುತ್ತಾ ಇಲ್ಲ. ಇನ್ನು ಎರಡು ದಿವಸ ಆದರೆ ಚರ್ಚೆಗೆ ಬರುವುದೇ ಇಲ್ಲ.

ಅಧ್ಯಕ್ಷರು - ಎಲ್ಲಾ ಮುಗಿಯುತ್ತದೆ, ದಯವಿಟ್ಟು ಕೂಡಿ, 68ರ ಪ್ರಕಾರ ಕನ್‌ವರ್ಟ್ ಮಾಡುತ್ತಿದ್ದೇನೆ. ಇವೊತ್ತು ಮಧ್ಯಾಹ್ನ ಕಾವೇರಿ ನೀರಿನ ಬಗ್ಗೆ ತೆಗೆದುಕೊಳ್ಳೋಣ.

ಶ್ರೀ.ವೈ.ಕೆ. ರಾಮಯ್ಯ - ಕಾವೇರಿ ನೀರಿನ ಪ್ರಶ್ನೆ ಕರ್ನಾಟಕದ ಅಳಿವು ಉಳುವಿನ ಪ್ರಶ್ನೆ.ಇದು ಬಹಳ ಮಹತ್ವವಾದ ವಿಷಯ.

ಅಧ್ಯಕ್ಷರು- ನಾನು ರೂಲಿಂಗ್ ಕೊಟ್ಟಿದ್ದೇನೆ. ಟೈಮ್ ಹಾಳು ಮಾಡುವುದು ಬೇಡ. 68ರ ಪ್ರಕಾರ ಅವಕಾಶ ಕೊಟ್ಟಿದ್ದೇನೆ, ನೀವು ನಂತರ ಮಾತನಾಡಿ ಈಗ ಕೂಡಿ.

ಶ್ರೀ.ವೈ.ಕೆ. ರಾಮಯ್ಯ - ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು - ಈಗ ಕೂಡಿ, ಇವರ ವಿಷಯವಾದ ಮೇಲೆ ತೆಗೆದುಕೊಳ್ಳೋಣ. ಇವೊತ್ತು ಬೇಕಾದರೆ ಕಾವೇರಿ ನದಿ ನೀರಿನ ಬಗ್ಗೆ ತೆಗೆದುಕೊಳ್ಳೋಣ. ಆಮೇಲೆ ಅತಿವೃಷ್ಟಿ ತೆಗೆದುಕೊಳ್ಳೋಣ. ಉಳಿದಿದ್ದು ಕಾಲ್ ಅಟೆನ್‌ಷನ್ ಆಮೇಲೆ ತೆಗೆದುಕೊಳ್ಳೋಣ.

ಶ್ರೀಮತಿ ನಾಗರತ್ನಮ್ಮ - ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ.ಬಿ.ಆರ್. ನೀಲಕಂಠಪ್ಪ - ನಮಗೂ ಅವಕಾಶ ಕೊಡಿ.

**(ಗೊಂದಲ)**

ಅಧ್ಯಕ್ಷರು - ಮಾನ್ಯ ಖಾರ್ಗೆಯವರೇ ಇವರದ್ದು ಆದ ಮೇಲೆ ಕಾವೇರಿ ವಿಷಯ ತೆಗೆದುಕೊಳ್ಳೋಣ. ಆಮೇಲೆ ಅತಿವೃಷ್ಟಿ, ಕಾಲ್ ಅಟೆನ್‌ಷನ್ ಆಮೇಲೆ ತೆಗೆದುಕೊಳ್ಳೋಣ. ಈಗ ಒನ್ ಬೈ ಒನ್ ತೆಗೆದುಕೊಳ್ಳೋಣ. ಶ್ರೀಮತಿ ನಾಗರತ್ನಮ್ಮನವರೇ ತಾವು ಪ್ರಾರಂಭ ಮಾಡಿ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ -

ನಿಮ್ಮ ಲಿಸ್ಟ್ ಓದುವುದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಎಲ್ಲವೂ ಮುಖ್ಯವಾದುದು. ನಮಗೆ ಹೆದರಿಕೆ ಏನು ಅಂದರೆ ಇದೆಲ್ಲಾ ಮುಗಿಯುವ ಹೊತ್ತಿಗೆ ಬೆಳಗಿನವರೆಗೆ ಇಲ್ಲಿ ಕುಳಿತುಕೊಳ್ಳಬೇಕೇ, ರಾತ್ರಿಯೆಲ್ಲಾ ಸಭೆಯನ್ನು ನಡೆಸುತ್ತೀರಾ ಎಂದು ದಯವಿಟ್ಟು ಹಾಗೆ ಮಾಡಬೇಡಿ. ಯಾಕೆಂದರೆ ಲಿಸ್ಟ್‌ನ ಒಂದೊಂದು ಸಬ್ಜೆಕ್ಟ್‌ಗೆ ಎಷ್ಟು ಟೈಮ್ ಬೇಕಾಗುತ್ತದೆ,ಈಗ ಶ್ರೀ ರಾಮಯ್ಯನವರು ಹೇಳಿರುವ ವಿಚಾರ ಮೂರು ದಿವಸ ಆಗುತ್ತದೆ, ಅದು ಮುಖ್ಯವಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಹಾಗೆಯೇ ಇದು ಮುಖ್ಯವಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಯಾಕೆಂದರೆ ನಿನ್ನೆ ನಾನು ಅಲ್ಲಿಗೆ ಹೋಗಿದ್ದೆ. ಸ್ವಲ್ಪ ಮಾಹಿತಿ ಇದೆ. ಈಗ ಮುಖ್ಯಮಂತ್ರಿಗಳು ಇಲ್ಲಿ ಇದ್ದರೆ ಚೆನ್ನಾಗಿ ಇರುತ್ತಿತ್ತು. ಅಲ್ಲಿ ಸಾವಿರಾರು ಜನ ಗುತ್ತಿಗೆ ಶಿಕ್ಷಕರು ಆಮರಣಾಂತ ಉಪವಾಸ ಮಾಡುತ್ತಿರುವ ಕಾರಣ ನಾವು ನಿಲುವಳಿ ಸೂಚನೆ ಕೊಟ್ಟಿದ್ದೇವೆ.

ಅಧ್ಯಕ್ಷರು - ಅದನ್ನು ನಿಯಮ 68ಕ್ಕೆ ಪರಿವರ್ತನೆ ಮಾಡಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ - ಇದರ ಮೇಲಿನ ಚರ್ಚೆಗೆ ತಾವು ಅವಕಾಶ ಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಧನ್ಯವಾದಗಳು. ಇದು ಸರ್ಕಾರದ ಗಮನಕ್ಕೆ ಕೂಡಲೇ ಬರಬೇಕೆಂದುಕೊಂಡು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಬಹಳ ಸಂತೋಷ. ಅಲ್ಲಿ ಆಮರಣಾಂತ ಉಪವಾಸ ಮಾಡುತ್ತಿರುವ ಸಾವಿರಾರು ಶಿಕ್ಷಕರ ಪೈಕಿ ಈಗಾಗಲೇ 200-200 ಜನರು ಆಸ್ಪತ್ರೆಗೆ ಸೇರಿದ್ದಾರೆ. ಅವರಲ್ಲಿ ಕೆಲವರು ಹೆಣ್ಣುಮಕ್ಕಳು ಇದ್ದಾರೆ. ಅವರಲ್ಲಿ ಕೆಲವರು ಗರ್ಬಿಣಿಯರು ಸಹ ಇದ್ದಾರೆ. ಅವರೆಲ್ಲರೂ ಸೀರಿಯಸ್ ಕಂಡೀಷನಲ್ಲಿದ್ದಾರೆ. ನಾನು ಅವರನ್ನು ನೆನ್ನೆ ದಿವಸ ನೋಡಿಕೊಂಡು ಬಂದೆ. ಅವರ ಸ್ಥಿತಿ ಚಿಂತಾಜನಕವಾಗಿದೆ: ನನ್ನ ಅಭಿಪ್ರಾಯದಲ್ಲಿ ಇಷ್ಟು ವರ್ಷಗಳ ಕಾಲ ಅವರನ್ನು ಗುತ್ತಿಗೆ ಶಿಕ್ಷಕರನ್ನಾಗಿ ತಿರುಗಿ ನೇಮಕ ಮಾಡಿಕೊಂಡು ಬಂದಿದ್ದು ಸರ್ಕಾರದ ತಪ್ಪು. ಅವರನ್ನು ಹತ್ತು ತಿಂಗಳ ಕಾಲ ಸ್ಥಳೀಯ ಅಭ್ಯರ್ಥಿಗಳೆಂದು ಕೆಲಸಕ್ಕೆ ತೆಗೆದುಕೊಂಡು ನಂತರ ಮನೆಗೆ ಕಳುಹಿಸಿದ್ದರೆ ಅವರು ತಮ್ಮ ಮುಂದಿನ ಜೀವನಕ್ಕೆ ಬೇರೆ ಏನಾದರೂ ಉಪಾಯವನ್ನು ಕಂಡುಕೊಳ್ಳುತ್ತಿದ್ದರು. ಈ ರೀತಿ ಮಾಡುವುದಕ್ಕೆ ಬದಲು ಹತ್ತು ತಿಂಗಳ ಸರ್ವೀಸ್ ನಂತರ ಅವರ ಸರ್ವೀಸನ್ನು ಬ್ರೇಕ್ ಅಪ್ ಮಾಡಿ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವುದರ ಮೂಲಕ ಇವರನ್ನೆಲ್ಲಾ ಕೆಲಸದಲ್ಲಿ ಮುಂದುವರಿಸಿಕೊಂಡು ಬರಲಾಗಿದೆ. ಇವರುಗಳು ಆರೇಳು ವರ್ಷಗಳಿಂದ ಇದೇ ರೀತಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಬೇರೆ ಖಾಯಂ ನೌಕರರ ಸಂಬಳಕ್ಕಿಂತ ಹತ್ತು ರೂಪಾಯಿಗಳಷ್ಟು ಕಡಿಮೆ ಸಂಬಳವನ್ನು ಇವರಿಗೆ ಕೊಡುತ್ತಿದ್ದಾರೆ. ಈಗ ಉಳಿದಿರುವುದು ಎಂದರೆ, ಇವರನ್ನೆಲ್ಲಾ ಕೆಲಸದಲ್ಲಿ ಖಾಯಂ ಮಾಡುವುದು, ಇವರನ್ನೆಲ್ಲಾ ರೋಸ್ಟರ್ ಪ್ರಕಾರವೇ ನೇಮಕ ಮಾಡಿಕೊಂಡಿದ್ದಾರೆ. ನಮಗೆ ಈಗ 20 ಸಾವಿರ ಟೀಚರ್ಸ್‌ಬೇಕೆಂದು ಈ ಹಿಂದೆ ಇಲ್ಲಿ ಈ ಹಿಂದಿನ ವಿದ್ಯಾಮಂತ್ರಿಗಳು ಹೇಳಿಕೆ ಕೊಟ್ಟಿದ್ದರು. ಈಗ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರ ಪೈಕಿ ನೀವು ಏಳೆಂಟು ಸಾವಿರ ಜನರನ್ನು ಖಾಯಂ ಮಾಡಬೇಕಾಗಿದೆ. ಇವರಲ್ಲಿ ಎಷ್ಟೋ ಜನರದ್ದು ಏಜ್ ಬಾರ್ ಆಗಿಬಿಟ್ಟಿದೆ. ಇವರುಗಳ ಪೈಕಿ ಎಷ್ಟೋ ಜನರು ತಮ್ಮ ಸೇವೆಯನ್ನು ಸರ್ಕಾರ ಖಾಯಂ ಮಾಡುತ್ತದೆಂದುಕೊಂಡು ಮದುವೆ ಮಾಡಿಕೊಂಡಿದ್ದಾರೆ. ಎಷ್ಟೋ ಜನರು ಸಂಸಾರ ನಡೆಸತ್ತಿದ್ದಾರೆ.ಇವರನ್ನೆಲ್ಲಾ ಖಾಯಂಗೊಳಿಸುವುದಾಗಿ ಕಳೆದ ವರ್ಷ ಆಗಿನ ವಿದ್ಯಾ ಮಂತ್ರಿಗಳು ಮಾತು ಕೊಟ್ಟಿದ್ದರು. ಈಗ ನಾನು ಆ ಮಂತ್ರಿಗಳಿಗೆ ಎಂದು ಹೇಳಲು ಹೋಗುವುದಿಲ್ಲ; ಇದು ಮುಖ್ಯವಲ್ಲ. ಇದೊಂದು ಮಾನವೀಯ ಸಮಸ್ಯೆ ಆಗಿದೆ. ನಾವೇನಾದರು ಇದನ್ನೆಲ್ಲಾ ಹೇಳಲು ಹೊರಟರೆ, ಅವರು ನಮ್ಮನ್ನು ಬೈಯುವುದು, ಈ ಹಿಂದಿನ ಕಾಂಗ್ರೆಸ್ ಸರ್ಕಾರವನ್ನು ಬೈಯುವುದು, ಅವರು ಇವರು ಎಂದೆಲ್ಲಾ ಹೇಳುತ್ತಾರೆ. ಈ ಕೊಲ್ಲುವುದಕ್ಕೆ ಕಂಸ ಹುಟ್ಟಿದ್ದಾನೆ ಎಂದು ಈಗಿನ ಮುಖ್ಯ ಮಂತ್ರಿಗಳು ನಿನ್ನೆ ಮಾತನಾಡುವಾಗ ಹೇಳಿದ್ದಾರೆ. ಈ ಹಿಂದಿನ ಮುಖ್ಯಮಂತ್ರಿಗಳು ಸಹ ಇದೇ ಮಾತನ್ನು ಹೇಳಿದ್ದರು.

**(ಗೊಂದಲ)**

ಶ್ರೀ ಡಿ.ಟಿ. ಜಯಕುಮಾರ್ - ಮಾನ್ಯ ಅಧ್ಯಕ್ಷರೇ, ಅವರು ಶಿಕ್ಷಕರ ಬಗ್ಗೆ ಮಾತನಾಡುವುದಕ್ಕೆ ಬದಲು ಬೇರೆ ವಿಷಯಗಳ ಬಗ್ಗೆ ಮಾತನಾಡುತ್ತಿದ್ದಾರೆ. ಇದರಲ್ಲಿ ರಾಜಕೀಯ ತರುವುದು ಬೇಡ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ನೆನ್ನೆ ಮೊನ್ನೆಯಲ್ಲಾ ಬೈದಿದ್ದಾರೆ. ಇದನ್ನು ಹೇಳಿದರೆ ಏನು ತಪ್ಪಾಗುತ್ತದೆ?

ಶ್ರೀ.ಕೆ.ಎಚ್.ಪಾಟೀಲ್ - ನಮ್ಮ ನಾಯಕರನ್ನೇ ಅವರು ಎಂದು ಬೈದಿದ್ದಾರೆ.

**(ಗೊಂದಲ)**

ಶ್ರೀ ಧರ್ಮಸಿಂಗ್ - ಆಡಳಿತ ಪಕ್ಷದವರು ಈ ರೀತಿಯೆಲ್ಲಾ ಮಾತನಾಡಿದರೆ ಅದನ್ನು ನಾವು ಇಲ್ಲಿ ಕೇಳಬೇಕಾಗುತ್ತದೆ.

## (ಗೊಂದಲ)

ಶ್ರೀಎಂ. ಮಲ್ಲಿಕಾರ್ಜುನ ಖರ್ಗೆ - ನಾಲ್ಕು ಪಕ್ಷಗಳ ಪೈಕಿ ಮೂರು ಪಕ್ಷಗಳು ಮಾತ್ರ ಒಂದುಗೂಡಿವೆ. ಈಗ ಆ ಹೊಸ ಪಕ್ಷಕ್ಕೆ ಒಂದು ಕಾಲೇ ಇಲ್ಲ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ- ಈ ಹೊಸ ಪಕ್ಷ ಹುಟ್ಟುವಾಗಲೇ ಅದಕ್ಕೆ ಬಾಲಗ್ರಹ ಹಿಡಿದಿದೆ. ಮಗು ಹುಟ್ಟುವಾಗಲೇ ಅಂಗವಿಕಲ ಮಗುವಾಗಿ ಹುಟ್ಟಿದೆ. ಇಂತಹವರ ಬಾಯಲ್ಲಿ ಬರುವ ಮಾತುಗಳು ಯಾರಿಗೆ ಗೊತ್ತಿಲ್ಲ ? ಈ ದೇಶದಲ್ಲಿ ಕರೋಡಪತಿಗಳು ಯಾರಾಗಿದ್ದಾರೆ; ಯಾರ ತಾತ ಕರೋಡಪತಿಗಳಾಗಿದ್ದರು ಎನ್ನುವುದು ಪ್ರಪಂಚದಲ್ಲಿ ಯಾರಿಗೆ ಗೊತ್ತಿಲ್ಲ ಹೇಳಿ. ಅಲಹಾಬಾದ್‌ನಲ್ಲಿ ಪ್ರಾಪರ್ಟಿ ಇರುವುದು ಯಾರಿಗೆ ಗೊತ್ತಿಲ. ಪ್ರಾಪರ್ಟಿ ಎಷ್ಟು ಕೊಟ್ಟಿದ್ದಾರೆ. ಯಾರ ತಾತ ಕೊಟ್ಟಿದ್ದಾರೆ ಎನ್ನುವುದು ಯಾರಿಗೆ ಗೊತ್ತಿಲ್ಲ ಹೇಳಿ, ಸಣ್ಣ ಮಗುವಿಗೆ ಗೊತ್ತಿದೆ.

## (ಗೊಂದಲ)

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ಯಾರ ತಾತ ರಾಯಲ್ಟಿ ಕೊಟ್ಟಿದ್ದಾರೆ ಎನ್ನುವುದು ಯಾರಿಗೂ ಗೊತ್ತಿಲ್ಲ.

## (ಗೊಂದಲ)

ಶ್ರೀ ಧರ್ಮಸಿಂಗ್- ಅವರು ವಿರೋಧಪಕ್ಷದ ನಾಯಕಿ ಇದ್ದಾರೆ, ಹೇಳುತ್ತಾ ಇದ್ದಾರೆ, ನೀವು ಹೇಳಬೇಕಾದ್ದಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ-ಈ ವಿಚಾರ ಯಾರಿಗೆ ಗೊತ್ತಿಲ್ಲ.

ಅಧ್ಯಕ್ಷರು - ದಯವಿಟ್ಟು ವಿಷಯಕ್ಕೆ ಬನ್ನಿ, ನಿಮ್ಮ ಚಾನ್ಸ್ ಮುಗಿಯುತ್ತಿದೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ನನಗೆ ಏಕೆ ನೋವಾಯಿತು ಅಂದರೆ, ಈಗಿನ ಮುಖ್ಯಮಂತ್ರಿಗಳು ಮತ್ತೆ ಹಿಂದಿನ ಮುಖ್ಯಮಂತ್ರಿಗಳು ಇವರಿಬ್ಬರ ಬಾಯಲ್ಲಿ ಇಷ್ಟು ಅಗ್ಗದ ಭಾಷೆ ಬಂತಲ್ಲಾ ಎಂದು ಬರಬಹುದೇ ?

ಅಧ್ಯಕ್ಷರು - ಗುತ್ತಿಗೆ ಶಿಕ್ಷಕರ ಸತ್ಯಾಗ್ರಹದ ಬಗ್ಗೆ ಹೇಳಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ - ಎಕ್ಸ್‌ಎಕ್ಸ್ ಎಂದು ಹೇಳಿದರಲ್ಲಾ ಇವರು ಎಂತಹವರು? ಇವರು ಕೊಟ್ಟ ಮಾತು ಉಳಿಸಿಕೊಳ್ಳದೇ ಇದ್ದುದರಿಂದ ಅಲ್ಲಿ ಹೆಣ್ಣು ಮಕ್ಕಳು ಸಾಯುತ್ತಾ ಇದ್ದಾರೆ. ಗುತ್ತಿಗೆ ಟೀಚರ್ಸ್‌ಗೆ ಕೊಟ್ಟಿರುವ ಮಾತನ್ನು ಉಳಿಸಿಕೊಳ್ಳದೇ ಏಕೆ ಮುಟ್ಟಿ ಮುಟ್ಟಿ ನೋಡಿಕೊಳ್ಳುತ್ತೀರ. ಇಂತಹ ಚೋರರನ್ನು ಕಟ್ಟಿಕೊಂಡು ರಾಜ್ಯಭಾರ ಮಾಡುತ್ತಾ ಇದ್ದಾರೆ. ಈಗ ಇಮ್ಮಿಡಿಯೇಟಾಗಿ ಕೂಡಲೇ ಈ ಗುತ್ತಿಗೆ ಶಿಕ್ಷಕರಿಗೆ ಏನಾದರೂ ಪರಿಹಾರ ಕೊಟ್ಟು ಇವರ ಸಮಸ್ಯೆಯನ್ನು ಪರಿಹಾರ ಮಾಡಬೇಕು ,ಆದ್ದುದರಿಂದ ದಯಮಾಡಿ ಈ ಎಕ್ಸ್ ಎಕ್ಸ್ ಕೇಳಿಕೊಳ್ಳುತ್ತೇನೆ.

(ವಿಧಾನಸಭಾ ಕಲಾಪ;ದಿ: 13-10-1988)

# 14. ಆಯವ್ಯಯ ಪತ್ರದ ಬಗ್ಗೆ ಚರ್ಚೆ

## 1989

ಶ್ರೀಮತಿ ಕೆ.ಎಸ್. ನಾಗರತ್ನಮ್ಮ- ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಬೊಮ್ಮಾಯಿಯವರು ಅವತ್ತು ಈ ಸೋಕಾಲ್ಡ್ ಬಿಜೆಟನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನಮಗೆ ನಿಜವಾಗಿಯೂ ದು:ಖವಾಗುತ್ತದೆ...

ಶ್ರೀಮಲ್ಲಿಕಾರ್ಜುನ.ಎಂ.ಖರ್ಗೆ.- ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕಿಯವರು ಮಾತನಾಡುವಾಗ ಹಣಕಾಸಿನ ಖಾತೆ ಹೊಂದಿರುವ ಮುಖ್ಯಮಂತ್ರಿಗಳು ಸಭೆಯಲ್ಲಿ ಇರಬೇಕಾಗುತ್ತದೆ, ಅವರು ಯಾರೂ ಇರಲಿಲ್ಲವೆಂದರೆ ಯಾರಿಗೆ ಹೇಳಬೇಕು ? ಒಬ್ಬಿಬ್ಬ ಮಂತ್ರಿಗಳು ಇದ್ದರೆ ಎಲ್ಲರೂ ಇದ್ದಂತೆ ಆಗುತ್ತದೆಯೇ? ಇದು ಸರಿಯಲ್ಲ.ತಾವು ಅವರಿಗೆ ಹೇಳಬೇಕು When the Hon, Leader of the Opposition is initiating the speech on the Budget the Chief Minister who is holding the Finance Portfolio should normaly be present.

ಅಧ್ಯಕ್ಷರು- ಕರೆಸುತ್ತೇನೆ. ನೀವು ಮಾತನಾಡಿ. ಶ್ರೀಮಲ್ಲಿಕಾರ್ಜುನ ಎಂ ಖರ್ಗೆ-ಹುಚ್ಚನ ಲಗ್ನದಲ್ಲಿ ಉಂಡವನೇ ಜಾಣ ಅಂದೆ ಹಾಗೆ ಇಲ್ಲಿ ಆಗಿದೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ- ನನಗೆ ಎಲ್ಲಾ ಅಭ್ಯಾಸವಾಗಿದೆ. ನಾನು ಯಾವಾಗಲೂ ಖಾಲಿ ಕುರ್ಚಿಗಳಿಗೆ ಮಾತನಾಡುವುದು ಅಭ್ಯಾಸವಾಗಿದೆ. ನಾನು ಈ ಮೊದಲೇ ಹೇಳಿದ್ದೇನೆ. ಇಲ್ಲಿ ಸರ್ಕಾರ ಇಲ್ಲವೆಂದು. ತಾವೇ ನೋಡಿ ಎಷ್ಟು ಕುರ್ಚಿಗಳು ಖಾಲಿ ಇವೆ ಎಂದು. ಹಿಂದೆ ಅಫಿಸಿಯಲ್ ಗ್ಯಾಲರಿಯಲ್ಲಿಯೂ ಅಧಿಕಾರಿಗಳು ಇರುತ್ತಿರಲಿಲ್ಲ. ಈಗ ಏನೋ ಸ್ವಲ್ಪ ಜನ ಇದ್ದಾರೆ. ಆ ದಿನ ಈ ಬಜೆಟನ್ನು ಇಟ್ಟಿದ್ದನ್ನು ನೆನಸಿಕೊಂಡರೆ ನನಗೆ ದು:ವಾಗುತ್ತದೆ.ನಾವು ನಿಮ್ಮನ್ನು ಆ ದಿನ ರೂಲಿಂಗ್ ಕೇಳುವಂತಹ ಸಂದರ್ಭದಲ್ಲಿ, ಎಲ್ಲಾ ಮೆಂಬರ್ಸ್ ವೆಲ್‌ನಲ್ಲಿ ಇದ್ದಾಗ ಮೋಸ್ಟ್ ಅನ್‌ಡೆಮಾಕ್ರಟಿಕ್ ಆಗಿ ಅನ್ ಡೆಮಾಕ್ರಟಿಕ್ ವೇನಲ್ಲಿ ಈ ಬಜೆಟನ್ನು ಇಟ್ಟರು. ಇವರಿಗೆ ಎಲ್‌ಕ್ಷನ್ ಕಮೀಷನ್ ಜನತಾ ಪಕ್ಷವೇ ಜನತಾದಳವೇ ಯಾವುದು ಎನ್ನುವುದನ್ನೇ ರೆಕಗನೈಜ್ ಮಾಡಿಲ್ಲ. ಇಂತಹ ಪರಿಸ್ಥಿತಿಯಲ್ಲಿದ್ದರೂ ಸಹ ಅವರು ಜನತಾ ದಳ ಎಂದು ಹೇಳಿದ್ದಾರೆ. ಹಾಗೂ ತಮಗೆ ಎಲ್ಲಾ ವಿವರವಾಗಿ ಹೇಳಿ ಒಂದು ಕನ್ಸಿಡರ್ ರೂಲಿಂಗ್ ಕೊಡಿ ಎಂದ ಮೇಲೆ ತಾವು ಕೊಡುತ್ತೇವೆಂದು ಒಪ್ಪಿಕೊಳ್ಳುವುದರಲ್ಲಿಯೇ ಅವರು ಅಷ್ಟು ಬೇಗ ಬಜೆಟ್ ಓದುವಂಥ ಆವಶ್ಯಕತೆ ಇರಲಿಲ್ಲ. ಇದನ್ನು ನಿಖಾಲೆ ಮಾಡಿಕೊಂಡು ಬಜೆಟ್ ಇಡಬಹುದಾಗಿತ್ತು. ಆದರೂ ಓದಿದರು. ಇದರಲ್ಲಿ ಓವರ್ ಆಲ್ ಡೆಫಿಸಿಟ್ 267.83 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಆಮೇಲೆ 100 ಕೋಟಿ ರೂಪಾಯಿಗಳು ರೆಕವರಿಯಾಗುತ್ತದೆಂದು ಹೇಳಿರತಕ್ಕಂಥಾದ್ದರಲ್ಲಿ ಅನೇಕ ಆಡಳಿತಾತ್ಮಕ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿರುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಉದಾಹರಣೆಗೆ ಅಬಕಾರಿ ವಿಚಾರದಲ್ಲಿ, ಮತ್ತೆ ಮೋಟಾರ್ ವಾಹನ ತೆರಿಗೆ ವಿಚಾರದಲ್ಲಿ, ಸರ್ಕಾರಿಯೂ ಕಮಿಷನ್ ರಿಪೋರ್ಟ್

ಇದೆಲ್ಲಾ ಇದರಲ್ಲಿ ಹೇಳುವುದು ಅಷ್ಟು ಅಗತ್ಯ ಕಾಣಲಿಲ್ಲ. ಆದರೆ ರಾಜ್ಯಪಾಲರ ಕೈಯಲ್ಲಿ ಇಷ್ಟೆಲ್ಲಾ ಹೇಳಿದ್ದಾರೆ. ಇವರು ಹೇಳುತ್ತಿರುವ ಡೆಫಿಸಿಟ್ ರಿಸೋರ್ಸಸ್ ಮೊಬಲೈಸೇಷನ್, ಸರ್ಕಾರಿಯಾ ಕಮಿಷನ್ ರಿಪೋರ್ಟ್ ಇಂಪ್ಲಿಮೆಂಟೇಷನ್, ಬೆಟರ್ ರೆಕವರೀಸ್ - ಇದೆಲ್ಲಾ ತಿರುಕನ ಕನಸಿನ ಆಧಾರದಂತೆ ಆಗಿದೆ. ಇದಕ್ಕೆ 1 ರಿಂದ 14ನೇ ಪ್ಯಾರಾವರೆಗೂ ಇವರು ಕೇಂದ್ರದ, ರಾಜ್ಯಗಳ ಸಂಬಂಧ ಮತ್ತು ಸಂಪನ್ಮೂಲಗಳ ಹಂಚಿಕೆ ಬಗ್ಗೆ ಹೇಳಿರುವುದು ಪೊಲಿಟಿಕಲ್ ಕಂಪ್ಲೇಂಟ್ ಆಗಿದೆಯೇ ಹೊರತು ಎಕನಾಮಿಕ್ ಕ್ರೈಸಿಸನ್ನು ಸಾಲ್ವ್ ಮಾಡುವ ದಾರಿ ಇದರಲ್ಲಿ ಕಾಣಲಿಲ್ಲ. ಅದನ್ನು ಹುಡುಕುವ ಗೋಜಿಗೂ ಇವರು ಹೋಗಿಲ್ಲ. ಕನ್‌ಸೈನ್‌ಮೆಂಟ್ ಟ್ಯಾಕ್ಸ್‌ನಲ್ಲಿ 1985ರಲ್ಲಿ 85 ಕೋಟಿ ಸಿಗುತ್ತಿತ್ತು. ಅದು ಈಗ 150 ಕೋಟಿ ರೂಪಾಯಿ ಸಿಕ್ಕುತ್ತದೆಂದು ಹೇಳಿದ್ದಾರೆ. ಇವರ ಸೆಂಟರನ್ನು ದೂರುವುದನ್ನು ಒಂದು ಫ್ಯಾಷನ್ ಮಾಡಿಕೊಂಡಿದ್ದಾರೆಯೇ ಹೊರತು ಇವರಿಗೆ ಬೇರೆ ಉದ್ಯೋಗವೇ ಇಲ್ಲ. ಸೆಂಟರನ್ನು ಬಯ್ಯುವುದು ಇವರು ಈಗತಾನೆ ಹೇಳಿದಂತೆ ಇವರು ಮಾಡಿದ್ದನ್ನು ಬೇರೆ ಯಾರು ಮಾಡಿಲ್ಲವೆಂದು ಇವರು ಮೇಲಿನಿಂದ ಕೊನೆಯವರೆಗೂ ಇದನ್ನೇ ಹೇಳಿದ್ದಾರೆ. ಮೊನ್ನೆ ತಾನೆ ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಇವರು ಮಾಡಿರುವ ಭೂ ಹಗರಣ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ. ಅದರ ಬಗ್ಗೆ ಉತ್ತರವನ್ನು ಕೊಡಿ ಎಂದು ಎಷ್ಟೇ ಕೇಳಿಕೊಂಡರೂ, ಎಷ್ಟೇ ಬೇಡಿಕೊಂಡರೂ ಯಾವ ತರಹ ವಿಚಾರಣೆಯೂ ಇದಕ್ಕೆ ಬೇಕಾಗಿಲ್ಲವೆಂದು, ಇದು ಸಾದಾ ಸೀದಾ ಇದೆಯೆಂದು ಹೇಳಿದ್ದಾರೆ, ಇದು ಕರ್ನಾಟಕ ಜನರ ದುರಾದೃಷ್ಟ. ಇವರ ನೀತಿ ನಿಯಮಗಳಿಗೆ ಯಾವ ತರದ ಒಂದು ವ್ಯವಸ್ಥೆಯು ಇಲ್ಲವೆಂದು ನಾನು ಹೇಳಬೇಕಾಗುತ್ತದೆ. ಅಧ್ಯಕ್ಷರೇ, 7ನೇ ಪಂಚವಾರ್ಷಿಕ ಯೋಜನೆಗೆ ಇವರು ಹೇಳುತ್ತಿರುವುದು, 3,575 ಕೋಟಿ ರೂಪಾಯಿ, ಈ ವರ್ಷ ಅಂದರೆ ನಾಲ್ಕನೇ ವರ್ಷದಲ್ಲೇ ನಾವು 8 ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿಕೊಂಡಿದ್ದಾರೆ. 1989-90ರಲ್ಲಿ 4ನೇ ಪ್ಲಾನ್‌ನಲ್ಲಿ 1040 ಕೋಟಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಈಗ ಮುಖ್ಯಮಂತ್ರಿಯವರು ಹೇಳುವುದೇನೆಂದರೆ. I am proud to state that will be achieving 7th plan outlay in real terms. ಎಂದು ಹೇಳುತ್ತಾರೆ. ಇದಕ್ಕೆ ಅರ್ಥ ಏನಾದರೂ ಇದೆಯೇ? 3575 ಕೋಟಿ ರಾಪಾಯಿ ಎಂದು ಹೇಳುತ್ತಾ, 7ನೇ ಪ್ಲಾನ್‌ನಲ್ಲಿ 1040 ಕೋಟಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ, I am proud to state....ಈ ವರ್ಷ ಎರಡು ನೂರು ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಹಣ ಇಲ್ಲ. ಮುಂದಿನ ವರ್ಷ 1040 ಕೋಟಿ ಹಣ ಎಲ್ಲಿಂದ ಬರಬೇಕು. ಇವರಿಗೆ ದುಡ್ಡು ಬರುತ್ತಿಲ್ಲ. ಇವರು ಖರ್ಚು ಮಾಡುತ್ತಿಲ್ಲ. ಇವರು ಈಗಾಗಲೇ ಮುಂಗಡವಾಗಿ ತೆರಿಗೆಯನ್ನು ವಸೂಲಿ ಮಾಡಿದ್ದಾರೆ. ಅಡಿಷನಲ್ ರಿ ಸೋರ್ಸಸ್ ಮೊಬಲೈಸೇಷನ್ ನಡೆಸಿಬಿಟ್ಟರು. ಇವರನ್ನು ಇನ್ನು ಮುಂದೆ ದೇವರೇ ಕಾಪಾಡಬೇಕು ಇವರಿಗೆ ಎಲ್ಲಿಂದ ಬಾಕಿ ದುಡ್ಡು ಬರುತ್ತದೋ ನನಗಂತೂ ಅರ್ಥವಾಗುತ್ತಾ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ - ಜಮೀನು ಮಾರಿದ ದುಡ್ಡು ಬರುತ್ತದೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ - ಜಮೀನು ಮಾರಿದ ದುಡ್ಡು ಏನಾಯಿತೋಗೊತ್ತಿಲ್ಲ. ಬಜೆಟ್‌ನಲ್ಲಿ ಅಗ್ರಿಕಲ್ಚರ್ ಬಗ್ಗೆ ತುಂಬಾ ಚಂದ ಚೆಂದವಾದ ಮಾತುಗಳನ್ನು ಆಡಿದ್ದಾರೆ, ಒಳ್ಳೆಯ ಶಬ್ದಗಳನ್ನು ಹಾಕಿದ್ದಾರೆ. ಹಸಿರು ಕಿರಣ,ಕ್ಲಂಪ್ ಎಸ್ ಎಫ್ ಪಿಪಿ ಎಂದು ಋುಂತಾಗಿ ಶಬ್ದಗಳನ್ನು ಹಾಕಿದ್ದಾರೆ. ಇವುಗಳೆಲ್ಲಾ ಬಹಳ ಚೆಂದದ ಹೆಸರುಗಳೇ ಹೊರತು ಉಪಯೋಗಕ್ಕೆ ಬರುವ ಕೆಲಸ ಅಲ್ಲವೇ ಅಲ್ಲ. ಬಿತ್ತನೆಯ ಬೀಜಗಳ ವಿತರಣೆ, ಕ್ರಿಮಿನಾಶಕಗಳ ವಿತರಣೆ, ಮಿನಿ ಕಿಟ್ಸ್ ಹಂಚಿಕೆ, ಸರಿಯಾದ ಸೂಕ್ತ ಕಾಲದಲ್ಲಿ ರೈತರಿಗೆ ಸಾಲದ ಹಂಚಿಕೆ, ಇವುಗಳು ಯಾವುವೂ ಸರಿಯಾಗಿ ಇಲ್ಲ. ದಿನಾ ಬೆಳಗಾದರೆ ಜಿಲ್ಲಾ ಪರಿಷತ್ತುಗಳಲ್ಲಿ ರಾದ್ಧಾಂತವನ್ನು ಕೇಳುತ್ತಾ ಇದ್ದೇವೆ.

(ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವಾಸ್ತವವಾಗಿ, ರೈತರಿಗೆ ಅನುಕೂಲವಾಗುವ ಯೋಜನೆಗಳನ್ನು ಹಾಕಿಕೊಳ್ಳುವುದನ್ನು ಬಿಟ್ಟು ಬರೀ ಹೆಸರುಗಳ ವ್ಯಾಮೋಹವನ್ನು ಇಟ್ಟುಕೊಂಡರೆ ಅದರಿಂದ ಯಾವ ಫಲವೂ ಉಂಟಾಗುವುದಿಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಸರಿಯಾದ ಕೆಲಸದ ಹಂಚಿಕೆ ಇಲ್ಲ. ಸರಿಯಾದ ಆಡಳಿತದ ವ್ಯವಸ್ಥೆಯೂ ಇಲ್ಲ, ಒಟ್ಟಿನಲ್ಲಿ ಲಕ್ಷಾಂತರ ರೂಪಾಯಿಗಳ ಅಪವ್ಯಯ ನಡೆಯುತ್ತಾ ಇದೆ. ಅಲ್ಲಿ ಯಾವ ತರಹದ ಕಾರ್ಯಕ್ರಮಗಳೂ ಕೂಡ ನಡೆಯುತ್ತಾ ಇಲ್ಲ. ಇನ್ನು ಆಯಿಲ್ ಸೀಡ್ಸ್ ಪ್ರಾಡಕ್ಟಿವಿಟಿ ಬಗ್ಗೆ ಇನ್‌ಕ್ರೀಸ್ ಆಗಿದೆ ಎಂದು ಹೇಳಿಕೊಂಡಿದ್ದಾರೆ. ಸಿರೀಲ್ ಬಗ್ಗೆ ಅದರ ಹೆಸರು ಕೂಡ ಹೇಳಿಕೊಂಡಿಲ್ಲ. ಅದರ ಕಡೆಗೆ ಇವರ ಗಮನವೇ ಇದ್ದಂತೆ ಕಾಣುವುದಿಲ್ಲ. ಹೇಗೆ ಭತ್ತ, ಅಕ್ಕಿ, ಕಬ್ಬು ಮುಂತಾದ ಬೆಳೆಗಳು ಮುಖ್ಯವೋ ಸಿರೀಲ್ಸ್ ಕೂಡ ಅಷ್ಟೇ ಮುಖ್ಯವಾದುದು. ಇದರ ಬಗ್ಗೆ ಇವರಿಗೆ ನಿಗವೇ ಇಲ್ಲ.

ಮಿಲ್ಕ್ ಫೆಡರೇಶನ್ ವಿಚಾರದಲ್ಲಿ ಇವರು ಬಹಳವಾಗಿ ಹೇಳಿಕೊಂಡಿದ್ದಾರೆ. 32 ಚಿಲ್ಲಿಂಗ್ ಸೆಂಟರ್ಸ್‌ನ್ನು ಹಾಕುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಇದು ಸರಸ್ವತಿ ಪ್ರಸನ್ನ ಎಂದು ಮೆಚ್ಚಿಕೊಳ್ಳತಕ್ಕಂಥಾದ್ದು ಆಯಿತು.

ವೆಟರ್ನರಿ ಆಸ್ಪತ್ರೆಗಳ ಬಗ್ಗೆ ಹೇಳಿದ್ದಾರೆ. ಇವರು ಹೆಚ್ಚಿಗೆ ಆಸ್ಪತ್ರೆಗಳನ್ನು ಪ್ರಾರಂಭ ಮಾಡುವುದಕ್ಕೆ ಇವರಲ್ಲಿ ವೆಟರ್ನರಿ ಡಾಕ್ಟರ್ಸ್ ಇದ್ದಾರೆಯೇ? ಲೈವ್‌ಸ್ಟಾಕ್ ಇನ್ಸ್‌ಫೆಕ್ಟರ್ಸ್ ಇದ್ದಾರೆಯೆ ಅಥವಾ ಆವಶ್ಯಕ ಸಿಬ್ಬಂದಿ ವರ್ಗ ಇವರಲ್ಲಿ ಇದ್ದಾರೆಯೇ ಒಟ್ಟಿನಲ್ಲಿ ಹೊಸ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಬೇಕಾಗುವ ಎಲ್ಲಾ ವ್ಯವಸ್ಥೆಗಳನ್ನು ಸಿದ್ಧಪಡಿಸಿಟ್ಟುಕೊಂಡು ಯೋಜನೆಯನ್ನು ವಿಸ್ತರಣೆ ಮಾಡಬೇಕು. ಹೀಗೆ ಇರುವ ಸಮಸ್ಯೆಗಳ ಬಗ್ಗೆ, ಅಡಚಣೆಗಳ ಬಗ್ಗೆ ಅಧ್ಯಯನ ಮಾಡದೇ ಯೋಜನೆಯ ವಿಸ್ತರಣೆ ಮಾಡಿದಲ್ಲಿ ಅದರಿಂದ ಯಾವ ಉಪಯೋಗ ಕೂಡ ಆಗುವುದಿಲ್ಲ. ಇರುವ ಸಹಕಾರಿ ಸಂಘಗಳಲ್ಲಿ ಈಗಾಗಲೇ ರಾಜಕೀಯ ಜಾಸ್ತಿಯಾಗಿದೆ. ಈಗ ಇರುವ ಸಹಕಾರಿ ಸಂಘಗಳ ಗತಿ ಹಾಲು ಉತ್ಪಾದಕರ ಸಂಘಕ್ಕೆ ಆದರೆ ಏನು ಗತಿ ಆದೀತು? ಇವರ ಹಾಲು ಉತ್ಪತ್ತಿ ಹೆಸರಿನಲ್ಲಿ ಮಾತ್ರ ಉಳಿದುಕೊಂಡಿತು. ರೈತರಿಗೆ ಏನೋ ದೊಡ್ಡ ಪ್ರಮಾಣದಲ್ಲಿ ಉಪಕಾರ ಮಾಡಿದ್ದೇವೆ ಎಂದು ಹೇಳಿರುತ್ತಾರೆ. 80 ಕೋಟಿ ರೂಪಾಯಿಗಳ ಬಡ್ಡಿ ಹಣವನ್ನು ಸಹಾಯಧನವೆಂದು ಮಾಡಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ ಕೆ.ಇ.ಬಿ.ಗೆ 13-70 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಇಷ್ಟು ಮೊತ್ತದ ಹಣವನ್ನು ಒಬ್ಬ ಇಂಡಸ್ಟ್ರೀಯಲಿಸ್ಟ್‌ಗೆ ಇವರು ಕೊಡುತ್ತಾರೆ. ಅಂತಹವರಿಗೆ ಬೇಕಾದರೆ ಕೋಟ್ಯಾಂತರ ರೊಪಾಯಿಗಳ ಸಹಯಾವನ್ನು ಮಾಡುತ್ತಾರ ಆದರೆ ರೈತರ ವಿಚಾರದಲ್ಲಿ ಆ ಧಾರಳತೆ ಇಲ್ಲ. ಇದೊಂದು ಇವರ ದೊಡ್ಡ ಕೆಲಸವೇ.

ಇವೊತ್ತು ಬೆಳಿಗ್ಗೆ ಒಂದು ಗಮನ ಸೆಳೆಯುವ ಸೂಚನೆಯು ಇಲ್ಲಿ ಬಂತು. ಬೆಳೆದು ನಿಂತ ಬೆಳೆಗೆ ನೀರು ಕೊಡಿ ಎಂದು ರಾಯಚೂರು ಬೀದರ್, ಗುಲ್ಬರ್ಗ ಹಾಗೂ ಬಿಜಾಪುರದ ರೈತರು ಕೇಳಿಕೊಂಡಿದ್ದಾರೆ. ಆದರೆ ನಮ್ಮ ಜನರಿಗೆ ನೀರು ಬಿಡದೇ ಆಂಧ್ರಪ್ರದೇಶಕ್ಕೆ ನೀರು ಕೊಡುವುದಕ್ಕೆ ನಮ್ಮ ಸರಕಾರ ಹೊರಟಿದೆ. ಇದು ಯಾವ ಊರ ನ್ಯಾಯ? ನಮ್ಮ ರಾಜ್ಯದ ರೈತರ ಹೊಟ್ಟೆಗೆ ಬಟ್ಟೆ ಕಟ್ಟಿ, ಬೇರೆಯವರಿಗೆ ನೀರು ಕೊಡುವುದಕ್ಕೆ ನಮ್ಮ ಸರಕಾರ ಹೊರಟಿದೆ. ಇದು ಯಾವ ಧರ್ಮದ ಕಾರ್ಯ ಸ್ವಾಮಿ? ಇದೊಂದು ರೈತರ ವಿರೋಧಿ ಕಾರ್ಯನೀತಿ

ಎಂದು ಹೇಳಬೇಕಾಗುತ್ತದೆ ಮಾನ್ಯ ರೇವಣಸಿದ್ದಯ್ಯನವರು ಮತ್ತು ಇತರ ಕೆಲವು ಮಾನ್ಯ ಸದಸ್ಯರು ಇಂಥ ಅಂಥ ದರ್ಬಾರನ್ನು ಇನ್ನು ರೈತರು ತಡೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಇವರು ಸ್ವಂತದ ಮನೆಯ ವ್ಯವಹಾರವನ್ನು ಮಾಡಿಕೊಳ್ಳದೇ, ರಾಜ್ಯದ ಹಿತಾಸಕ್ತಿಯ ವ್ಯವಹಾರವನ್ನು ಮಾಡಬೇಕೆಂದು ಹೇಳುತ್ತಾ ಇದ್ದೇನೆ.

ಅರಣ್ಯ ಇಲಾಖೆ ವಿಚಾರದಲ್ಲಿ ಎಷ್ಟೊಂದು ಸಲ ಈ ಸದಸದಲ್ಲೇ ಹೇಳಿದ್ದೇನೆ. ಇವರಿಗೆ ಗಿಡ ನೆಡುವ ಲೆಕ್ಕ ಗೊತ್ತಾಗುತ್ತದೆ. ಆದರೆ ಅವುಗಳ ಮೇಲ್ವಿಚಾರಣೆ ಆಗಲಿ, ಮರ ಕಡಿಯುವುದಾಗಲೀ, ಕಳ್ಳಸಾಗಾಣಿಕೆ ಮಾಡುವುದಾಗಲೀ ಯಾವುದರ ಮೇಲೂ ನಿಗಾ ಇಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅರಣ್ಯ ಇಲಾಖೆಗೆ ನಾಲ್ಕೈದು ಕಂಪನಿಗಳಿಂದ ಲಕ್ಷಾಂತರ ರೂಗಳ ಬಾಕಿ ಇದೆ ಎಂಬುದನ್ನು ವಿವರವಾಗಿ ಕೊಟ್ಟಿದ್ದಾರೆ. ಒಟ್ಟು 907.70 ಲಕ್ಷ ರೂ.ಬರಬೇಕಾಗುತ್ತದೆ. ಇದರ ಕಡೆ ಯಾರೂ ವಿವರವಾಗಿ ನಿಗಾ ಕೊಟ್ಟ ಹಾಗೆ ಕಾಣಲಿಲ್ಲ, ಬರೀ ಗಿಡ ನೆಡುವುದರಲ್ಲಿ ಆಯಿತು. ಬರೀ ಆರಂಭಶೂರತ್ವ. ಮಾನ್ಯ ರಾಚಯ್ಯರವರಿಗೆ ಒಂದು ಅಗ್ರಿಕಲ್ಚರ್, ಇನ್ನೊಂದು ಫಾರೆಸ್ಟ್ ಬಂಗಲೆಯಲ್ಲಿ ರೆಸ್ಟ್ ತೆಗೆದುಕೊಂಡು ಆರೋಗ್ಯ ಸುಧಾರಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ಕಾಣುತ್ತದೆ. ಈಗತಾನೇ ಮುಖ್ಯಮಂತ್ರಿಗಳು ಬಂದರು. ನಮ್ಮ ಕಡೆ ಫಾರೆಸ್ಟ್ ಬಾರ್ಡರ್‌ಗಳಲ್ಲಿ ಅನೇಕ ಹಳ್ಳಿಗಳು ಇವೆ. ಅಲ್ಲೆಲ್ಲ ಆನೆಗಳ ಕಾಟ. ಇವರು ಕಾಡನ್ನೆಲ್ಲ ಕಡಿದು ಪಾಪ ಕಾಡಾನೆಗಳು ಊರೊಳಕ್ಕೆ ಬಂದು ಪಾಪ ರೈತ ಏನು ಬೆಳೆದಿರುತ್ತಾನೋ ಅದನ್ನೆಲ್ಲ ತಿಂದು ಹೋಗುತ್ತವೆ. ಈ ಆನೆಗಳ ಕಾಟ ಜಾಸ್ತಿಯಾಗಿದೆ. ಇದನ್ನು ತಪ್ಪಿಸೋಕೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮೂರ್ನಾಲ್ಕು ಸಾಕು ಆನೆಗಳನ್ನು ತಂದು ನಿಲ್ಲಿಸಿ ಆನೆಗಳನ್ನು ಓಡಿಸುತ್ತೇವೆ ಎಂದು ಎರಡು ಆನೆಗಳನ್ನು ಮೇಲೆ ಆಚೆ ಓಡಿಸಿ ವಾಪಸ್ ಬರುವಷ್ಟರಲ್ಲಿ ಅವು ಮತ್ತೆ ಒಳಕ್ಕೆ ಬಂದುಬಿಡುತ್ತವೆ. ಇವುಗಳಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಎಷ್ಟೋ ಜನರನ್ನು ತುಳಿದುಹಾಕಿವೆ, ಸತ್ತವರಿಗೆ ಪರಿಹಾರ ಕೊಡಿ ಎಂದರೆ ಹಣ ಇಲ್ಲ ಅನ್ನುತ್ತಾರೆ. ಅವರು ಅಗ್ರಿಕಲ್ಚರ್ ಇಲಾಖೆಯವರು ಸರ್ವೆ ಮಾಡಬೇಕೆನ್ನುತ್ತಾರೆ. ಅವರು ಬೇರೊಂದು ಡಿಪಾರ್ಟ್‌ಮೆಂಟ್ ಕಡೆ ತೋರಿಸುತ್ತಾರೆ. ಹೀಗೆ ಎಡತಾಕಿ ಅವರಿಗೆ ನಷ್ಟವಾಗಿರುವ ಮೊತ್ತದ ಡಬಲ್ ನಷ್ಟವಾಗಿರುತ್ತದೆ. ಅವರು 25 ಸಾವಿರ ಕಾಂಪನ್‌ಸೇಷನ್ ಕೇಳಿದರೆ ಇವರು ಕೊಡೋದು 2 ಸಾವಿರ ಇದಕ್ಕೆ ಬದಲಾಗಿ ಕೇರಳದಲ್ಲಿ ಮೈಲ್ಡ್ ಎಲೆಕ್ಟ್ರಿಕ್ ಶಾಕ್ ಕೊಡುವ ಹಾಗೆ ಕಾಡಿನ ಸುತ್ತಲೂ ತಂತಿ ಎಳೆದು ಬಿಡುತ್ತಾರೆ. ಆಗ ಆನೇ ಊರೊಳಕ್ಕೆ ಬರುವುದಿಲ್ಲ. ನಾವು ಕಾಡಾನೆಗಳನ್ನು ಸಾಕಾನೆಗಳ ಸಹಾಯದಿಂದ ಓಡಿಸುತ್ತೇವೆ ಎನ್ನುವುದೆಲ್ಲ ಆಗದ ಕೆಲಸ.

ಅಧ್ಯಕ್ಷರೇ ಈ ರೂರಲ್ ಡೆವಲ್‌ಮೆಂಟ್ ಅನ್ನುವುದು ಇವರಿಗೆಲ್ಲ ಇಂಪಾದ ಸೋಂಪಾದ ಸಬ್ಜೆಕ್ಟ್. ನಾನಾದರೂ ಅನೇಕ ಬಾರಿ ಹೇಳಿದ್ದೇನೆ. ರೂರಲ್ ಡೆವಲಪ್‌ಮೆಂಟ್ ಜಿಲ್ಲಾಪರಿಷತ್, ಪಂಚಾಯತ್ ಇವೆಲ್ಲ ಯಾವುದೂ ಹೊಸ ಕಾನ್‌ಸೆಪ್ಟ್ ಅಲ್ಲ, ನಿಮಗೆಲ್ಲ ಹೊಸದಿರಬಹುದು, ಹಳೇ ಮೈಸೂರಿನ ನಮಗೆ ಹಳೆ ಕಾನ್‌ಸೆಪ್ಟ್, ಇದು ಮಹಾರಾಜರ ಕಾಲದಿಂದ ಡಿಸ್ಟ್ರಿಕ್ಟ್ ಬೋಡ ತಾಲ್ಲೂಕು ಬೋರ್ಡ್‌ಗಳಿದ್ದವು ನೀವು ಈಗ ಏನು ಕೆಲಸ ಮಾಡುತ್ತಿದ್ದೀರಿ ಅದೆಲ್ಲ ಹಿಂದೇನೆ ಇತ್ತು. ಬಲವಂತರಾವ್ ಮೆಹತಾಕಮಿಟಿ ರಿಪೋರ್ಟ್ ಬಂದ ಮೇಲೆ ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡ್, ಡಿಡಿಸಿ ಎಲ್ಲ ಬಂದಿದ್ದು, ಅದನ್ನೆಲ್ಲ ಬಿಟ್ಟು ಅದೇನೋ

ಡಿಸೆಂಟ್ರಲೈಜೇಷನ್ ಆಫ್ ಪವರ್ ಎಂದು ತಬಲ ತಗೊಂಡು ಹೊಡೆದರು, ಆಮೇಲೆ ಮದ್ದಳೆ ಹೊಡೆದರು. ಈಗ ನಗಾರಿ ಬಾರಿಸೋಕೆ ಶುರು ಮಾಡಿದ್ದಾರೆ.

ಎಷ್ಟೆಷ್ಟು ಯೋಚನೆ ಮಾಡಿದರೂ ಕೂಡ ನನಗೆ ಇದು ಅರ್ಥವಾಗುವುದಿಲ್ಲ. ಇದರಲ್ಲಿ ಹೊಸದಾಗಿ ಏನೂ ಇಲ್ಲ, ಆದರೂ ಸಹ ಏನು ಹೊಸದು ಎಂದು ಇವರು ಹೇಳುತ್ತಿದ್ದಾರೆಂದು ನನಗೆ ಅರ್ಥವಾಗಲಿಲ್ಲ. ಈ ಕಾನೂನು ಹಳೆಯದು, ಮೊದಲಿನಿಂದಲೂ ಇತ್ತು ಇದ್ಯಾವುದೂ ಹೊಸದಲ್ಲ, ಇದನ್ನು ಏಕೆ ಹೇಳುತ್ತೀರಿ ಎಂದು ಹೇಳಿದರೂ ಕೇಳುವುದಿಲ್ಲ.ಇದರಿಂದ ಡೀಸೆಂಟ್ರಲೈಸೇಷನ್ ಅಫ್ ಕರೆಪ್ಷನ್ ಆಗಿ ಹೋಗಿದೆ. ನೀವು ಮಾಡಿರುವ ಕೆಲಸ ತಪ್ಪು ತಿದ್ದುಕೊಳ್ಳಿ ಎಂದು ಹೇಳಿದರೂ ಕೂಡ ತಿದ್ದುಕೊಳ್ಳುವುದಿಲ್ಲವೆಂದು ಹೇಳಿದರೆ ನಾವು ಏನು ಮಾಡುವುದು. ಹಾಗೇ ನಡೆಸಿಕೊಂಡು ಹೋಗುತ್ತಿದ್ದಾರೆ, ಜಿಲ್ಲಾ ಪರಿಷತ್ತಿನ ಸದಸ್ಯರ ಸಂಬಂಧಿಕರು ಪ್ರತಿಯೊಬ್ಬರು ಕಂಟ್ರಾಕ್ಟರ್ ಆಗಿದ್ದಾರೆ. ದುಡ್ಡೆಲ್ಲಾ ಅವರಿಗೆ ಹಂಚಿಕೆಯಾಗಿದೆ. ಅದರ ಬದಲು ತಲೆಗೆ ಇಷ್ಟಿಷ್ಟು ಎಂದು ಹಂಚಿದರೆ ಸರಿ ಹೋಗುತ್ತದೆ. ಇನ್ನು ಮಂಡಲಗಳ ಬಗ್ಗೆ ಹೇಳುವುದಾದರೆ ಪ್ರತಿಯೊಂದು ಮಂಡಲದಲ್ಲೂ ಮರ್ಡರ್, ಮನೆ ಒಡೆದು ಹಾಕಿರುವುದು ಎಷ್ಟು, ಜಗಳಗಳು ಎಷ್ಟು, ಇದೆಲ್ಲಾ ತಮ್ಮ ಜನರಿಗೆ ಬಂದಿಲ್ಲವೇ? ಹಳ್ಳಿಗಳಲ್ಲಿ ಪೀಸ್ ಆಟ್ಮಾಸ್ಫಿಯರ್ ಹೊರಟು ಹೋಗಿದೆ. ಇಭಿವೃದ್ಧಿ ಕಾರ್ಯ ಕ್ರಮ ಇಲ್ಲ. ರಸ್ತೆ ರೀಪೇರಿಯಾಗಲೀ ಪಂಪ್‌ಸೆಟ್ ರಿಪೇರಿಯಾಗಲೀ ಸ್ಕೂಲ್ ಬಿಲ್ಡಿಂಗ್ ರಿಪೇರಿಯಾಗಲೀ ಏನೂ ನಡೆಯುತ್ತಿಲ. ಎಲ್ಲಾ ಕೆಲಸಗಳು ನಿಂತು ಹೋಗುತ್ತಿವೆ. ಜಿಲ್ಲಾ ಪರಿಷತ್ತನ್ನು ಕೇಳಿದರೆ ಸರಕಾರವನು ತೋರಿಸುತ್ತಾರೆ. ಮಂಡಲ ಪಂಚಾಯಿತಿಯನು ಕೇಳಿದರೆ ಜಿಲ್ಲಾಪರಿಷತ್ತನ್ನು ತೋರಿಸುತ್ತಾರೆ ಒಟ್ಟಿನಲ್ಲಿ ಮೂರು ಕಾಸಿನ ಕೆಲಸವಾಗುವುದಿಲ್ಲ. ಅಲ್ಲಿನ ಅಧಿಕಾರಿಗಳು ಬೇಸತ್ತು ಎಂದಿಗೆ ಇಲ್ಲಿಂದ ತಲೆತಪ್ಪಿಸಿಕೊಂಡು ಹೋಗುತ್ತೇವೆಯೋ ಎಂದು ಹೇಳುತ್ತಾರೆ. 26 ನೇ ಫ್ಯಾರದಲ್ಲಿ ಎನ್.ಆರ್.ಇಪಿ, ಆರ್ ಎಲ್‌ಇ ಜಿ ಪಿ ಎಲ್ ಜಿ ಎಸ್ ಬಗ್ಗೆ ಹೇಳಿದ್ದಾರೆ. 1988-89ರಲ್ಲಿ 53.66 ಕೋಟಿ ರೂಪಾಯಿ ಇದ್ದರೆ 17.93 ಕೋಟಿ ರೂಪಾಯಿಗಳಷ್ಟು ಹಣವನ್ನು ಹಂಚಿಕೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಅಂದರೆ 71.59 ಕೋಟಿ ಖರ್ಚಾಗಿದೆ ಈ ವರ್ಷ 89-90 ರಲ್ಲಿ 78.47 ಕೋಟಿಯನ್ನು ಇಟ್ಟಿದಾ. 27ನೇ ಪ್ಯಾರಾದಲ್ಲಿರುವ ಕೇಂದ್ರದ ಹೊಸ ನೀತಿ ಪ್ರಕಾರ ಎನ್ ಆರ್ ಇಪಿ, ಆರ್‌ಎಲ್‌ಇಜಿಪಿ ಎರಡೂ ಸೇರಿ 75 ಪರ್ಸೆಂಟ್ ಕೇಂದ್ರ ಕೊಡುತ್ತದೆ ಎಂದು ಹೇಳುತ್ತಾರೆ. ಈ ಲೆಕ್ಕ ಬರೀ ತಪ್ಪು. 1988-89ರಲ್ಲಿ 48 ಕೋಟಿ ರೂಪಾಯಿ ಜಿಲ್ಲಾ ಪರಿಷತ್ತಿಗೆ ನೀಡುವುದಾಗಿ ಹೇಳಿಕೊಂಡಿದ್ದಾರೆ. ಹೋದಸಾರಿ 600 ಕೋಟಿ ರೂಪಾಯಿ ಕೊಟ್ಟಿಲ್ಲ ಎಂಬ ಬಗ್ಗೆ ಎಲ್ಲಾ ಕಡೆ ದೂರು ಇದೆ ಈ ಸಲ 1115. 81 ಕೋಟಿ ರೂಪಾಯಿಯನ್ನು ಕೊಡುತ್ತೇವೆಂದು ಹೇಳುತ್ತಾರೆ. ಅದರ ಗತಿ ಏನಾಗುತ್ತದೆಂದು ಕಾದು ನೋಡಬೇಕು.

ಲರ್ನ್‌ಡ್ ಸ್ಕೀಮ್ ಎಂದು ಹೇಳಿದ್ದಾರೆ. ಇದು ನಿಜವಾಗಲೂ ಚೆನ್ನಾಗಿದೆ. ಆದರೆ ನನಗೆ ಹೆದರಿಕೆ ಇದೆ. ಇದು ಚುನಾವಣಾ ವರ್ಷ ಈ ಸ್ಕೀಮ್‌ನಲ್ಲಿ 300 ರೂಪಾಯಿ ಸ್ಟೈಪೆಂಡನ್ನು ಕೊಡುತ್ತಾರೆ. ಇದಕ್ಕೆ 7.20 ಕೋಟಿ ಖರ್ಚಾಗುತ್ತದೆ. ಇದರ ಅಡಿಯಲ್ಲಿ ಯುವಕ ಯುವತಿಯರಿಗೆ ತರಬೇತಿ ಕೊಟ್ಟು ಇನ್ನು ಮುಂದಕ್ಕೆ ತರಬೇತಿಯಾದ ಮೇಲೆ ನಿರುದ್ಯೋಗಿಗಳಾಗಬೇಕಾಗುತ್ತದೋ ಏನೋಎಂದು ನನಗೆ ಹೆದರಿಕೆ ಇದೆ. ಟ್ರೈಜಮ್ ಸ್ಕೀಮ್‌ಗಳನ್ನು ಸರಿಯಾಗಿ ಜಾರಿ ಮಾಡುತ್ತಿಲ್ಲ. ಈ ಯೋಜನೆ ಇವರ ಪಕ್ಷದ ಅಭಿವೃದ್ಧಿಗೆ ದುಷ್ಟ ಯೋಜನೆಯಾಗಿ ಪರಿವರ್ತನೆ ಯಾಗದೇ ಇರಲಿ, ಎಂದು ನಾನಾದರೂ ಆಸೆಪಡುತ್ತೇನೆ. ರಸ್ತೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಸುಮಾರು ಬಹುತೇಕ ಮಂತ್ರಿಗಳು ಕೇವಲ ಹಾರಿಕೊಂಡು ಹೆಲಿಕ್ಯಾಪ್ಟರ್‌ನಲ್ಲಿ ಹೋಗಿದ್ದಾರೆಯೇ ಹೊರತು ರಸ್ತೆಯ ಮೇಲೆ ಅವರು ಹೋಗಿಲ್ಲ. ನಾನು ರಸ್ತೆಯಲ್ಲಿ ಹೋಗಿ

ಸೊಂಟ ಮುರಿದುಕೊಂಡಿದ್ದೇನೆ. ಇನ್ನು ಕೆಲವರು ಕೈಕಾಲು ಮುರಿದುಕೊಂಡಿದ್ದಾರೆ. ಹಳ್ಳಿ ರಸ್ತೆಗಳಿಗೆ ಮಣ್ಣು ಕೂಡ ಹಾಕಿಲ್ಲ, ಕೆಲಸ ಮಾಡಿರುವ ಕಂಟ್ರಾಕ್ಟರ್ಸ್‌ಗಳಿಗೆ ಹಣ ಕೊಟ್ಟಿಲ್ಲ. ಕಾರಿನಲ್ಲಿ ಹೋಗುವುದು ಇರಲಿ ನಡೆದುಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ. ಹಣ ಬಿಡುಗಡೆ ಮಾಡಬೇಕಾದರೆ ಎಂತಹ ಕಂಟ್ರಾಕ್ಟರ್‌ಗೆ ಹಣ ಕೊಡಬೇಕು ಎಂದು ಇಲ್ಲಿ ಪ್ರಶ್ನೆಯಾಗಿದೆ. ಅಲ್ಲಿ ಕೆಲಸ ಮಾಡಿರುವ ಕೆಲವರಿಗೆ ಮಾತ್ರ ಹಣವನ್ನು ಕೊಟ್ಟರೆ ಬಾಕಿ ಕಂಟ್ರಾಕ್ಟರ್‌ಗಳ ಗತಿ ಏನಾಗಬೇಕು? ಇಲ್ಲಿ ಇನ್ನು ಎಷ್ಟೋ ರೋಡ್ಸ್‌ಗಳ ಕೆಲಸವನ್ನು ಮಾಡಿಸುತ್ತೇವೆ, ಎಂದು ಹೇಳಿದ್ದಾರೆ. I have proposed many road works to be taken up during 1989-90``

ಈಗಿರುವ ಹಳೆಯ ರೋಡ್‌ಗಳ ರಿಪೇರಿ ಅವುಗಳನ್ನು ಮಾಡುವುದಕ್ಕೆ ಎಷ್ಟೋ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇನ್ನು ಹೊಸ ರೋಡ್‌ಗಳನ್ನು ಮಾಡುವುದು ಹೇಗೆ? ಇದಕ್ಕೆ ಎಲ್ಲಿಂದ ಹಣವನ್ನು ತರುತ್ತೀರಿ ಎಂದು ಇದರ ಬಗ್ಗೆ ನನಗೆ ಸ್ವಲ್ಪ ವಿವರಣೆಯನ್ನು ಹೇಳಬೇಕು. ಇನ್ನು ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಬಗ್ಗೆ. ಫಂಡ್ ಪ್ರೊಸೆಸಿಂಗ್ ಮಾಡಲಿಕ್ಕೆ ಹಣವನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ಫ್ರೂಟ್ ಪ್ರೊಸೆಸಿಂಗ್. ವೆಜಿಟೆಬಲ್ ಪ್ರೊಸೆಸಿಂಗ್ ಮಾಡಲಿಕ್ಕೆ ತಾವು ಬಹಳ ನಿಗಾ ಕೊಡಬೇಕಾಗುತ್ತದೆ, ಇದರ ಬಗ್ಗೆ ಸೆಂಟ್ರಲ್ ಬಜೆಟ್‌ನಲ್ಲೂ ಕೂಡಾ ಹೇಳಿದ್ದಾರೆ. ಫುಡ್ ಪ್ರೊಸೆಸಿಂಗ್‌ಗೆ ಆದ್ಯತೆಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಕೂರ್ಗ್‌ನಿಂದ ಸ್ವಲ್ಪ ಮುಂದೆ ಹೋದರೆ ಅಲ್ಲಿ ಜೂಸ್ ಮಾಡತಕ್ಕಂಥ ಒಂದು ಫ್ಯಾಕ್ಟರಿ ಇದೆ. ಅದು ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ನಡೆಯುತ್ತಿರುವುದು. ಅಲ್ಲಿ ಇಂಪೋರ್ಟೆ ಯಂತ್ರೋಪಕರಣಗಳನ್ನು ಹಾಕಿ ಸೊಗಸಾಗಿ ಮಾಡಿದ್ದಾರೆ. ಈಗ ಅದಕ್ಕೆ ವರ್ಕಿಂಗ್ ಕ್ಯಾಪಿಟಲ್ ಇಲ್ಲದೆ ಅನ್ಯಾಯವಾಗಿ ಅದನ್ನು ಮುಚ್ಚುತ್ತಿದ್ದಾರೆ. ಅಲ್ಲಿಗೆ ವರ್ಕಿಂಗ್ ಕ್ಯಾಪಿಟಲ್‌ನ್ನು ಕೊಡಿಸಿ ಆ ಯೂನಿಟನ್ನು ಮತ್ತೆ ಸ್ಟಾರ್ಟ್ ಮಾಡಿಸಬೇಕು ಎಂದು ಹೇಳುತ್ತೇನೆ. ಒಬ್ಬ ಹೆಣ್ಣುಮಗಳು ಫೋಟೊ ಜಿಪ್ಸನ್ನು ಮಾಡುವ ಬಗ್ಗೆ ಇಂಡಸ್ಟ್ರಿಯನ್ನು ಮಾಡುತ್ತೇನೆ ಎಂದು ಮುಂದೆ ಬಂದು ಆ ಇಂಡಸ್ಟ್ರಿಯನ್ನು ಪ್ರಾರಂಭ ಮಾಡುವುದಕ್ಕೆ ಎಷ್ಟೋ ಕಡೆ ಹೋಗಿ ಕೇಳಿದಾಗ ಆಫೀಸರ್‌ಗಳು ಇಲ್ಲಿಂದಲ್ಲಿಗೆ, ಅಲ್ಲಿಂದ ಇಲ್ಲಿಗೆ ಈ ರೀತಿ ಓಡಾಡಿಸಿ ಕೊನೆಗೆ ಈ ಹೆಣ್ಣುಮಗಳು ಬೇಡವೇ ಬೇಡ ಎನ್ನುವ ತೀರ್ಮಾನಕ್ಕೆ ಬಂದಿದ್ದಳು. ಕೊನೆಗೆ ಆ ಹೆಣ್ಣುಮಗಳು ನಾನು ಈ ಇಂಡಸ್ಟ್ರೀಯನು ಮಾಡಮ್ಮ ಎಂದು ಹೇಳಿದಾಗ ಮತ್ತೆ ಈ ಇಂಡಸ್ಟ್ರಿಯನ್ನು ಮಾಡುವ ಬಗ್ಗೆ ಓಡಾಡುತ್ತಿದ್ದಾಳೆ. ಈ ಫುಡ್ ಪ್ರೊಸೆಸಿಂಗ್ ಮಾಡಿದರೆ ರೈತರಿಗೂ ಕೂಡಾ ಇದರಿಂದ ಅನುಕೂಲವಾಗುತ್ತದೆ. ಇಂಥ ಇಂಡೇಸ್ಟ್ರೀಗಳನ್ನು ಪ್ರಾರಂಭ ಮಾಡುವುದಕ್ಕೆ ಎನ್‌ಕರೇಜೆ ಇಲ್ಲದಂತಾಗಿದೆ. ಇಂಡಸ್ಟ್ರೀಗಳನ್ನು ಪ್ರಾರಂಭ ಮಾಡುವುದಕ್ಕೆ ಅದು ಯಾರಿಗೆ ಅನುಮತಿ ಕೊಡುತ್ತಾರೋ, ಅದನ್ನು ಯಾರು ಮಾಡುತ್ತಾರೋ, ಅದನ್ನು ಯಾರು ಶುರುಮಾಡುತ್ತಾರೋ, ಯಾರೂ ಯಾವಾಗ ಅದನ್ನು ಮುಚ್ಚಿಬಿಡುತ್ತಾರೋ, ಆ ದೇವರಿಗೆ ಗೊತ್ತು. ನಿಜವಾಗಿ ಕೆಲಸ ಮಾಡುವವರಿಗೆ ಒಂದು ತರಹದ ಎನ್‌ಕರೇಜ್‌ಮೆಂಟ್ ಇಲ್ಲ. ಇನ್ನು ಮೂರು ಗ್ರೋಥ್ ಸೆಂಟರ್ಸ್ ಹಾಕುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಸೆಂಟ್ರಲ್ ಗೌರ್ನಮೆಂಟ್‌ಗೆ ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ. ಅವು ಯಾವುವು? "I proposed to provide liberal concessions and incentivest" ಎಂದು ಹೇಳಿದ್ದೀರಿ

ಇದು ಎಲ್ಲಿಂದ ಎಸ್ಟಾಬ್ಲಿಷ್ ಆಗಿದೆ? ಇದಕ್ಕೆ ಕೊಟ್ಟಿರುವ ರಿಯಾಯಿತಿಗಳೆಲ್ಲಾ ಏನು? ನಾನು ಮೊಗಲಿನಿಂದ ಬೆಂಗಳೂರಿನಲ್ಲಿ ಇದು ಸೆಂಟ್ರಲೈಸ್ ಆಗಿದೆ, ಬ್ಯಾಕ್‌ವಾರ್ಡ್ ಏರಿಯಾದವರಿಗೆ ಇದನ್ನು ಕೊಟ್ಟು ಅಲ್ಲಿನ ಜನಗಳಿಗೆ ಉದ್ಯೋಗವನ್ನು ಕೊಡಬೇಕು ಎಂದು

ಹೇಳುತ್ತಲೇ ಬಂದಿದ್ದೇನೆ. ಈಗಲಾದರೂ ಇದನ್ನು ಮಾಡಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೌತ್ ಕೆನರಾದಲ್ಲಿ ಮತ್ತು ನಾರ್ತ್ ಕೆನಾರಾದಲ್ಲಿ ಮಂಗಳೂರು ಪೆಟ್ರೋಕೆಮಿಕಲ್, ಮಂಗಳೂರು ರೀಫೈನರಿ, ಥರ್ಮಲ್ ಪವರ್ಸ್ ಸ್ಟೇಷನ್, ಕೈಗಾ ಆಟೋಮಿಕ್ ಪವರ್ ಸ್ಟೇಷನ್, ಎಲ್ಲವನ್ನೂ ಮಾಡುತ್ತೇವೆ ಎಂದು ಹೇಳಿದ್ದೀರಿ. ತಮ್ಮ ಪೇರ್ಮೆನ್‌ಷಿನಲ್ಲಿ ಕಮಿಟಿ ಸೆಟ್-ಅಫ್ ಆಗಿದೆ ಎಂದು ಹೇಳಿದ್ದೀರಿ ಎಂಟು ಸಾವಿರ ಕೋಟಿ ರೂಪಾಯಿ ಸೆಂಟ್ರಲ್ ಮನಿ ಇಟ್ ಶುಡ್ ನಾಟ್ ಬಿ ಡಿಲೇಯಿಡ್. ಇದನ್ನು ಬೇಗ ಯೂಸ್ ಮಾಡಿಕೊಂಡು ಈ ಪ್ರಾಜೆಕ್ಟ್‌ಗಳನ್ನು ಬೇಗ ಡೆವಲಪ್ ಮಾಡಬೇಕು ಎಂದು ನಾನು ಹೇಳುತ್ತೇನೆ. ಇನ್ನು ಸಿಲ್ಕ್ ರೀಲಿಂಗ್ ವಿಚಾರದಲ್ಲಿ 80 ಪರ್‌ಸೆಂಟ್ ಸಿಲ್ಕ್ ನಮ್ಮ ಕರ್ನಾಟಕದಲ್ಲಿಯೇ ಪ್ರೊಡ್ಯೂಸ್ ಆಗುತ್ತಿದೆ. ಇದಕ್ಕೆ ಸಿಲ್ಕ್ ಮಲ್ಬರಿ ಗಾರ್ಡನ್ಸ್‌ಗೆ ಸ್ಪ್ರಿಂಕ್ಲರ್ ಇಂಗೇಷನ್‌ನಷ್ಟು ಬೆಸ್ಟ್ ಇರಿಗೇಷನ್ ಯಾವುದೂ ಇಲ್ಲ ಎಂದು ಎಲ್ಲರೂ ಹೇಳುತ್ತಿದ್ದಾರೆ. ನೀರನ್ನೂ ಕೂಡಾ ಕಡಿಮೆ ತೆಗೆದುಕೊಳ್ಳುತ್ತದೆ ಅದು ಆದತಕ್ಷಣ ಡಸ್ಟ್ ಎಲ್ಲಾ ಹೋಗಿ ಹುಳ ಬೆಳೆಯುವುದಕ್ಕೆ ಬಹಳ ಸಹಾಯವಾಗುತ್ತದೆ ಎಲ್ಲಾ ಎಕ್ಸ್‌ಪರ್ಟ್ಸ್‌ಗಳೂ ಕೂಡ ಹೇಳುತ್ತಿದ್ದಾರೆ.

ಗ್ರೂಪ್ ಫಾರ್ಮಿಂಗ್ ಹಾಗಕಲೆಕ್ಟೀವ್ ಫಾರ್ಮಿಂಗ್‌ನಲ್ಲಿ ಸ್ಪ್ರಿಂಕ್ಲರ್ಸ್ ಹಾಕುವುದಕ್ಕೆ ಎನ್‌ಕರೇಜ್ ಮಾಡುಬೇಕು. ಜೊತೆಗೆ ಸಿಂಥಟಿಕ್ ಸಿಲ್ಕ್ ಮತ್ತು ಇಂಪೋರ್ಟೆಡ್ ಸಿಲ್ಕ್‌ನಿಂದಾಗಿ ಇಂಡಸ್ಟ್ರಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಇದನ್ನು ಸರ್ಕಾರ ಸರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದು ಆಗದೇ ಇದ್ದರೆ ನಿಜವಾಗಿ ರೇಷ್ಮೆ ಉದ್ಯಮದ ದುರಾದೃಷ್ಟ ಎಂದು ಹೇಳಬೇಕಾಗುತ್ತದೆ.

ಇನ್ನು ಎನರ್ಜಿ ವಿಚಾರದಲ್ಲಿ ಹೇಳುವುದಾದರೆ ಕರ್ನಾಟಕ ಪವರ್ ಕಾರ್ಪೊರೇಷನ್ ಆದ ಮೇಲೆ ತಾವು ಏನು ಎಕ್ಸ್‌ಪೆಕ್ಟ್ ಮಾಡಿದ್ದೇವೆ ಅದು ಅಷ್ಟು ಪ್ರೋಗ್ರೆಸ್ ಆಗಿ ಕಾಣುತ್ತಿಲ್ಲ ಅಡ್ಮಿನಿಸ್ಟ್ರೇಟೀವ್ ಬಾಟಲ್‌ನೆಕ್ಸ್ ಬಹಳ ಇರುವುದರಿಂದ ಎಫಿಷಿಯನ್ಸಿ ಬಹಳ ಕಡಿಮೆ ಇದೆ. ಪವರ್‌ಕಾರ್ಪೊರೇಷನ್ ಆಗಿರುವುದರಿಂದ ಬರೇ ಪ್ರಾಜೆಕ್ಟ್‌ಗಳನ್ನು ಕೊಡುವುದೇ ಆಗಿದೆ. ಹೊರತು ಅದು ಶುರು ಆಯಿತು ಅದು ಅಭಿವೃದ್ಧಿಯಾಯಿತು, ಅದು ಮುಗಿಯಿತು ಎನ್ನುವ ವರದಿಯನ್ನು ನಾನು ನೋಡೇಇಲ್ಲ. ಅದೂ ಅಲ್ಲದೆ ಆ ಪ್ರಾಜೆಕ್ಟ್ ಸೆಂಟ್ರಲ್‌ನಲಿದೆ, ಅಲ್ಲಿದೆ ಇಲ್ಲಿದೆ ಎಂದು ಹೇಳುವುದೇ ಆಗಿದೆ. ತಾವು ಬಹಳಷ್ಟು ಸ್ಕೀಮಗಳನ್ನು ಹಾಕಿದ್ದೀರಿ. ಇನ್ನೂ 600 ಹ್ಯಾಮ್ಲೆಟ್‌ಗಳು ಎಲೆಕ್ಟ್ರಿಫೈ ಆಗಬೇಕು. 400 ಹರಿಜನ ಬಸ್ತಿಗಳಿಗೆ ಎಲೆಕ್ಟ್ರಿಫೈ ಆಗಬೇಕು. 25 ಸಾವಿರ ಭಾಗ್ಯಜ್ಯೋತಿ ಸ್ಕೀಮ್ ಆಗಬೇಕು. 40 ಸಾವಿರ ಪಂಪ್ ಸೆಟ್ ಎನರ್ಜೀಸ್ ಆಗಬೇಕು ಎಂದು ಹೇಳಿದ್ದೀರಿ. ಬಹಳ ದೊಡ್ಡ ಆಸೆಯನ್ನು ಇಟ್ಟು ಕೊಂಡಿದ್ದೀರಿ,ಅದು ಆಗಬೇಕಾದ್ದು ಸರಿಯೇ. ಆದರೆ ಈ ವೇಗದಲ್ಲಿ ತಾವು ಏನಾದರೂ ನಡೆಸಿದರೆ ಇನ್ನೂ 5 ವರ್ಷ ಅಥವಾ 10 ವರ್ಷಗಳು ಬೇಕಾಗಬಹುದು ಎನ್ನುವುದು ನನ್ನ ಅಂದಾಜು, ದಯವಿಟ್ಟು ಹಾಗೆ ಆಗದೇ ಬಹಳ ವೇಗವಾಗಿ ಕೆಲಸ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಗಾಡಿಯನ್ನು ಬಹಳ ಜಲ್ದಿ ಓಡಿಸಬೇಕು ಎಂದು ನನ್ನ ಅಭಿಪ್ರಾಯ. ಇರಿಗೇಷನ್ ವಿಚಾರದಲ್ಲಿ ಪ್ರತಿ ವರ್ಷ 300 ಕೋಟಿ ರೂಪಾಯಿ, 309 ಕೋಟಿ ರೂಪಾಯಿ ಕೊಟ್ಟಿದ್ದೇವೆ ಎಂದು ರಾಗಪಾಡಿದ್ದೇ ಪಾಡಿದ್ದು ಮಾಮೂಲಾಗಿ ನಿಮಗೆ ರೂಢಿಯಾಗಿದೆ. ದುಡ್ಡು ಎಷ್ಟು ರಿಲೀಸ್ ಮಾಡಿದ್ದೀರಿ? ಇದೇ ವಿಷಯಕ್ಕೆ ಮಾನ್ಯ ದೇವೇ ಗೌಡರು ಗುದ್ದಾಡಿ ಕೊನೆಗೆ ಸಾಕಾಗಿ ಈ ಕಡೆ ಬಂದು ಕುಳಿತಿದ್ದಾರೆ. ಈಗ ಅವರಿಗೆ ಸ್ವಲ್ಪ ಆರಾಮವಾಗಿ ಇರಬಹುದೆಂದು ಕಾಣುತ್ತದೆ. ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹಣ ಬಿಡುಗಡೆ ಮಾಡುವಾಗ ಗುಲ್ಬರ್ಗಾ ಏರಿಯಾದಲ್ಲಿ 5 ಕೋಟಿ ರಾಪಾಯಿ ಕೊಟ್ಟಿದ್ದರೆ 20 ಸಾವಿರ ಎಕರೆಗೆ ನೀರಾವರಿ ಆಗುತ್ತಿತ್ತು. ಆದರೆ ಬಿಜಾಪುರ ಏರಿಯಾಗೆ 20

ಕೋಟಿ ರೂಪಾಯಿ ಖರ್ಚು ಮಾಡಿರುವುದರಿಂದ 5 ಸಾವಿರ ಎಕರೆಗೂ ನೀರಾವರಿ ಆಗಲಿಲ್ಲ. ಈ ರೀತಿ ರಾಜಕೀಯ ಮಾಡಿದರೆ ನಿಜವಾಗಿಯೂ ಇರಿಗೇಷನ್ ಉದ್ಧಾರವಾಗುತ್ತದೆಯೇ ಎಂದು ಕೇಳುತ್ತೇನೆ. ಈಗ ಎಲ್ಲಾ ರಿಸರ್‌ವಾಯರ್‌ನಲ್ಲಿ ಸಿಲ್ಟ್ ತುಂಬಿಕೊಂಡಿದೆ. ಇದರಿಂದ ಸ್ಟೋರೇಜ್ ಕೆಪಾಸಿಟಿ ಕಡಿಮೆ ಆಗಿದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಈ ಸಿಲ್ಟನ್ನು ಮೆಕನೈಸ್ ಮಾಡಿ ತಾವು ಸಿಲ್ಟನ್ನು ತೆಗೆಸಬೇಕೇ ಹೊರತು ಬರಗಾಲ ಬಂದಾಗ ತೆಗೆಯುತ್ತಾರೆ, ಮಾಡುತ್ತಾರೆ ಎಂದು ಹೇಳಿದರೆ ಅದು ನಡೆಯುವಂತಹ ಕೆಲಸ ಅಲ್ಲ. ಇದು ಬಹಳ ಅನ್ಯಾಯ ಮತ್ತು ಅಪಾಯ. ನೀರಾವರಿಗೋಸ್ಕರ ಹಣದ ವಿಚಾರದಲ್ಲಿ ಬರೀ ಪ್ರೊಪೋಸಲ್ಸ್ ಕಳಿಸುತ್ತಾ ಹೋದರೆ ಅದರ ಕೆಲಸ ಆಗುವುದು ಕಷ್ಟ. ಇವರಿಗೆ ಇದರ ಬಗ್ಗೆ ಅಕ್ಕರೆ ಇದ್ದ ಹಾಗೆ ಕಾಣುವುದಿಲ್ಲ. ಪಾಂಡವಪುರದ ಸಮೀಪ ಚಟ್ಟನ ಕೆರೆ ಇದೆ. ಅಲ್ಲಿ ಸುರಂಗ ಬೇಕಾಗೇ ಇರಲಿಲ್ಲ, ಅಲ್ಲಿ ಅನ್ಯಾಯವಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಸುರಂಗ ಮಾರ್ಗವಾಗಿ ನೀರು ತರುವುದಕ್ಕೆ ಪ್ರಯತ್ನ ಮಾಡಲಾಗಿದೆ. ಅಲ್ಲಿಯ ಜನರು ಕೇಳಿ ಕೇಳಿ ಸಾಕಾಗಿ ನನ್ನ ಹತ್ತಿರ ಹೇಳಿದರು. ನಾನು ಖುದ್ದಾಗಿ ಹೋದೆ. ಅಲ್ಲಿ ಹೋಗಿ ಪ್ರೆಸ್‌ನವರನ್ನು ಕರೆದು ಅಲ್ಲಿ ಆಗಿರುವ ಅವ್ಯವಸ್ಥೆ ಬಗ್ಗೆ ಹೇಳಿದ ಮೇಲೆ ಅಲ್ಲಿ ಯಾರನ್ನೋ ಸಸ್ಪೆಂಡ್ ಮಾಡಿದ್ದಾರೆ ಎಂದು ನನಗೆ ಗೊತ್ತಾಯಿತು. ಕ್ವಾಲಿಟಿ ಆಫ್ ವರ್ಕ್ ಇಲ್ಲ. ಈ ಕೆಲಸ ಆರ್ಡಿನರಿ ಗಾರೆಯವರು ಮಾಡಿದರೂ ಇನ್ನೂ ಬೆಟರ್ ಆಗಿ ಮಾಡುತ್ತಿದ್ದರು.

(ಶ್ರೀ ಬಿ.ಜೆ.ಬಣಕಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಯಾವ ಟೆಕ್ನಿಕಲ್ ಪರ್ಸನಲ್ ಕೂಡ ಅಲ್ಲೆ ಹೋಗಿ ಚೆಕ್ ಮಾಡಿಲ್ಲ. ಯಾರೂ ಕೆಲಸ ನೋಡೇ ಇಲ್ಲ. ಅದೂ ಅಲ್ಲದೆ ಅಲ್ಲಿ ಹಣಕಿ ನೋಡುವವರೂ ಯಾರೂ ಇಲ್ಲವೆಂದು ನನಗೆ ಅನ್ನಿಸುತ್ತದೆ. ಇಂತಹ ಬೇಡದ ಕೆಲಸ ಮಾಡಿದ್ದಾರೆ. ಅದು ಏನು ಆಯಿತು ಅಂದರೆ ಇವರು ಕೊಟ್ಟರು, ಅವರು ತೆಗೆದುಕೊಂಡರು, ಇವರು ಅವರಿಗೆ ಕೊಟ್ಟರು ಅವರು ಕಣ್ಣುಮುಚ್ಚಿಕೊಂಡರು. ಇವರು ಯಾರ್‍ಯಾರನ್ನೋ ಸಸ್ಪೆಂಡ್ ಮಾಡಿ ಕೂಡಿಸಿದ್ದಾರೆ. ಹಣ ಬಿಡುಗಡೆ ಮಾಡುವಾಗ ಇಂತಹ ಕಂಟ್ರಾಕ್ಟ್‌ಗೋಸ್ಕರ. ಇಂತಹ ಕಂಟ್ರಾಕ್ಟ್‌ಗೆ ದುಡ್ಡು ಕೊಡಬೇಕು ಎಂದು ಎನ್ ಓಸಿ ಗಳನ್ನು ಕೊಡುತ್ತಾರೆ. ಪಾಪದ ಅಧಿಕಾರಿಗಳು ಏನು ಮಾಡುತ್ತಾರೆ. ಇನ್ನೂ ಕೆಲವು ಕಡೆ ಟನಲ್ ರಿಪೇರಿ ಆಗಿಲ್ಲ. ಕಳೆಯೋ ಕೆಸರೋ ಅಥವಾ ಮಣ್ಣೋ ತುಂಬಿಕೊಂಡು ನೀರು ಮುಂದಕ್ಕೆ ಹೋಗುವುದಿಲ್ಲ. ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರನ್ನು ಹಿಡಿದುಕೊಂಡು ರೈತರು ಹೊಡೆದಿದ್ದಾರೆ. ಅಲ್ಲಿಯ ತನಕ ನೀರು ಬಂದಿಲ್ಲ ನೀರು ಬಂದಿಲ್ಲ ಎಂದು ರೈತರು ಹೇಳಿದರೆ ಅವರು ದುಡ್ಡು ಇಲ್ಲ, ಚಾನಲ್‌ಗಳನ್ನು ರಿಪೇರಿ ಮಾಡುವುದಿಲ್ಲ, ಹೊಡೆಯಿರಿ, ಬಡಿಯುತ್ತೀರಾ ಬಡಿಯಿರಿ ಎಂದು ಹೇಳುತ್ತಾರೆ. ಹೀಗಾಗಿ ಆಫೀಸರ್‌ಗಳು ಏಟು ತಿಂದು ಬಂದವರೂ ಇದ್ದಾರೆ. ಹೀಗೆಯೇ ಟನಲ್‌ಗಳನ್ನು ರಿಪೇರಿ ಮಾಡುತ್ತಾ ಹೋದರೆ ಇಟ್ಟುಕೊಂಡ ಪ್ರಾಜೆಕ್ಟ್‌ಗಳನ್ನು ಏನು ಮಾಡಬೇಕು. ನೀರು ಇಟ್ಟುಕೊಂಡು ಏನು ಮಾಡಬೇಕು. ಜನಗಳು, ರೈತರು ಯಾವ ತರಹದಲ್ಲಿ ಉದ್ಧಾರ ಆಗಬೇಕು.

ಇನ್ನು ಹೌಸಿಂಗ್ ಸ್ಕೀಂನಲ್ಲಿ ತಾವು ಹೊಸ ಯೋಜನೆಗಳನ್ನೇನೋ ಹಾಕಿಕೊಂಡಿದ್ದೀರಿ. ಆದರೆ ಹಳೆಯ ಸ್ಕೀಮ್‌ಗಳಿಗೆ ಇನ್ನೂ ಇನ್‌ಸ್ಟಾಲ್‌ಮೆಂಟ್‌ಗಳನ್ನು ಕೊಟ್ಟಿಲ್ಲ. ಇದನ್ನೆಲ್ಲಾ ಯಾವಾಗ ಬಿಡುಗಡೆ ಮಾಡುತ್ತೀರಿ. ನಮ್ಮ ತಾಲ್ಲೂಕಿನಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ ಮನೆಗಳು

ಕಂಪ್ಲೀಟಾದರೂ ಅದಕ್ಕೆ ಜನ ಏಕೆ ಹೋಗುತ್ತಾ ಇಲ್ಲ ಅಂದರೆ "ಕ್ವಾಲಿಟಿ ಸೂಪರ್" ಅಷ್ಟು ಕಳಪೆ ಕೆಲಸ ಮಾಡಿರುವುದರಿಂದ ಜನ ಅದರ ಒಳಗಡೆ ಹೋಗುವುದಕ್ಕೆ ಹೆದರಿಕೊಳ್ಳುತ್ತಾ ಇದ್ದಾರೆ. ಇಷ್ಟೆಲ್ಲಾ ದುಡ್ಡನ್ನು ಖರ್ಚು ಮಾಡಿದರೂ ಜನರು ಯಾರು ವಾಸಕ್ಕೆ ಹೊಗುವುದಕ್ಕೆ ಆಗುತ್ತಾ ಇಲ್ಲ. ಈಗ 10 ಸಾವಿರ ಮನೆಗಳನ್ನು ಕಟ್ಟುವುದಕ್ಕೆ ತಾವು ಒಂದು ಪ್ರೋಗ್ರಾಮನ್ನು ಇಟ್ಟುಕೊಂಡಿದ್ದೀರಿ. ಈಗ ಮನೆಗಳನ್ನು ಕಟ್ಟುವುದಕ್ಕೆ ಸೈಟ್‌ಗಳು ಎಲ್ಲಿವೆ? ಜಾಗವನ್ನು ಇಯರ್‌ಮಾರ್ಕ್ ಮಾಡಿಕೊಂಡಿದ್ದೀರಾ? ಇದನ್ನು ಯಾವ ಯಾವ ಪ್ರದೇಶದಲ್ಲಿ ಕಟ್ಟುತ್ತಾ ಇದ್ದೀರಿ ಎನ್ನುವುದನ್ನು ದಯಮಾಡಿ ನನಗೆ ತಿಳಿಸಬೇಕು.

ಇನ್ನು ಅರ್ಬನ್ ಡೆವಲಪ್‌ಮೆಂಟ್ ವಿಚಾರದಲ್ಲಿ ಹೇಳುವುದಾದರೆ, ಬರೀ ಸೈಟು, ಮನೆ-ಇವುಗಳೇ ನಿಮ್ಮ ಗುರಿಯಾಗಿದೆ. ಈ ಕಂಜೆಕ್ಟೆಡ್ ರೋಡುಗಳಿವೆಯಲ್ಲಾ ಇವು ಯಾವುದನ್ನೂ ಬೇರೆ ಮಾಡಬೇಕಾಗಿಲ್ಲವೇ, ಮೈಸೂರು ರೋಡು, ಮದ್ರಾಸ್ ರೋಡು, ತುಮಕೂರು ರೋಡು ಇವುಗಳಿಗೆ ಎಷ್ಟೊಂದು ಫ್ಲೈಓವರ್ ಬೇಕಾಗುತ್ತದೆ. ಎಷ್ಟೊಂದು ಅಂಡರ್‌ಗ್ರೌಂಡ್ ರೋಡುಗಳು ಬೇಕಾಗುತ್ತದೆ ಎಂದು ಯಾವತ್ತೂ ತಮ್ಮಗಳಿಗೆ ಯಾರೂ ಹೇಳುವುದೇ ಇಲ್ಲವೇ? ಮೈಸೂರು ರೋಡಿನಲ್ಲಿ ನಾನು ಈ ಕಡೆಯಿಂದ ಪ್ರತಿನಿತ್ಯ ಬರಬೇಕು. ಅಲ್ಲಿಂದ ಇಲ್ಲಿಗೆ ಬಂದು ತಲುಪುವುದಕ್ಕೆ ಒಂದು ಗಂಟೆ ಆಗುತ್ತದೆ. ಎಲ್ಲಾ ದೇಶಗಳಲ್ಲೂ ಇಲ್ಲಿಂದ ಅಲ್ಲಿಗೆ ಹೋಗುವುದಕ್ಕೆ ಹೌಫಾರ್ ಈಸ್ ಇಟ್ ಎಂದು ಕೇಳಿದರೆ, ಇಟ್ ಈಸ್ 5 ಮಿನಿಟ್ಸ್ ಡ್ರೈವ್, 10 ಮಿನಿಟ್ಸ್ ಡ್ರೈವ್ ಎಂದು ಹೇಳುತ್ತಾರೆ. ನಾವು ಏನು ಹೇಳಬೇಕು ಇಟ್ ಈಸ್ 2 ಅವರ್ಸ್‌ಡ್ರೈವ್ ಎಂದು ಹೇಳುವುದೇ, 2/1/2 ಅವರ್ಸ್ ಡ್ರೈವ್ ಎಂದು ಹೇಳುವುದೇ? ಅಲ್ಲಿಂದ ಇಲ್ಲಿಗೆ ಬರುವುದಕ್ಕೆ ನಮಗೆ ಅಷ್ಟು ಕಷ್ಟವಾಗುತ್ತದೆ. ಅಲ್ಲಿ ಒಂಟೆತ್ತಿನ ಗಾಡಿ ಜೊಡೆತ್ತಿನ ಗಾಡಿ ಲೂನ, ಸ್ಕೂಟರ್, ಟ್ರಕ್, ಲಾರಿ, ಟೆಂಪೋ, ಬಸ್, ವ್ಯಾನು, ಕಾರು, ಪೆಟ್ರೋಲ್ ವ್ಯಾನು ಮಿಲ್ಕ್‌ವ್ಯಾನ್ ಜಟಕಾಗಾಡಿ, ಮುನಿಸಿಪಾಲಿಟಿ ಲಾರಿ-ಇವುಗಳು ಹೋಗುತ್ತಿರುತ್ತವೆ. ಜೊತೆಗೆ ಅಲ್ಲಿ 3 ಸ್ಮಶಾನಗಳಿವೆ. ಶವದ ಗಾಡಿಗಳು ಬರುತ್ತವೆ. ಇವುಗಳ ಮಧ್ಯೆ ಜನಗಳು ಓಡಾಡಬೇಕು. ಇಂತಹ ಕಡೆ, ಇಷ್ಟು ಒತ್ತಡ ಇರುವ ಕಡೆ ಯಾವುದಾದರೂ ಫ್ಲೆ ಓವರುಗಳು ಬೇಡವೇ? ಅಲ್ಲಿ ರೋಡ್ಸ್ ಬೇಡವೆ? ಬರೀ ಸೈಟ್ಸ್ ಮನೆಗಳನ್ನು ಕೊಟ್ಟುಬಿಟ್ಟರೆ ಆಯಿತೇ? ರೋಡ್ಸ್ ಕಡೆ ತಮಗೆ ನಿಗಾಬೇಡವೇ. ಇದರ ಬಗ್ಗೆ ಯಾರೂ ಸಹ ತಮಗೆ ಪ್ರಪೋಸಲ್ ಕೊಡುತ್ತಾ ಇಲ್ಲವೇ. ಆಮೇಲೆ ರಿಂಗ್ ರೋಡ್‌ಗಳು ಆಗಬೇಕು. ಈಗ ಡೆಲ್ಲಿಯಲ್ಲಿದೆ. ರಿಂಗ್ ರೋಡ್ ಮಾಡಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕನ್‌ಟ್ಯಾಕ್ಟ್ ಮಾಡಬೇಕು. ಪೆಟ್ರೋಲ್ ಬೆಲೆ ದುಬಾರಿಯಾಗಿರುವಾಗ ಬಸ್ ಚಾರ್ಜ್ ಜಾಸ್ತಿ ಯಾಗಿರುವಾಗ ರಿಂಗ್ ರೋಡ್ ಕನೆಕ್ಷನ್ ಇಲ್ಲದೇ ಹೋದರೆ ಕಷ್ಟವಾಗುತ್ತದೆ. ಕಾಂಪ್ಲೆಕ್ಸ್‌ಗಳಿಗೇ ಲೈಸನ್ಸ್ ಕೊಡುತ್ತೀರಿ ಆದರೆ ಅಲ್ಲಿ ವೆಹಿಕಲ್ಸ್ ಪಾರ್ಕಿಂಗ್‌ಗೆ ನಿಗಾ ಇಲ್ಲ. ಇನ್ನು ಟೆಲಿ ಫೋನ್‌ನವರಿಗೆ ಎಲೆಕ್ಟ್ರಿಸಿಟಿಯವರಿಗೆ, ನೀರು ಸರಬರಾಜು ಇಲಾಖೆಯವರಿಗೆ, ಮತ್ತು ರೋಡ್ ಮಾಡುವವರಿಗೆ ಯಾವುದೇ ರೀತಿಯ ಕೋ-ಆರ್ಡಿನೇಷನ್ ಇಲ್ಲ. ಒಂದು ಸಾರಿ ರೋಡ್ ಆಗುತ್ತದೆ ಅಂದರೆ ಮೂರನೆ ದಿವಸವೇ ಅದನ್ನು ಕಟ್ ಮಾಡಿ ಇಟ್ಟಿರುತ್ತಾರೆ. ಅದನ್ನು ರಿಪೇರಿ ಕೂಡ ಮಾಡಿರುವುದಿಲ್ಲ. ಹೀಗಾದರೆ ರೋಡುಗಳ ಗತಿ ಏನಾಗಬೇಕು? ಇದು ದಿನ ನಿತ್ಯದ ಕ್ರಮ ಆಗಿರುವುದರಿಂದ ತಾವು ಇದಕ್ಕೆ ಯಾರನ್ನೂ ಜವಾಬ್ದಾರರನ್ನಾಗಿ ಮಾಡುತ್ತಾ ಇಲ್ಲವೆ?

ಇನ್ನು ಸಣ್ಣ ಮುನಿಸಿಪಾಲಿಟಿಗಳು ನಗರಾಭಿವೃದ್ಧಿ ಇಲಾಖೆಗೆ ಸೇರಿಲ್ಲವೇ? ಅಲ್ಲಿರುವವರು ಬದುಕಿದ್ದಾರೋ ಇಲ್ಲವೋ, ಅವರ ಸಮಸ್ಯೆ ಏನು ಎಂದು ಕೇಳುವವರು ಇಲ್ಲವೇ ? ಅಲ್ಲಿನ ಸ್ಟಾಫ್‌ಗೆ ಸಂಬಳ ಸಿಗುತ್ತಿದೆಯೇ, ಸಂಬಳ ಕೊಡುತ್ತಿದ್ದೀರಾ, ಮುನಿಸಿಪಾಲಿಟಿಗಳ ಚುನಾವಣೆಯಂತೂ ಮರೆತೇ ಹೋಯಿತೇನೋ ,ಅದು ಮರೆತಂತೆ ಆಗಿದೆ. ಇದರ ಬಗ್ಗೆ ಸುದ್ದಿ, ಸಮಾಚಾರವೇ ಇಲ್ಲ. ಇನ್ನು ಸಣ್ಣ ಪುಟ್ಟ ಕೆಲಸಗಳಾದ ಡ್ರೈನೇಜ್ ರಿಪೇರಿವರ್ಕ್ಸ್ ಸ್ಟ್ರೀಟ್‌ಲೈಟ್‌ಗಳನ್ನು ಹಾಕುವುದು ಒಂದೂ ಕಾಣುತ್ತಾ ಇಲ್ಲ. ಇದನ್ನೆಲ್ಲಾ ಯಾರು ಮಾಡಬೇಕು? ಈಗ ಅನೇಕ ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿದೆ. ಮೊನ್ನೆ ಮೈಸೂರಿನಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿ ಜನರೆಲ್ಲಾ ಧರಣಿ ಕುಳಿತು ಕೊಂಡಿದ್ದರು, ಆದ್ದರಿಂದ ದಯಮಾಡಿ ಮೈಸೂರಿಗೆ ಮತ್ತೆ ಕೆಲವು ಕಡೆ ಟೌನುಗಳಿಗೆ ಕುಡಿಯುವ ನೀರನ್ನು ಒದಗಿಸಿ ಕೊಡಬೇಕಾದುದು ಬಹಳ ಅಗತ್ಯ ಇದೆ.

ಇನ್ನು ಹುಬ್ಬಳ್ಳಿಯಲ್ಲಿ ಮನೆಗಳನ್ನು ಸಿಕ್ಕಾಪಟ್ಟೆ ಒಡೆಯುತ್ತಿದ್ದಾರೆಂದು ನನಗೆ ದೂರು ಬಂದಿದೆ. ತಾವು ಆ ಕಡೆ ಸ್ವಲ್ಪ ನೋಡಬೇಕು. ಬಡವರ ಮನೆಗಳನ್ನು ಒಡೆದು ಹಾಕಿದರೆ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ನೋಡಿಸಬೇಕು. ಇನ್ನು ವಿಲೇಜ್ ಸ್ಯಾನಿಟೇಷನ್ ಬಗ್ಗೆ ಹೇಳಬೇಕಾದರೆ, ಈ ಶೌಚಾಲಯದ ಕಡೆ ಗಮನ ಕೊಡುತ್ತೇವೆಂದು ಹೇಳಿದ್ದೀರಿ, ಪ್ರತಿಯೊಂದು ಮಂಡಲದ ಒಂದು ಗ್ರಾಮಕ್ಕೆ ಶೌಚಾಲಯ ಕೊಡುವುದಾಗಿ ಹೇಳಿದ್ದೀರಿ. ಮೊದಲು ಊರು ಊರುಗಳಲ್ಲಿ ಪಂಚಾಯಿತಿ ಇದ್ದಾಗ ಸ್ವೀಪರ್ಸ್ ಸ್ಕ್ಯಾವೆಂಜರ್ಸ್ ಎಂದು ಇಟ್ಟುಕೊಂಡಿದ್ದರು. ಈಗ ಮಂಡಲ್ ಪಂಚಾಯತ್‌ನಲ್ಲಿ ದುಡ್ಡು ಇಲ್ಲ ಎಂದು ಹೇಳಿ ಅವರನ್ನೆಲ್ಲಾ ಮನೆಗೆ ಕಳುಹಿಸಿದ್ದಾರೆ. ಆದ್ದರಿಂದ, ಬೇಸಿಕ್ ನೀಡ್ಸ್ ಪ್ರತಿಯೊಂದು ಗ್ರಾಮಕ್ಕೂ ಕೊಡುವಂತಾದ್ದು ಏನಿದೆ. ಆ ಕಡೆ ಗಮನ ಹರಿಸಲಿಲ್ಲ ಅಂದರೆ ಬಹಳ ಕಷ್ಟವಾಗುತ್ತದೆ. ತಾವು ಬಾಕಿ ಹಳ್ಳಿಗಳಿಗೆ ಅನುಕೂಲ ಮಾಡಿಕೊಟ್ಟರೂ ಕೂಡ ಈ ಕೊಡಗು ದಕ್ಷಿಣ ಕನ್ನಡ ಉತ್ತರ ಕನ್ನಡ ಮಲೆನಾಡು ಪ್ರದೇಶಗಳಲ್ಲಿ ಮನೆಗಳು ಸ್ಕಾಟರ್ಡ್ ಇರುತ್ತವೆ. ಪ್ರತಿಯೊಂದು ಮಂಡಲದ ಗ್ರಾಮಕ್ಕೆ ಒಂದೊಂದು, ಒಂದೊಂದು ತಾಲ್ಲೂಕಿಗೆ ಒಂದೊಂದು ಅಂದರೆ ತೊಂದರೆಯಾಗಬಹುದು. ಆದ್ದರಿಂದ ಈ ಕಡೆ ಏನು ಮಾಡುತ್ತೀರಿ ಎಂಬುದನ್ನು ಸ್ವಲ್ಪ ನನಗೆ ತಾವು ಹೇಳಬೇಕಾಗುತ್ತದೆ. ಇನ್ನು ಹೆಲ್ತ್ ವಿಚಾರದಲ್ಲಿ ಈಗ ನಾಲ್ಕು ವರ್ಷದಲ್ಲಿ 471 ಹೆಲ್ತ್ ಸೆಂಟರ್ ಸೆಕ್ಷನ್ ಮಾಡಿದ್ದೇವೆಂದು ಹೇಳಿದ್ದೀರಿ. ಏಳನೇ ಯೋಜನೆಯಲ್ಲಿ ನಿಮ್ಮ ಟಾರ್‌ಗೆಟ್ ಪ್ರಕಾರ 303 ಕೇಂದ್ರಗಳನ್ನು ಮಾಡಬೇಕೆಂದು ಹೇಳುತ್ತಿದ್ದೀರಿ. ಇದು ಪೇಪರ್‌ನಲ್ಲಿ ಇರುತ್ತದೋ ನಿಜವಾಗಿ ನಡೆಯುತ್ತದೆಯೋ ಎಂಬುದನ್ನು ತಿಳಿಸಬೇಕು. ಈಗ ಹಾಲಿ ತೆರೆದಿರತಕ್ಕ ಸೆಂಟರ್‌ನಲ್ಲಿ ಒಂದು ಇದ್ದರೆ ಒಂದು ಇಲ್ಲ. ಡಾಕ್ಟರ್ಸ್ ಇಲ್ಲ, ಸ್ಟಾಫ್ ಇಲ್ಲ ಔಷಧಿ ಇಲ್ಲ, ವೆಹಿಕಲ್ಸ್ ಇಲ್ಲ. ಹೆಲ್ತ್ ಬಗೆಗಿನ ಚರಿತ್ರೆಯನ್ನು ನಾನು ಮೆಡಿಕಲ್ ಡಿಮ್ಯಾಂಡ್‌ನಲ್ಲಿ ಸವಿಸ್ತಾರವಾಗಿ ಹೇಳುತ್ತೇನೆ. ಇನ್ನು ಎಜುಕೇಷನ್ ವಿಚಾರದಲ್ಲಿ ವಿದ್ಯಾರ್ಥಿಗಳ ಅಡ್ಮಿಷನ್ ಜಾಸ್ತಿಯಾಗಿದೆ ಎಂದು ಬಹಳವಾಗಿ ಬೆನ್ನು ತಟ್ಟಿಕೊಂಡು ಹೇಳಿದ್ದೀರಿ. ಇದು ನಗೆಪಾಟಲಾಗುತ್ತದೆ. ಪ್ರತಿ ವರ್ಷ ಇನ್‌ಟೇಕ್ ಎಷ್ಟು ಎಂದು ಮಾಹಿತಿ ತರಿಸಿಕೊಂಡಿದ್ದರೆ ಈ ರೀತಿ ನೀವು ಹೇಳುತ್ತಾ ಇರಲಿಲ್ಲ. 30 ಸಾವಿರ ಶಾಲೆಗಳು ಇದ್ದರೆ ಸರಾಸರಿ ಇನ್‌ಟೇಕ್ ಒಂದು ಸ್ಕೂಲಿಗೆ 20ರಂತೆ ಆದರೂ ಒಂದು ವರ್ಷಕ್ಕೆ

6 ಲಕ್ಷದ ಮೇಲೆ ಆಗಬೇಕಾಗಿತ್ತು. ಈಗ ತಾವು 6 ವರ್ಷಕ್ಕೆ 11 ಲಕ್ಷ ಹೆಚ್ಚಾಗಿದೆ. ಅಂದರೆ ಇದು ಯಾರಿಗೆ ಹೇಳುವ ಮಾತು. ತಾವು ವಿದ್ಯಾವಂತರಿಗೆ ಹೇಳುವ ಮಾತೇ ಇದು. ನಮ್ಮನ್ನು ಅಷ್ಟೊಂದು ದಡ್ಡರನ್ನಾಗಿ ಮಾಡಿದ್ದೀರಾ. ಇದೆಲ್ಲಾ ವಿದ್ಯಾ ವಿಕಾಸ ಯೋಜನೆಯ ಕ್ರೆಡಿಟ್‌ಗೆ ಹೋಗುತ್ತದೆ ಎಂದರೆ ನಂಬಲಿಕ್ಕೆ ಆಗುತ್ತದೆಯೇ? ಈಗ ಶಾಲೆಗಳು ಕಡಿಮೆ ಇದೆ ಎನ್ನುವುದು ಸರ್ಕಾರದ ಕಣ್ಣಿಗೆ ಬಿದ್ದಿದೆ. ನಂಬಿಲಿಕ್ಕೆ ಆಗುತ್ತದೆಯೇ? ಇನ್ನು ಗ್ರ್ಯಾಂಟ್ ಇನ್ ಏಯಡ್ ಕೊಡುವುದರಲ್ಲಿ ಯಾವುದೇ ಗ್ರಾಮದವರು 50 ಪರ್‌ಸೆಂಟ್ ಹಣ ಕೊಟ್ಟರೆ, ಸರ್ಕಾರ 50 ಪರ್‌ಸೆಂಟ್ ಕೊಡುತ್ತದೆಂದು ಹೇಳಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ ಸದಾ ಬರಗಾಲದಲ್ಲಿ ಜನರು ನರಳುತ್ತಿರುತ್ತಾರೆ. ಆ ಜನ ಎಲ್ಲಿಂದ ಹಣ ತರಬೇಕು ಹಾಗಾದರೆ ನಮ್ಮಂತಹವರಿಗೆ ಸ್ಕೂಲು ಬೇಡವೇ? ಇನ್ನು ಈಗ ಇರುವ ಶಾಲೆಗಳಿಗೆ ರಿಪೇರಿ ಆಗುವುದನ್ನು ನಾನು ಬದುಕಿದ್ದು ನೋಡುತ್ತೇನೆಂದು ತಿಳಿದುಕೊಂಡಿಲ್ಲ. ಇದೆಲ್ಲಾ ಆಗುವುದನ್ನು ಯಾರು ನೋಡುತ್ತಾರೋ ದೇವರಿಗೇ ಗೊತ್ತು. ಇನ್ನು ಸೈನ್ಸ್ ಅಂಡ್ ಟೆಕ್ನಾಲಜಿ ಡಿಪಾರ್ಟ್‌ಮೆಂಟ್‌ನಿಂದ ಏನು ಕೆಲಸ ನಡೆಯುತ್ತದೆ, ಏನು ನಿರೀಕ್ಷಣೆ ಮಾಡಬೇಕೋ ಗೊತ್ತಿಲ್ಲ. ಎಲ್ಲದಕ್ಕೂ ಒಂದೊಂದು ಪರಿಷತ್ ಮಾಡಿದ್ದೀರಿ. ಕೆಲಸ ಇಲ್ಲದಿದ್ದರೂ ಸಹ ಸಂಬಳ ಕೊಡುವುದೇ ಒಂದು ಕೆಲಸ ಆಗುತ್ತದೆ ಇನ್ನೂ ಏನು ಎಂದು ಇದುವರೆಗೂ ಕಾಣಲಿಲ್ಲ. ಯಾವುದಾದರೂ ಕಮೀಷನ್ ಮಾಡಿದರೆ ಅವುಗಳಿಗೆ ಟೈಂ ಬಾಂಡ್ ಪ್ರೋಗ್ರಾಮ್ ಇಲ್ಲ, ಬಾಕಿ ಎಲ್ಲದಕ್ಕೂ ಬೆಲೆ ಇದೆ, ಟೈಮ್‌ಗೆ ಬಗಾ ಇಲ್ಲ. ಎಷ್ಟು ದಿವಸ ಆದರೂ ನಡೆಯಬಹುದು. ಇನ್ನು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್, ತೆಲಂಗಾಣ ಸುಂದರಬನ ಬೋರ್ಡ್ ತರಹ ಕಾರ್ಯ ನಿರ್ವಹಿಸುವುದು ಎಂದು ಹೇಳಿದ್ದೀರಿ. ಆದರೆ ಇದು ಪ್ರೋಗ್ರಾಮೊ ಏನೂ ಎಂದು ಹೇಳಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ- ಅಮ್ಮಾವ್ರ ಏನು ಹೇಳುತ್ತಿದ್ದಾರೆಂದರೆ, ಇದು ಎಲೆಕ್ಷನ್ ಬೋರ್ಡ್‌ನಂತೆ ಆಗಬಾರದು ಅಂತು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ- ಇದೇ ರೀತಿ ಇನ್ನೂ ಎಷ್ಟು ದಿವಸದವರೆಗೆ ನೀವು ನಡೆಸುತ್ತೀರಿ?

ಶ್ರೀ ಎಸ್. ಆರ್.ಬೊಮ್ಮಾಯಿ- ನಡೆಯುತ್ತಿರುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ- 4 ಕೋಟಿ ಕೊಟ್ಟಿದ್ದೇವೆ, 18 ಕೋಟಿ ಕೊಟ್ಟಿದ್ದೇವೆ ಎಂದು ನೀವು ಹೇಳಬಹುದು. ಆದರೆ ನೀವು ಏನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ ಅವುಗಳ ರೂಪುರೇಷೆಗಳೇನು ಎಂಬುದನ್ನು ಇಲ್ಲಿ ಹೇಳಿಲ್ಲ. ಆದರೆ 2 ಕೋಟಿ ಕೊಟ್ಟಿದ್ದೇವೆ 18 ಕೋಟಿ ಕೊಟ್ಟಿದ್ದೇವೆ ಎಂದು ಹೇಳಿದಕ್ಕೆ ಇದರ ಅರ್ಥ ಏನು?

ಇನ್ನು ವೆಲ್‌ಫೇರ್ ಮೆಷರ್ಸ್‌ನಲ್ಲಿ ಸಬ್ಸಿಡೈಸ್ಡ್ ರೈಸ್‌ಗೆ 37.73 ಕೋಟಿ ರೂಪಾಯಿಗಳನ್ನು 89-90 ನೇ ಸಾಲಿಗೆ ಕೊಟ್ಟಿದ್ದೇವೆ. ವಿಡೋ ಪೆನ್‌ಷನ್‌ಗೆ 27 ಕೋಟಿ ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಇದೇ ರೀತಿ ಅಂಗವಿಕಲರಿಗೆ 14 ಕೋಟಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದೆಲ್ಲಾ ಕೊಡಬೇಕಾದ್ದು ಆದ್ದರಿಂದ ಕೊಟ್ಟಿದ್ದೀರಿ. ಆದರೆ ನೀವು ಮೊದಲು ಮಾಡಿರತಕ್ಕ ಯೋಜನೆಗಳಿಗೇ ಇನ್ನೂ ಹಣ ವಿತರಣೆ ಮಾಡಲು ನಿಮ್ಮಿಂದ ಆಗಿಲ್ಲ.

ಗರ್ಭಿಣಿಯರಿಗೆ ಹಣ ಕೊಡತಕ್ಕ ವಿಚಾರದಲ್ಲಿ ಮಾನ್ಯ ಲೀಲಾದೇವಿ ಆರ್.ಪ್ರಸಾದ್‌ರವರು ತಮ್ಮ ಅನುಭವದ ಬಗ್ಗೆ ವಾದ ಮಾಡಿದರು. ಹಾಗಾದರೆ ಗರ್ಭಿಣಿಯರಿಗೆ ಹಣ ಕೊಡುವ ನಿಮ್ಮ ಸ್ಕೀಂ ಎಲ್ಲಿ ಹೋಯಿತು. ಕೆಲವರಿಗೆ ಅನುಭವ ಇಲ್ಲ. ಇನ್ನೂ ಕೆಲವರಿಗೆ ಅನುಭವ ಇರಬಹುದು. ಮಾನ್ಯ ಸಿಂಧ್ಯರವರಿಗೆ ಗರ್ಭಿಣಿಯರ ಬಗ್ಗೆ ಅನುಭವ ಇದೆಯೇ ಎಂದರೆ ಹೇಗೆ ಇರುವುದಕ್ಕೆ ಸಾಧ್ಯ? ಸಾಮಾಜಿಕವಾಗಿ ಇದು ಗೊತ್ತಾಗಬೇಕು. ಆದರೆ ಇದರಲ್ಲಿ ಅನುಭವ ಇರಲಿಲ್ಲ, ಆದ್ದರಿಂದ ಮಾಡಲಿಲ್ಲ ಎಂದು ಹೇಳುವುದು ಸರಿಯಲ್ಲ.

ಇನ್ನು ಹಳ್ಳಿಗಳಲ್ಲಿ ಹಸಿರು ಕಾರ್ಡುಗಳನ್ನು ಹಂಚುವುದರ ಬಗ್ಗೆ ಹೇಳುವುದಾದರೆ, ಇದರಲ್ಲಿ ಬಹಳಷ್ಟು ವ್ಯತ್ಯಾಸವಾಗಿದೆ. ಹಲವಾರು ಹಳ್ಳಿಗಳಲ್ಲಿ ಹಸಿರು ಕಾರ್ಡುಗಳನ್ನು ಹಂಚಿಲ್ಲದಿದ್ದರು ಹಂಚಿದ್ದೇವೆಂದು ಹೇಳಿಕೊಂಡು ಅದನ್ನು ಟೌನ್‌ಗೂ ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಈಗ ಹೇಗೂ ಎಲೆಕ್ಷನ್ ಹತ್ತಿರ ಬರುತ್ತಿದೆ. ಆದ್ದರಿಂದ ಇದನ್ನು ಎಲೆಕ್ಷನ್ ಸ್ಟಂಟ್ ಎಂದು ಹೇಳಬೇಕಾಗಿದೆ. ನಿಮ್ಮದು ಎಲೆಕ್ಷನ್ ಸ್ಟಂಟ್ ಇದು ಎಂದು ಮಕ್ಕಳಿಗೂ ಗೊತ್ತಾಗುತ್ತದೆ.

ಇನ್ನು ಗ್ರೂಪ್ ಇನ್‌ಷ್ಯೂರೆನ್ಸ್ ಸ್ಕೀಂ ಬಗ್ಗೆ ಹೇಳುವುದಾದರೆ, ಇದರ ಉದ್ದೇಶವೇನೋ ಬಹಳ ಒಳ್ಳೆಯದು. ಆದರೆ ಇದು ಯಾವ ರೀತಿ ಇಂಪ್ಲಿಮೆಂಟೇಷನ್ ಆಗುತ್ತದೋ ಗೊತ್ತಿಲ್ಲ. ಇದರಲ್ಲಿ ರಾಜಕೀಯ ನಡೆಯಬಾರದು.

ಇನ್ನು ಸ್ಪೆಷಲ್ ಬೋರ್ಡ್ಸ್ ಬಗ್ಗೆ ಹೇಳುವುದಾದರೆ 1976ರಲ್ಲಿ ಸಿ.ಆರ್.ಇ ಆ್ಯಕ್ಟನ್ನು ಜಾರಿಗೆ ತಂದರು. ಇದರಲ್ಲಿ ರಾಜಕೀಯ ಪ್ರವೇಶವಾದ್ದರಿಂದ ಇಲ್ಲಿ ಬಹಳಷ್ಟು ಅನ್ಯಾಯವಾಗುತ್ತಿದೆಯೆಂದು ನಾನು ಬಹಳ ಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಿದ್ದೇನೆ. ಡೌರಿ ಡೆತ್ಸ್ ಆದ ಮೇಲೆ ಎನ್‌ಕ್ವೈರಿ ಮಾಡಿದರೆ ಅದರಿಂದ ಏನು ಪ್ರಯೋಜನ ಡೆತ್ ಆಗುವುದಕ್ಕೆ ಮುಂಚಿತವಾಗಿ ಎನ್‌ಕ್ವೈರಿ ಮಾಡಿದರೆ ಏನು ಅದನ್ನು ತಡೆಗಟ್ಟಿದರೆ ಅನುಕೂಲವಾಗುತ್ತದೆ ಸತ್ತ ಮೇಲೆ ಏನು ಪ್ರಯೋಜನ? ಪೋಸ್ಟ್‌ಮಾರ್ಟಂ ಮಾಡಬಹುದು ಅಷ್ಟೆ.

ಇನ್ನು ಹೆಣ್ಣು ಮಕ್ಕಳಿಗೆ 30 ಪರ್ಸೆಂಟ್ ಜಾಬ್ ರಿಸರ್ವೇಷನ್ ಮಾಡುತ್ತೇವೆಂದು ನೀವು ಹೇಳಿರತಕ್ಕದ್ದು ಸ್ವಾಗತಾರ್ಹ. ಸಂತೋಷ. ಇದರಲ್ಲಿ 5 ಪರ್ಸೆಂಟ್ ಎಸ್.ಸಿ.ಗೆ 5 ಪರ್ಸೆಂಟ್ ಎಸ್.ಟಿ.ಗೆ ಮೀಸಲಿಡಬೇಕು. ಪೊಲೀಸ್ ಇಲಾಖೆಯಲ್ಲಿ ಲೇಡಿಸ್‌ಗೆ 10 ಪರ್ಸೆಂಟ್ ಜಾಬ್ ಕೊಡುವುದು ಸರಿ. ಆದರೆ ಪ್ರಮೋಷನ್ ಬಗ್ಗೆ ಸರಿಯಾದ ವ್ಯವಸ್ಥೆ ಆಗಬೇಕು. ಅನೇಕ ಜನ ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಪ್ರಮೋಷನ್‌ಗೆ ಎಂಬುದೇ ಇಲ್ಲ. ಆದ್ದರಿಂದ ಅವರ ಪ್ರಮೋಷನ್ ಏನಾದರೂ ವ್ಯವಸ್ಥೆ ಮಾಡಬೇಕು.

ಇನ್ನು ಉರ್ದುಭಾಷೆಗಾಗಿ ಒಂದು ಪ್ರತ್ಯೇಕ ಡೈರೆಕ್ಟರೇಟ್ ಮಾಡುತ್ತೇವೆಂದು ಕಳೆದ ವರ್ಷವೇ ಹೇಳಿದ್ದರು. ಆದರೆ ಇದುವರೆವಿಗೂ ಏನೂ ಆಗಲಿಲ್ಲ. ಅದನ್ನೇ ಈ ವರ್ಷವೂ ರಿಪೀಟ್ ಮಾಡಿರುತ್ತಾರೆ. ಬೇಗ ಮಾಡುತ್ತಾರೆಂದು ನಾನಾದರೂ ನಂಬಿರುತ್ತೇನೆ.

ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಅಲ್ಲಿರುವವರೆಲ್ಲರೂ ವೈಟ್ ಕಾಲರ್ ಆಫೀಸರ್‌ಗಳೇ ಆಗಿರುತ್ತಾರೆ, ಅವರು ಹೋಗಿ ಸರಿಯಾಗಿ ಇನ್‌ಸ್ಪೆಕ್ಷನ್ ಮಾಡುವುದಿಲ್ಲ, ಈಗ ಆಗುತ್ತಿರುವ ಆಕ್ಸಿಡೆಂಟ್ಸ್‌ಗಳನ್ನು ನೋಡಿದರೆ ಇದು ಚೆನ್ನಾಗಿ ಗೊತ್ತಾಗುತ್ತದೆ, ಕುಡಿದ ಮತ್ತಿನಲ್ಲಿರುವಾಗ ಡ್ರೈವರ್‌ಗಳು ವಾಹನಗಳನ್ನು ನಡೆಸುತ್ತಾರೆ. ಇದರಿಂದ ಆಕ್ಸಿಡೆಂಟ್ಸ್‌ಗಳು ಆಗತಕ್ಕಂಥದ್ದು ಜಾಸ್ತಿಯಾಗಿರುತ್ತದೆ. ಟ್ಯಾಕ್ಸ್ ತಪ್ಪಿಸಿ ಕೊಳ್ಳುವವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಿಲ್ಲ. ಮತ್ತು ತಾವು ನೋಡಿರಬಹುದು ಎಲ್ಲರೂ ನೋಡಿರುತ್ತಾರೆ ಬಸ್‌ನ ಮೇಲೆ ಪ್ರಯಾಣಿಕರನ್ನು ಕೂರಿಸಿಕೊಂಡು ಪ್ರಯಾಣ ಮಾಡುವುದು ನಡೆಯುತ್ತದೆ. ಇದರಿಂದ ಬಹಳಷ್ಟು ಅಪಘಾತಗಳು ಸಂಭವಿಸುತ್ತಿರುತ್ತವೆ. ರಸ್ತೆಯಲ್ಲಿ ಅಡ್ಡಹಾಯುವ ವಿದ್ಯುತ್ ತಂತಿಗಳಿಂದ ಅಪಾಯ ಸಂಭವಿಸಿರುತ್ತದೆ. ಸೇತುವೆ ಮೇಲ್‌ಚಾವಣಿ ಬಡಿದು ಅಪಘಾತಗಳು ಸಂಭವಿಸಿರುವ ಪ್ರಸಂಗಗಳು ಇರುತ್ತವೆ. ಆದರೂ ಕಣ್ಣುಮುಚ್ಚಿಕೊಂಡು ಅಧಿಕಾರಿಗಳು ಇರುತ್ತಾರೆ. ಈ ಬಗ್ಗೆ ಆಫೀಸರುಗಳ ಮೇಲೆ ಜವಾಬ್ದಾರಿಯನ್ನು ಹಾಕಬೇಕು.

ಇವೊತ್ತು ಉತ್ತರ ಕನ್ನಡ ಜಿಲ್ಲೆ ಮತ್ತು ಬೆಳಗಾಮ್‌ನಲ್ಲಿ ಮಾತ್ರ ಟ್ಯಾಡಿ ಮಾರಾಟವನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆ. ಇದರಲ್ಲಿ ಏನು ಅರ್ಥ? ಇದನ್ನು ನಿಲ್ಲಿಸುವುದರಿಂದ ಕಂಟ್ರಾಕ್ಟರ್ಸ್‌ಗಳಿಗೆ ಸಹಾಯ ಮಾಡದಂತಾಗುತ್ತದೆ. ಪಕ್ಕದ ರಾಜ್ಯಗಳವರಿಗೆ ಸಹಾಯಮಾಡಿ ದಂತಾಗುತ್ತದೆ. ಕುಡಿಯುವವರು ಪಕ್ಕದ ರಾಜ್ಯಗಳಿಗೆ ಹೋಗಿ ಕುಡಿಯುತ್ತಾರೆ. ಇದರಿಂದ ಅಲ್ಲಿಯ ಕಂಟ್ರಾಕ್ಟ್‌ದಾರರಿಗೆ ಸಹಾಯಮಾಡಿದಂತಾಗುತ್ತದೆ. ಸ್ಮಗಲಿಂಗ್‌ಗೆ ಸಹಾಯ ಮಾಡಿದಂತಾಗುತ್ತದೆ. ಲಾ ಅಂಡ್ ಆರ್ಡರ್ ಪ್ರಾಬ್ಲಮ್‌ವುಂಟಾಗುತ್ತದೆ. ಇದನ್ನೆಲ್ಲ ಯಾವ ರೀತಿ ತಪ್ಪಿಸುತ್ತೀರೆಂದು ಕೇಳಬೇಕಾಗುತ್ತದೆ. ಇದನ್ನು ಹೋಲ್‌ಸೇಲ್ ಆಗಿ ನಿಲ್ಲಿಸಿದರೆ ನಮಗೆ ಬಹಳ ಸಂತೋಷವಾಗುತ್ತದೆ.

ಇನ್ನು ರೆಕ್ಟಿಫೈಡ್ ಸ್ಪಿರಿಟ್ ಬಗ್ಗೆ ಪಿ.ಎ.ಸಿ.ಯವರು ಒಂದು ದೊಡ್ಡ ವರದಿಯನ್ನೇ ಕೊಟ್ಟಿದ್ದಾರೆ. ಇದನ್ನು ತೆಗೆಯಬೇಕೆಂದು ಹೇಳಿರುತ್ತಾರೆ. ಇಷ್ಟೆಲ್ಲ ನಾನು ಹೇಳಿದ ಮೇಲೆ ನಾನು ಮೊದಲೇ ಹೇಳಿದ ಹಾಗೆ ಕಾನೂನುಬದ್ಧವಾಗಿ ಈ ಸರ್ಕಾರ ಇಲ್ಲದಿರುವುದರಿಂದ ಈ ಆಯವ್ಯಯಕ್ಕೆ ನನ್ನ ಮಾನ್ಯತೆ ಇಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ವಿಧಾನಸಭೆ ಕಲಾಪ:ದಿನಾಂಕ 20-3-1989)

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು